UNIVERSAL LIBRARY
OU_198097
UNIVERSAL LIBRARY

ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಧಾರವಾಡ.
ರಜತ ಮಹೋತ್ಸವ ಗ್ರಂಥಮಾಲೆ - ೨

★

# ಕನ್ನಡ ನಾಡಿನ ಕಥೆಗಳು

ಲೇಖಕರು :

**ನಾರಾಯಣ ಶರ್ಮರು**

ಭಾರತೀಯರ ಇತಿಹಾಸ, ಕರ್ನಾಟಕ ಇತಿಹಾಸ ಬೋಧಿನಿ, ಹಿಂದುಸ್ಥಾನ
ಇತಿಹಾಸ ಬೋಧಿನಿ, ಮುಂತಾದ ಗ್ರಂಥಗಳನ್ನು
ಬರೆದವರು.

★

ಧಾರವಾಡ

೧೯೪೦

ಸಾದಾ ಪ್ರತಿ: ರೂ. ೦-೧೨-೦    ಕ್ಯಾಲಿಕೊ ಪ್ರತಿ: ರೂ. ೧-೦-೦

ಪ್ರಕಾಶಕರು:
ನ. ಶ್ರೀ. ಕಮಲಾಪುರ, ಬಿ. ಎ., ಎಲ್ಎಲ್. ಬಿ.,
ಗೌ. ಕಾರ್ಯದರ್ಶಿ,
ಕ. ಇ. ಸಂ. ಮಂಡಲ, ಧಾರವಾಡ.

ಈ ಪುಸ್ತಕದ ಎಲ್ಲ ಅಧಿಕಾರಗಳು ಧಾರವಾಡ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲಕ್ಕೆ ಸೇರಿವೆ.

ಮುದ್ರಕರು:
ಶ್ರೀ. ಶಿ. ಬ. ಹರಿಹರ, ವ್ಯವಸ್ಥಾಪಕರು,
ಶೋಂಟದಾರ್ಯ ಮುದ್ರಣಾಲಯ, ಕಿಲ್ಲೆ,
ಧಾರವಾಡ.

# ಅನುಕ್ರಮಣಿಕೆ

★


| ಅ. ನಂ. | ವಿಷಯ | ಪುಟ |
|---|---|---|
| | ಬರಹಗಾರನ ನುಡಿ ... ... | |
| | ಮಂಡಲದ ಮುನ್ನುಡಿ ... ... | |
| | ಮೊದಲ್ಮಾತು ... ... | |
| | ಐತಿಹಾಸಿಕ ಪ್ರಸ್ತಾವನೆ ... ... | |
| | ಆಧಾರ ಗ್ರಂಥಗಳ ಪಟ್ಟಿ ... ... | |
| | **ಕನ್ನಡ ನಾಡಿನ ಕಥೆಗಳು** | ೧—೧೬೨ |
| ೧. | ವೀರ ಮಯೂರ ಶರ್ಮ .... .... | ೧ |
| ೨. | ಎರಡನೆಯ ಪುಲಕೇಶಿಯ ದಿಗ್ವಿಜಯ .... .... | ೩ |
| ೩. | ರಾಷ್ಟ್ರಕೂಟರ ನೃಪತುಂಗ .... .... | ೫ |
| ೪. | ಮಹಾಕವಿ ಪಂಪ .... .... | ೮ |
| ೫. | ಎರಡನೆಯ ಬೂತುಗರಾಯ .... .... | ೧೦ |
| ೬. | ವೀರ ಚಾವುಂಡರಾಯ .... .... | ೧೧ |
| ೭. | ಸಳನ ಭಾಗ್ಯ .... .... | ೧೩ |
| ೮. | ಸೋಮೇಶ್ವರನ ಜಲಸಮಾಧಿ .... .... | ೧೫ |
| ೯. | ಚಾಲುಕ್ಯ ವಿಕ್ರಮಾದಿತ್ಯ .... .... | ೧೭ |
| ೧೦. | ಚಂದಲದೇವಿಯ ಸ್ವಯಂವರ .... .... | ೨೨ |
| ೧೧. | ಬಿಟ್ಟಿದೇವನು ವೈಷ್ಣವನಾದುದು .... .... | ೨೪ |
| ೧೨. | ತಂದೆಗೂ ಮೇಲುಗೈಯಾದ ಮಗ .... .... | ೨೭ |
| ೧೩. | ಬೇಲೂರಿನ ಚೆನ್ನಕೇಶವ ದೇವಾಲಯ .... .... | ೩೧ |
| ೧೪. | ಸಂಗಮನಾಥನು ಬಸವೇಶ್ವರನನ್ನು ಕಲ್ಯಾಣಕ್ಕೆ ಕಳಿಸಿದ್ದು | ೩೩ |
| ೧೫. | ಶ್ರೀ ಬಸವೇಶ್ವರ ಚರಿತ್ರೆ .... .... | ೩೬ |
| ೧೬. | ಮಹಾದೇವಿಯಕ್ಕನ ವಿರಕ್ತಿ .... .... | ೪೧ |
| ೧೭. | ಕುವರ ಲಕ್ಷ್ಮ ದಂಡಾಧಿಪ .... .... | ೪೪ |

## ಕನ್ನಡ ನಾಡಿನ ಕಥೆಗಳು


| ಅ. ನಂ. | ವಿಷಯ | ಪುಟ |
|---|---|---|
| ೧೮. | ಯಾದವ ಸಿಂಹಣರಾಯ | ೪೬ |
| ೧೯. | ವೀರ ಬಲ್ಲಾಳನ ಹೋರಾಟ | ೪೮ |
| ೨೦. | ಶ್ರೀ ರಂಗನಾಥ ಮೂರ್ತಿಯ ಕಥೆ | ೫೦ |
| ೨೧. | ಕುಮಾರ ರಾಮನ ಕತೆ | ೫೪ |
| ೨೨. | ರಾಜ್ಯ ಕಳಕೊಂಡ ಕಂಪಿಲರಾಯ | ೫೯ |
| ೨೩. | ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ | ೬೦ |
| ೨೪. | ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ್ದು | ೬೪ |
| ೨೫. | ಶ್ರೀ ಬುಕ್ಕರಾಯನ ನ್ಯಾಯ ಪ್ರಿಯತೆ | ೬೬ |
| ೨೬. | ದಕ್ಷಿಣದೇಶದ ದುಃಸ್ಥಿತಿ | ೬೮ |
| ೨೭. | ಎದೆಗಾರ ಕದಿರೆಪ್ಪನಾಯಕ | ೭೧ |
| ೨೮. | ಸಾವು ತಪ್ಪಿಸಿದ ತಿಮ್ಮರಸ | ೭೩ |
| ೨೯. | ನರಪತಿ ಶ್ರೀ ಕೃಷ್ಣದೇವರಾಯ | ೭೫ |
| ೩೦. | ನರಪತಿ ಕೃಷ್ಣದೇವರಾಯನ ಅರಮನೆ-ಓಲಗದ ನೀತಿಗಳು | ೮೦ |
| ೩೧. | ವೈಭವ ಸಂಪನ್ನ ವಿಜಯನಗರ | ೮೨ |
| ೩೨. | ಮಹಾನವಮಿ ಉತ್ಸವ | ೮೫ |
| ೩೩. | ದೇವಾಲಯಗಳೇ-ವಿದ್ಯಾಲಯಗಳು | ೮೯ |
| ೩೪. | ಶ್ರೀ ಪುರಂದರದಾಸರು | ೯೨ |
| ೩೫. | ಕನಕದಾಸರು | ೯೭ |
| ೩೬. | ಲಕ್ಷ್ಮಮ್ಮನ ಸ್ವಾರ್ಥತ್ಯಾಗ | ೧೦೧ |
| ೩೭. | ಅನಂತಪುರದ ಸಿದ್ದಪ್ಪನಾಯಕ | ೧೦೪ |
| ೩೮. | ನರಪತಿ ರಾಮರಾಯ ತಾಯಿಯನ್ನು ಕಂಡದ್ದು | ೧೦೭ |
| ೩೯. | ಸಿಂಹಲದ್ವೀಪದ ಮೇಲೆ ಕನ್ನಡಿಗರ ಧ್ವಜ | ೧೦೯ |
| ೪೦. | ರಕ್ಕಸಿಗಿ-ತಂಗಡಿಗಿಯ ಕಾಳಗ | ೧೧೧ |
| ೪೧. | ಹಾಳುಬಿದ್ದ ವಿಜಯನಗರ ಅಥವಾ ಹಂಪೆ | ೧೧೪ |

# ಅನುಕ್ರಮಣಿಕೆ


| ಅ. ನಂ. | ವಿಷಯ | ಪುಟ |
|---|---|---|
| ೪೨. | ವೆಂಕಟಪತಿರಾಯನ ಮರಣ ... ... | ೧೧೭ |
| ೪೩. | ಎಚ್ಚಮನ ಸ್ವಾಮಿನಿಷ್ಠೆ ... ... | ೧೧೯ |
| ೪೪. | ಮಹಮ್ಮದ ಆದಿಲಶಹ ... ... | ೧೨೪ |
| ೪೫. | ಬೈಲಂಗಡಿ ಸೋಮಲಾದೇವಿ ... ... | ೧೨೬ |
| ೪೬. | ಉಕ್ಕಿನಮೈ ಮತ್ತೀ ತಿಮ್ಮಣ್ಣನಾಯಕ ... ... | ೧೨೮ |
| ೪೭. | ಕೆಳದಿಯ ವೆಂಕಟಪ್ಪನಾಯಕ ... ... | ೧೩೧ |
| ೪೮. | ಬೆಳವಡಿ ಮಲ್ಲವ್ವ ದೇಸಾಯಿತಿ ... ... | ೧೩೪ |
| ೪೯. | ಕೆಳದಿಯ ಚನ್ನಮ್ಮ ರಾಣಿ ... ... | ೧೩೮ |
| ೫೦. | ವೈರಿಗಳನ್ನು ತರಿದ ಧೀರಳಾದ ಓಬಿ ... ... | ೧೪೦ |
| ೫೧. | ನಿಜಗಲ್ಲಿನ ರಾಣಿ ... ... | ೧೪೩ |
| ೫೨. | ಹೈದರಲ್ಲಿಯ ಚರಿತ್ರೆ ... ... | ೧೪೭ |
| ೫೩. | ಕೊಡಗಿನ ವೀರರಾಜೇಂದ್ರನ ಸ್ವಾತಂತ್ರ್ಯ ಪ್ರೇಮ ... | ೧೫೧ |
| ೫೪. | ದಿವಾಣ ಪೂರ್ಣಯ್ಯನವರು ... ... | ೧೫೫ |
| ೫೫. | ಕಿತ್ತೂರಿನ ಚನ್ನಮ್ಮ ದೇಸಾಯಿತಿ ... ... | ೧೫೮ |
| ೫೬. | ಮೈಸೂರಿನ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರು ... | ೧೬೨ |
| ಪರಿಶಿಷ್ಟ ೧ | ಕೆಲವು ನೆನಪಿಡತಕ್ಕ ಮಹತ್ವದ ಕಾಲಗಳು ... | ೧೬೬ |

# ಬರಹಗಾರನ ನುಡಿ

ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದವರು "ಕನ್ನಡ ನಾಡಿನ ಕಥೆಗಳು" ಎಂಬ ಪುಸ್ತಕವನ್ನು ನನಗೆ ಹೋದ ವರ್ಷ ಬರೆಯ ಹೇಳಿದಾಗ ಈಗಾಗಲೆ ಅಲ್ಲಲ್ಲಿ ಪ್ರಸಿದ್ಧವಾಗಿರುವ ಕತೆಗಳಲ್ಲದೆ, ಬೇರೆ ಮಹತ್ತ್ವದ ಕಥೆಗಳೇನಾದರೂ ಸಿಕ್ಕುವವೋ ಹೇಗೆಂದು ನಾನು ಪ್ರಾಚೀನ ಶಾಸನ ಮತ್ತು ಪುಸ್ತಕಗಳನ್ನು ಓದತೊಡಗಿದೆನು. ಆಗ, ಹೊಸ ಕತೆಗಳನ್ನು ಕೂಡುಹಾಕುವ ಕೆಲಸವು ಎಷ್ಟು ಕಠಿಣವೆಂಬುದು ಕಂಡುಬಂದಿತು; ಮತ್ತು ಅದೇ ಕಾಲಕ್ಕೆ ಇಡೀ ಕನ್ನಡ ನಾಡಿನ ಆಯಾ ಕಾಲದ ಆಯಾ ಅರಸರ ಕಥೆ, ಪರಿಸ್ಥಿತಿ ಮುಂತಾದವುಗಳನ್ನು ವರ್ಣಿಸುವ ಸಾವಿರಾರು ಪುಟಗಳ ಗ್ರಂಥಮಾಲೆಯೊಂದು ಅವಶ್ಯವಿರುವ ಸಂಗತಿಯೂ ನನಗೆ ಮನದಟ್ಟಾಯಿತು.

ಸದ್ಯದ ಪುಸ್ತಕದಲ್ಲಿ ಅದರ ಅಳವು ಮೀರದಂತೆ, ಸಂಕ್ಷೇಪವಾಗಿ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಇಂದಿನವರೆಗೆ ಆಳಿದ ಅರಸು-ಮನೆತನಗಳ ಪ್ರಾತಿನಿಧಿಕ ಪುರುಷರ ಚರಿತ್ರಗಳನ್ನೂ ಅವರ ವಿಷಯಕವಾದ ಎದ್ದುಕಾಣಿಸುವ ದೃಶ್ಯಗಳನ್ನೂ ಕೊಡಲಾಗಿದೆ. ಮಕ್ಕಳಿಗಾಗಿ ಈ ಪುಸ್ತಕ ವಿದ್ದರೂ ಜನಸಾಮಾನ್ಯಕ್ಕೂ ಉಪಯೋಗವಾಗಬೇಕೆಂದು ಸುಲಭ ಭಾಷೆ ಯಲ್ಲಿ ಕಥೆಗಳನ್ನು ಹೇಳಲು ಯತ್ನಿಸಿರುವೆ. ಇದರಿಂದ ಮಕ್ಕಳಿಗಲ್ಲದೆ ಎಲ್ಲ ರಿಗೂ ಕರ್ನಾಟಕದ ಚರಿತ್ರೆಯು ಕಣ್ಮುಂದೆ ಕಟ್ಟಲು ಸಹಾಯವಾಗಬಹುದು.

ಈ ಕಾರ್ಯದಲ್ಲಿ ನನಗೆ ಶ್ರೀ. ಕರಮರಕರ ದತ್ತರಾಯರು, ಮಂಡ ಲದ ಗೌರವ ಕಾರ್ಯದರ್ಶಿಗಳಾದ ಶ್ರೀ. ಕಮಲಾಪೂರ ನರಸಿಂಗರಾಯರು ಪುಸ್ತಕವು ಹೆಚ್ಚು ಉಪಯುಕ್ತವಾಗುವಂತೆ ಸಲಹೆ ಕೊಟ್ಟು ಬಹಳ ನೆರವಾಗಿರುವರು.

ಕರ್ನಾಟಕ ಇತಿಹಾಸ-ಸಂಸ್ಕೃತಿಗಳನ್ನುಳಿಸಿ ಬೆಳೆಯಿಸಲು ಯತ್ನಿಸುವ ಇತಿಹಾಸ ಮಂಡಲದವರು ಈ ಪುಸ್ತಕ ಬರೆಯುವದನ್ನು ನನಗೆ ಒಪ್ಪಿಸಿ ಕನ್ನಡಿಗರ ಸೇವೆಯನ್ನು ಮಾಡಲು ಅನುವು ಮಾಡಿಕೊಟ್ಟದ್ದಕ್ಕಾಗಿ ನಾನು ಅವರಿಗೆ ಋಣಿಯಾಗಿರುವೆನು.

ಕನ್ನಡಿಗರ ಸೇವಕ,
**ನಾರಾಯಣ ಶರ್ಮ**

# ಮಂಡಲದ ಮುನ್ನುಡಿ

ಕರ್ನಾಟಕ ಇತಿಹಾಸ ಸಂಶೋಧಕ ಮಂಡಲವು ಸ್ಥಾಪಿತವಾಗಿ ೨೫ ವರುಷಗಳು ಸಂದಿದುದರಿಂದ ಮಂಡಲದ ರಜತ - ಮಹೋತ್ಸವವನ್ನು ೧೯೫೦ರಲ್ಲಿ ನೆರವೇರಿಸಬೇಕೆಂದೂ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಸಾಧಾರ ಗ್ರಂಥಗಳನ್ನು ಯೋಗ್ಯ ಲೇಖಕರಿಂದ ಬರೆಯಿಸಿ ಪ್ರಕಟಿಸುವದೇ ಆ ಉತ್ಸವದ ಮುಖ್ಯ ಕಾರ್ಯಕ್ರಮವಿರಬೇಕೆಂದೂ ಗೊತ್ತಾಯಿತು. ಕನ್ನಡ ನಾಡಿನ ಇತಿಹಾಸವನ್ನು ಆಧಾರಯುಕ್ತವಾದ ಚಿಕ್ಕ ಕಥೆಗಳ ರೂಪದಿಂದ ಬರೆಯುವ ಕಾರ್ಯವು ಓದುಗರಿಗೆ ಚಿರಪರಿಚಿತರಾದ ಶ್ರೀ. ನಾರಾಯಣ ಶರ್ಮರಿಗೆ ಒಪ್ಪಿಸಲ್ಪಟ್ಟಿತು. ಅವರ ಪರಿಶ್ರಮದ ಫಲವಾಗಿ **"ಕನ್ನಡ ನಾಡಿನ ಕಥೆಗಳು"** ಎಂಬ ಈ ಪುಸ್ತಕವು ಮಂಡಲದ ರಜತಮಹೋತ್ಸವ ಗ್ರಂಥಮಾಲೆಯ ಭಾಗವಾಗಿ ಈಗ ಪ್ರಕಟವಾಗುತ್ತಲಿದೆ.

ಕನ್ನಡ ಜನಾಂಗದ ಜೀವನದ ವಿವಿಧ ರೂಪವನ್ನು ವಾಚಕರಿಗೆ ಮನದಟ್ಟಾಗುವಂತೆ ಕಥೆ ಚರಿತ್ರಗಳ ಮುಖಾಂತರವಾಗಿ ಸುಲಭವಾಗಿ ತೋರಿಸುವದೇ ಈ ಚಿಕ್ಕ ಹೊತ್ತಿಗೆಯ ಗುರಿ. ಸಾಧ್ಯವಿದ್ದ ಎಲ್ಲ ಆಧಾರ ಗ್ರಂಥಗಳನ್ನು ಸಮಾಲೋಚಿಸಿ, ಇಂಥ ಚಿಕ್ಕ ಹೊತ್ತಿಗೆಯಲ್ಲಿ ಅನೇಕ ವಿಷಯಗಳ ಸಂಗ್ರಹವನ್ನು ಕುಶಲತೆಯಿಂದ ಮಾಡಿ, ಆ ವಿಷಯಗಳನ್ನು ಸುಲಭವಾದ ಸುಂದರವಾದ ಭಾಷೆಯಲ್ಲಿ ವರ್ಣಿಸಿ, ಕನ್ನಡ ನಾಡಿನ ಚಿಣ್ಣಗರಲ್ಲಿ ಕನ್ನಡದ ಸಾತ್ವಿಕ ಅಭಿಮಾನವು ಬೆಳೆಯುವಂತೆ ಈ ಪುಸ್ತಕವನ್ನು ಬರೆದ ಶ್ರೀ. ನಾರಾಯಣ ಶರ್ಮರಿಗೆ ಮಂಡಲವು ಋಣಿಯಾಗಿದೆ. ಈ ಪುಸ್ತಕದ ಕೈಬರೆಹವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ತಕ್ಕ ಸಲಹೆಸೂಚನೆಗಳನ್ನು ಕೊಟ್ಟ ಶ್ರೀ. ರಾಘವೇಂದ್ರಾಚಾರ್ಯ ಪಂಚಮುಖಿ ಎಂ. ಎ., ( ಕನ್ನಡ ಸಂಶೋಧನದ ಸಂಚಾಲಕರು ) ಪ್ರೊ. ಎಸ್. ಎಸ್. ಮಾಳವಾಡ, ಎಂ. ಎ. ಕರ್ನಾಟಕ ಕಾಲೇಜ, ಅವರಿಗೆ ಮಂಡಲವು ವಂದನೆಗಳನ್ನು ಸಮರ್ಪಿಸುತ್ತದೆ. ಮಂಡಲದ ಬಿನ್ನಹದಂತೆ ಆಗಾಗ್ಗೆ ಸಲಹೆಗಳನ್ನಿತ್ತು ಮುನ್ನುಡಿಯನ್ನು ಬರೆದು ಗ್ರಂಥವನ್ನು ಆಶೀರ್ವದಿಸಿದ ಹಿರಿಯರಾದ

ಶ್ರೀ. ಹಾಲಭಾವಿ ವೀರಭದ್ರಪ್ಪನವರು ಬಿ. ಎ. ಎಲ್‌ಎಲ್. ಬಿ., ರಿಟಾಯರ್ಡ ಫರ್ಸ್ಟ ಕ್ಲಾಸ ಸಬಜಜ್ಜ, ಧಾರವಾಡ ಇವರಿಗೆ ಮಂಡಲವು ತುಂಬಾ ಋಣಿಯಾಗಿದೆ.

ಈ ಪುಸ್ತಕದ ಮುದ್ರಣ ಕಾರ್ಯವನ್ನು ತೋಂಟದಾರ್ಯ ಮುದ್ರಣಾಲಯದವರು ಆಸ್ಥೆಯಿಂದ ಮಾಡಿಕೊಟ್ಟರೆಂದು ಹೇಳಲು ಮಂಡಲಕ್ಕೆ ಸಂತೋಷವೆನಿಸುತ್ತದೆ.

ಈ ಚಿಕ್ಕ ಹೊತ್ತಿಗೆಯು ಕನ್ನಡಿಗರ ಮೆಚ್ಚುಗೆಯನ್ನು ಪಡೆಯುವದೆಂದು ಮಂಡಲದ ನಂಬಿಗೆಯಿದೆ.

ಕ. ಇ. ಸಂ. ಮಂಡಲ,<br>ಧಾರವಾಡ.<br>ತಾ. ೨—೨—೧೯೪೦

**ದತ್ತಾತ್ರೇಯ ಕರಮರಕರ,**<br>ಕಾರ್ಯದರ್ಶಿ,<br>ರಜತೋತ್ಸವ ಗ್ರಂಥಮಾಲೆ

# ಮೊದಲ್ಮಾತು


★

ವಿಜಯನಗರ ಸಾಮ್ರಾಜ್ಯ ಷಟ್ಶಾಂವತ್ಸರಿಕೋತ್ಸವದ ನಿಮಿತ್ತ ಹಣನಿಧಿಯನ್ನು ಕೂಡಿಸಲಿಕ್ಕೆ ನಾನೂ ನನ್ನ ಸಂಗಡಿಗರೂ ಈ ಪಟ್ಟಣದ ಒಬ್ಬ ದೊಡ್ಡ ಅಧಿಕಾರಸ್ಥರ ಕಡೆಗೆ ಹೋದಾಗ್ಗೆ ಅವರು 'ಎಷ್ಟೋ ವರುಷಗಳ ಹಿಂದೆ ಹಾಳಾಗಿಹೋದ ವಿಜಯನಗರದ ಗೊಡವೆಗೆ ಏಕೆ ಹೋಗುತ್ತೀರಿ'—ಈಗಿನ ಆರ್ಥಿಕ ಪರಿಸ್ಥಿತಿಯನ್ನು ಹೋಗಲಾಡಿಸುವ ಯಾವುದಾದರೂ ಉದ್ಯೋಗವನ್ನು ಕೈಕೊಳ್ಳಿರಿ— ಮುಂತಾದ ಉಪದೇಶವನ್ನು ಮಾಡಿದ್ದು ನನ್ನ ನೆನಪಿಗೆ ಬರುತ್ತದೆ. ಹಿಂದಿನ ಇತಿಹಾಸದ ಬಗ್ಗೆ ಈ ತರದ ಅಭಿಪ್ರಾಯವುಳ್ಳವರು ಈ ಕನ್ನಡ ನಾಡಿನ ಹೊರಗೆ ಯಾರಾದರೂ ಇರುವರೊ ಇಲ್ಲವೊ ನಾನರಿಯೆ. ಈ ನಾಡಿನಲ್ಲಿ ಇನ್ನೂ ಅಂಥ ಕೆಲವರು ಇರುವದು ಒಂದು ಆಶ್ಚರ್ಯ! ಕನ್ನಡ ನಾಡಿನ ದುರ್ದೈವ!! ಇತ್ತೀಚೆಗೆ ಆದ ಶೋಧಗಳಿಂದ ಯಾವ ಕನ್ನಡ ನಾಡಿನ ಇತಿಹಾಸವು ವೇದಕಾಲಕ್ಕಿಂತಲೂ ಹಿಂದೆ ಹೋಗುತ್ತದೆ ಎಂದು ತಿಳಿದುಬರುತ್ತದೆಯೋ ಅದೇ ನಾಡಿನವರಾದ ನಾವು ನಮ್ಮ ಪೂರ್ವಜರ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಅನಾಸ್ಥೆಯನ್ನು ತೋರಿಸುವದು ಖೇದದ ಸಂಗತಿಯು. ಸಂಧ್ಯಾಕಾಲದಲ್ಲಿ ನಾವು ಗೋತ್ರ-ಸೂತ್ರಗಳನ್ನು ಹೇಳುವುದೇಕೆ? ಪೂಜಾಕಾಲದಲ್ಲಿ ಪುರಾತನರ ನೆನಪು ಏಕೆ? ಧಾರ್ಮಿಕ ಪ್ರಸಂಗಗಳಲ್ಲಿ ಹಳಬರ ನೆನಪು ಅವಶ್ಯವಿದ್ದರೆ, ವ್ಯವಹಾರಿಕ ಪ್ರಸಂಗಗಳಲ್ಲಿ ಇದು ಹೆಚ್ಚು ಅವಶ್ಯಕ. ಇದನ್ನು ನಾವು ಮರೆತಿರುವುದರಿಂದಲೇ ನಮ್ಮ ಸ್ಥಿತಿಯು ಇಷ್ಟು ಶೋಚನೀಯವಾಗಿದೆ. ಇದನ್ನು ತುಸುಮಟ್ಟಿಗಾದರೂ ಹೋಗಲಾಡಿಸುವ ಉದ್ದೇಶದಿಂದಲೇ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲವು ಜನ್ಮವೆತ್ತಿದೆ.


ಈ ಸಂಸ್ಥೆಯ ರಜತ ಮಹೋತ್ಸವದ ನಿಮಿತ್ತ ಹೊರಬೀಳುತ್ತಿರುವ ಹೊತ್ತಿಗೆಗಳಲ್ಲಿ ಈ ಚಿಕ್ಕ ಹೊತ್ತಿಗೆಯೊಂದು. ಎಲ್ಲ ತರಗತಿಯ ಜನರಿಗೆ ಉಪಯೋಗವಾಗುವ ಉದ್ದೇಶದಿಂದ ಇದು ಬರೆಯಲ್ಪಟ್ಟಿದೆ. ಮುಂದೆ ಹಿರಿಯರಾಗುವ ಈಗಿನ ಕಿರಿಯರಿಗಂತೂ ಇದರ ಉಪಯೋಗವು ವಿಶೇಷ. ಶಕ್ಯವಿದ್ದಷ್ಟು ಪುರಾತನ ಕಾಲದಿಂದ ಇಲ್ಲಿಯವರೆಗಿನ ಪ್ರಮುಖ ರಾಜಕೀಯ, ಧಾರ್ಮಿಕ, ಕಲಾತ್ಮಕ, ಸಾಮಾಜಿಕ ಪುರುಷರ ಚರಿತ್ರಗಳು ಕತೆಗಳ ರೂಪದಿಂದ ಅತಿ ಸಂಕ್ಷೇಪವಾಗಿ ಇದರಲ್ಲಿ ಹೇಳಲ್ಪಟ್ಟವೆ. ಕನ್ನಡನಾಡಿನ ಮೇಲ್ಮೆಗೆ ಹೆಂಗಸರು ಸಹ ಹೆಚ್ಚಾಗಿ ಹೋರಾಡಿರುವದು ಹೆಮ್ಮೆಯ ಮಾತು. ಇವರಲ್ಲಿ ಕೆಲವರ ಕತೆಗಳು ಈ ಹೊತ್ತಿಗೆಯಲ್ಲಿ ಅಡಕವಾಗಿವೆ. ಕತೆಗಳಲ್ಲಿ ಸ್ತ್ರೀ-ಪುರುಷರ ಆಯ್ಕೆಯು ಸರಿಯಾಗಿದೆ. ಪ್ರತಿಯೊಂದು ಕತೆಗೆ ಆಧಾರಭೂತವಾದ ಸಾಮಗ್ರಿಗಳ ಉಲ್ಲೇಖವನ್ನು ಅದರ ತಲೆಕಟ್ಟಿನಲ್ಲಿ ಮಾಡಿರುವುದರಿಂದ ಈ ಕತೆಗಳು ನಿಜವಾದ ಇತಿಹಾಸವೆಂಬುದು ಸಹಜವಾಗಿ ಕಾಣುವುದು. ಭಾಷೆಯು ಸುಲಭ ಮತ್ತು ಸರಳ. ಇದನ್ನು ಮೊದಲಿನಿಂದ ತುದಿಯವರೆಗೆ ಓದಿದರೆ, ಇದರ ಮಹತ್ತ್ವವು ಮನಗಾಣುವುದು. ಇದರ ಪ್ರಸಾರವು ಆದಷ್ಟು ಹೆಚ್ಚಾಗಲೆಂಬ ಉದ್ದೇಶದಿಂದ ಇದರ ಬೆಲೆಯನ್ನು ತೀರ ಕಡಿಮೆ ಇಡಲಾಗಿದೆ. ಇದರ ಲಾಭವನ್ನು ಕನ್ನಡಿಗರು ಪಡೆಯದಿರಲಾರರೆಂದು ನಂಬುಗೆ.

ಧಾರವಾಡ
ತಾ. ೨೦-೧-೧೯೪೦

ವೀರಭದ್ರಪ್ಪ ಹಾಲಭಾವಿ




' ರಾಷ್ಟ್ರೀಯ ಪ್ರಕಾಶನ ಟ್ರಸ್ಟಿನ ಕೃಪೆಯಿಂದ




‘ ರಾಷ್ಟ್ರೀಯ ಪ್ರಕಾಶನ ಟ್ರಸ್ಟಿನ ಕೃಪೆಯಿಂದ ’

# ಐತಿಹಾಸಿಕ ಪ್ರಸ್ತಾವನೆ

ಗಾಡಿಯ ಸೀಮೆ ಚಲ್ವೊಗೆವ ತಾಣಮಲಂಪಿನ ಸಂತೆ ಪೆಂಪು ಸಾ।
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ॥
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಗನೆ ಮುಕ್ತಿಕಾಂತೆ ಕೈ।
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪಂ ॥

ಕವಿ–ಚಿಕ್ಕುಪಾಧ್ಯಾಯ

**ಕರ್ನಾಟಕದ ಮೇರೆ:—** ಒಂದು ಸಾವಿರ ವರ್ಷಗಳ ಹಿಂದೆ ಆಳಿ ಹೋದ ರಾಷ್ಟ್ರಕೂಟರ ನೃಪತುಂಗನು "ಕಾವೇರಿಯಿಂದ ಗೋದಾವರಿ ನದಿಯವರೆಗೆ ಕನ್ನಡ ನಾಡಿನ ಮೇರೆ" ಎಂದು ತನ್ನ ಗ್ರಂಥದಲ್ಲಿ ಬರೆದಿರುವನು; ಆದರೆ ಇಂದು ಅದು "ಕಾವೇರಿಯಿಂದ ಕೃಷ್ಣಾನದಿಯ ವರೆಗೆ" ಬಂದು ಹತ್ತಿದೆ. ಇಂದಿನ ಕರ್ನಾಟಕದೊಳಗೆ, ಮೈಸೂರು, ಕೊಡಗು, ನೀಲಗಿರಿ ಮುಂತಾದ ದಕ್ಷಿಣದ ಪ್ರದೇಶಗಳು, ಮಂಗಳೂರು ಕಾರವಾರ ಮುಂತಾದ ಪಶ್ಚಿಮದ ಸಮುದ್ರ ದಂಡೆಗಿರುವ ಜಿಲ್ಹೆಗಳು, ಧಾರವಾಡ, ಬೆಳಗಾವಿ, ವಿಜಾಪೂರ ಮತ್ತು ಆಯಾ ಜಿಲ್ಹೆಯ ಆಡಳಿತದಲ್ಲಿರುವ ಜಮಖಂಡಿ, ಸಾಂಗಲಿ, ಜತ್ತಿ, ಅಕ್ಕಲಕೋಟೆ, ಮುಧೋಳ ಮುಂತಾದ ಸಂಸ್ಥಾನಗಳು, ಕೊಪ್ಪಳ, ಕಲಬುರ್ಗಿ, ರಾಯಚೂರು, ಬೀದರ, ಮುಂತಾದ ನಿಜಾಮ ಸಂಸ್ಥಾನಕ್ಕೆ ಒಳಪಟ್ಟ ಜಿಲ್ಹೆಗಳು ಬರುತ್ತವೆ.

**ಪ್ರಾಚೀನ ಕರ್ನಾಟಕ:—** ಮೌರ್ಯ ಕುಲದ ಚಕ್ರವರ್ತಿಯಾದ ಚಂದ್ರಗುಪ್ತನ (ಕ್ರಿ.ಶ.ಪೂ. ೧೮೪) ಕಾಲದಿಂದ ಕರ್ನಾಟಕದ ಇತಿಹಾಸವು ದೊರೆಯುತ್ತದೆ. ಆಗ, ಕರ್ನಾಟಕವು ಮೌರ್ಯರ ರಾಜ್ಯಕ್ಕೆ ಸೇರಿತ್ತು. ಚಂದ್ರಗುಪ್ತನು ತನ್ನ ಗುರುಗಳಾದ ಭದ್ರಬಾಹು ಎಂಬ ಜೈನ ಮುನಿಗಳೊಡನೆ, ಶ್ರವಣಬೆಳಗೊಳಕ್ಕೆ ಬಂದು ಇದ್ದು ಅಲ್ಲಿಯೇ ದೇಹವಿಟ್ಟನು. ಮುಂದೆ, ಚಂದ್ರಗುಪ್ತನ ಮೊಮ್ಮಗನಾದ ಅಶೋಕನು ಕ್ರಿ.ಶ.ಪೂ. ೨೭೨ರಿಂದ೨೩೨ರ ವರೆಗೆ ಆಳಿದನು. ಅವನಾಳಿಕೆಯಲ್ಲಿಯೂ ಕರ್ನಾಟಕವು ಮೌರ್ಯರಿಗೆ

ಸೇರಿತ್ತು. ಇವನ ಆಳಿಕೆಯ ಗುರುತುಗಳಾದ ಕಲ್ಲುಬಂಡೆಗಳ ಮೇಲೆ ಬರೆದ ಧರ್ಮಶಾಸನಗಳು ಈಗಲೂ ಚಿತ್ರದುರ್ಗ, ಮೊಳಕಾಲ್ಮೂರು, (ಮೈಸೂರು ಸಂಸ್ಥಾನ) ನಿಜಾಮ ಸಂಸ್ಥಾನದ ರಾಯಚೂರು ಜಿಲ್ಹೆಯ ಮಸ್ಕಿಯಲ್ಲಿ ಸಿಕ್ಕುತ್ತವೆ. ಅಶೋಕನು ತನ್ನ ಅಹಿಂಸೆಯ ಧರ್ಮೋಪದೇಶಕರನ್ನು ದೇಶಾಂತರಗಳಿಗೆ ಕಳಿಸಿದಂತೆ, ಕರ್ನಾಟಕಕ್ಕೆ ಕ್ರಿ. ಶ. ಪೂ. ೨೩೦ರಲ್ಲಿ ರಕ್ಷಿತನೆಂಬುವನನ್ನು ಬನವಾಸಿಗೂ ಮಹಾದೇವ ಎಂಬುವನನ್ನು ಮೈಸೂರು ಪ್ರಾಂತಕ್ಕೂ ಕಳಿಸಿದ್ದನು.

**ಶಾತವಾಹನ ಅರಸರು:—** ತರುವಾಯ ಕ್ರಿ. ಶ. ಪೂ. ೩ನೆಯ ಶತಮಾನದಿಂದ ೨೨೦ರವರೆಗೆ ಶಾತವಾಹನರು ಕರ್ನಾಟಕವನ್ನಾಳಿದರು. ಬಳ್ಳಾರಿ ಜಿಲ್ಹೆ, ಮೈಸೂರು ಪ್ರಾಂತ ಇವು ಅವರ ಆಳಿಕೆಗೆ ಸೇರಿದ್ದವು. ಶಾತವಾಹನರಲ್ಲಿ ಸಿಮುಕ, ಪುಲಿಮೈ, ಹಾಲ, ಸಾತಕರ್ಣಿ ಮೊದಲಾದ ಅರಸರಾದರು. ಸಾತಕರ್ಣಿಯು ಪಶ್ಚಿಮದಿಂದ ಬಂದ ಶಕರನ್ನು ಹೊಡೆದಟ್ಟಿ ಕರ್ನಾಟಕವನ್ನು ಕಾಯ್ದನು. ಶಾತವಾಹನರು ವೈದಿಕ ಪದ್ಧತಿಯವರಾದರೂ ಎಲ್ಲ ಮತದವರನ್ನು ಸರಿಯಾಗಿ ನೋಡಿದರು. ಅವರ ಕಾಲದಲ್ಲಿ ಕನ್ನಡಿಗರಾದ ವರ್ತಕರು ರೋಮದವರೊಡನೆ ವ್ಯಾಪಾರ ಮಾಡುತ್ತಿದ್ದರು. ಬನವಾಸಿ, ಪೈಠಣಗಳು ಅವರ ರಾಜಧಾನಿಗಳು.

**ಕದಂಬರಸರು:—** (ಕ್ರಿ. ಶ. ೩೩೦ರಿಂದ ೫೭೦ರವರೆಗೆ) ಶಾತವಾಹನರಾದಮೇಲೆ ಕರ್ನಾಟಕದ ಭಾಗವು ಪಲ್ಲವರ ಕೈಸೇರಿತ್ತು; ಮುಂದೆ, ಕದಂಬರ ಮೂಲ ಪುರುಷನಾದ ಮಯೂರಶರ್ಮನು ಅದನ್ನು ಅವರಿಂದ ಕಿತ್ತುಕೊಂಡು ಶಿವಮೊಗ್ಗೆ, ಕಾರವಾರ ಜಿಲ್ಹೆ, ಬೆಳಗಾವಿ ಜಿಲ್ಹೆಗಳ ಕೆಲಭಾಗಗಳನ್ನು ಗೆದ್ದುಕೊಂಡು, ತನ್ನದೊಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿದನು. ಇವನ ವಂಶದಲ್ಲಿ ಕಕುಸ್ಥವರ್ಮ, ಶಾಂತಿವರ್ಮ, ಕೃಷ್ಣವರ್ಮರು ಬಹು ಪ್ರಬಲರು. ಇವರ ರಾಜಧಾನಿ ಬನವಾಸಿ. ಮುಂದೆ ಇವರ ವಂಶದವರು ಹಲಸಿಗೆ-ಹಾನಗಲ್ಲಗಳಲ್ಲಿ ಆಳಿದರು. ಕಾದರೊಳ್ಳಿ, ದೇಗಾಂವಿ (ಕಿತ್ತೂರ ಹತ್ತರ) ಬನವಾಸಿ, ಹಲಸಿಗೆ ಹಾನಗಲ್ಲುಗಳಲ್ಲಿ ಇವರು ಕಟ್ಟಿದ ದೇವಾಲಯಗಳಿವೆ. ಕದಂಬರ ಆಳಿಕೆಯಲ್ಲಿ ಭೂತಪಾಲಸೆಟ್ಟಿ ಎಂಬ ಕನ್ನಡ ವರ್ತಕನು ಕಾರ್ಲೆಯಲ್ಲಿ ಈಗಲೂ ಇರುವ ಭವ್ಯ ಮತ್ತು ದಿವ್ಯವಾದ ಚೈತ್ಯಾಲಯವನ್ನು

ಕಟ್ಟಿಸಿದನು. ಬೆಳಗಾಂವಿ-ಧಾರವಾಡ ಜಿಲ್ಹೆಗಳು ಇವರಾಳಿಕೆಯಲ್ಲಿದ್ದವು. ಇವರ ಮನೆತನಕ್ಕೆ ಸಂಬಂಧಿಸಿದ ಮೂಲ ಪುರುಷನಾದ ಮಯೂರ ಶರ್ಮನ ಚರಿತ್ರೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ.

**ತಲಕಾಡಿನ ಗಂಗರಸರು:—** (೪ನೆಯ ಶತಮಾನದಿಂದ ೧೦ ರ ವರೆಗೆ) ಸಿಂಹನಂದಿ ಎಂಬ ಜೈನ ಗುರುಗಳ ಕೃಪೆಯಿಂದ ಮಾಧವ ಎಂಬುವನು ರಾಜ್ಯವನ್ನು ಸ್ಥಾಪಿಸಿದನು. ಇವರಲ್ಲಿ ದುರ್ವಿನೀತ, ಶ್ರೀಪುರುಷ, ಶಿವಮಾರ, ನೀತಿಮಾರ್ಗ, ಬೂತುಗ, ೨ನೆಯ ಮಾರಸಿಂಹ ಮೊದಲಾದವರು ಆಳಿದರು. ಕರ್ನಾಟಕದಲ್ಲಿರುವ ಚಲುಕ್ಯ,ರಾಷ್ಟ್ರಕೂಟರಿಗೂ ಇವರಿಗೂ ಬೀಗತನವಿತ್ತು. ಗಂಗರಸರೆಲ್ಲರೂ ಪರನಾರೀ ಸೋದರರೂ ವಿದ್ವಾಂಸರೂ ಇದ್ದರು. ಸದ್ಯದ ಮೈಸೂರಿನ ಬಹು ಭಾಗವು ಗಂಗರ ರಾಜ್ಯಕ್ಕೆ ಸೇರಿತ್ತು. ದುರ್ವಿನೀತನಲ್ಲಿ ಕೆಲದಿನ ಭಾರವೀ ಕವಿಯು ಬಂದು ಇದ್ದಸಂತೆ. ಶಿವಮಾರನು ಆನೆಗಳನ್ನು ಅಂಕೆಯಲ್ಲಿ ತರುವ ಬಗ್ಗೆ ಗಜಶತಕ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದಿರುವನು. ಕನ್ನಡದಲ್ಲಿ ಗಂಗರ ಹಲವು ಶಿಲಾಲೇಖಗಳಿರುವವು. ಇವರಲ್ಲಿಯ ಬೂತುಗರಾಯನ ಚರಿತ್ರೆಯನ್ನು ಇದರಲ್ಲಿ ಕೊಡಲಾಗಿದೆ.

**ಬಾದಾಮಿಯ ಚಲುಕ್ಯರು:—** (ಕ್ರಿ. ಶ. ೫೫೦-೭೫೦ರವರೆಗೆ) ಚಲುಕ್ಯರ ಜಯಸಿಂಹನೆಂಬುವನು ಉತ್ತರದಿಂದ ಬಂದು ಚಿಕ್ಕರಾಜ್ಯ ಕಟ್ಟಿಕೊಂಡನು. ಇವನ ಮಗ ರಾಜಸಿಂಹ. ಇವನ ಮಗನೇ ಮೊದಲನೆಯ ಪುಲಿಕೇಶಿ. ಇವನೇ ಇಂದುಕಾಂತ. ಅಜಂತೆದಲ್ಲಿದ್ದ ರಾಜಧಾನಿಯನ್ನು ಬಾದಾಮಿಗೆ ತಂದನು. ಪಲ್ಲವರನ್ನು ಕರ್ನಾಟಕದಿಂದ ಹೊಡೆದಟ್ಟಿದನು. ಅಶ್ವಮೇಧಯಜ್ಞ ಮಾಡಿದನು. ಇವರಲ್ಲಿ ಮಂಗಳೀಶ, ೨ನೆಯ ಪುಲಿಕೇಶಿ, ೪ನೆಯ ವಿಕ್ರಮಾದಿತ್ಯ, ಇವರು ಮುಖ್ಯರು. ಮಂಗಳೀಶನು ೧ನೆಯ ಪುಲಿಕೇಶಿಯ ಮಗ, ಬಾದಾಮಿಯಲ್ಲಿರುವ ಗುಡ್ಡದಲ್ಲಿಯ ಗವಿಗಳನ್ನು ಕಟ್ಟಿಸಿದನು. ಮಂಗಳೀಶನ ತರುವಾಯ ಮಂಗಳೀಶನ ಅಣ್ಣ ೧ನೆಯ ಕೀರ್ತಿವರ್ಮನ ಮಗನಾದ ೨ನೆಯ ಪುಲಿಕೇಶಿಯು ಮಂಗಳೀಶನಿಂದ ತನ್ನ ತಂದೆಯ ಪಟ್ಟವನ್ನು ಕಸಿದುಕೊಂಡು ತಾನು ಆಳಲಾರಂಭಿಸಿದನು (ಕ್ರಿ. ಶ. ೬೦೯-೬೪೨). ಇವನು ಕರ್ನಾಟಕದ—ಬಲವನ್ನು ಕಟ್ಟಿದನು. ಉತ್ತರದ ಹರ್ಷವರ್ಧನನು ದಕ್ಷಿಣವನ್ನು ಗೆಲಿಯಲಿಕ್ಕೆ ಬಂದಾಗ, ಅವನನ್ನು

ನರ್ಮದಾ ದಂಡೆಯಲ್ಲಿ ಎದುರಿಸಿ, ಅತ್ತಿಂದತ್ತಲೇ ಅಟ್ಟಿದನು. 'ದಕ್ಷಿಣ ಪಥೇಶ್ವರ' 'ಸತ್ಯಾಶ್ರಯ ಪೃಥ್ವೀವಲ್ಲಭ'ಎಂಬ ಬಿರುದುಗಳನ್ನು ಧರಿಸಿದನು. ಚೀನ ದೇಶದಿಂದ ಹ್ಯುಯೆನ್‌ಸಂಗ ಎಂಬ ಪ್ರವಾಸಿಯು ಇವನಾಳಿಕೆಯಲ್ಲಿ ಬಾದಾಮಿಗೆ ಬಂದಿದ್ದನು. ಇವನು ಕಂಚಿಯ ಪಲ್ಲವರೊಡನೆ ಹೋರಾಡಿದನು. ಇರಾಣದ ಬಾದಶಹನು ಇವನ ಕಡೆಗೆ ತನ್ನ ರಾಯಭಾರಿಗಳನ್ನು ಕಳಿಸಿದ್ದನು. ಇವರಾಳಿಕೆಯಲ್ಲಿ ಮಹಾರಾಷ್ಟ್ರವು ಕರ್ನಾಟಕಕ್ಕೆ ಒಳಪಟ್ಟಿತ್ತು. ಇವನ ಹಿರಿಯ ಸೊಸೆ ವಿಜಯಭಟ್ಟಾರಿಕೆಯು ಸಾವಂತವಾಡಿಯ ಪ್ರಾಂತವನ್ನು ಆಳಿದಳು. ಇವರಾಳಿಕೆಯಲ್ಲಿಯ ಶಿಲಾಲೇಖಗಳು ಬಹುತರವಾಗಿ ಸಂಸ್ಕೃತದಲ್ಲಿವೆ. ಇವರಲ್ಲಿಯ ೨ನೆಯ ಪುಲಿಕೇಶಿಯ ಕತೆಯನ್ನು ಸೇರಿಸಿರುತ್ತದೆ. ಚಲುಕ್ಯರ ಆಳಿಕೆಯಲ್ಲಿ ವೈದಿಕ ಮತಕ್ಕೆ ಕಳೆಕಟ್ಟಿತು. ಪಟ್ಟದಕಲ್ಲು, ಬಾದಾಮಿ, ಐಹೊಳೆಗಳಲ್ಲಿ ಚಲುಕ್ಯವಂಶದ ಅರಸು-ಅರಸಿಯರು, ಶಿಲ್ಪಕಲೆಯಿಂದ ಬೆಳಗುವ ದಿವ್ಯವಾದ ದೇವಾಲಯಗಳನ್ನು ಕಟ್ಟಿದರು. ೨ನೆಯ ವಿಕ್ರಮಾದಿತ್ಯನು ಪಲ್ಲವರನ್ನು ಗೆದ್ದು ಬಂದ ಗುರುತಿಗಾಗಿ ಅವನ ಹೆಂಡತಿಯಾದ ಲೋಕಮಹಾದೇವಿಯು ಪಟ್ಟದಕಲ್ಲಿನಲ್ಲಿ ಶ್ರೀ ವಿರೂಪಾಕ್ಷನ ವಿಶಾಲವಾದ ದೇವಾಲಯ ಕಟ್ಟಿಸಿದಳು. (ಕ್ರಿ. ಶ. ೭೪೦) ಚಲುಕ್ಯ ಅರಸರಲ್ಲಿ ಕೆಲವರು ಶೈವರು, ಕೆಲವರು ವೈಷ್ಣವರಿದ್ದರು.

**ರಾಷ್ಟ್ರಕೂಟ ಅರಸರು:—** (ಕ್ರಿ. ಶ. ೭೫೩ರಿಂದ ೯೭೩ರವರೆಗೆ) ದಂತಿದುರ್ಗನು ಚಲುಕ್ಯರ ಕೊನೆಯ ಅರಸನಾದ ೨ನೆಯ ಕೀರ್ತಿವರ್ಮನ ಆಳಿಕೆಯಲ್ಲಿ ಸಿಂಹಾಸನವನ್ನು ಕಸಿದುಕೊಂಡನು. ನೃಪತುಂಗನ ಕಾಲದಲ್ಲಿ ಮಳಖೇಡವು ರಾಜಧಾನಿಯಾಯಿತು. ರಾಷ್ಟ್ರಕೂಟರು ಕನ್ನಡಿಗರು. ಇವರಲ್ಲಿ ಗೋವಿಂದ, ನೃಪತುಂಗ (ಕ್ರಿ. ಶ. ೮೧೪-೮೭೭) ಕೃಷ್ಣ, ಮುಮ್ಮಡಿ ಕೃಷ್ಣ (ಕ್ರಿ. ಶ. ೯೩೯-೯೬೮) ಇವರು ಶ್ರೇಷ್ಠರು. ಮೊದಲನೆಯ ಕೃಷ್ಣನು ವೇರೂಳದಲ್ಲಿ ಕೈಲಾಸವೆಂಬ ಹೊಸಸೃಷ್ಟಿ ಎನಿಸುವ ಅಪ್ರತಿಮವಾದ ದೇವಾಲಯವನ್ನು ವಿಶ್ವಕರ್ಮನೆಂಬ ಶಿಲ್ಪಿಯಿಂದ ಒಂದೇ ಒಂದು ದೊಡ್ಡ ಬಂಡೆಯಲ್ಲಿ ಕೊರೆಯಿಸಿದನು. (ಕ್ರಿ. ಶ. ೭೫೬-೭೭೫) ಮುಮ್ಮಡಿ ಕೃಷ್ಣನು ಸಿಂಹಲದ್ವೀಪದವರೆಗೆ ಹೋಗಿ, ಕನ್ನಡ-ಬಾವುಟವನ್ನು ಹಾರಿಸಿದನು. ರಾಮೇಶ್ವರದ ಹತ್ತಿರ ಜಯಸ್ತಂಬ ನಡಿಸಿದನು. ಪೊನ್ನ ಎಂಬ ಜೈನ ಕವಿಗೆ

'ಕವಿಚಕ್ರವರ್ತಿ' ಎಂದು ಬಿರುದು ಕೊಟ್ಟನು. ರಾಷ್ಟ್ರಕೂಟರ ಕಾಲದಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯವು ದೊರೆಯಿತು. ರಾಷ್ಟ್ರಕೂಟರ ಕಾಲದ ಹೆಚ್ಚು ಶಿಲಾಲಿಪಿಗಳು ಕನ್ನಡದಲ್ಲಿವೆ. ಇವರಾಳಿಕೆಯಲ್ಲಿ ಕಳಸ, ಹೆಬ್ಬಳ್ಳಿ, ಡಂಬಳ, ಸೊರಟೂರು, ಸಾಲೊಟಗಿ (ವಿಜಾಪುರ ಜಿಲ್ಲೆ) ಮನಗೂಳಿಗಳಲ್ಲಿ ದೊಡ್ಡ ದೊಡ್ಡ ಸಂಸ್ಕೃತ ಪಾಠಶಾಲೆಗಳಿದ್ದವು. ಇವರಲ್ಲಿ ನೃಪತುಂಗನ ಚರಿತ್ರೆಯನ್ನೂ ಇವರ ಆಳಿಕೆಯಲ್ಲಿದ್ದ ಆದಿಪಂಪನ ಚರಿತ್ರೆಯನ್ನೂ ಈ ಪುಸ್ತಕದಲ್ಲಿ ಮಾದರಿಗಾಗಿ ಕೊಡಲಾಗಿದೆ. ಈಗ ಸಿಕ್ಕ ಕನ್ನಡ ಹಳೆಯ ಗ್ರಂಥಗಳಲ್ಲಿ ನೃಪತುಂಗನದೇ ಮೊದಲನೆಯ ಗ್ರಂಥ.

**ಕಲ್ಯಾಣದ ಚಾಲುಕ್ಯರು:—** ( ಕ್ರಿ. ಶ. ೯೭೩-೧೧೯೦ರವರೆಗೆ ) ಬಾದಾಮಿಯಲ್ಲಿ ಆಳುತ್ತಿದ್ದ ಚಲುಕ್ಯರ ವಂಶಜನಾದ ತೈಲಪನೆಂಬುವನು ಮಳಖೇಡದ ರಾಷ್ಟ್ರಕೂಟರ ಕಕ್ಕಲನನ್ನು ಸೋಲಿಸಿ, ತಾನೇ ಆಳಹತ್ತಿ, ತನ್ನ ರಾಜಧಾನಿಯನ್ನು ಕಲ್ಯಾಣಕ್ಕೆ ಒಯ್ದನು. ಇವರಿಗೆ ಪಶ್ಚಿಮ ಚಾಲುಕ್ಯರೆಂದು ಹೆಸರು. ಇವರಲ್ಲಿ ಆಹವಮಲ್ಲ ಸೋಮೇಶ್ವರ, ತ್ರಿಭುವನಮಲ್ಲ ವಿಕ್ರಮಾದಿತ್ಯ, ಮುಮ್ಮಡಿ ಸೋಮೇಶ್ವರ ಇವರು ಮುಖ್ಯರು. ತೈಲಪನು ತನ್ನ ಆಳಿಕೆಯಲ್ಲಿ ಮುಧೋಳದ ಬಳೆಗಾರ ಜಾತಿಯ ರನ್ನ ಎಂಬ ಕವಿಗೆ 'ಕವಿಚಕ್ರವರ್ತಿ' ಎಂಬ ಬಿರುದು ಕೊಟ್ಟು ಮರ್ಯಾದೆ ಮಾಡಿದನು. ಇವನ ೫ನೆಯ ತಲೆಯವನಾದ ವಿಕ್ರಮಾದಿತ್ಯನು ೫೦ವರ್ಷಗಳವರೆಗೆ ಅತ್ಯಂತ ವೈಭವದಿಂದ ಆಳಿದನು. ಇವನ ಕೀರ್ತಿ ಕೇಳಿ, ಬಿಲ್ಹಣನೆಂಬ ಕಾಶ್ಮೀರ ಕವಿಯು ಕಲ್ಯಾಣಕ್ಕೆ ಬಂದು, ಇವನಾಶ್ರಯದಲ್ಲಿದ್ದು ವಿಕ್ರಮಾಂಕದೇವ ಚರಿತವೆಂಬ ಸಂಸ್ಕೃತಕಾವ್ಯವನ್ನು ಬರೆದನು. ವಿಕ್ರಮಾದಿತ್ಯನ ಮಂತ್ರಿಯಾದ ವಿಜ್ಞಾನೇಶ್ವರ ಎಂಬ ಪಂಡಿತನು ಯಾಜ್ಞವಲ್ಕ್ಯಸ್ಮೃತಿಗೆ ಸಂಸ್ಕೃತದಲ್ಲಿ 'ಮಿತಾಕ್ಷರಾ' ಎಂಬ ಟೀಕೆಯನ್ನು ಬರೆದನು. ಹಿಂದುಸ್ಥಾನದಲ್ಲಿ ಮಿತಾಕ್ಷರವನ್ನು ಇಂದಿಗೂ ಆಧಾರಭೂತವಾದ ಹಿಂದೂ ಧರ್ಮಶಾಸ್ತ್ರವೆಂದು ತಿಳಿಯುವರು. ಇವನ ಮಗ ಸೋಮೇಶ್ವರನು ಸಂಸ್ಕೃತದಲ್ಲಿ ಮಾನಸೋಲ್ಲಾಸ ಎಂಬ ಗ್ರಂಥ ಬರೆದನು. ಸೋಮೇಶ್ವರನ ಜಲಸಮಾಧಿಯನ್ನೂ ಚಂದಲದೇವಿಯ ಸ್ವಯಂವರ ವರ್ಣನೆಯನ್ನೂ ತ್ರಿಭುವನಮಲ್ಲ-ವಿಕ್ರಮಾದಿತ್ಯನ ಚರಿತ್ರೆಯನ್ನೂ ಇದರಲ್ಲಿ ಕೊಡಲಾಗಿದೆ.

**ಕಲಚೂರಿಯ ಅರಸರು:—** (ಕ್ರಿ.ಶ.೧೧೫೬-೧೧೮೨) ಚಾಲುಕ್ಯರ ದಂಡನಾಯಕನೂ ವಿಜಾಪುರ ಪ್ರಾಂತದ ಮಹಾಮಂಡಲೇಶ್ವರನೂ ಆದ ಬಿಜ್ಜಳನು ಕಲ್ಯಾಣದ ಪಟ್ಟವನ್ನು ನಾಲ್ಮಡಿ ಸೋಮೇಶ್ವರನಿಂದ ಕಸಿದು ಕೊಂಡನು. ವೀರಶೈವ ಮತೋದ್ಧಾರಕರಾದ ಬಸವೇಶ್ವರರು ಇವನಾಳಿಕೆ ಯಲ್ಲಿ ಬೆಳಕಿಗೆ ಬಂದರು. ಅವರಿಂದ ಶಿವಶರಣರ ಶಿವಭಕ್ತಿಯ ಮಹಿಮೆಯೂ ಬೆಳೆಯಿತು. ಅವರೊಡನೆ ಶರಣ ಸಾಹಿತ್ಯವೂ ಬಲಿಯಿತು. ಶಿವಶರಣರು ತಮ್ಮ ಅನುಭವದ ಮಾತುಗಳನ್ನು ಕನ್ನಡದಲ್ಲಿ ಹೇಳಿ, ಕನ್ನಡಕ್ಕೆ ಕಳೆತುಂಬಿ ದರು. ಶ್ರೀ ಬಸವೇಶ್ವರ ಚರಿತ್ರೆಯನ್ನೂ ಮಹಾದೇವಿಯಕ್ಕನವರ ಚರಿತ್ರೆ ಯನ್ನೂ ಇದರಲ್ಲಿ ಕೊಡಲಾಗಿದೆ.

**ಹೊಯ್ಸಳ ಯಾದವರು:—** (ಕ್ರಿ. ಶ. ೧೦೦೬-೧೩೧೦) ಹೊಯ್ಸಳ ಯಾದವ ರಾಜ್ಯಕ್ಕೆ ಯದುಕುಲದ ಸಳನೇ ಮೂಲಪುರುಷ. ಅವನ ತರು ವಾಯ ಹೊಯ್ಸಳರಲ್ಲಿ ವಿಷ್ಣುವರ್ಧನ, ವೀರಬಲ್ಲಾಳ, ವೀರನರಸಿಂಹ ಮೊದಲಾದ ವೀರರು ಆಳಿದರು. ಇವರು ಮೊದಲು ಜೈನರು. ವಿಷ್ಣುವರ್ಧನನ ಕಾಲಕ್ಕೆ ವೈಷ್ಣವರಾದರು. ಹಳೆಬೀಡು ಬೇಲೂರುಗಳು ಇವರ ಆಳಿಕೆ ಯಲ್ಲಿ ರಾಜಧಾನಿಗಳಾಗಿದ್ದವು. ಇವರ ರಾಜ್ಯವು ಒಂದಾನೊಂದು ಕಾಲಕ್ಕೆ ಕರ್ನಾಟಕವನ್ನೆಲ್ಲ ವ್ಯಾಪಿಸಿತ್ತು. ಇವರಿಗೂ ಯಾದವರಿಗೂ ಮೇಲಿಂದಮೇಲೆ ಯುದ್ಧಗಳು ಜರುಗುತ್ತಿದವು. ೨ನೆಯ ವೀರಬಲ್ಲಾಳನ ಕಾಲದಲ್ಲಿ ಹೊಯ್ಸಳ ರಾಜ್ಯವು ಕೃಷ್ಣಾನದಿಯ ವರೆಗೆ ಹಬ್ಬಿತ್ತು. ವೀರಬಲ್ಲಾಳನು ಲಕ್ಕುಂಡಿಯಲ್ಲಿ ತನ್ನ ಅರಮನೆ, ದೇವಾಲಯಗಳನ್ನು ಕಟ್ಟಿಸಿದನು. ಕೊನೆಯ ವೀರಬಲ್ಲಾಳನ ಆಳಿಕೆಯಲ್ಲಿ ಇಡೀ ರಾಜ್ಯವೇ ಮುಸಲ್ಮಾನರಿಗೆ ತುತ್ತಾಯಿತು. ಹೊಯ್ಸಳ ಅರಸರು ಹಳೆಬೀಡು, ಬೇಲೂರು ಗಳಲ್ಲಿ ಕನ್ನಡ ಶಿಲ್ಪಿಗಳಿಂದ ಹೊಸಮಾದರಿಯ, ಕುಸುರು ಶಿಲ್ಪದಿಂದ ಮೆರೆವ, ಶಿಲ್ಪಕಲಾಪೂರ್ಣತೆಯಿಂದ ಒಪ್ಪುವ ದೇವಾಲಯಗಳನ್ನು ಕಟ್ಟಿಸಿ, ಕಲ್ಲುಗಳ ಲ್ಲಿಯೂ ಜೀವಕಳೆಯನ್ನು ತುಂಬುವಂತೆ ಕೊಡುಗೈಯಿಂದ ಆ ಕಾಲದ ಶಿಲ್ಪಿ ಗಳಿಗೆ ಉತ್ತೇಜನವಿತ್ತರು. ಇವರಾಳಿಕೆಯಲ್ಲಿ ಅಭಿನವಪಂಪ, ಕಂತಿ, ಸುಮನೋಬಾಣ, ಕೇಶಿರಾಜ, ಜನ್ನ, ಮಲ್ಲಿಕಾರ್ಜುನ, ರುದ್ರಭಟ್ಟ, ಮೊದಲಾದ ಕನ್ನಡ ಕವಿಗಳು ಹುಟ್ಟಿದರು. ಕೇಶಿರಾಜನ 'ಶಬ್ದಮಣಿದರ್ಪಣ'

ಗ್ರಂಥವು ಇಂದಿಗೂ ಕನ್ನಡಕ್ಕೆ ಆಧಾರಗ್ರಂಥವಾಗಿದೆ. ಇವನು ಹೊಯ್ಸಳರಲ್ಲಿ ದಂಡನಾಯಕನಿದ್ದನು. ಇವರ ಆಳಿಕೆಗೆ ಸಂಬಂಧಪಟ್ಟ ಸಳನ ಭಾಗ್ಯ, ಬಿಟ್ಟಿದೇವನು ವೈಷ್ಣವನಾದುದು, ತಂದೆಗೂ ಮೇಲುಗೈಯ್ಯಾದ ಮಗ,ತ್ಯಾಗವೀರ ಕುವರಲಕ್ಷ್ಮ, ವೀರ ಬಲ್ಲಾಳನ ಹೋರಾಟ,ಬೇಲೂರಿನ ಚೆನ್ನಕೇಶವ ದೇವಾಲಯ ಈ ಕಥೆಗಳನ್ನು ಕೊಡಲಾಗಿದೆ.

**ದೇವಗಿರಿಯ ಯಾದವರು:—** (ಕ್ರಿ. ಶ. ೧೧೮೯-೧೩೧೨) ದೇವಗಿರಿಯ ಸಿಂಹಾಸನವನ್ನು ಐನೆಯ ಭಿಲ್ಲಮನು ಸ್ಥಾಪಿಸಿದನು. ಇವರಲ್ಲಿ ಐನೆಯ ಭಿಲ್ಲಮ, ಸಿಂಹಣ, ರಾಮದೇವ ಮೊದಲಾದವರು ಶೂರರಿದ್ದರು. ಇವರ ಕಾಲಕ್ಕೂ ಇಡೀ ಕರ್ನಾಟಕಕ್ಕೆ ಯಾದವರು ಚಕ್ರವರ್ತಿಗಳಾಗಿದ್ದರು. ದೇವಗಿರಿಯೇ ಇವರ ರಾಜಧಾನಿ. ಸಿಂಹಣನು ತನ್ನ ಬಾಹುಬಲದಿಂದ ಯಾದವ ರಾಜ್ಯವನ್ನು ದಕ್ಷಿಣದಲ್ಲಿ ಶಿವಮೊಗ್ಗೆ ಜಿಲ್ಹೆಯ ವರೆಗೂ ಹಬ್ಬಿಸಿದ್ದನು. ಇವನು ಮಹಾ ಬಲಿಷ್ಠ ಅರಸನು. ಇದರಲ್ಲಿ ಇವನ ಚರಿತ್ರೆಯನ್ನು ಕೊಡಲಾಗಿದೆ.

**ಮುಸಲ್ಮಾನರ ದಾಳಿಯ ಕಾಲ:—** ಕರ್ನಾಟಕದಲ್ಲಿಯ ಹೊಯ್ಸಳ, ಯಾದವ,ದೇವಗಿರಿಯ ಯಾದವ, ಓರಗಲ್ಲಿನ ಕಾಕತಿಯ ಮುಂತಾದ ಅರಸರು ನಿರ್ವೀರ್ಯರಾದ ಕಾಲಕ್ಕೆ ಸರಿಯಾಗಿ ಉತ್ತರದಿಂದ ಮುಸಲ್ಮಾನರ ದಾಳಿಗಾರರು ಕರ್ನಾಟಕದಲ್ಲಿ ಹೊಕ್ಕರು. ಅವರ ಮುಂದೆ ಕನ್ನಡ ಅರಸರ ಆಟ ನಡೆಯಲಿಲ್ಲ. ಪ್ರಚಂಡ ಬಿರುಗಾಳಿಗಳ ಹೊಡೆತಕ್ಕೆ ನೂರಾರು ವರ್ಷದ ಹೆಮ್ಮರಗಳು ಬೇರು ಕಳಚಿ ಹೊರಳಿ ಬೀಳುವಂತೆ ನೂರಾರು ವರ್ಷದಿಂದ ನಡೆದುಬಂದ ಅರಸುಮನೆತನಗಳು ಉರುಳಿದವು. ಆಗ, ಕರ್ನಾಟಕವು ಪರದೇಸಿ ಆಯಿತು. ಪರರಾಜರ ದಾಳಿಗಳಿಂದ ಇಡೀ ಕನ್ನಡ ಜನಾಂಗವೇ ಗದಗದ ನಡುಗಿತು. ಈ ಚಿತ್ರವನ್ನು ನಾವು ಶ್ರೀರಂಗದ ರಂಗನಾಥ ಮೂರ್ತಿಯ ಕತೆ, ಕಂಪಿಲರಾಯ, ಪರದಾರ ಸೋದರ ರಾಮ ಇವರ ಕಥೆಗಳಲ್ಲಿ ಕಾಣಬಹುದು. ಮೇಲ್ಕಾಣಿಸಿದಂತೆ, ಇಡೀ ದಕ್ಷಿಣ ಹಿಂದುಸ್ಥಾನವೇ ಅಗ್ನಿಪರೀಕ್ಷೆಯಲ್ಲಿರಲು, ಹಿಂದೂ ಧರ್ಮವನ್ನು ಕಾಪಾಡುವ ಹೆಗ್ಗುರಿಯಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆಯಿತು.

**ವಿಜಯನಗರದ ಅರಸು ಮನೆತನ:—** (ಕ್ರಿ. ಶ. ೧೩೩೬-೧೬೦೦) ಈ ರಾಜ್ಯವನ್ನು, ಪರರ ಹಾವಳಿಯಿಂದ ದೇಶವನ್ನು, ಧರ್ಮವನ್ನು

ಕಾಯಲಿಕ್ಕೆಂದೇ ಶ್ರೀವಿದ್ಯಾರಣ್ಯ ಹುಕ್ಕ-ಬುಕ್ಕರು ಸ್ಥಾಪಿಸಿದರು. ಈ ಅರಸು ಮನೆತನದವರು ಜರುಗಿಸಿದ ಕಾರ್ಯವು ಧರ್ಮ ಮತ್ತು ದೇಶದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ವಿಜಯನಗರದ ಅರಸರಲ್ಲಿ ಸಂಗಮ ಮನೆತನ ದಲ್ಲಿ ಹುಕ್ಕ-ಬುಕ್ಕ, ಇಮ್ಮಡಿ ಹರಿಹರ, ಪ್ರೌಢದೇವರಾಯ ಇವರು ಕೀರ್ತಿ ವಂತರು. ಶ್ರೀವಿದ್ಯಾರಣ್ಯರು ಹುಕ್ಕ-ಬುಕ್ಕ, ಇಮ್ಮಡಿಹರಿಹರ ಇವರ ಆಳಿಕೆ ಯಲ್ಲಿ ಮಂತ್ರಿಗಳಿದ್ದರು. ಇವರೂ ಇವರ ತಮ್ಮಂದಿರಾದ ಶ್ರೀ ಸಾಯಣಾಚಾ ರ್ಯರೂ ಕೂಡಿ, ಸಂಸ್ಕೃತದಲ್ಲಿ ಹಲವು ಧರ್ಮ ಮತ್ತು ಶಾಸ್ತ್ರಗಳನ್ನು ಬರೆದ ರಲ್ಲದೆ, ವೇದಕ್ಕೆ ಭಾಷ್ಯ ಬರೆದರು. ಬುಕ್ಕರಾಯನ ಸೊಸೆಯೂ,ವೀರಕಂಪಣ ರಾಯನ ಪತ್ನಿಯೂ ಆದ ಗಂಗಾದೇವಿಯು ಮಧುರಾ ವಿಜಯವೆಂಬ ಸಂಸ್ಕೃತ ಕಾವ್ಯ ಬರೆದಳು. ತೋಂಟದಾರ್ಯ ನಿಜಗುಣಿ ಶಿವಯೋಗಿಗಳು ಇದೇ ಕಾಲದಲ್ಲಿದ್ದರು. ಪ್ರೌಢದೇವರಾಯನ ಆಳಿಕೆಯಲ್ಲಿ ವೀರಶೈವ ಮತದವರಿಗೆ ವಿಶೇಷ ಪ್ರೋತ್ಸಾಹ ದೊರೆಯಿತು. ಲಕ್ಕಣ್ಣ, ದಂಡೇಶ, ಜಕ್ಕಣಾರ್ಯ, ಇವರು ದಂಡನಾಯಕರಲ್ಲದೆ ಕವಿಗಳೂ ಇದ್ದರು. ಅಲ್ಲದೆ, ಚಾಮರಸ, ಕುಮಾರವ್ಯಾಸ ಈ ಕವಿಗಳೂ ಇದ್ದರು. ಇವರು ಅನುಕ್ರಮವಾಗಿ ಶಿವತತ್ವ ಚಿಂತಾಮಣಿ,ನೂರೊಂದು ಸ್ಥಲ,ಅಲ್ಲಮಪ್ರಭುದೇವರ ಚರಿತ್ರ,ಕನ್ನಡ ಭಾರತ ಎಂಬೀ ಗ್ರಂಥಗಳನ್ನು ಬರೆದರು.ಮುಂದೆ ಸಾಳುವ ವಂಶದ ಅರಸರಲ್ಲಿ ಯಾರೂ ಹೇಳುವಷ್ಟು ಹೆಸರು ಪಡೆಯಲಿಲ್ಲ. ಆಮೇಲೆ ತುಳುವಂಶದ ನರಸನಾಯಕ ನೆಂಬವನು ಸಾಳುವ ನರಸಿಂಹನನ್ನು ತಳ್ಳಿ ತಾನೇ ಅರಸನಾದನು. ಇವನ ಮನೆತನದಲ್ಲಿ ಕೃಷ್ಣದೇವರಾಯನೇ ಮಹಾ ಪ್ರಬಲ ಅರಸು. ಈ ರಾಯನಿಗೆ ಕನ್ನಡ ರಾಜ್ಯ ರಮಾರಮಣ' ಎಂದು ಬಿರುದಿತ್ತು. ಪ್ರೌಢ ದೇವರಾಯನ ಆಳಿಕೆಯಲ್ಲಿ ಕುಮಾರವ್ಯಾಸನು ಬರೆದ ಕನ್ನಡ ಮಹಾಭಾರತ ಕಾವ್ಯವನ್ನು ರಾಯನು ತಿಮ್ಮಣ್ಣ ಕವಿಯಿಂದ ಪೂರ್ತಿಗೊಳಿಸಿದನು. ರಾಯನು ಸೋಸಲೆ ಮಠದ ಶ್ರೀ ವ್ಯಾಸರಾಯರನ್ನು ತನ್ನ ಗುರುಗಳನ್ನಾಗಿ ಮಾಡಿಕೊಂಡನು. ರಾಜ್ಯಕ್ಕೆ 'ಕುಹುಯೋಗ' ವೆಂಬ ದುಷ್ಟಗ್ರಹ ಬಂದಾಗ, ಶ್ರೀವ್ಯಾಸರಾಯ ರನ್ನು ಚಿನ್ನದ ಸಿಂಹಾಸನದಲ್ಲಿ ಕುಳ್ಳಿರಿಸಿ, ಮುತ್ತು-ರತ್ನಗಳಿಂದ ಅಭಿಷೇಕ ಮಾಡಿದನು. ಶ್ರೀ ವಿಜಯವಿಠ್ಠಲ, ಹಜಾರ ರಾಮನ ದೇವಾಲಯಗಳನ್ನು ಹೊಯ್ಸಳ ಅರಸರು ಕಟ್ಟಿಸಿದ ಮಾದರಿಯಿಂದ ಕಟ್ಟಿಸಿ ಕನ್ನಡ ಶಿಲ್ಪಕಲಾ

ಸೌಂದರ್ಯಕ್ಕೆ ಮತ್ತೊಮ್ಮೆ ಕಳೆ ತುಂಬಿದನು. ಇವನಾಳಿಕೆಯಲ್ಲಿ ಶ್ರೀ ಪುರಂದರದಾಸರು ವಿಜಯನಗರದಲ್ಲಿಯೇ ವಾಸವಾಗಿದ್ದರು. ಅವರನ್ನು ಬಹು ಪರಿಯಿಂದ ಮನ್ನಿಸಿದನು. ಇವನು ತಿರುಪತಿಯ ಶ್ರೀ ವೆಂಕಟೇಶ ದೇವರ ಭಕ್ತನಾಗಿದ್ದುದರಿಂದ, ತನ್ನ ಮತ್ತು ರಾಣಿಯರಾದ ಚಿನ್ನಾದೇವಿ, ತಿರುಮಲಾ ದೇವಿಯರೊಡನೆ, ತಿರುಪತಿಯದೇವರ ಮಹಾದ್ವಾರದೊಳಗೆ ಪ್ರತಿಮೆಗಳನ್ನು ಇಡಿಸಿದನು. ಅಲ್ಲಿ ಅವು ಈಗ್ಯೂ ಇವೆ. ಅವುಗಳ ಮೇಲೆ, 'ಶ್ರೀ ಕೃಷ್ಣದೇವರಾಯ ಚಿನ್ನಾದೇವಿಯರು, ತಿರುಮಲಾದೇವಿಯರು' ಎಂದು ಕನ್ನಡ ಅಕ್ಷರಗಳಿವೆ. ಮುಂದೆ, ಅಳಿಯ ರಾಮರಾಯನ ಕಾಲದಲ್ಲಿ ರಕ್ಕಸಿಗಿ-ತಂಗಡಗಿಯ ಯುದ್ಧ ವಾಗಿ ಕರ್ನಾಟಕದ ಸಿಂಹಾಸನವು ಪೆನುಗೊಂಡೆಗೆ ಹೋಯಿತು. ಅಲ್ಲಿಂದ ಚಂದ್ರಗಿರಿಗೆ ಹೋಯಿತು. ಅದು ತೆಲಗು ದೇಶವಾದ್ದರಿಂದ ಕೆಲವು ರೀತಿ, ನಡತೆ ಗಳು ಬದಲಾದರೂ, 'ಕರ್ನಾಟಕ ಅರಸರು' ಎಂಬ ಬಿರುದು ಕೊನೆಯತನಕ ಇತ್ತು. ( ಕ್ರಿ. ಶ. ೧೫೬೪ – ೧೭೧೩ ) ವಿಜಯನಗರ ಅರಸರ ಕಾಲದ ಶ್ರೀ ವಿದ್ಯಾರಣ್ಯರ ಚರಿತ್ರೆ, ಹುಕ್ಕಬುಕ್ಕರು ಸಾಮ್ರಾಜ್ಯ ಸ್ಥಾಪಿಸಿದ್ದು, ಸಾವು ತಪ್ಪಿಸಿದ ತಿಮ್ಮರಸ, ಕೃಷ್ಣದೇವರಾಯ, ಅವನ ಓಲಗದ ರೀತಿ ನೀತಿಗಳು, ವೈಭವಸಂಪನ್ನ ವಿಜಯನಗರ, ಪುರಂದರದಾಸರು, ಕನಕದಾಸರು, ರಕ್ಕಸಿಗಿ-ತಂಗಡಿಗಿ ಕಾಳಗ, ವೆಂಕಟಪತಿರಾಯನ ಮರಣ, ಎಚ್ಚಮನಾಯಕನ ರಾಜನಿಷ್ಠೆ ಇವೆಲ್ಲ ಕಥೆಗಳನ್ನು ಇದರಲ್ಲಿ ಕೊಟ್ಟಿದ್ದೇವೆ.

**ಪಾಳ್ಯಗಾರ-ನಾಯಕರ ಕಾಲ :—** ( ಕ್ರಿ. ಶ. ೧೫೬೫ -- ೧೭೧೩ ) ವಿಜಯನಗರ ಸಾಮ್ರಾಜ್ಯ ಸೂರ್ಯನು ರಕ್ಕಸಿಗಿ – ತಂಗಡಿಗಿ ಕಾಳಗದಲ್ಲಿ ಮುಳುಗಿದನು. ಆಗ ಆ ಸಾಮ್ರಾಜ್ಯಕ್ಕೆ ಅಂಕಿತರಾಗಿದ್ದ ಮಧುರೆ, ತಂಜಾವರ, ಕೆಳದಿ, ಚಿತ್ರದುರ್ಗ, ಹರಪನಹಳ್ಳಿ, ಅನಂತಪುರ, ಬಳ್ಳಾರಿಯ ನಾಯಕರು, ಮೈಸೂರು ಅರಸರು, ಕೊಡಗು ಅರಸರು ಅಲ್ಲಲ್ಲಿ ರಾತ್ರಿಯಲ್ಲಿಯ ನಕ್ಷತ್ರಗಳಂತೆ ಸ್ವತಂತ್ರವಾಗಿ ಮಿನುಗಲಾರಂಭಿಸಿದರು. ಆ ಕಾಲಕ್ಕೆ ಕರ್ನಾಟಕದ ದಕ್ಷಿಣ ಭಾಗವೆಲ್ಲವೂ ಪಾಳ್ಯಗಾರರ ಆಳಿಕೆಯಲ್ಲಿದ್ದು, ಉತ್ತರ ಭಾಗವಾದ ಧಾರವಾಡ, ಬೆಳಗಾವಿ, ವಿಜಾಪುರಗಳು ಆದಿಲಶಹರ ಆಳಿಕೆಯಲ್ಲಿದ್ದವು. ವಿಜಾಪುರ ಆದಿಲಶಾಹಿ ಅರಸರು ತಮ್ಮ ದಾಳಿಗಳನ್ನು ಮೈಸೂರು-ತಂಜಾವರದವರೆಗೆ ನಡಿಸುತ್ತಿದ್ದರೂ, ಆ ಕಾಲಕ್ಕೆ ಕೆಳದಿಯ ನಾಯಕರು

ಮುಸಲ್ಮಾನರ ದಾಳಿಗಳನ್ನು ಒಳ್ಳೇ ಕಸುವಿನಿಂದ ಅಡ್ಡಗಟ್ಟಿದರು. ಪಾಳ್ಯಗಾರರು ಬೇಡರ ಜಾತಿಯವರು. ಕೆಳದಿಯ ನಾಯಕರು ವೀರಶೈವರು. ಕೆಳದಿಯ ಅರಸರು ತಮ್ಮ ರಾಜ್ಯದೊಳಗೂ ರಾಜಧಾನಿಗಳಾದ ಇಕ್ಕೇರಿ, ಕೆಳದಿ, ಬಿದನೂರಗಳಲ್ಲಿ ಅಘೋರೇಶ್ವರ, ನಂದೀ ಮುಂತಾದ ದೇವಾಲಯಗಳನ್ನು ಕಟ್ಟಿಸಿದರು. ವೀರಶೈವ-ಬ್ರಾಹ್ಮಣ ಕವಿಗಳಿಗೆ ಆಶ್ರಯ ಕೊಟ್ಟರು. ೧ ನೆಯ ವೆಂಕಟಪ್ಪನಾಯಕನು ಶಿವಗೀತೆಗೆ ಸಂಸ್ಕೃತದಲ್ಲಿ ಟೀಕೆ ಬರೆದನು. ಬಸವಪ್ಪನಾಯಕನು 'ಶಿವತತ್ವ ರತ್ನಾಕರ'ವೆಂಬ ಪ್ರಚಂಡ ಕೋಶ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದನು. ಇವನೇ ಕನ್ನಡದೊಳಗೆ ಸೂಕ್ತಿ ಸುಧಾಕರ ಎಂಬ ಗ್ರಂಥ ಬರೆದನು. ಈ ನಾಯಕರು ವೀರಶೈವರಿದ್ದರೂ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇವೆಲ್ಲ ಮತದವರಿಗೂ ಆಯಾ ಕಾಲಕ್ಕೆ ಸಹಾಯ ಮಾಡಿದರು; ಒಂದೆಡೆಯಲ್ಲಿ ಮುಸಲ್ಮಾನ ಮಸೀದಿಗೂ ಭೂಮಿ ಉಂಬಳಿ ಹಾಕಿಕೊಟ್ಟಿರುವರು. ಆ ಕಾಲದ ಮತ್ತೀ ತಿಮ್ಮಣ್ಣನಾಯಕ, ಮಾಗಡಿಯ ಕೆಂಪೇಗೌಡನ ಸೊಸೆಯಾದ ಲಕ್ಷ್ಮಮ್ಮನ ತ್ಯಾಗ, ಸಿದ್ಧಪ್ಪನಾಯಕ, ವೆಂಕಟಪ್ಪನಾಯಕ, ಕೆಳದಿ ಚನ್ನಮ್ಮಾಜಿ ಇವರ ಚರಿತ್ರೆಗಳನ್ನು ಇದರಲ್ಲಿ ಕೊಡಲಾಗಿದೆ.

**ಆದಿಲ್‌ಶಾಹಿ ಅರಸರ ಆಳಿಕೆ:—** ( ಕ್ರಿ. ಶ ೧೪೮೯-೧೬೮೬ ) ಕಲಬುರ್ಗಿಯ ಬಹಾಮನಿ (ಬ್ರಾಹ್ಮಣೀ) ರಾಜ್ಯವು ಮುರಿದು, ಅವರಲ್ಲಿ ಐದು ಹೋಳುಗಳಾದವು. ಅವುಗಳನ್ನು ಅಲ್ಲಲ್ಲಿಯ ಸರದಾರರು ಆಳಹತ್ತಿದರು. ಈ ಐದು ಹೋಳುಗಳಲ್ಲಿಯೇ ಆದಿಲ್‌ಶಾಹಿಯು ಒಂದು ಹೋಳು. ಇದನ್ನು ಆದಿಲ್‌ಶಹ ಎಂಬ ಸರದಾರನು ಸ್ಥಾಪಿಸಿದನು. ಇವನು ಆಗಿನ ಕಾಲಕ್ಕೆ ವ್ಯವಹಾರಜ್ಞಾನ, ಶೌರ್ಯ, ರಾಜಕೀಯ ಹಂಚಿಕೆಗಳಲ್ಲಿ ಬಲು ಮಿಗಿಲಾದವನು; ಧರ್ಮದ ವಿಷಯದಲ್ಲಿಯಂತೂ ಇವನ ಸಮದೃಷ್ಟಿಯು ಅಸಾಮಾನ್ಯವಾಗಿತ್ತು. ಇವನಿಗೆ ಹಿಂದೂ ಜನರ ಮೇಲೆ ವಿಶೇಷ ಪ್ರೀತಿ; ಆದುದರಿಂದ ತನ್ನ ಆಳಿಕೆಯಲ್ಲಿ ಹಿಂದೂ ಜನರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಟ್ಟನು. ತರುವಾಯ, ಇಸ್ಮಾಯಿಲ್‌ಆದಿಲ್‌ಶಹ, ಇಬ್ರಾಹಿಮ್ ಆದಿಲ್‌ಶಹ, ಅಲ್ಲಿ ಆದಿಲ್‌ಶಹ, ಚಾಂದಬೀಬಿ, ಮುಹಮ್ಮದಶಹ, ಮೊದಲಾದವರು ಆಳಿದರು. ಇವರಲ್ಲಿ ಅಲ್ಲಿಆದಿಲ್‌ಶಹ, ಚಾಂದಬೀಬಿ, ಮುಹಮ್ಮದ

ಶಹರು ಶ್ರೇಷ್ಠರು. ಅಲ್ಲಿಆದಿಲ್‌ಶಹನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯಕ್ಕೆ ಸಿಡಿಲು ಬಡಿಯಿತು. ಇವನಿಗೆ 'ಕನ್ನಡ ಜಾಣ' ಎಂಬ ಬಿರುದು ಇತ್ತು. ಮಹಮ್ಮದಶಹನು ಒಳ್ಳೇ ರಸಿಕನೂ ಲಲಿತಕಲಾ ಪ್ರಿಯನೂ ಶೂರನೂ ಜನರ ಪರೀಕ್ಷಕನೂ ಇದ್ದುದರಿಂದ, ತನ್ನ ರಾಜ್ಯ ಕಾಯ್ದುಕೊಂಡು ಬೆಳೆಯಿಸಿದನು. ಒಳ್ಳೊಳ್ಳೆಯ ಸರದಾರರನ್ನು ತನ್ನಲ್ಲಿ ಕೆಲಸಕ್ಕಿಟ್ಟುಕೊಂಡು ಅವರಿಂದ ತನ್ನ ರಾಜ್ಯಕ್ಕೆ ಲಾಭ ಮಾಡಿಕೊಂಡನು. ವಿಜಾಪುರದ ಜಗಪ್ರಸಿದ್ಧ ಬೋಲಗುಮುಟವನ್ನು ಇವನೇ ಕಟ್ಟಿಸಿದನು. ಇವನ ತರುವಾಯ ಆದಿಲ್ ಶಾಹಿಯಲ್ಲಿ ವಿಶೇಷವಾಗಿ ಹೆಸರೆತ್ತುವಂಥ ಅರಸರಾಗಲಿಲ್ಲ. ಆದಿಲ್‌ಶಹರ ಆಳಿಕೆಯಲ್ಲಿ ಕರ್ನಾಟಕದಲ್ಲಿಯ ಹಲವು ದೇಸಾಯಿ, ದೇಶಪಾಂಡೆ, ನಾಡಗೌಡ ಮನೆತನಗಳು ಮುಂದೆ ಬಂದವು. ಅಗಡಿ, ಸಿರಸಂಗಿ ದೇಸಾಯರ ಮೂಲ ಪುರುಷರು ಇದೇ ಕಾಲಕ್ಕೆ ದೇಸಗತಿ ಪಡೆದರು. ೧೭ನೆಯ ಶತಮಾನದೊಳಗೆ ಉತ್ತರ ಕರ್ನಾಟಕದಲ್ಲಿ ಸರ್ವಜ್ಞಕವಿ, ಮಹಾಲಿಂಗರಂಗ ಮೈಸೂರು ಸೀಮೆಯಲ್ಲಿ ಷಡಕ್ಷರಿ, ಲಕ್ಷ್ಮೀಶ ಈ ಕವಿಗಳು, ಮಂಗಳೂರು ಸೀಮೆಯಲ್ಲಿ ಶ್ರೀ ರತ್ನಾಕರಸಿದ್ಧನೆಂಬ ಕವಿಯು ಇದ್ದರು. ಆದಿಲಶಾಹಿ ಅರಸರಲ್ಲಿ ಪ್ರಖ್ಯಾತರಾದ ಮಹಮ್ಮದಶಹ, ಚಾಂದಬೀಬಿಯವರ ಚರಿತ್ರೆಗಳನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ.

**ಮರಾಠರ-ಪೇಶವೆಯರ ಆಳಿಕೆ:—** ( ಕ್ರಿ. ಶ. ೧೭೧೩ - ೧೮೧೮ ) ಮರಾಠರ ಆಳಿಕೆಯ ಏರಿಕೆಯ ಕಾಲದಲ್ಲಿ ಕರ್ನಾಟಕದ ಉತ್ತರ ಭಾಗವು ಮರಾಠರ ಕೈಯಲ್ಲಿದ್ದು, ಮಿಕ್ಕ ಭಾಗವು ಮೈಸೂರು ಅರಸರ ವಶದಲ್ಲಿತ್ತು; ಮುಂದೆ, ಹೈದರಲ್ಲಿಯ ಕಾಲಕ್ಕೂ ಅಲ್ಲಲ್ಲಿ ಕನ್ನಡಿಗರ ಶೌರ್ಯದ-ಶೀಲದ ಮಿಂಚುಗಳು ಹೊಳೆಯುತ್ತಿದ್ದವು. ಇವನ್ನು ನಾವು ಬೆಳವಡಿಯ ಮಲ್ಲವ್ವ ದೇಸಾಯಿತಿ, ಚಿತ್ರದುರ್ಗದ ಓಬಿ, ನಿಜಗಲ್ಲಿನ ರಾಣಿ ಇವರ ಕಥೆಗಳಲ್ಲಿ ಕಾಣಬಹುದು. ಹೈದರನಾದರೂ ಪೇಶವೆಯರ ವಶದಲ್ಲಿದ್ದ ಕನ್ನಡ ನಾಡನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಮಿಾರಿ ಹೆಣಗಿದನು. ಇದು ಹೈದರನ ಚರಿತ್ರೆಯಲ್ಲಿ ಎದ್ದು ಕಾಣಿಸುವಂತಿದೆ; ಆದುದರಿಂದ ಅವನ ಚರಿತ್ರೆಯನ್ನು ಕೊಡಲಾಗಿದೆ. ಅವನಿಗೆ ಪೂರ್ಣಯ್ಯನಿಂದಾದ ಸಹಾಯದ ಕಲ್ಪನೆ ಬರಬೇಕೆಂದು ಪೂರ್ಣಯ್ಯನ ಚರಿತ್ರೆ ಉದಾಹರಿಸಲಾಗಿದೆ. ಹೈದರನ ಮಗ

ಟೀಪೂನ ತರುವಾಯ ಮೈಸೂರು ರಾಜ್ಯವು ಮೈಸೂರು ಒಡೆಯರ ಮನೆ ತನಕ್ಕೆ ಬಂದಂದಿನಿಂದ ಮತ್ತೆ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ ಆಳಿಕೆ ಯಲ್ಲಿ ಕನ್ನಡನಾಡಿಗೆ ವಿಶೇಷ ಉತ್ತೇಜನ ದೊರೆತಿದ್ದರಿಂದ, ಹೊನ್ನಮ್ಮ, ಚಿಕ್ಕುಪಾಧ್ಯಾಯರಂಥ ಕವಿಗಳು ಅಲ್ಲಿ ಹುಟ್ಟಿದರು; ಹೊನ್ನಮ್ಮ ಒಡೆಯರಿಗೆ ಸಂಚಿ ಹಿಡಿಯುವವಳು. ಆಕೆ 'ಹದಿಬದೆಯ ಧರ್ಮ'ವೆಂಬ ಪತಿವ್ರತೆಯರ ಲಕ್ಷಣಗಳನ್ನು ಹೇಳುವ ಉತ್ತಮ ಕಾವ್ಯವನ್ನು ಕನ್ನಡದಲ್ಲಿ ಬರೆದಳು. ಉತ್ತರ-ಕರ್ನಾಟಕದಲ್ಲಿ ಆ ಕಾಲದಲ್ಲಿ ಶಿರಹಟ್ಟಿ ಫಕೀರಸ್ವಾಮಿ, ಮುರಗೋಡದ ಶ್ರೀ ಚಿದಂಬರ ದೀಕ್ಷಿತ ಮೊದಲಾದ ಸಾಧುಸತ್ಪುರುಷರು ಕಾಖಂಡಿಕೆಯ ಮಹಿಪತಿದಾಸ, ಪ್ರಸನ್ನವೆಂಕಟ, ಮೊದಲಾದ ಕವಿಗಳೂ ಬಾಳಿದ್ದರು. ಅವರು ಜನರ ಸ್ಥಿತಿಗತಿಗಳನ್ನು ಧಾರ್ಮಿಕ, ನೈತಿಕ, ರಾಜಕೀಯ ದೃಷ್ಟಿ ಯಿಂದ ಸುಧಾರಿಸಲು ಹೆಣಗಿದರು.

**ಇಂಗ್ಲೀಷರ ಆಳಿಕೆ:—** ಇಂಗ್ಲೀಷರ ಆಳಿಕೆಯು ಪ್ರಾರಂಭವಾದ ಮೇಲೆ ಕೊಡಗಿನ ವೀರರಾಜೇಂದ್ರನು ತನ್ನ ಸ್ವಾತಂತ್ರ್ಯಕಾಯ್ದುಕೊಳ್ಳಲು ಟೀಪು ಸುಲ್ತಾನನೊಡನೆ ನಡಿಸಿದ ಹೋರಾಟವು ಸ್ಫೂರ್ತಿದಾಯಕವಾಗಿದೆ. ತರುವಾಯ, ಕಿತ್ತೂರಿನ ಚನ್ನಮ್ಮ ದೇಸಾಯಿತಿಯು ಬ್ರಿಟಿಶರಿಂದ ತನ್ನ ಚಿಕ್ಕ ದೇಸಗತಿಯ ಸ್ವಾತಂತ್ರ್ಯ ಕಾಯಲು ಹೆಣಗಿದ್ದೂ ಅಷ್ಟೇ ಹೃದಯಂಗಮವಾಗಿದೆ. ಕನ್ನಡನಾಡಿನ ಇಳಿಗಾಲದ ಕಾಲದಲ್ಲಿಯೂ ಮೈಸೂರಿನ ಒಡೆಯರ ಮನೆತನದ ಅರಸರು ಕನ್ನಡ ಸಂಸ್ಕೃತಿಗೆ ತಮ್ಮ ಉದಾರಾಶ್ರಯ ವನ್ನು ದಯಪಾಲಿಸಿರುವರು. ಕನ್ನಡನಾಡು-ನುಡಿ-ಸಂಸ್ಕೃತಿಗಳಿಗೆ ಆಧಾರ ಸ್ತಂಭರಾಗಿಯೂ ಬದ್ಧಕಂಕಣರಾಗಿಯೂ ನಿಂತ ಮೈಸೂರು ಶ್ರೀಮನ್ ಮಹಾರಾಜ ಶ್ರೀ ನಾಲ್ಮಡಿಕೃಷ್ಣರಾಜೇಂದ್ರಒಡೆಯರ ಬಾಹದ್ದೂರ ಅವರ ಚರಿತ್ರೆಯನ್ನು ಈ ಪುಸ್ತಕದಲ್ಲಿ ಕೊನೆಗೆ ಕೊಡಲಾಗಿದೆ. ಮಹಾರಾಜರು ಇಂದಿನ ಅರಸರಲ್ಲಿ 'ರಾಜರ್ಷಿ' ಗಳೆಂದು ಹೆಸರಾಗಿರುವದು ಕನ್ನಡಿಗರಿಗೆ ಅತ್ಯಂತ ಅಭಿಮಾನದ ಸಂಗತಿ.

# ಆಧಾರ ಗ್ರಂಥಗಳ ಪಟ್ಟಿ

## ಇಂಗ್ಲೀಷ


1 Mysore Gazeteer Volumes
2 Volumes of Epigraphica Carnatika
3 Kadamba kula
4 Social & Political History of Vijayanagar by Dr. Saletore
5 South Indian Invaders by Dr. K.S. Iyengar
6 Volumes of Mythic Society Journal
7 Volumes of Historical Journal
8 Forgotten Empire by Sewell
9 Never to be forgotten Empire by Sjt.Surya Narayanrao
10 Mediæval Jainism by Dr. Saletore
11 Rashtrakutas & their times by Dr. Altekar
12 Gangas of Talkad
13 Sex-centenary Vijayanagara commemoration Volume
14 Volumes of Epigraphica Indica
15 Mediaeval India Vols. I-II-III
16 Karnatak Historical Quarterly Volumes


## ಕನ್ನಡ


೧ ಮೈಸೂರು ದೇಶದ ಪಾಳೈಗಾರರು
೨ ಕರ್ನಾಟಕ ಸಂಸ್ಕೃತಿ
೩ ಕರ್ನಾಟಕ ಭಕ್ತವಿಜಯ
೪ ಕರ್ನಾಟಕ ವೀರ ರತ್ನಗಳು
೫ ರಾಮರಾಯನ ಬಖೈರು
೬ ವಿಜಯನಗರ ಸಾಮ್ರಾಜ್ಯ
೭ ಕರ್ನಾಟಕ ಸಾಮ್ರಾಜ್ಯ ೧–೨ ಭಾಗಗಳು

೮ ಭಾರತೀಯರ ಇತಿಹಾಸ
೯ ಬಸವೇಶ್ವರನೂ ಅಸ್ಪೃಶ್ಯತೆಯೂ
೧೦ ಕನ್ನಡದ ಬಾವುಟ
೧೧ ಕೆಂಪೇಗೌಡನ ಚರಿತ್ರೆ
೧೨ ಕರ್ನಾಟಕ ಗತವೈಭವ
೧೩ ಭಕ್ತಿ-ಭಂಡಾರಿ ಬಸವಣ್ಣನವರು
೧೪ ಮೈಸೂರಿನ ವಾಸ್ತು ಶಿಲ್ಪ
೧೫ ಕೆಳದಿನೃಪವಿಜಯ
೧೬ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಚರಿತ್ರೆ
೧೭ ಮಹಾದೇವಿಯಕ್ಕನ ಚರಿತ್ರೆ
೧೮ ಕವಿ ಕನಕದಾಸ
೧೯ ಮೈಸೂರು ಚರಿತ್ರೆ
೨೦ ಕರ್ನಾಟಕ ಇತಿಹಾಸ
೨೧ ಚಿಕ್ಕದೇವರಾಜ ವಂಶಾವಳಿ
೨೨ ಮೈಸೂರಿನ ರಾಜವಂಶಾವಳಿ
೨೩ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯ ಸಂಚಿಕೆಗಳು
೨೪ ಶಿವಾನುಭವ ಪತ್ರಿಕೆಯ ಸಂಚಿಕೆಗಳು
೨೫ ಕಿತ್ತೂರ ಗತವೈಭವ
೨೬ ಶ್ರೀನಿವಾಸರ ಕತೆಗಳು
೨೭ ಬಿಲ್ಹಣಕವಿಯ ವಿಕ್ರಮಾಂಕದೇವಚರಿತೆ (ಸಂಸ್ಕೃತ)
೨೮ ಶ್ರೀ ಗಂಗಾದೇವಿಯ ವೀರ ಕಂಪಣರಾಯ ಚರಿತೆ (ಸಂಸ್ಕೃತ)
೨೯ ಮಂಗಳೂರಿನ ಚರಿತ್ರೆ ಮತ್ತು ಕಥೆಗಳು
೩೦ ಸರದೇಸಾಯರ ರಿಯಾಸತ (ಮರಾಠಿ) ೧-೨-೩ ಭಾಗಗಳು

# ಕನ್ನಡ ನಾಡಿನ ಕಥೆಗಳು

## ೧

## ಕದಂಬರ ಮೂಲ ಪುರುಷನಾದ

# ವೀರ ಮಯೂರ ಶರ್ಮ

( ಕ್ರಿ. ಶ. ೩೩೨-೩೬೦ )

[ ಮಯೂರ ಶರ್ಮನ ಊರು ತಾಳಗುಂದ ಎಂಬುದು. ಇದು ಶಿವಮೊಗ್ಗೆ ಜಿಲ್ಲೆಯಲ್ಲಿದೆ. ಇವರ ಮನೆ ಅಂಗಳದಲ್ಲಿ ಕದಂಬ ಅಂದರೆ ಕಡಿವಾಣಮರವಿದ್ದುದ ರಿಂದ ಇವರಿಗೆ ಕದಂಬರೆಂದು ಅಡ್ಡ ಹೆಸರು ಇತ್ತು. ಚಿಕ್ಕಂದಿನಲ್ಲಿ ಮಯೂರನು ತನ್ನ ಗುರು ವೀರಶರ್ಮನೊಡನೆ ಕಂಚಿಗೆ ವೇದಾಧ್ಯಯನಕ್ಕಾಗಿ ಹೋದನು. ಕಂಚಿ ಯಲ್ಲಿ ಆಗ ದೊಡ್ಡ ವಿದ್ಯಾಪೀಠವಿತ್ತು. ಮೇಲಾಗಿ ಅದು ಪಲ್ಲವರ ರಾಜಧಾನಿ. ಅಲ್ಲಿ ಮಯೂರಶರ್ಮನು ಓದುತ್ತಿರುವಾಗ ನಡೆದ ಸಂಗತಿ.

ಎಪಿಗ್ರಾಫಿಕಾ ಇಂಡಿಕಾ ಪತ್ರಿಕೆಯ ೮ನೆಯ ಪುಸ್ತಕ. ತಾಳಗುಂದ ಶಾಸನ ದಿಂದ ಪುಟ ೨೪.]

ಅದಾಗ ಮಯೂರನು ೧೮-೨೦ ವರ್ಷದವನು. ಕಂಚಿಯ ಪಾಠಶಾಲೆ ಯಲ್ಲಿ ವೇದ-ಶಾಸ್ತ್ರಗಳ ಅಭ್ಯಾಸ ಮಾಡುತ್ತಲಿದ್ದ. ಪಲ್ಲವರು ಕ್ಷತ್ರಿಯರು. ಆಗಾಗ್ಗೆ ಅಶ್ವಮೇಧ ಯಜ್ಞಗಳನ್ನು ಮಾಡುತ್ತಿದ್ದರು. ಮಯೂರನು ಅಲ್ಲಿ ರುವಾಗೊಮ್ಮೆ ಅಶ್ವಮೇಧದ ವಿಷಯವಾಗಿ ವಾದನಡೆದು ಜಗಳವಾಯಿತು. ಈ ಜಗಳದ ವೃತ್ತಾಂತವನ್ನು ಮಯೂರನು ಅರಸನ ಮುಂದೆ ಹೇಳ ಹೋದನು. ಅರಸನು ಲೆಕ್ಕಿಸದೆ, ಅವನನ್ನು ಹೊರಗೆ ಹಾಕಿಸಿದನು. ಇದರಿಂದ ಮಯೂರನು ಕಿಡಿಕಿಡಿಯಾಗಿ, ಕ್ಷತ್ರಿಯರ ಮುಂದೆ ಬ್ರಾಹ್ಮಣರು ಬಗ್ಗ ಬೇಕಾಯಿತಲ್ಲ? ಎಂದು ಬಹು ಬಗೆಯಿಂದ ಮಿಡುಕಿದನು. ತನ್ನ ಕೈಯೊಳಗಿ ರುವ ಬ್ರಾಹ್ಮಣರಿಗೆ ಯೋಗ್ಯವಾದ ಕುಶ-ಸಮಿತ್ತುಗಳನ್ನು ಬಿಸಾಕಿ, ಕೈಯಲ್ಲಿ ಶಸ್ತ್ರ ಹಿಡಿದು ತನ್ನದೊಂದು ಸ್ವತಂತ್ರ ರಾಜ್ಯವನ್ನೇ ಸ್ಥಾಪಿಸ ಬೇಕೆಂದು ನಿಶ್ಚಯಿಸಿದನು.

ಆಗ ಮಯೂರನು ಕಂಚಿಯನ್ನು ಬಿಟ್ಟನು. ತನ್ನ ಗುರಿಯನ್ನು ಸಾಧಿಸಲು ಪಲ್ಲವ ರಾಜ್ಯದ ಸೀಮೆಯಾಗಿದ್ದ ಶ್ರೀಶೈಲಪರ್ವತವನ್ನು ಸೇರಿದನು. ಅಲ್ಲಿರುವ ಕಾಡು ಜನರೊಡನೆ ಸ್ನೇಹ ಬೆಳಿಸಿದನು. ಅವರನ್ನೆಲ್ಲ ಕಲೆ ಹಾಕಿ, ಅವರಿಗೆ ತಾನೇ ಮುಂದಾಳಾಗಿ, ಪಲ್ಲವರ ಅಂತಪಾಲರನ್ನು ಗೆದ್ದು, ಬೃಹದ್ಬಾಣ ಮೊದಲಾದ ಮಾಂಡಲಿಕರಿಂದ ಕಪ್ಪ-ಕಾಣಿಕೆಯನ್ನೆತ್ತಿದನು. ಇದರಿಂದ ಮಯೂರನಿಗೆ ಸ್ವಲ್ಪ ಕಸುವು ಬಂದಂತಾಯಿತು. ಆಗ, ದಿನದಿನಕ್ಕೆ ಮಯೂರನ ಕೀರ್ತಿಯು ಸುತ್ತುಕಡೆ ಬೆಳೆಯತೊಡಗಿತು. ಪಲ್ಲವೇಂದ್ರನ ಕಿವಿಗೂ ಇವನ ಹೆಸರು ಮುಟ್ಟಿತು. ಮೊದಲು ಮೊದಲು, ಒಬ್ಬ ಕ್ಷುದ್ರ ಪುಂಡನ ಹಾವಳಿ ಎಂದು ಅವನು ಲೆಕ್ಕಿಸಲಿಲ್ಲ; ಆದರೆ ದಿನಾಲು ಮಯೂರನ ಬಗ್ಗೆ ಒಂದಿಲ್ಲೊಂದು ಗೆಲವಿನ ಸುದ್ದಿಗಳು ಬರಹತ್ತಿದವು. ಕೆಲದಿನಗಳ ಹಿಂದೆ, ಒಬ್ಬ ತೇಜಸ್ವಿಯಾದ ಬ್ರಾಹ್ಮಣ ವಿದ್ಯಾರ್ಥಿಯು ಅಶ್ವಮೇಧ ಯಜ್ಞದ ದೆಸೆಯಿಂದ ಜಗಳವಾಡಿದ್ದು ನೆನಪಿಗೆ ಬಂದು, ಆಗ, ತಾನು ಆತನ ಮುಖದಲ್ಲಿ ಕಂಡ ವರ್ಚಸ್ಸು, ಕಣ್ಣುಗಳಲ್ಲಿ ಹೊಳೆದ ತೇಜಸ್ಸು, ಮೈಯಲ್ಲಿ ಉಕ್ಕುವ ಹುಮ್ಮಸ್ಸು—ಇವೆಲ್ಲವು ಕಣ್ಣಿಗೆ ಕಟ್ಟಿದವು.

ಬೆಳೆಯುವ ವೈರಿಯನ್ನು ಅಲಕ್ಷಿಸುವದು ಅರಸನ ಕರ್ತವ್ಯವಲ್ಲ ಎಂಬ ರಾಜನೀತಿಯಂತೆ, ಪಲ್ಲವೇಂದ್ರನು ತನ್ನೊಬ್ಬ ದಂಡನಾಯಕನನ್ನು ಮಯೂರನ ಮಗ್ಗಲು ಮುರಿಯಲು ದಂಡು ಸಹಿತವಾಗಿ ಕಳಿಸಿದನು. ಮಯೂರನು ಆ ದಂಡನಾಯಕನನ್ನೇ ದಂಡಿಸಿದನು; ಕೊನೆಗೆ ಪಲ್ಲವೇಂದ್ರನು ತಾನೇ ದೊಡ್ಡ ಸೈನ್ಯದೊಂದಿಗೆ ಹೋಗಿ ಮಯೂರನನ್ನು ಎದುರಿಸಿದನು; ಆದರೆ ಮಯೂರನಲ್ಲಿದ್ದ ಕೆಚ್ಚೆದೆಯ-ಬಿಚ್ಚುಗತ್ತಿಯ ಮಲ್ಲಾಡಿನ ದಂಡಾಳುಗಳ ಮುಂದೆ ಅವನ ಆಟ ನಡೆಯಲಿಲ್ಲ. ಅವನು ಒಪ್ಪಂದ ಮಾಡಿಕೊಂಡು, ಅವನಿಗೆ ತನ್ನ ದಂಡಾಧಿಪತಿಯ ಪದವಿಯನ್ನು ಕೊಟ್ಟು ಸ್ನೇಹ ಬೆಳೆಯಿಸಿದನು.

ಮುಂದೆ ಮಯೂರನು * ಪಲ್ಲವರ ಪರವಾಗಿ ನಡೆದ ಹಲವು ಕಾಳಗಗಳಲ್ಲಿ ತೋರಿಸಿದ ಪರಾಕ್ರಮಕ್ಕೆ ಮೆಚ್ಚಿ, ಪಲ್ಲವೇಂದ್ರನು ಪಶ್ಚಿಮದಲ್ಲಿ ಸಮುದ್ರದವರೆಗೂ ರಾಜ್ಯವನ್ನು ಕೊಟ್ಟು ತನ್ನ ಸಾಮಂತ ರಾಜನನ್ನಾಗಿ

---

* ಕ್ಷತ್ರಿಯ ಕಾರ್ಯ ಕೈಕೊಂಡನಂತರ ಮಯೂರನು ಶರ್ಮ ಎಂಬ ಬ್ರಾಹ್ಮಣ ಪದವಿಯನ್ನು ಬಿಟ್ಟು, ವರ್ಮ ಎಂಬ ಕ್ಷತ್ರಿಯ ಪದವಿ ಧರಿಸಿದನು.

ಮಾಡಿಕೊಂಡನು. ಆಗ ಮಯೂರನು ವೈಜಯಂತಿ ಅಂದರೆ ಬನವಸೆ (ಬನವಾಸಿ)ಯನ್ನೇ ತನ್ನ ರಾಜಧಾನಿಯನ್ನಾಗಿರಿಸಿಕೊಂಡು ರಾಜ್ಯವಾಳಿದನು. ಇವನ ಪಟ್ಟಾಭಿಷೇಕಕ್ಕೆ ಪಲ್ಲವೇಂದ್ರನು ಸ್ವತಃ ಕಂಚಿಯಿಂದ ಬಂದಿದ್ದನು. ತನ್ನ ಕೈಯಿಂದ ಮಯೂರನ ತಲೆಯಮೇಲೆ ಕಿರೀಟವನ್ನಿಟ್ಟು ಸಮಾರಂಭವನ್ನು ನೆರವೇರಿಸಿದನು.

ಇವನ ರಾಜ್ಯವು ಶಿವಮೊಗ್ಗೆ, ಕಾರವಾರ, ಧಾರವಾಡ, ಬೆಳಗಾವಿ ಜಿಲ್ಹೆಗಳನ್ನು ಒಳಗೊಂಡಿತ್ತು. ಮಯೂರನ ತರುವಾಯ ಅವನ ಮಗನಾದ ಕಙ್ಙವರ್ಮ, ಮೊಮ್ಮಕ್ಕಳು-ಮರಿಮಕ್ಕಳಾದ ಭಗೀರಥ, ರಘು, ಕಕುಸ್ಥ, ಮೃಗೇಶವರ್ಮ, ರವಿವರ್ಮ ಮೊದಲಾದವರು ಆಳಿದರು.

---

## ೨

# ಎರಡನೆಯ ಪುಲಿಕೇಶಿಯ

## ದಿಗ್ವಿಜಯ

(ಕ್ರಿ. ಶ. ೬೦೯—೬೪೫)

[ಬಾದಾಮಿಯ ಚಾಲುಕ್ಯರ ೨ನೆಯ ಪುಲಿಕೇಶಿಯ ದಿಗ್ವಿಜಯದ ಶಾಸನವು ಐಹೊಳೆಯಲ್ಲಿರುವ ಮೇಗುಟಿ ದೇವಾಲಯದಲ್ಲಿದೆ. ಇದನ್ನು ಪುಲಿಕೇಶಿಯ ಸೇನಾಪತಿಯಾದ ರವಿಕೀರ್ತಿ ಎಂಬುವನು ಸ್ವತಃ ಬರೆದು ಕಲ್ಲಿನಮೇಲೆ ಕೆತ್ತಿಸಿದನು.

ಇಂಡಿಯನ್ ಆ್ಯಂಟಿಕ್ವೆರಿ ಎಂಬ ಇಂಗ್ಲಿಷ ಮಾಸಪತ್ರಿಕೆಯ ೬ನೆಯ ಪುಸ್ತಕದಲ್ಲಿ ಈ ವಿಷಯ ಸಂಪೂರ್ಣ ಬಂದಿದೆ.]

ಎರಡನೆಯ ಪುಲಿಕೇಶಿಯು ಕಕ್ಕನಾದ ಮಂಗಳೀಶನನ್ನು ಯುದ್ಧದಲ್ಲಿ ಕೊಂದುದರಿಂದ ಬಾದಾಮಿಯನ್ನು ಮುಸುಕಿದ ಶತ್ರುಗಳ ಕಗ್ಗತ್ತಲೆ ಎಂಬುದು ಅಡಗಿ, ಪುಲಿಕೇಶಿಯ ಥಳಥಳ ಹೊಳೆಯುವ ಕಿರಣಗಳಿಂದ ಅದು ಬೆಳಗಲಾರಂಭಿಸಿತು. ಮುಗಿಲಲ್ಲಿ ಓಡಾಡುವ ಮೋಡಗಳು ಹಾರಿಹೋದವು. ಕೋಲ್ಮಿಂಚುಗಳ ಸೆಳೆತವು ಕಾಣದಾಯಿತು.

ಪುಲಿಕೇಶಿಯು ಚಿಕ್ಕವನೆಂಬುದನ್ನು ಅರಿತ ಆಪ್ಯಾಯಿಕ ಮತ್ತು ಗೋವಿಂದ ಎಂಬ ಅರಸರು ಭೀಮಾ ನದಿಯ ಉತ್ತರಕ್ಕಿರುವ ಪುಲಿಕೇಶಿಯ

ರಾಜ್ಯವನ್ನು ಗೆಲಿಯಲಿಕ್ಕೆಂದು ಬಂದರು. ಅವರಿಗೆ ಅವನು ಚೆನ್ನಾಗಿಯೇ ಕೈತೋರಿಸಿದನು. ತರುವಾಯ, ಪುಲಿಕೇಶಿಯು ಬನವಸೆಯನ್ನು ಮುತ್ತಿದನು. ಅದು ಆಗ ಐಶ್ವರ್ಯದಲ್ಲಿ ದೇವಲೋಕವನ್ನು ಮಾರಿಸುವಂತಿತ್ತು. ಬನವಸೆಯ ಕೋಟೆಯ ಸುತ್ತಲೂ ಸೇನಾಸಮುದ್ರವು ಸುತ್ತುಗಟ್ಟಿ ನಿಂತಿರುವಾಗ ಅದು ನೀರೊಳಗೆ ನಿಂತ ಕೋಟೆಯಂತೆ ನೋಟಕರಿಗೆ ಕಾಣಿಸಿತು.

ಗಂಗ ಮತ್ತು ಆಳುಪ ಅರಸರು ಪುಲಿಕೇಶಿಯಿಂದ ಜಯಿಸಲ್ಪಟ್ಟರೂ ಅವನ ಆಶ್ರಯದಲ್ಲಿದ್ದು ಮದವೇರಿದವರಾದರು. ಕೊಂಕಣದಲ್ಲಿ ಆಳುತ್ತಿದ್ದ ಮೌರ್ಯರನ್ನು ಅವನ ಸೈನಿಕರು ಮುಗ್ಗುಬಡಿದರು. ಪಶ್ಚಿಮ ಸಮುದ್ರ ದಂಡೆಗೆಲ್ಲ ಸಂಪತ್ತಿನ ತವರೂರಾಗಿ ಬೆಳಗುತ್ತಿರುವ ಪುರಿಯನ್ನು ಮದವೇರಿದ ಆನೆಗಳಂತಿರುವ ನೂರಾರು ಹಡಗುಗಳಿಂದ ಪುಲಿಕೇಶಿ ಮಹಾರಾಯರು ಮುತ್ತಿದಾಗ, ಮುಗಿಲನ್ನು ಕಾರ್ಮೋಡಗಳು ಕವಿದಿರುವಂತೆ ಕಾಣಿಸಿತು. ಅವನ ಪ್ರತಾಪಕ್ಕೆ ಹೆದರಿ, ಲಾಟ, ಮಾಳವ, ಗುರ್ಜರ ಅರಸರು ಅತ್ಯಂತ ವಿನಯದಿಂದ ಅವನಿಗೆ ಮೊರೆಹೊಕ್ಕರು. ಹರ್ಷಮಹಾರಾಯನು ಉತ್ತರದ ಚಕ್ರವರ್ತಿ; ಅವನ ಪಾದಗಳಮೇಲೆ ಹಲವು ಜನ ಸಾಮಂತ ರಾಜರ ತಲೆಗಳಲ್ಲಿ ಮಿಂಚುತ್ತಿದ್ದ ಕಿರೀಟಗಳು ಉರುಳಾಡುತ್ತಿದ್ದವು. ಅಂಥವನು ಪುಲಿಕೇಶಿಯ ದಂಡಿನಲ್ಲಿಯ ಮದ್ದಾನೆಗಳ ಮುಂದೆ ಹೌಹಾರಿ ಓಡಿದನು. ವಿಂಧ್ಯೆಯ ನೆರೆಯಲ್ಲಿ ಅವನು ಆಳುತ್ತಿರುವಾಗ ಅವನಲ್ಲಿದ್ದ ಆನೆಯ ದಳವು ವಿಂಧ್ಯಪರ್ವತದೊಡನೆ ಹೋರಾಡುವಂತೆ ತೋರಿತು. ಇಂದ್ರನಿಗೆ ಸರಿಯಾದ ತೇಜದಿಂದ ಕೂಡಿದವನಾಗಿ ಪುಲಿಕೇಶಿಯು ಮೂರು ಮಹಾ-ರಾಷ್ಟ್ರ (ಅಂದರೆ ದೊಡ್ಡದೇಶ) ಗಳ ಅಧಿಪತಿಯಾಗಿದ್ದನು. ಅವನ ದಂಡಿನವರಿಗೆ ಕಲಿಂಗ, ಕೋಸಲ ಅರಸರು ಹೆದರಿದರು. ಗೆಲ್ಲಲು ಅಸಾಧ್ಯವಾದ ಪಿಷ್ಟಾಪುರದ ಕೋಟೆಯು ಅವನಿಗೆ ಸಹಜವಾಗಿ ಕೈವಶವಾಯಿತು. ತನ್ನನ್ನು ಎದುರಿಸಿದ ಪಲ್ಲವರ ಸೈನ್ಯವನ್ನು ಅವನು ತನ್ನ ಲೆಕ್ಕವಿಲ್ಲದ ದಂಡಾಳುಗಳ ಕಾಲ್ತುಳಿತದಿಂದ ಏಳುವ ಧೂಳಿಯಿಂದ ಮುಚ್ಚಿದನು. ಅವರು ಕಂಚಿಯ ಕೋಟೆಗಳ ಹಿಂದೆಯೇ ಅಡಗಿಹೋದರು. ಅವನು ಚೋಳರನ್ನು ಗೆಲ್ಲಲು ಹೋದಾಗ, ಆನೆಗಳಿಂದ ಸೋರುತ್ತಿರುವ ಮದದ ಪ್ರವಾಹದಿಂದ ಕಾವೇರಿಯ ನದಿಯು ಹರಿಗಡಿಯಿತು. ದಟ್ಟಾಗಿ ಹರಡಿದ ಮಂಜಿಗೆ ಸೂರ್ಯನಂತಿ

ರುವ ಅವನ ತೇಜದಿಂದ ಚೋಳ, ಕೇರಳ, ಪಾಂಡ್ಯರಿಗೆ ಅತ್ಯಂತ ಆನಂದ ವಾದುದಲ್ಲದೆ, ವೈಭವವನ್ನು ಹೊಂದಿದರು. ಹೀಗೆ, ಎಲ್ಲ ದಿಗ್ದೇಶಗಳಲ್ಲಿರುವ ಅರಸರನ್ನು ಗೆದ್ದು, ಸತ್ಯಾಶ್ರಯ ಪುಲಿಕೇಶಿಯು ತನ್ನ ರಾಜಧಾನಿಯಾದ ವಾತಾಪಿನಗರ ( ಬಾದಾಮಿ ) ವನ್ನು ಸೇರಿದನು.

## ೩
## ಶಾಂತಿಪ್ರಿಯನಾದ
# ರಾಷ್ಟ್ರಕೂಟರ ನೃಪತುಂಗ

( ಕ್ರಿ. ಶ. ೮೧೫-೮೮೦ )

( ಇವನು ರಾಷ್ಟ್ರಕೂಟ ಗೋವಿಂದನ ಮಗ, ಅವನ ತರುವಾಯ ಪಟ್ಟಕ್ಕೆ ಬಂದನು. ಇವನ ವಿಷಯವಾಗಿ ಕೆಳಗಿನ ಕಥೆ ಇದೆ.

ಡಾ. ಆಳತೆಕರವರ ರಾಷ್ಟ್ರಕೂಟರೂ, ಅವರ ಕಾಲವೂ ಎಂಬ ಇಂಗ್ಲಿಷ ಗ್ರಂಥದ ಆಧಾರದಿಂದ ಬರೆಯಲಾಗಿದೆ.)

ವೀರ್ಯ, ಶೌರ್ಯ, ವಿದ್ಯೆ, ಧರ್ಮಪ್ರೀತಿ, ಇವುಗಳಲ್ಲಿ ರಾಷ್ಟ್ರಕೂಟ ಅರಸರಲ್ಲಿ ನೃಪತುಂಗನೇ ಮೇಲು. ಇವನಿಗೆ ಅನೆಯ ಅಮೋಘವರ್ಷ ಎಂದು ಹೆಸರು. ಇವನು ತೀರ ಚಿಕ್ಕವನಿರುವಾಗ ತಂದೆ ಗೋವಿಂದನು ತೀರಿ ಕೊಂಡ. ಗುಜರಾತದಲ್ಲಿ ಆಳುತ್ತಿದ್ದ ಗೋವಿಂದನ ತಮ್ಮನಾದ ಇಂದ್ರನ ಮಗ ಸುವರ್ಣವರ್ಷನು, ಕಕ್ಕ ಗೋವಿಂದನು ಸಾಯುವ ಕಾಲಕ್ಕೆ ಹತ್ತಿರವೇ ಇದ್ದನು. ಮಗನು ಚಿಕ್ಕವ, ಆದುದರಿಂದ ಅವನನ್ನೂ ಸಾಮ್ರಾಜ್ಯವನ್ನೂ ಕಾಯ್ದುಕೊಂಡು ಹೋಗುವ ಭಾರ ನಿನ್ನದೇ ಎಂದು ಗೋವಿಂದನು ಸುವರ್ಣ ವರ್ಷನಿಗೆ ಎಲ್ಲ ಭಾರ ಒಪ್ಪಿಸಿದನು. ಇಂದ್ರನು ಸಮರ್ಥನಿದ್ದನು; ಆದರೂ ನೃಪತುಂಗ ಚಿಕ್ಕವನಿದ್ದುದನ್ನು ಲಕ್ಷಿಸಿ, ಮಾಂಡಲಿಕರಾಗಿದ್ದ ಗಂಗರು ಸ್ವತಂತ್ರರಾದರು. ರಾಜ್ಯದೊಳಗಿರುವ ಚಿಕ್ಕಚಿಕ್ಕ ಪುಂಡ-ಪಾಳ್ಯಗಾರರು ದಂಗೆ ಎಬ್ಬಿಸಿದರು. ಪರಂಪರೆಯಿಂದ ವೈರಿಗಳಾದ ಪಲ್ಲವ, ಚೋಳ, ಮೊದ ಲಾದ ಅರಸರು ಆಗಾಗ್ಗೆ ದಾಳಿ ನಡಿಸಿದರು. ಕೈಕೆಳಗಿದ್ದ ಮಂತ್ರಿಗಳು ರಾಜ ದ್ರೋಹಿಗಳಾದರು. ಸುವರ್ಣವರ್ಷನು ತನ್ನ ಕಕ್ಕನ ಮಾತನ್ನು ಮರೆಯದೆ,

ಎಲ್ಲ ಗೊಂದಲವನ್ನು ಶಾಂತಪಡಿಸಿ ರಾಜ್ಯವನ್ನು ಕಾಪಾಡಿದನು. ಅಷ್ಟರಲ್ಲಿ ನೃಪತುಂಗನು ದೊಡ್ಡವನಾಗಲು, ಅವನಿಗೆ ರಾಜ್ಯಭಾರ ಒಪ್ಪಿಸಿದನು. ನೃಪತುಂಗನು ಪಟ್ಟಕ್ಕೆ ಬಂದನಂತರ, ರಾಜ್ಯದಲ್ಲಿಯ ಚಿಕ್ಕಚಿಕ್ಕ ಬಂಡುಗಾರರು ತಲೆಯೆತ್ತಿದರು. ಪುಂಡರು ಮತ್ತೆ ಗೊಂದಲ ನಡಿಸಿದರು. ತಂದೆ ಇರುವವರೆಗೆ ಒಳ್ಳೆಯ ರಾಜಭಕ್ತಿಯಿಂದ ನಡೆದ ಸರದಾರರೂ ರಾಜ್ಯದಾಸೆಯಿಂದ ದಾರಿತಪ್ಪಿ ನಡೆದರು; ಆಗ ನೃಪತುಂಗನು ಆ ಬಂಡಾಯುಗಳನ್ನು ಮುರಿಯುವದರಲ್ಲಿ ತೊಡಗಿದನು. ದಂಗೆಗಾರರಲ್ಲಿ ಅಮೋಘವರ್ಷನ ಹಿರಿಯಮಗನ ಅಂಗವೂ ಇತ್ತು. ಬಂಕೆಯರಸ ಎಂಬ ಮುಖ್ಯ ದಳವಾಯಿಯು ನೃಪತುಂಗನಿಗೆ ಬಹಳಮಟ್ಟಿಗೆ ನೆರವಾದನು. ಮತ್ತು ಅವನೂ ಅಲ್ಲಲ್ಲಿ ದಂಡು ಕಟ್ಟಿಕೊಂಡು ಹೋಗಿ ಬಂಡಾಯ ಮುರಿದನು. ಅದರಿಂದ ಸಂತುಷ್ಟನಾಗಿ ನೃಪತುಂಗನು ಬಂಕೆಯರಸನನ್ನು ಬನವಸೆ, ಬೆಳಗೊಳ, ಕುಂದರಿಗೆ, ಕುಂದೂರು, ಪುಲಿಗೆರೆ ನಾಡುಗಳಿಗೆ ಅಧಿಪತಿಯನ್ನಾಗಿ ಮಾಡಿದನು.

ತರುವಾಯ, ತಾನು ಸ್ವತಃ ಗುಜರಾತದ ಅರಸನಮೇಲೆ ದಾಳಿ ಮಾಡಿ ಅವನಿಂದ ಕಪ್ಪವೆತ್ತಿದನು; ಹಾಗೆಯೇ ಮುಂದೆ ನಡೆದು, ಅಂಗ, ವಂಗ, ಕಳಿಂಗ ಅರಸರಿಂದಲೂ ಕಪ್ಪ-ಕಾಣಿಕೆಗಳನ್ನು ತೆಗೆದುಕೊಂಡು, ಅಲ್ಲಿಂದ ವೆಂಗಿಯ ಚಾಲುಕ್ಯ ಅರಸನನ್ನು ಸೋಲಿಸಿದನು. ತಲಕಾಡಿನ ಗಂಗರಸರೊಡನೆ ಸ್ನೇಹ ಬೆಳೆಯಿಸಿ, ತನ್ನ ಮಗಳನ್ನು ಬೂತುಗರಾಯನಿಗೆ ಕೊಟ್ಟು ಬೀಗತನ ಮಾಡಿದನು. ಚಾಲುಕ್ಯರನ್ನು ಮುರಿದು ತನ್ನ ರಾಜ್ಯ ಬೆಳೆಯಿಸಿಕೊಂಡಿದ್ದರಿಂದ ಮೊದಲು ಸುಮ್ಮನಿದ್ದ ಚಾಲುಕ್ಯರು ಕೆಲ ದಿವಸಗಳನಂತರ ಯುದ್ಧಕ್ಕೆ ಸಿದ್ಧರಾದರು. ಇಂಗವಳ್ಳಿಯ ಹತ್ತರ ಪೂರ್ವ ಚಾಲುಕ್ಯರಿಗೂ ರಾಷ್ಟ್ರಕೂಟರಿಗೂ ಯುದ್ಧವಾಯಿತು. ಚಾಲುಕ್ಯರು ಸೋತು ಓಡಿದರು.

ಆಮೇಲೆ, ನೃಪತುಂಗನು ಮಾಳವ ದೇಶದಿಂದ ಕಂಚಿಯವರೆಗಿರುವ ತನ್ನ ವಿಸ್ತಾರವಾದ ರಾಜ್ಯವನ್ನು ಓರಣಗೊಳಿಸಿದನು. ಒಂದೊಂದು ಪ್ರಾಂತಕ್ಕೆ ಒಬ್ಬೊಬ್ಬ ಪ್ರಬಲ ಅಧಿಪತಿಯನ್ನು ನಿಯಮಿಸಿದನು. ಅಷ್ಟರಲ್ಲಿ ತನ್ನ ಮಗನಾದ ಕೃಷ್ಣನು ದೊಡ್ಡವನಾದ್ದರಿಂದ, ಅವನಿಗೆ ರಾಜಕಾರ್ಯದ ಶಿಕ್ಷಣ ಕೊಟ್ಟು, ಚಿಕ್ಕ ಚಿಕ್ಕ ರಾಜಕಾರ್ಯಗಳನ್ನು ಅವನಿಂದ ಮಾಡಿಸಹತ್ತಿದನು. ಮುಂದೆ ಮುಂದೆ ಮಗನಿಂದ ರಾಜ್ಯಭಾರದಲ್ಲಿ ಇವನಿಗೆ ತುಂಬಾ ಸಹಾಯವಾಯಿತು.

ತಂದೆ ಅಜ್ಜಂದಿರಂತೆ ನೃಪತುಂಗನು ಯುದ್ಧಪ್ರಿಯನಲ್ಲ; ವಿದ್ಯಾಪ್ರಿಯನು. ಜಗಳಗಂಟನಲ್ಲ; ಶಾಂತಿಪ್ರಿಯನು; ಮತ್ತು ಇವನ ಹಾರೈಕೆಯಂತೆ ಹೆಚ್ಚಿಗೆ ಯುದ್ಧಗಳೇ ಆಗಲಿಲ್ಲ. ಸಂಸ್ಕೃತ, ಕನ್ನಡ ಕವಿಗಳಿಗೆ ಆಶ್ರಯ ಕೊಟ್ಟ ನಲ್ಲದೆ ತಾನೂ ಗ್ರಂಥಗಳನ್ನು ಬರೆದನು. ಕನ್ನಡದೊಳಗಂತೂ ನೃಪತುಂಗ ಅರಸನ 'ಕವಿರಾಜ ಮಾರ್ಗ' ಎಂಬ ಅಲಂಕಾರಶಾಸ್ತ್ರ ಗ್ರಂಥವು ಪ್ರಸಿದ್ಧವಿದೆ. ಇದು ಕನ್ನಡದಲ್ಲಿಯೇ ಅತಿ ಪ್ರಾಚೀನ ಗ್ರಂಥ. ಈ ಗ್ರಂಥದಲ್ಲಿ ಇವನು ತನ್ನ ಕಾಲಕ್ಕೆ ಕರ್ನಾಟಕದ ಮೇರೆಯು ಕಾವೇರಿಯಿಂದ ಗೋದಾವರಿಯ ನದಿಯವರೆಗೆ ಹಬ್ಬಿತ್ತೆಂದು ಹೇಳಿರುವನು; ಮೇಲಾಗಿ, ಲಕ್ಷ್ಮೇಶ್ವರ, ಒಕ್ಕುಂದ, ಕೊಪ್ಪಳ, ಕಿಸುವೊಳಲು, ( ಪಟ್ಟದಕಲ್ಲು ) ಈ ಭಾಗದೊಳಗಿನ ಕನ್ನಡವೇ ತಿರುಳುಗನ್ನಡ ಎಂದೂ ನುಡಿದಿರುವನು.

ನೃಪತುಂಗನು ಮಳಖೇಡವೆಂಬುವ ಊರನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇದೀಗ ಅದು ಮೊಗಲಾಯಿ ರಾಜ್ಯದಲ್ಲಿದೆ. ತನ್ನ ರಾಜಧಾನಿಯನ್ನವನು ರಾಜಬೀದಿ, ಅಂದವಾದ ಪೇಟೆಯ ಸಾಲು, ಅಲ್ಲಲ್ಲಿ ಮೆರೆಯುವ ಸರೋವರ, ಅಗ್ರಹಾರ, ಧರ್ಮಶಾಲೆ, ಹೂದೋಟ, ಮಠ ಮೊದಲಾದವುಗಳಿಂದ ಇಂದ್ರನ ಎರಡನೆಯ ಅಮರಾವತಿಯಂತೆ ಶಿಂಗರಿಸಿದ್ದನು.

ದಿನಗಳೆದಂತೆ, ನೃಪತುಂಗನಲ್ಲಿ ವೈರಾಗ್ಯ ತಲೆದೋರಿ ಜೀವನದಲ್ಲಿಯ ಸವಿಯು ಹಾರಿತು. ಆಗ, ಅವನು ಧರ್ಮಮತಗ್ರಂಥಗಳನ್ನೋದಲಾರಂಭಿಸಿದನು. ಇವನು ಜೈನನಿದ್ದರೂ ವೈದಿಕಮತಕ್ಕೆ ವಿರೋಧಿಯಾಗಿರಲಿಲ್ಲ. ಒಮ್ಮೆ ಮಹಾಲಕ್ಷ್ಮೀದೇವಿಗೆ ಹರಕೆಹೊತ್ತು, ತನ್ನ ರಾಜ್ಯದಲ್ಲಿಯ ಬೇನೆಯ ಪಿಡುಗು ದೂರಾದರೆ, ಎಡಗೈ ಬೆರಳುಗಳನ್ನು ಕೊಡುವೆನೆಂದು ಬೇಡಿಕೊಂಡನು. ಅದರಿಂದ ಪಾರಾದನಂತರ, ತನ್ನ ಎಡಗೈ ಬೆರಳುಗಳನ್ನು ಕಡಿದು ಹಾಕಿದನು. ಧರ್ಮದಲ್ಲಿ ಇವನಿಗೆ ತುಂಬಾ ವಿಶ್ವಾಸ. ತನ್ನ ಕೊನೆಗಾಲದಲ್ಲಿ ಮಗನಿಗೆ ರಾಜ್ಯ ಒಪ್ಪಿಸಿ, ಜೈನಗುರುಗಳ ಸಹವಾಸದಲ್ಲಿ ಏಕಾಂತದೊಳಗೆ ಕಾಲಕಳೆಯುತ್ತಿದ್ದನಂತೆ. ಇವನು ಆಳಿದ್ದು ೬೫ ವರ್ಷ.

## ೪

# ಕನ್ನಡ ಕವಿಕುಲ ಗುರು
# ಮಹಾಕವಿ ಪಂಪ

( ಕ್ರಿ. ಶ. ೯೪೧. )

[ಪಂಪನಿಗೆ ಮಹಾಕವಿ ಎಂದು ಅನ್ನುವರು. ಪಂಪನಿದ್ದ ಕಾಲಕ್ಕೇ ಅವನು ಕನ್ನಡ ಒಡೆಯ ಎಂದು ಪ್ರಖ್ಯಾತಿ ಇತ್ತು. ಮಂಗಳೂರಿನ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಬರೆದ ನಾಡೋಜ ಪಂಪ ಎಂಬ ಪುಸ್ತಕದಿಂದ ಕೆಳಗಿನ ವಿಷಯವನ್ನು ಸಂಗ್ರಹಿಸಲಾಗಿದೆ. ]

ಪಂಪನ ಹಿರಿಯರು ಮೊದಲು ಬಳ್ಳಾರಿಯ ಜಿಲ್ಲೆಯ ಕಡೆಗೆ ಇದ್ದರು. ಪಂಪನ ತಂದೆಯಾದ ಅಭಿರಾಮದೇವನು ಆ ದೇಶವನ್ನು ಬಿಟ್ಟು ಮುಂದೆ ಲಕ್ಷ್ಮೇಶ್ವರದ ನಾಡಿಗೆ ಬಂದನು. ಆಗ ಲಕ್ಷ್ಮೇಶ್ವರಕ್ಕೆ ಪುಲಿಗೆರೆ ಎಂದು ಹೆಸರಿತ್ತು. ಅಲ್ಲಿ ಚಾಲುಕ್ಯರ ಮನೆತನದ ಅರಿಕೇಸರಿ ಎಂಬ ಅರಸು ಆಳುತ್ತಿದ್ದನು. ಇವನು ರಾಷ್ಟ್ರಕೂಟ ಅರಸನಾದ ಆರನೆಯ ಕೃಷ್ಣನ ಮಾಂಡಲೀಕನಾಗಿದ್ದನು.

ಅಭಿರಾಮದೇವನು ಜೈನಬ್ರಾಹ್ಮಣ; ಆದುದರಿಂದ, ಆಕಾಲಕ್ಕೆ ಜೈನ ಮತದಲ್ಲಿ ವಿದ್ವಾಂಸನೆಂದು ಹೆಸರು ಪಡೆದ ದೇವೇಂದ್ರಮುನಿ ಎಂಬುವರಲ್ಲಿ ಪಂಪನನ್ನು ಓದಲಿಕ್ಕೆ ಇಟ್ಟನು. ದೇವೇಂದ್ರಮುನಿಗಳಿಗೆ ಪಂಪನು ಬಹು ಪ್ರೀತಿಯ ಶಿಷ್ಯನಾಗಿದ್ದನು. ಬುದ್ಧಿಯಲ್ಲಿಯೂ ಭಾವನೆಯಲ್ಲಿಯೂ ಪಂಪನನ್ನು ಸರಿಗಟ್ಟುವ ಶಿಷ್ಯರಾರೂ ಇರಲಿಲ್ಲ.

ದೇವೇಂದ್ರಮುನಿಯು ಅರಿಕೇಸರಿಯ ಗುರುವಾಗಿದ್ದನು. ಅವನು ಮುಂದೆ ತನ್ನ ಪ್ರಿಯ ಶಿಷ್ಯನ ವಿದ್ಯೆ-ಬುದ್ಧಿಗಳನ್ನು ಕುರಿತು ಅರಿಕೇಸರಿಗೆ ಹೇಳಿದನು. ಪಂಪನು ತನ್ನ ವಿದ್ಯೆ ಮುಗಿದಬಳಿಕ ಕೆಲದಿನ ಬನವಾಸಿಯಲ್ಲಿದ್ದನು. ಅಲ್ಲಿಂದ ಬಂದಾಗ ಅರಿಕೇಸರಿಯು ಬನವಾಸಿಯನಾಡನ್ನು ಗೆದ್ದನು. ಪಂಪನು ವಿದ್ವಾಂಸನಿದ್ದಂತೆ, ಮಹಾ ವೀರನೂ ಇದ್ದನು. ಆತನು ಕೆಲಯುದ್ಧಗಳಲ್ಲಿ ಕಾದಿ ದುಡಿದವನಿದ್ದನು. ಅರಿಕೇಸರಿಯು ಬನವಾಸಿಯನಾಡನ್ನು ಗೆದ್ದಾಗಲೆ ಅವನಿಗೂ ಪಂಪನಿಗೂ ಗೆಳೆತನ ಬೆಳೆಯಿತು. ಪಂಪನು ವಿದ್ಯಾವಂತರ ಕುಲದಲ್ಲಿ ಹುಟ್ಟಿದವನು; ವಿದ್ಯಾಸಂಪನ್ನನು; ವಿದ್ಯೆಯಿಂದ ಶುದ್ಧ ಹೃದಯ

ಮಾದವನು. ಇಂಥವನ ಗೆಳೆತನವನ್ನು ಗುಣಿಗಳಾದವರು ಯಾರು ಹಾರೈಸದಿರಲಾರರು?

ಅರಿಕೇಸರಿಯು ಗುಣಿಗಳ ಲೋಭಿ; ಆದುದರಿಂದ ಪಂಪನನ್ನು ಅವನ ಕುಲ-ಶೀಲ-ಗುಣಗಳನ್ನು ಅರಿತುಕೊಂಡು ತನ್ನ ಆಶ್ರಯದಲ್ಲಿಟ್ಟುಕೊಂಡನು. ಪಂಪನೂ ಅರಿಕೇಸರಿಯ ಓಲಗಕ್ಕೆ ಭೂಷಣನಾದನು. ತನ್ನ ಒಡೆಯನನ್ನು ವರ್ಣಿಸುವ ಭಾರತ ಅಥವಾ ವಿಕ್ರಮಾರ್ಜುನ ವಿಜಯವೆಂಬ ಭಾರತ ಕಾವ್ಯವನ್ನು 'ಪುಲಿಗೆರೆಯ ತಿರುಳು ಕನ್ನಡ' ದೊಳಗೆ ಬರೆದನು. ಇವನೇ ಆದಿಪುರಾಣವನ್ನೂ ಬರೆದಿರುವನು. ಇವನ ಕನ್ನಡಭಾಷೆಯ ಮಾಧುರ್ಯ, ಕಾವ್ಯಕಲೆಯ ವೈಭವ, ಇವುಗಳನ್ನೆಲ್ಲ ನೋಡಿ, ಹಾಡಿ ವಿದ್ವಜ್ಜನರು ಪಂಪನನ್ನು ಕನ್ನಡ ಕವಿಕುಲಕ್ಕೆ ಸಾರ್ವಭೌಮನೆಂದು ಹೊಗಳಿರುವರು.

ಬನವಾಸಿದೇಶದಲ್ಲಿ ಪಂಪನು ಬಹುದಿನ ಕಾಲಕಳೆದನು. ಅದು ಬಹು ಸೊಬಗಿನ ನಾಡು. ಅಲ್ಲಿಯ ಸೃಷ್ಟಿಸೌಂದರ್ಯವನ್ನು ಹಲವು ಕವಿಗಳು ಹೊಗಳಿದಂತೆ ಪಂಪನೂ ಹೊಗಳಿರುವನಷ್ಟೇ ಅಲ್ಲದೆ, ಪುಲಿಗೆರೆಯಲ್ಲಿ (ಲಕ್ಷ್ಮೇಶ್ವರ) ದ್ದಾಗಲೂ, 'ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ನೆನೆನೆನೆಸಿ ಹಾಡಿರುವನು. ಅದರೊಳಗೆ ಅವನು ಅನ್ನುವದು:— ತೆಂಕಣ ಗಾಳಿಯು ಮೈಗೆ ಸೋಂಕಿತೆಂದರೆ ಆಗುವ ಸುಖ, ಬಿರಿದಮಲ್ಲಿಗೆ ಕಂಡ ಸುಖ, ಇಂಪಾದ ಹಾಡನ್ನು ಕೇಳುವ ಸುಖ, ಇವೆಲ್ಲವುಗಳನ್ನು ನಾನು ಅನುಭವಿಸುತ್ತಿರುವಾಗ-ಅಷ್ಟೇಅಲ್ಲದೆ-ನನ್ನ ತಲೆಯಮೇಲೆ ಅಂಕುಶವನ್ನಿಟ್ಟರೂ ನನ್ನ ಮನಸು ಬನವಾಸಿಯ ದೇಶವನ್ನು ನೆನೆವುದು. ಮುಂದೆ ಮುಂದೆ, ಬನವಾಸಿ ದೇಶದೊಳಗೆ ಮರಿದುಂಬಿಯಾಗಿ ಕೋಗಿಲೆಯಾಗಿ ಹುಟ್ಟಬೇಕೆಂದೂ ಹಾಡಿ ಹಾರೈಸಿರುವನು.

ಪಂಪನು ಕರ್ನಾಟಕ ಕವಿಗಳಿಗೆ ಗುರು. ಅವನ ಮುಂದೆ ಆದ ಕವಿಗಳೆಲ್ಲರೂ ಅವನನ್ನೂ ಅವನ ಕೃತಿಗಳನ್ನೂ ಹೊಗಳಿರುವರು. ಕನ್ನಡ ವಾಙ್ಮಯದೊಳಗೆ ಶಾಂತ ಚಂದಿರನಂತೆ ಮೆರೆಯುವ ಪಂಪನನ್ನು ಕನ್ನಡಿಗರು ಮರೆಯಬಹುದೆ?

## ೨೫

## ಗಂಗರ

# ಎರಡನೆಯ ಬೂತುಗರಾಯ

( ಕ್ರಿ. ಶ. ೯೩೮–೯೬೦ ರ ವರೆಗೆ )

[ಇವನು ಎರಡನೆಯ ನೀತಿಮಾರ್ಗ ಅಥವಾ ಎರೆಯಪ್ಪನ ಕಡೆಯ ಮಗ. ರಾಚಮಲ್ಲನ ತಮ್ಮ. ಅಣ್ಣನು ಆಳುತ್ತಿರುವಾಗ ಇವನು ಅವನ ಮೇಲೆ ದಂಡೆತ್ತಿಹೋಗಿ, ಅವನನ್ನು ಕೊಂದು ಪಟ್ಟವೇರಿದನು. ರಾಷ್ಟ್ರಕೂಟರೂ ಇವರೂ ಯುದ್ಧಮಾಡುವ ಪ್ರಸಂಗ ಈ ಕಾಲಕ್ಕೆ ನಿಂತಿತ್ತು. ಇವರಿಗೂ ರಾಷ್ಟ್ರಕೂಟರಿಗೂ ನೆಂಟಸ್ತನವಿತ್ತು. ಕಲ್ಯಾಣದ ಚಾಲುಕ್ಯರೂ ಇವರೂ ಆಪ್ತರು. ವೀರವಿಕ್ರಮಾದಿತ್ಯನ ತಾಯಿಯು ಗಂಗ ಮನೆತನದವಳು. ತಲಕಾಡಿನ ಗಂಗರು ಎಂಬ ಇಂಗ್ಲಿಷ ಪುಸ್ತಕದ ಆಧಾರದಿಂದ]

ಬೂತುಗರಾಯನು ರಾಷ್ಟ್ರಕೂಟರ ೨ನೆಯ ಅಮೋಘವರ್ಷನಿಗೆ ಬೇಕಾದವನು. ಆದುದರಿಂದ, ಅವನು ತನ್ನ ಮಗಳಾದ ರೇವಕೆಯನ್ನು ಬೂತುಗನಿಗೆ ಕೊಟ್ಟು ಮದುವೆಮಾಡಿ, ವರದಕ್ಷಿಣೆಯೆಂದು ಧಾರವಾಡ, ಬೆಳಗಾಂವಿ, ವಿಜಾಪೂರ ಜಿಲ್ಲೆಗಳ ಭಾಗವನ್ನು ಅವನಿಗೆ ಕೊಟ್ಟನು.

ಬೂತುಗರಾಯನಿಗೆ ತನ್ನ ವಂಶದಲ್ಲಿ ಅಕ್ಕರತೆ ವಿಶೇಷ. ಎರಡನೆಯ ಅಮೋಘವರ್ಷನು ಸಾಯಲು ಲಲ್ಲೆಯನೆಂಬ ದಳವಾಯಿಯು ರಾಷ್ಟ್ರಕೂಟರ ರಾಜ್ಯವನ್ನು ತಾನೇ ಆಳಬೇಕೆಂದು ಹೊಂಚು ಹಾಕಿದಾಗ, ಬೂತುಗನು ಈ ಅನ್ಯಾಯವನ್ನು ನೋಡಿ ಸುಮ್ಮನಿರದೆ, ರಾಜದ್ರೋಹಿಯಾದ ಲಲ್ಲೆಯನನ್ನು ಹಿಡಿದು ಸೆರೆಯಲ್ಲಿಟ್ಟು, ತನ್ನ ಬೀಗನಾದ ಮೂರನೆಯ ಕನ್ನರನನ್ನು ಪಟ್ಟಕ್ಕೆ ಕುಳ್ಳಿರಿಸಿ, ರಾಷ್ಟ್ರಕೂಟ ಅರಸರ ಮೇಲೆ ಬಂದ ಅರಿಷ್ಟವನ್ನು ದೂರಮಾಡಿದನು.

ಹೀಗೆ ತನ್ನ ಮಾವನ ಮನೆತನವನ್ನು ರಕ್ಷಿಸಿದನಂತರ, ಬೂತುಗನು ಚೋಳರ ರಾಜಾದಿತ್ಯನನ್ನು ಬೆನ್ನಟ್ಟಿದನು. ಗಂಗರಾಜ್ಯವು ಚೋಳ-ರಾಷ್ಟ್ರಕೂಟರ ರಾಜ್ಯದ ನಡುವೆ ಇತ್ತು. ಚೋಳರು ಆಗಾಗ್ಗೆ ನಡೆಸುವ ದಾಳಿಗಳಿಂದ ಗಂಗ ಮತ್ತು ರಾಷ್ಟ್ರಕೂಟರ ಪ್ರಜೆಗಳಿಗೆ ತೊಂದರೆಯಾಗುತ್ತಿತ್ತು. ಒಮ್ಮೆ ರಾಷ್ಟ್ರಕೂಟರ ಮೂರನೆಯ ಕನ್ನರನು ಚೋಳ ರಾಜ್ಯದೊಳಗೆ ನುಗ್ಗಿದನು.

ಆರ್ಕೋಣಂ ನೆರೆಯಲ್ಲಿ ತಕ್ಕೋಲಂ ಎಂಬಲ್ಲಿ ಯುದ್ಧ ನಡೆಯಿತು. ಬೂತುಗನು ಕನ್ನರನ ಸಹಾಯಕ್ಕೆ ಹೋಗಿದ್ದನು. ತನ್ನ ಕಾರ್ಯದಿಂದ ಬೂತುಗನು ಚೋಳರ ದಂಡನ್ನು-ಮದ್ದಾನೆಯು ಬಾಳೆಗಿಡದ ಬನವನ್ನು ಮುರಿದುಹಾಕುವಂತೆ-ಮುರಿದು, ಅಂಬಾರಿಯನ್ನೇರಿ ಕುಳಿತ ರಾಜಾದಿತ್ಯನನ್ನು ಕೊಂದು ಹಾಕಿದನು. ಈ ವೀರಕೃತ್ಯದಿಂದ ಸಂತುಷ್ಟನಾದ ಕನ್ನರನು ಬೂತುಗನಿಗೆ ಬನವಾಸಿಯ ನಾಡನ್ನು ಉಂಬಳಿ ಹಾಕಿಕೊಟ್ಟನು.

ಮುಂದೆ, ಗುಜರಾತದಲ್ಲಾಳುತ್ತಿದ್ದ ಚಾಲುಕ್ಯವಂಶದ ಮೂಲರಾಜನು ಕಲಚೂರಿಯ ಅರಸರ ಚಿತ್ರಕೂಟವನ್ನು ಮುತ್ತಿದನು. ಆಗ, ಕಲಚೂರಿಯ ಅರಸನ ಸಹಾಯ ಕೇಳಿದನು. ಕನ್ನರನು ಬೂತುಗರಾಯನನ್ನು ಗುಜರಾತಕ್ಕೆ ಕಳಿಸಿದನು. ಆ ಕಾಲದಲ್ಲಿ ಬೂತುಗನು ಮೀರಿದ ಪರಾಕ್ರಮ ತೋರಿಸಿ, ಮೂಲರಾಜನಿಂದ ಚಿತ್ರಕೂಟದ ಮುತ್ತಿಗೆಯನ್ನು ತೆಗೆಯಲು ಹಚ್ಚಿದನು. ಬೂತುಗರಾಯನು ಮೂಲರಾಜನಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಸಪ್ತ ಮಾಳವ ದೇಶಗಳನ್ನು ಗೆದ್ದು, ಸೀಮೆಯ ಗುರುತಿಗಾಗಿ ಅದಕ್ಕೆ ಮಾಳವ ಗಂಗ ಎಂಬ ತನ್ನ ಹೆಸರನ್ನಿಟ್ಟನು.

Osmania University.

### ಪರನಾರೀ ಸೋದರನಾದ

## ವೀರಚಾವುಂಡರಾಯ

( ಕ್ರಿ. ಶ. ೯೭೭ )

[ಗಂಗ ಅರಸನಾದ ಮಾರಸಿಂಹನ ಆಳಿಕೆಯಲ್ಲಿ ಚಾವುಂಡರಾಯನೆಂಬ ಮಹಾ ವೀರ ದಂಡನಾಯಕನಿದ್ದನು. ಮಾರಸಿಂಹನು ಮೈಸೂರಿನಿಂದ ಬೆಳಗಾವಿಯವರೆಗೆ ತನ್ನ ರಾಜ್ಯವನ್ನು ಬೆಳೆಯಿಸಿದ್ದನು. ಜೈನನಾದ ಕಾರಣ ಬಂಕಾಪುರದಲ್ಲಿ ಸಲ್ಲೇಖನವೆಂಬ ಉಪವಾಸ ವ್ರತದಿಂದ ಮಡಿದನು. ಚಾವುಂಡರಾಯನು ಆಗ ಗಂಗರಸರ ರಾಜ್ಯಭಾರವನ್ನು ಹೊತ್ತು ಅವನ ಮಕ್ಕಳಿಗೆ ಪಟ್ಟಗಟ್ಟಿದನು. ತಲಕಾಡಿನ ಗಂಗರು ಎಂಬ ಇಂಗ್ಲಿಷ ಪುಸ್ತಕದ ಆಧಾರದಿಂದ]

ಗಂಗ ಅರಸನಾದ ಮಾರಸಿಂಹನ ಮರಣದನಂತರ ರಾಜ್ಯದಲ್ಲಿ ಅನಾಯಕತೆಯುಂಟಾಯಿತು. ಅವನ ಮಕ್ಕಳು ಇನ್ನೂ ಚಿಕ್ಕವರು. ಧಾರವಾಡ

ಸೀಮೆಯನ್ನು ಆಳುತ್ತಿದ್ದ ಛಬ್ಬಿಯ ಪಾಂಚಾಲದೇವನು ಉತ್ತರದ ಅಂದರೆ ಧಾರವಾಡ ಸೀಮೆಗೆಲ್ಲ ತಾನೇ ಅರಸನೆಂದು ಸಾರಿದನು.

ಚಾವುಂಡರಾಯನು ಗಂಗರಲ್ಲಿ ಅಜ್ಜಮುತ್ತಂದಿರಿಂದ ದುಡಿದ ವಂಶದವನು. ಅವನ ತಂದೆಯ ಹೆಸರು ಮಹಾಬಲಯ್ಯ; ಅಜ್ಜನು ಗೋವಿಂದಮಯ್ಯ. ಚಿಕ್ಕಂದಿನಿಂದ ಗಂಗರಾಜರಲ್ಲಿ ದುಡಿದು ಬೆಳೆದ ಚಾವುಂಡರಾಯನು ದೊಡ್ಡವನಾದಮೇಲೆ ತನ್ನ ಒಡೆಯನಿಗೆ ಹಲವು ಯುದ್ಧಗಳಲ್ಲಿ ಗೆಲವು ತಂದುಕೊಟ್ಟವನು, ಸತ್ಯಸಂಧನು, ಪರನಾರೀ ಸೋದರನು, ಮಹಾ ಸ್ವಾಮಿಭಕ್ತನು.

ಪಾಂಚಾಲದೇವನು ಹೀಗೆ ಒಮ್ಮಿಂದೊಮ್ಮೆ ಉಬ್ಬಿ ಗರ್ವಿಷ್ಠನಾದುದನ್ನು ಕಂಡು, ಧಾರವಾಡನಾಡಿಗೆ ದಂಡೆತ್ತಿ ಹೊರಟನು. ಉಚ್ಚಂಗಿದುರ್ಗ, ಬೇಡಗಕೋಟೆಗಳನ್ನು ತನ್ನ ಪರಾಕ್ರಮದಿಂದ ಗೆದ್ದು, ಮುಂದೆ ಪಾಂಚಾಲದೇವನನ್ನು ಬೆನ್ನಟ್ಟಿ ಯುದ್ಧದಲ್ಲಿ ಕೊಂದನು. ಗಂಗರಸರಿಗೆ ಒಪ್ಪುವ ಚಲದಂಕ ಮೊದಲಾದ ಬಿರುದುಗಳನ್ನು ತಾನು ಧರಿಸಿದ ಮುದುರಾಚಯ್ಯ ಎಂಬುವನನ್ನು ಬಾಗೆಯೂರಿನ ಕಾಳಗದಲ್ಲಿ ಸದೆಬಡಿದನು. ವಯಸ್ಸಿಗೆ ಬಂದನಂತರ ಮಾರಸಿಂಹನ ಮಗನಾದ ರಾಚಮಲ್ಲನಿಗೆ ತಾನು ಸ್ವತಃ ನಿಂತು ಪಟ್ಟಗಟ್ಟಿದನು.

ಮಾರಸಿಂಹನ ಆಳಿಕೆಯಲ್ಲಂತೂ ಚಾವುಂಡರಾಯನೇ ಮುಖ್ಯ ಸೂತ್ರಧಾರ. ಸ್ವಾಮಿನಿಷ್ಠೆಯಿಂದ ಅವನು ನಡೆಸಿದ ಕಾರ್ಯಕ್ಕೆ ಮೆಚ್ಚಿ ರಾಚಮಲ್ಲನು ಚಾವುಂಡನಿಗೆ 'ರಾಯ' ಎಂಬ ಬಿರುದು ಕೊಟ್ಟನು ತನ್ನ ಏಳಿಗೆಯ ಕಾಲಕ್ಕೆ ಚಾವುಂಡರಾಯನು ಬಡವರಿಗಾಗಿ ಹಲವು ಉಪಕಾರಗಳನ್ನು ಮಾಡಿದನು.

ಚಾವುಂಡರಾಯನು ಬರಿಯ ದಂಡನಾಯಕನಾಗಿರದೆ, ಮಹಾವಿದ್ವಾಂಸನೂ ಆಗಿದ್ದನು. ಚಿಕ್ಕಂದಿನಲ್ಲಿ ವ್ಯಾಕರಣ, ತರ್ಕ, ಗಣಿತ, ವೈದ್ಯ, ಸಾಹಿತ್ಯ ಮುಂತಾದ ಶಾಸ್ತ್ರಗಳನ್ನು ಓದಿದ್ದನು. ತನಗೆ ಪುರಸತ್ತು ಆದಾಗ ಆಗಾಗ್ಗೆ ಅವುಗಳನ್ನು ಓದಿಯೂ ಆನಂದಪಡುತ್ತಿದ್ದನು. ಸಂಸ್ಕೃತ, ಕನ್ನಡ, ಪ್ರಾಕೃತ, ಹೀಗೆ ಮೂರು ಭಾಷೆಗಳನ್ನು ರಾಯನು ಚನ್ನಾಗಿ ಬಲ್ಲವನಾಗಿದ್ದನು.

ಇವನು ಕನ್ನಡದಲ್ಲಿ ಚಾವುಂಡರಾಯಪುರಾಣವೆಂಬ ದೊಡ್ಡ ಜೈನಗ್ರಂಥವನ್ನು ಬರೆದಿದ್ದು, ಅದರಲ್ಲಿ ಜೈನಗುರುಗಳಾದ ತೀರ್ಥಂಕರರ ಜೀವನವನ್ನು ವರ್ಣಿಸಿರುವನು. ಮೈಸೂರು ಸಂಸ್ಥಾನಕ್ಕೆ ಸೇರಿದ ಹಾಸನ

ಜಿಲ್ಲೆಯಲ್ಲಿರುವ ಶ್ರವಣಬೆಳಗೊಳ ಎಂಬ ಬೆಟ್ಟದಮೇಲೆ ಬಹು ದೊಡ್ಡದೂ ಸುಂದರವೂ ಆದ ಗೊಮ್ಮಟೇಶ್ವರ ಮೂರ್ತಿಯನ್ನು ಇವನೇ ಸ್ಥಾಪಿಸಿದನು. ಇವನ ಆಯುಷ್ಯದಲ್ಲಿ ಚಾಲುಕ್ಯರಿಗೂ ಚೋಳರಿಗೂ ಅನೇಕ ಕಾಳಗ ಗಳಾದವು. ಜೈನಮತದವನಿದ್ದರೂ ಇವನು ಯಾವ ಅನ್ಯಮತದವರನ್ನೂ ತುಚ್ಛ ಮಾಡಲಿಲ್ಲ.

ಇವನು ಶ್ರವಣಬೆಳಗೊಳದಲ್ಲಿ ಸ್ಥಾಪಿಸಿದ ಗೊಮ್ಮಟೇಶ್ವರ ಮೂರ್ತಿಯೆಂದರೆ, ಸೌಂದರ್ಯದ ರಾಸಿ. ಭವ್ಯತೆಯ ನಿವಾಸ. ಇದನ್ನು ನೋಡಲಿಕ್ಕೆಂದು ಈಗಲೂ ಚೀನ-ತಿಬೇಟಗಳಿಂದ ಜನರು ಬರುವರು. ಹಿಂದುಸ್ಥಾನದಲ್ಲಿಯ ಜೈನರ ಎಲ್ಲ ಕ್ಷೇತ್ರಗಳಲ್ಲಿ ಅತ್ಯಂತ ಶ್ರೇಷ್ಠವಾಗಿದೆ. ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿದೆ.

---

## ೭

# ಸಳನ ಭಾಗ್ಯ

## ( ಪೊಯ್+ಸಳ )

( ಕ್ರಿ. ಶ. ೧೦೦೬ )

[ಸಳನು ಹೊಯ್ಸಳ ರಾಜರ ಮೂಲಪುರುಷ. ಇವನಿಂದಲೇ ಆದು ಮೊಳೆದು ಬೆಳೆಯಿತು. ಸಳನ ವಿಷಯುದಲ್ಲಿದ್ದ ಒಂದು ಕತೆಯಿದು. ಇದು ಎಪಿಗ್ರಾಫಿಕಾ ಕರ್ನಾಟಕಾ ಎಂಬುವ ಪುಸ್ತಕದಲ್ಲಿ ಬಂದಿದೆ. ]

ಸಳನು ಸೋಮವಂಶಕ್ಕೆ ಸಂಬಂಧಿಸಿದ ಯದುಕುಲದವನು. ಇವನು ಉತ್ತರದಿಂದ ಬಂದು ಶಶಕಪುರಿ ( ಮೂಡಗೆರೆ ತಾಲೂಕಿನಲ್ಲಿಯ ಅಂಗಡಿ ) ಎಂಬಲ್ಲಿ ಇದ್ದನು. ಆಗ, ಅಂಗಡಿಯು ಒಂದು ಚಿಕ್ಕ ಹಳ್ಳಿ. ಸುತ್ತೆಲ್ಲ ಭಯಂಕರವಾದ ಕಾಡು. ಸಳನು ಬಹು ಶೂರನೂ ವ್ಯವಹಾರ ಚತುರನೂ ಇದ್ದುದರಿಂದ ಅಂಗಡಿ ಎಂಬ ಊರಿಗೆ ಗೌಡನಾಗಿ, ಕಾಡಿನಿಂದ ಊರೊಳಗೆ ಬಂದು ಹಾವಳಿ ನಡಿಸುವ ಕಾಡು ಮೃಗಗಳಿಂದ ಊರವರನ್ನು ಕಾಯುತ್ತಿದ್ದನು. ಅವನ ಈ ಕಾರ್ಯಕ್ಕಾಗಿ ಅಂಗಡಿ ಊರವರು ಸಳನಿಗೆ ವರ್ಷಕ್ಕೆ ಇಂತಿಷ್ಟೆಂದು ಕಾಳು-ಕಡಿ ಕೊಡುತ್ತಿದ್ದರು.

ಹೀಗೆ, ಹಲವು ದಿನ ನಡೆಯುತ್ತಿರಲು, ಸಳನಲ್ಲಿ ಕಾಳು-ಕಡಿ ಬಹಳ ಕೂಡುಬಿದ್ದವು. ಆಗ, ತನ್ನ ಊರಿನ ರಕ್ಷಣೆಗಾಗಿ ಸಳನು ಒಂದು ಚಿಕ್ಕ ದಂಡನ್ನು ಕಟ್ಟಿದನು. ಇವನು ಮತದಿಂದ ಜೈನನು. ಇವನ ಗುರುಗಳು ಸುದತ್ತಯತಿ ಎಂಬವರು. ಸಳನಿಗೆ ಗುರುಗಳಲ್ಲಿ ಬಹಳ ಆದರ. ಒಂದು ದಿನ ಅಂಗಡಿಯ ವಸಂತಮ್ಮನ ಗುಡಿಯಲ್ಲಿ ಗುರುಗಳಿಂದ ಧರ್ಮದ ವಿಷಯವನ್ನು ಕೇಳುತ್ತ ಕುಳಿತಾಗ, ಸುದತ್ತಸಿದ್ಧಮುನಿಗಳು ದೂರದಲ್ಲಿ ಒಂದು ಹುಲಿಯು ಮೊಲವನ್ನು ಬೆನ್ನಟ್ಟಿ ಭರದಿಂದ ಓಡುತ್ತಿರುವುದನ್ನು ಕಂಡರು. ಹುಲಿಯ ಬಾಯಿಗೆ ಸಿಕ್ಕ ಮೊಲವು ಸಾಯುವುದೆಂದು ಅಂದುಕೊಂಡು, ತಮ್ಮ ಧರ್ಮ-ಶ್ರವಣದಲ್ಲಿ ಮನವಿಟ್ಟು ಕುಳಿತಿರುವ ಶಿಷ್ಯನಾದ ಸಳನನ್ನು ಕುರಿತು 'ಅದಂ ಪೊಯ್‌ಸಳ' ಎಂದರು. ಗುರುಗಳ ಬಾಯಿಂದ ಈ ಮಾತು ಹೊರಡುವದೇ ತಡ, ಸಳನು ಲಗುಬಗೆಯಿಂದ ತಾನು ಓಡಿ, ಹುಲಿಯ ಬೆನ್ನುಹತ್ತಿ ತನ್ನ ಕೈಯಲ್ಲಿಯ ಕಠಾರಿಯಿಂದ ಅದನ್ನು ಸೆಳೆದು, ಲೀಲೆಯಿಂದ ಅದನ್ನೆತ್ತಿ ಹಿಡಿದು ಗುರುಗಳಿಗೆ ತೋರಿಸಿದನು. ಶಿಷ್ಯನ ಶೌರ್ಯವನ್ನು ಕಣ್ಣಾರೆ ಕಂಡ ಸುದತ್ತಯತಿಗಳಿಗೆ ಪರಮಾನಂದವಾಯಿತು. ತಮ್ಮ ಶಿಷ್ಯನಿಗೆ ಉತ್ತರೋತ್ತರ ಯಶಸ್ಸಾಗಲೆಂದು ಹಾಡಿ ಹರಿಸಿದರು. ಮುಂದೆ, ಅವನು ಘಟ್ಟಿಗಳಲ್ಲಿಯ ಚಿಕ್ಕ ಚಿಕ್ಕ ನಾಯಕರನ್ನು ಗೆದ್ದು, ಮಲೆಪರ ಅಂದರೆ ಮಲೆನಾಡಿನವರಿಗೆ ಅರಸನಾದನು.

ಆ ಕಾಲಕ್ಕೆ ಜನರಲ್ಲಿ ದೇವರು-ದಿಂಡರು, ಧರ್ಮ-ಕರ್ಮಗಳಲ್ಲಿ ಶ್ರದ್ಧೆ ಹೆಚ್ಚಾಗಿತ್ತು. ಸುದತ್ತಯತಿಗಳಂತೂ ಅಂಗಡಿ ಊರವರಿಗೆ ದೇವರಂತಿದ್ದರು. ಜನರು ಅವರನ್ನು ಕೇಳದೆ ಯಾವ ಕೆಲಸಗಳನ್ನೂ ನೆರವೇರಿಸುತ್ತಿರಲಿಲ್ಲ. ಯತಿಗಳಲ್ಲಿ ವಿಲಕ್ಷಣವಾದ ತೇಜಸ್ಸು ಬೆಳಗುತ್ತಿದ್ದುದರಿಂದ ಅವರಾಡಿದ ಮಾತಿಗೆ ಯಾರೂ ಇದಿರಾಡುತ್ತಿರಲಿಲ್ಲ. ಅವರು ಜನರಿಂದ ಸಳನಿಗೆ ಎಲ್ಲ ಬಗೆಯ ಸಹಾಯವನ್ನೊದಗಿಸಿಕೊಟ್ಟರು. ಬರಬರುತ್ತ, ಸಳನು ತನ್ನ ದಂಡನ್ನು ಬೆಳೆಯಿಸಿಕೊಂಡು ಸುತ್ತುಮುತ್ತಿನ ನಾಡಿಗೆ ನಾಯಕನಾದನು.

ಆಗ, ಸಳನು ಇರುತ್ತಿರುವ ನಾಡು ದಕ್ಷಿಣದ ಚೋಳರಾಜರ ವಶದಲ್ಲಿತ್ತು. ಅವರ ಆಳಿಕೆಯಿಂದ ತನ್ನ ತಾಯಿನಾಡನ್ನು ಸ್ವತಂತ್ರಗೊಳಿಸಬೇಕೆಂದು ಸಳನು ಚಾಲುಕ್ಯರ ಸಹಾಯಪಡೆದು ಕಾದಿ, ತನ್ನ ನಾಡಿಗೆ

ಸ್ವಾತಂತ್ರ್ಯ ದೊರಕಿಸಿಕೊಟ್ಟನು. ಮೈಸೂರು ಸೀಮೆಯಿಂದಲೇ ಇವನು ಚೋಳರ ಆಳಿಕೆಯನ್ನು ಕಿತ್ತೊಗೆದನು. ಹೊಯ್ಸಳ ವಂಶದವರು ಸುಮಾರು ೯೦ ವರ್ಷ ಆಳಿದರು. ಮೊದಲು ಅವರ ರಾಜಧಾನಿ ಬೇಲೂರು ಇದ್ದು, ಮುಂದೆ ದ್ವಾರಸಮುದ್ರವಾಯಿತು.

---

## ೮

# ಆಹವಮಲ್ಲ ಸೋಮೇಶ್ವರನ ಜಲಸಮಾಧಿ

( ಕ್ರಿ. ಶ. ೧೦೪೦-೧೦೬೯ )

[ ಚಾಲುಕ್ಯರ ೧ನೆಯ ಸೋಮೇಶ್ವರನು ಕಲ್ಯಾಣದ ಚಾಲುಕ್ಯ ವಂಶದವನು. ಪ್ರಸಿದ್ಧನಾದ ೬ನೆಯ ವಿಕ್ರಮಾದಿತ್ಯನ ತಂದೆ. ಇವನಿಗೆ ಕೆಟ್ಟ ಜ್ವರ ಬಂದು, ಅವು ಕೊನೆಯವರೆಗೆ ಕಡಿಮೆಯಾಗದ್ದರಿಂದ ಕುರುವತ್ತಿ (ಬಳ್ಳಾರಿ ಜಿಲ್ಲೆ)ಯ ಹತ್ತರ ತುಂಗಭದ್ರಾನದಿಯಲ್ಲಿ ಜಲಸಮಾಧಿ ಹೊಂದಿದ ದೃಶ್ಯ. ಬಿಲ್ಹಣ ಕವಿಯ ವಿಕ್ರಮಾಂಕ ದೇವಚರಿತ ಎಂಬ ಸಂಸ್ಕೃತ ಕಾವ್ಯದಿಂದ ಪುಟ ೩೩. ]

೧ನೆಯ ಸೋಮೇಶ್ವರನು ಚೋಳರ ವೀರರಾಜೇಂದ್ರನೊಡನೆ ಯುದ್ಧ ನಡಿಸಬೇಕೆಂದು ಯೋಚಿಸುವಷ್ಟರಲ್ಲಿ ಅವನಿಗೆ ಕೆಟ್ಟ ಜ್ವರ ಬಂದವು. ರಾಜ ವೈದ್ಯರಿಂದ ಎಷ್ಟು ಉಪಚಾರ ನಡಿಸಿದರೂ ಜ್ವರ ಇಳಿಯದೆ ಏರುತ್ತ ಹೋದವು. ಮೈ ಎಂಬುದು ಕೆಂಡದಂತಾಯಿತು. ಮೈಗೆ ತಂಪುಗೊಳಿಸುವ ಗಂಧವನ್ನು ಬಳಿದು ಎಣ್ಣೆ ಹಚ್ಚಿ ಪ್ರಯತ್ನಿಸಿದ್ದಾಯಿತು. ಯಾವುದರಿಂದಲೂ ಕಡಿಮೆಯಾಗವೆ ಜೀವದಿಂದಿರುವದೇ ಅಸಹ್ಯವಾಯಿತು. ಆಗ ಸೋಮೇಶ್ವರನು “ ಈ ಜನುಮವು ನೀರು ಮೇಲಣ ಗುಳ್ಳೆಯಂತೆ. ಈಗ ಕಾಣಿಸಿ ಇನ್ನೊಂದು ಗಳಿಗ್ಗೆ ಅಳಿಯುವಂಥದು. ನನಗೆ ಪಾರ್ವತೀಶ್ವರನಾದ ಈಶ್ವರನೇ ಗತಿ ಹೊರ್ತು ಇನ್ನಾರಿಲ್ಲ. ಹೀಗೆ, ಹಾಸಿಗೆಯ ಮೇಲೆ ಹೊರಳುತ್ತ ಸಾಯುವದಕ್ಕಿಂತ, ತುಂಗಭದ್ರಾ ತಾಯಿಯ ತೊಡೆಯಮೇಲೆ ಮಲಗಿ, ಶಿವ

ನನ್ನು ಸ್ಮರಿಸುತ್ತ ದೇಹ ಬಿಡುವದೊಳ್ಳಿತು. ಇರುವವರೆಗೆ ಕೈಲಾದಷ್ಟು ಶ್ರೀ ಕಂಠನ ಸೇವೆಯಲ್ಲಿ ಕಾಲಕಳೆದುದಾಯಿತು. ಇನ್ನು, ಎಲ್ಲಿಯಾದರೂ ಹೇಗಾದರೂ ದೇಹವನ್ನು ಬಿಡುವದಕ್ಕಿಂತ ಪುಣ್ಯನದಿಯಲ್ಲಿ ದೇಹಬಿಡುವುದೇ ವಿಹಿತವೆಂದು ಮಂತ್ರಿಗಳಿಗೆ ತಿಳಿಸಿದನು."

ಆಗ, ತನ್ನ ಹೆಂಡಿರು, ಮಕ್ಕಳು, ಮಂತ್ರಿಗಳು, ಸೈನಿಕರು, ಇವರನ್ನೆಲ್ಲ ಕಟ್ಟಿಕೊಂಡು ತುಂಗಾತೀರದಲ್ಲಿರುವ ಕುರವತ್ತಿಗೆ ನಡೆದನು. ಸುತ್ತುಮುತ್ತಿನ ಹಳ್ಳಿಗಳಲ್ಲೆಲ್ಲ ಅರಸನು ಜಲಸಮಾಧಿಯನ್ನು ತೆಗೆದುಕೊಳ್ಳುವನೆಂಬ ದಟ್ಟವಾರ್ತೆಯು ಹಬ್ಬಿತು. ದೂರದೂರಿಂದ ಜನರು ನೋಡಲಿಕ್ಕೆಂದು ಗುಂಪುಗುಂಪಾಗಿ ನೆರಹತ್ತಿದರು. ದೇಹವನ್ನು ಬಿಡುವ ದಿನ ರಾತ್ರಿ ಮೂರು ನಾಲ್ಕು ಗಂಟೆಯ ಹೊತ್ತಿಗೆ ಆ ನೋಟವನ್ನು ನೋಡಲಿಕ್ಕೆಂದು ಜನರು ಸ್ಥಳ ಹಿಡಿದುಕೊಂಡು ಕುಳ್ಳಿರಹತ್ತಿದರು.

ಅರಸನು ಬೆಳಿಗ್ಗೆ ಸ್ನಾನಮಾಡಿ, ಬೆಳಗಿನ ತನ್ನ ಧಾರ್ಮಿಕ ವಿಧಿಗಳನ್ನೆಲ್ಲ ಮುಗಿಸಿಕೊಂಡನು. ತಮ್ಮನ್ನು ಇನ್ನು ಅರಸನು ಅಗಲುವನೆಂದು ಎಲ್ಲರ ಮುಖಗಳು ಬಾಡಿದ್ದವು. ಹೆಂಡಿರು-ಮಕ್ಕಳು, ಅತ್ಯಂತ ಪ್ರೀತಿಯ ಮಂತ್ರಿಗಳು, ಆಳು-ಹೋಳು ಮೊದಲಾದವರ ಕಣ್ಣುಗಳಲ್ಲಿ ಅಖಂಡವಾಗಿ ನೀರು ಸುರಿದು, ಅವರ ಮುಖಗಳು ದುಃಖದಿಂದ ಕೆಂಪೇರಿದ್ದವು.

ಅರಮನೆಯ ಜನರು, ಮಂತ್ರಿಗಳು, ಬ್ರಾಹ್ಮಣರು ಇವರನ್ನೆಲ್ಲ ಕೂಡಿಕೊಂಡು ಅರಸನು ಪಲ್ಲಕ್ಕಿಯಲ್ಲಿ ಕುಳಿತು ನದಿಯ ದಂಡೆಗೆ ಬಂದನು. ತನ್ನ ವಸ್ತ್ರಗಳನ್ನೆಲ್ಲ ತೆಗೆದು, ಮೈಮೇಲೆ ಒಂದು ಶಲ್ಯೆಯನ್ನು ಹೊತ್ತುಕೊಂಡು, ಮಂತ್ರಿಗಳಿಂದ ಕೈಹಿಡಿಸಿಕೊಂಡು ತುಂಗಾ ನದಿಯಲ್ಲಿಳಿದನು. ಆಗ, ತನ್ನ ಕೈಯಿಂದಲೇ ಬಡಬಗ್ಗರಿಗೂ ವಿದ್ಯಾವಂತರಿಗೂ ಸಜ್ಜನರಿಗೂ ಮನದಣಿ ದಾನ ಮಾಡಿದನು. ಪರಮಾತ್ಮನನ್ನು ಧ್ಯಾನಿಸುತ್ತಲೇ ನೀರಲ್ಲಿ ಮುಂದೆ ಮುಂದೆ ನಡೆದನು. ಅರಸನು ಮುನ್ನಡೆದಂತೆಲ್ಲ ನೋಡುತ್ತಿದ್ದ ಹಾಗೆಯೇ ಜನರ ಕಣ್ಣುಗಳಿಂದ ಗಲ್ಲಗಳ ಮೇಲೆ ಧಾರೆ ಧಾರೆಯಾಗಿ ನೀರು ಹರಿಯುತ್ತಿದ್ದವು. ಅರಮನೆಯ ರಾಣಿಯವರ ದುಃಖಕ್ಕಂತೂ ಅಳತೆಯೇ ಇರಲಿಲ್ಲ. ಎಲ್ಲರ ಕಣ್ಣುಗಳು ನೀರೊಳಗೆ ಇಳಿದ ಅರಸನ ಮುಖ, ಕಣ್ಣು, ಮೈ-ಕೈಗಳ ಚಟುವಟಿಕೆಗಳಲ್ಲಿ ಕೀಲಿಸಿದಂತಾಗಿದ್ದವು. ಕುತ್ತಿಗೆಮಟ ನೀರಲ್ಲಿ ಹೋಗಿ,

ಅಲ್ಲಿ ನಿಂತು ಅತ್ಯಂತ ಭಕ್ತಿಯಿಂದ ಅರಸನು ಸೂರ್ಯನಿಗೆ ನಮಸ್ಕಾರ ಮಾಡಿದನು. ಬಾಯಿಂದ ಏನೇನೊ ನುಡಿದು, ಕಣ್ಮುಚ್ಚಿ ಬೇಡಿಕೊಂಡನು. ತರುವಾಯ ನೆರೆದ ತನ್ನ ಪ್ರಜೆಗಳನ್ನೆಲ್ಲ ಒಮ್ಮೆ ಸುತ್ತಲೂ ನೋಡಿ, ಅವರೆಲ್ಲರಿಗೂ ಕೈ ಮುಗಿದು, 'ಹರಹರ ಮಹಾದೇವ' ಎಂಬುವ ಉಚ್ಚಾರ ಮಾಡಿ ನೀರೊಳಗೆ ಮುಳುಗಿ ಪ್ರಾಣಬಿಟ್ಟನು.

ಸೋಮೇಶ್ವರನು ಮುಳುಗಿ ಪ್ರಾಣಬಿಟ್ಟರೂ ಅವನು ಮುಳುಗಿದ ನೋಟವನ್ನು ಮೈಯೆಲ್ಲ ಕಣ್ಣು ಮಾಡಿ ನೋಡಿದ ಜನರಿಗೆ ಹಲವು ದಿನ ಆ ನೋಟದಲ್ಲಿಯೇ ಮನಸು ಮುಳುಗಿದ್ದಿತು. ಹಲವು ದಿನಗಳವರೆಗೆ ಅದೇ ವಿಷಯವು ಜನರ ಬಾಯಲ್ಲಿತ್ತು.

## ೬

## ತ್ರಿಭುವನಮಲ್ಲ
# ಚಾಲುಕ್ಯ ವಿಕ್ರಮಾದಿತ್ಯ

(ಕ್ರಿ. ಶ. ೧೦೭೬–೧೧೨೬)

[ ಇವನು ಕಲ್ಯಾಣದಲ್ಲಿ ಆಳುತ್ತಿದ್ದ; ಚಾಲುಕ್ಯ ತೈಲಪನ ಮನೆತನದವನು. ತಂದೆಯ ಹೆಸರು ಸೋಮೇಶ್ವರ. ಮಕ್ಕಳಿರದ್ದರಿಂದ ಸೋಮೇಶ್ವರನು ಈಶ್ವರನ ಸೇವೆ ಮಾಡಬೇಕೆಂದು ರಾಜ್ಯವನ್ನು ಮಂತ್ರಿಗಳಿಗೆ ಒಪ್ಪಿಸಿ, ತಾನು ದೇವರ ಸೇವೆ ನಡಿಸಿದನು. ಈಶ್ವರನು ಇವನ ತಪಸ್ಸಿಗೆ ಮೆಚ್ಚಿ ಮುತ್ತಿನಂಥ ಮೂವರು ಗಂಡು ಮಕ್ಕಳಾಗುವರೆಂದೂ ನಡುವಿನವನು ದಿಗ್ವಿಜಯಿಯಾಗುವನೆಂದೂ ವರ ಕೊಟ್ಟನು. ಈ ವಿಷಯವನ್ನು ಸಂಸ್ಕೃತ ವಿಕ್ರಮಾಂಕದೇವಚರಿತ, ಕನ್ನಡ ಕರ್ನಾಟಕಸಾಮ್ರಾಜ್ಯ ಈ ಪುಸ್ತಕಗಳಿಂದ ಸಂಗ್ರಹಿಸಲಾಗಿದೆ. ]

ವಿಕ್ರಮಾದಿತ್ಯನು ಸೋಮೇಶ್ವರನ ನಡುವಿನ ಮಗನು. ಇವನು ತಾಯಿಯ ಹೊಟ್ಟೆಯಲ್ಲಿರುವಾಗ ಆಕೆಗೆ ಆನೆಗಳ ಮೇಲೆ ಕಾಲಿಡಬೇಕೆಂದೂ ದಿಕ್ಕುಗಳೆಂಬ ಹೆಂಗಸರಿಂದ ಕಾಲು ಒತ್ತಿಸಿಕೊಳ್ಳಬೇಕೆಂದೂ ಹದನವಾದ ಕತ್ತಿಯನೀರು ಕುಡಿಯಬೇಕೆಂದೂ ಬಯಕೆಗಳಾಗುತ್ತಿದ್ದವಂತೆ. ಎರಡನೆಯ ಸೋಮೇಶ್ವರನ ತರುವಾಯ ವಿಕ್ರಮನು ಹುಟ್ಟಿದನು; ಆಮೇಲೆ ಜಯಸಿಂಹನು ಹುಟ್ಟಿದನು.

ಇವರಲ್ಲಿ ವಿಕ್ರಮನು ಅತ್ಯಂತ ತೇಜಸ್ವಿಯಾಗಿದ್ದನು. ಅಣ್ಣತಮ್ಮಂದಿರೊಡನೆ ವಿದ್ಯೆ ಕಲಿಯುತ್ತಿರುವಾಗ ಪ್ರತಿಯೊಂದು ವಿದ್ಯೆಯಲ್ಲಿ ಮುಂದಾಗಿರುತ್ತಿದ್ದನು. ಅಕ್ಷರವಿದ್ಯೆ, ಶಸ್ತ್ರವಿದ್ಯೆಯಲ್ಲಿ ತನ್ನ ಜಾಣತನವನ್ನು ಚೆನ್ನಾಗಿ ತೋರಿಸಿದನು. ಈತನ ಪರಾಕ್ರಮ, ಜಾಣತನ, ಸದ್ಗುಣಗಳನ್ನು ನೋಡಿ ಸಂತುಷ್ಟನಾದ ತಂದೆಯು ವಿಕ್ರಮನನ್ನೇ ಯುವರಾಜನನ್ನಾಗಿ ಮಾಡಬೇಕೆಂದು ಹವಣಿಸಿದ್ದನು; ಆದರೆ, ತನಗಿಂತಲೂ ಹಿರಿಯನಾದ ಅಣ್ಣ ಸೋಮೇಶ್ವರನಿರುತಿರಲು ತನಗೆ ಯುವರಾಜಪದವು ಬೇಡವೆಂದನು.

ಯುವರಾಜನಾದ ಎರಡನೆಯ ಸೋಮೇಶ್ವರನು ಕಲ್ಯಾಣದಲ್ಲಿರುತ್ತಿದ್ದ; ವಿಕ್ರಮನು ತಂದೆಯೊಡನೆ ಆಗಾಗ ಯುದ್ಧಗಳಲ್ಲಿ ಸೇರುತ್ತಿದ್ದನು. ಅಣ್ಣೀಗೇರಿಯ ನಾಡಿನಲ್ಲಿ ಚೋಳರಾಜನೊಡನೆ ಯುದ್ಧ ನಡೆದಾಗ, ವಿಕ್ರಮನು ತನ್ನ ಪರಾಕ್ರಮವನ್ನು ತಂದೆಗೆ ತೋರಿಸಿದನು. ಮತ್ತು ಚೋಳರಾಜನನ್ನು ಬರ್ಚಿಯಿಂದ ತಿವಿದು, ಕತ್ತಿಯಿಂದ ಅವನ ರುಂಡ ಹಾರಿಸಿದನು ಆಗ, ಚೋಳರಾಜನ ನೂರಾರು ಆನೆಗಳು, ಸಾವಿರಾರು ಕುದುರೆಗಳು, ಅವನಲ್ಲಿದ್ದ ಸಂಪತ್ತು ಇಷ್ಟೆಲ್ಲ ವಿಕ್ರಮನ ವಶಕ್ಕೆ ಬಂದವು.

ವಿಕ್ರಮನಿಗೆ ಅದೇ ತಾನೇ ೨೦-೨೨ವರ್ಷ. ಮೈಯಲ್ಲಿ ರಕ್ತವು ಉಕ್ಕುತ್ತಿತ್ತು. ಸುಮ್ಮನೆ ಕೈಮುಚ್ಚಿಕೊಂಡು ಕುಳ್ಳಿರುವದೆಂದರೆ, ಅವನ ಜೀವದ ಸುತ್ತು ಬರುತ್ತಿತ್ತು; ಆದುದರಿಂದ, ತಂದೆಯ ಅಪ್ಪಣೆಯಿಂದ ಕರ್ನಾಟಕ ದಂಡನ್ನು ಕಟ್ಟಿಕೊಂಡು, ಉತ್ತರಕ್ಕೆ ನಡೆದನು. ಅಲ್ಲಿ ಗುರ್ಜರರಾಜನನ್ನು ಕುಕ್ಕಿ, ಮಾಳವ ಅರಸನಿಗೆ ನೆರವಾಗಿ, ಕನೋಜಕ್ಕೆ ನಡೆದನು. ಅಲ್ಲಿಯ ಅರಸನು ಕರ್ನಾಟಕ ಬಲವನ್ನು ನೋಡಿ ಓಡಿಹೋಗಿದ್ದರಿಂದ, ಚಂದ್ರದೇವನೆಂಬ ಕನ್ನಡವೀರನನ್ನು ಪಟ್ಟಕ್ಕೆ ಕೂಡ್ರಿಸಿ, ಬಂಗಾಲಕ್ಕೆ ಸಾಗಿದನು. ಬಂಗಾಲ, ಬಿಹಾರ, ನೇಪಾಳ ದೇಶಗಳನ್ನು ಕರ್ನಾಟಕ ದಂಡಿನ ಸಹಾಯದಿಂದ ಗೆದ್ದು, ಅದಕ್ಕೆಲ್ಲ ತನ್ನ ದಂಡನಾಯಕನಾದ ನನ್ನಿಯದೇವ ಎಂಬುವನನ್ನು ಸಾಮಂತನನ್ನಾಗಿ ಅಲ್ಲಿಟ್ಟು ತಿರುಗಿ ಕಲ್ಯಾಣಕ್ಕೆ ಬಂದನು. ಇದರಿಂದ, ಬಂಗಾಲದಲ್ಲಿ ಹಲವು ಕನ್ನಡ ಕುಟುಂಬದವರು ಆಗ ಹೋಗಿ ಇದ್ದರು.

ಮುಂದೆ ವಿಕ್ರಮನು ದಕ್ಷಿಣಕ್ಕೆ ಸಾಗಿ ಚೋಳರಾಜನ ಗಂಗೈಕೊಂಡ ಎಂಬ ಪಟ್ಟಣವನ್ನು ಮುತ್ತಿದಾಗ ಅವನು ಸೋತು ಮೊರೆಹೊಕ್ಕನು. ಕೇರಳ

ರಾಜನೂ ಕಾಲಿಗೆ ಬಿದ್ದನು. ಅವರಿಬ್ಬರಿಂದ ಕಪ್ಪವನ್ನು ಎತ್ತಿಕೊಂಡು ವಿಜಯೋತ್ಸಾಹದಿಂದ ಕಲ್ಯಾಣಕ್ಕೆ ಬಂದನು. ಶತ್ರು ರಾಜ್ಯಗಳನ್ನು ಸುಲಿದು ತಂದ ಸಂಪತ್ತಿಯನ್ನೆಲ್ಲ ತಂದೆಗೆ ಒಪ್ಪಿಸಿದನು. ಮಗನ ಶೌರ್ಯ ಸಾಹಸ ಗಳನ್ನು ಕಣ್ತುಂಬ ಕಂಡು ಆನಂದದಿಂದ ಕಂಬನಿಗಳನ್ನು ಉದುರಿಸಿದನು. ಮುಂದೆ ಸ್ವಲ್ಪ ದಿನಗಳಲ್ಲಿಯೇ ತಂದೆಯಾದ ಸೋಮೇಶ್ವರನು ಜ್ವರದ ತಾಪ ತಡೆಯದೆ ತುಂಗಭದ್ರಾನದಿಯಲ್ಲಿ ಪ್ರಾಣಬಿಟ್ಟನು.

ಅಣ್ಣನಿಂದ ಎರಡನೆಯ ಸೋಮೇಶ್ವರನಿಗೆ ಪಟ್ಟವಾಯಿತು. ತಂದೆ ಇರು ವಾಗ ವಿಕ್ರಮನು ಬನವಾಸಿ ಮಂಡಲಕ್ಕೆ ಅಧಿಪತಿಯಾಗಿದ್ದನು. ತನ್ನ ಕೈ ಯಲ್ಲಿ ಅಧಿಕಾರ ಬಂದೊಡನೆ ಸೋಮೇಶ್ವರನು ತಮ್ಮನನ್ನು ನೊಳಂಬ ವಾಡಿಯ ಮಂಡಲಕ್ಕೆ ಅಧಿಕಾರಿಯನ್ನಾಗಿ ನಿಯಮಿಸಿದನು. ಆ ಕಾಲಕ್ಕೆ ವಿಕ್ರಮನು ಕೆಲದಿನ ಬನವಾಸಿ, ಕೆಲದಿನ ಬಂಕಾಪೂರ-ಬಳ್ಳಿಗಾವಿಯಲ್ಲಿರು ತ್ತಿದ್ದನು. ವಿಕ್ರಮನು ಅಣ್ಣನಿಗೆ ರಾಜಕಾರ್ಯದಲ್ಲಿ ಎಲ್ಲ ಬಗೆಯಿಂದ ನೆರ ವಾಗುತ್ತಿದ್ದನು.

ಎರಡನೆಯ ಸೋಮೇಶ್ವರನು ಮುಂದೆ ತಮ್ಮಂದಿರ ವಿಷಯದಲ್ಲಿ ಬಹು ಮತ್ಸರಪಡಲಾರಂಭಿಸಿದನು. ವಿಕ್ರಮನನ್ನು ಕಂಡರಂತೂ ಅವನಿಗೆ ಆಗದಾ ಯಿತು ಅಣ್ಣನ ದ್ವೇಷದಿಂದ ವಿಕ್ರಮಾದಿತ್ಯ-ಜಯಸಿಂಹ ಇಬ್ಬರೂ ಒಂದಾ ದರು. ಅಣ್ಣನನ್ನು ಬಿಟ್ಟು, ಕೆಲದಿವನ ಇಬ್ಬರೂ ದಕ್ಷಿಣದಿಕ್ಕಿಗೆ ಸೈನ್ಯ ಕಟ್ಟಿ ಕೊಂಡು ಹೊರಟರು. ಆಗ, ತಮ್ಮಂದಿರನ್ನು ನೋಲಿಸಿ, ಅತ್ತಿಂದತ್ತ ಅಟ್ಟಿ ಬಿಡಬೇಕೆಂದು ಎರಡನೆಯ ಸೋಮೇಶ್ವರನು ದಂಡುಕೊಟ್ಟು ತನ್ನ ಪ್ರೀತಿಯ ದಂಡನಾಯಕರನ್ನು ಕಳಿಸಿದನು. ವಿಕ್ರಮನ ಮುಂದೆ ಅವರಿಗೆ ನಿಲ್ಲಲಿಕ್ಕಾಗದೆ ರಾಜಧಾನಿಗೆ ಮುಖ ಒಣಗಿಸಿಕೊಂಡು ಬಂದರು.

ಆಮೇಲೆ ವಿಕ್ರಮನು, ಕೊಂಕಣಕ್ಕೆ ಸಾಗಿ, ಅಲ್ಲಿಯ ಅರಸನಾದ ಜಯ ಕೇಶಿಯನ್ನು ಬಗ್ಗಿಸಿ, ಅಳುಪರ ಅರಸನನ್ನು ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡನು. ತರುವಾಯ ಚೋಳದೇಶಕ್ಕೆ ನಡೆದನು. ಸಮೀಪಕ್ಕೆ ಹೋದನಂತರ ವಿಕ್ರಮನು ಬರುವ ಸುದ್ದಿಯು ಚೋಳನಿಗೆ ಗೊತ್ತಾಯಿತು. ಅವನು ವಿಕ್ರಮನಿದ್ದಲ್ಲಿಗೆ ತನ್ನ ರಾಯಭಾರಿಯನ್ನು ಕಳಿಸಿದನು. ಚೋಳ ಅರಸನಾದ ರಾಜೇಂದ್ರನು ವಿಕ್ರಮನಿಗೆ ಭೆಟ್ಟಿಯಾಗಲಿಕ್ಕೆ ಬಂದನು. ಇಬ್ಬ

ರಿಗೂ ಮಾತುಕತೆಗಳು ನಡೆದು, ತನ್ನ ಮಗಳನ್ನು ವಿಕ್ರಮನಿಗೆ ಮದುವೆ ಮಾಡಿಕೊಟ್ಟು ಆಪ್ತನನ್ನಾಗಿ ಮಾಡಿಕೊಂಡನು.

ಆಗ, ಮುಂದುಗಾಣದೆ, ವಿಕ್ರಮನು ಅಲ್ಲಲ್ಲಿ ದಂಡೆತ್ತಿ ನಡೆದಿರುವಾಗ, ತನ್ನ ಮಾವನು ಸತ್ತ ಸುದ್ದಿಯು ಬಂದಿತು. ವೆಂಗಿಯ ಅರಸನಿಗೂ ಚೋಳರಿಗೂ ಮನಸು ಸರಿಯಾಗಿರದ್ದರಿಂದ ಅವನು ಚೋಳರ ರಾಜ್ಯವನ್ನು ಸೆಳೆಯುವ ಹಂಚಿಕೆಯಲ್ಲಿದ್ದನು. ಇಷ್ಟರಲ್ಲಿ ಚೋಳರಾಜನು ಕೊಲ್ಲಲ್ಪಟ್ಟನು; ಅದೇ ಸಂಧಿಯನ್ನು ಸಾಧಿಸಿ, ವೆಂಗಿಯ ಅರಸನು ಚೋಳರಾಜ್ಯಕ್ಕೆ ಹೋಗಿ, ತಾನೇ ಪಟ್ಟಕ್ಕೆ ಕುಳಿತನು. ಈ ಸುದ್ದಿಯು ವಿಕ್ರಮನಿಗೆ ತಿಳಿದೊಡನೆ, ವೆಂಗಿಯ ರಾಜನ ವಿರುದ್ಧ ಯುದ್ಧನಡೆಯಿಸುವ ಸಿದ್ಧತೆ ಮಾಡಿದನು. ಇದನ್ನೆಲ್ಲ ತಿಳಿದುಕೊಂಡವನಾದ ವೆಂಗಿಯ ಅರಸನು ವಿಕ್ರಮನ ಅಣ್ಣನಾದ ಎರಡನೆಯ ಸೋಮೇಶ್ವರನೊಡನೆ ಸ್ನೇಹ ಬೆಳೆಯಿಸಿದನು. ವೀರನಾದ ತಮ್ಮನನ್ನು ಇದೇ ಸಂಧಿಯಲ್ಲಿ ಮುರಿಯಬೇಕೆಂದು ಸೋಮೇಶ್ವರನು ಅವನನ್ನು ಕೂಡಿದನು. ಆ ಕಾಳಗದೊಳಗೆ ಇಬ್ಬರೂ ಸೋತರು. ವೆಂಗಿಯ ಅರಸನು ಓಡಿದನು. ಸೊಮೇಶ್ವರನು ತಮ್ಮನಿಗೆ ಸೆರೆಸಿಕ್ಕನು.

ಇಷ್ಟಾದನಂತರ, ವಿಕ್ರಮನು ಕಲ್ಯಾಣಕ್ಕೆ ನಡೆದು, ಎಲ್ಲರ ಅನುಮತಿ ಪಡೆದು ತಾನೇ ಯಾತಗಿರಿಯಲ್ಲಿ ಸಿಂಹಾಸನವನ್ನೇರಿದನು. ಅದಕ್ಕೆ ದಿಗ್ದೇಶಗಳಿಂದ ಸಾಮಂತರು ಬಂದಿದ್ದರು. (ಇ. ಸ. ೧೦೭೬) ಆಗ ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿದನು. ತನ್ನ ಹೆಸರಿನ ಶಕವನ್ನು ಪ್ರಾರಂಭಿಸಿದನು.

ಹಿಂದುಸ್ಥಾನದಲ್ಲಿದ್ದ ಆ ಕಾಲದ ಅಂಗ, ವಂಗ, ಕಲಿಂಗ, ಮಗಧ, ಗೌಡ, ಪಾಂಚಾಲ, ನೇಪಾಳ, ಮಾಳವ, ಗುರ್ಜರ, ಬರ್ಬರ, ಸೌರಾಷ್ಟ್ರ, ಲಾಟ, ಕರಹಾಟ, ಚೋಳ, ಚೇದಿ, ಸಿಂಧು, ದ್ರಾವಿಲ, ಆಂಧ್ರ, ತುರುಷ್ಕ, ಅಲ್ಲದೆ ಕರ್ನಾಟಕದಲ್ಲಿಯ ಕದಂಬ, ಹೊಯ್ಸಳ, ವೀರಪಾಂಡ್ಯ, ಕಲಚೂರ್ಯ ಗುತ್ತ, ಸಿಂಧ, ರಟ್ಟ, ರಾಷ್ಟ್ರಕೂಟ ಮುಂತಾದ ಅರಸರನ್ನೆಲ್ಲ ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡಿದ್ದನು. ಕರಹಾಟಕ್ಕೆ ಹೋಗಿ, ಚಂದಲದೇವಿಯನ್ನು ಸ್ವಯಂವರದೊಳಗೆ ಮದುವೆಯಾದನು.

ತನ್ನ ಆಳಿಕೆಯಲ್ಲಿ ವಿಕ್ರಮನು ತಮ್ಮನಾದ ಜಯಸಿಂಹನಿಗೆ ಬನವಾಸಿ ಮಂಡಲವನ್ನು ಆಳಲಿಕ್ಕೆ ಕೊಟ್ಟಿದ್ದನು. ಜಯಸಿಂಹನಾದರೂ ಅಣ್ಣನಂತೆ

ಶೂರನಿದ್ದನು. ಅವನು ಬಾಣಗಳನ್ನು ಬಿಟ್ಟರೆ, ಶತ್ರುಗಳ ಎದೆಯೊಳಗಿಂದ ಪಾರಾಗಿ ಹೋಗುತ್ತಿದ್ದವಂತೆ; ಆದರೂ ಇವನೇನೂ ಅಣ್ಣನಿಗೆ ಈಡಿರಲಿಲ್ಲ; ಹೀಗಿದ್ದರೂ ಜಯಸಿಂಹನಿಗೆ ಅಣ್ಣನ ವಿಷಯದಲ್ಲಿ ದುರ್ಬುದ್ಧಿಯು ಹುಟ್ಟಿ ಅವನ ವಿರುದ್ಧ ದಾಳಿ ನಡಿಸುವ ವಿಚಾರ ನಡಿಸಿದನು. ಇದೆಲ್ಲವೂ ಜನರಿಂದ ವಿಕ್ರಮನಿಗೆ ತಿಳಿಯಿತು. ರಾಜ್ಯದೊಳಗೆ ಜನರಿಗೆ ಬೇಡಾದ ಕಾರ್ಯ ನಡಿಸ ಬೇಡವೆಂದೂ ಬುದ್ಧಿ ಹೇಳಿದನು. ಜನರಿಂದ ಹೇಳಿಸಿದನು. ಅದಾವುದನ್ನೂ ಕೇಳಲಿಲ್ಲ. ಕೃಷ್ಣಾನದಿಯ ದಂಡೆಯಲ್ಲಿ ಇಬ್ಬರಿಗೂ ಯುದ್ಧ ನಡೆಯುವದು ನಿಶ್ಚಯವಾಯಿತು. ಜಯಸಿಂಹನಿಗೆ ಹಿಂದಕ್ಕೆ ವಿಕ್ರಮನೇ ಕಾಣಿಕೆಯಾಗಿ ಕೊಟ್ಟ ಹಲವು ಮದ್ದಾನೆಗಳಿದ್ದವು. ಅವು ವಿಕ್ರಮನ ದಂಡಿನಲ್ಲಿ ಬಹಳ ಜನರನ್ನು ಕೊಂದು ಕೋಲಾಹಲ ಎಬ್ಬಿಸಿದವು; ಆಗ, ಸ್ವತಃ ವಿಕ್ರಮಾ ದಿತ್ಯನೇ ಕೈಯಲ್ಲಿ ಶಸ್ತ್ರಹಿಡಿದು ಹೋರಾಡಿ ತಮ್ಮನನ್ನು ಸೋಲಿಸಿದನು. ಜಯಸಿಂಹನು ಸೆರೆಯಾದನು, ಅಣ್ಣನ ಮೇಲೆ ಕೈ ಎತ್ತಿ ನಾಚಿಕೆಗೀಡಾ ದನು. ವಿಕ್ರಮನು ಅವನನನ್ನು ಕ್ಷಮಿಸಿ, ಎಂದಿನಂತೆ ಪ್ರೀತಿಯಿಂದ ನಡಿಸಿ ಕೊಂಡನು.

ಇವನ ಒಂಭತ್ತು ಮಂದಿ ಅರಸಿಯರೂ ಬೇರೆಬೇರೆ ನಾಡುಗಳನ್ನು ಆಳುತ್ತಿದ್ದರು. ಇವನ ಓಲಗದಲ್ಲಿ ಬಿಲ್ಹಣನೆಂಬ ಸಂಸ್ಕೃತ ಕವಿಯೂ, ಕರ್ಪ ರಸ, ಚಂದ್ರರಾಜ, ಮಲ್ಲಿಕಾರ್ಜುನ, ಕೀರ್ತಿವರ್ಮ ಎಂಬ ಕನ್ನಡ ಕವಿಗಳೂ ವಿಜ್ಞಾನೇಶ್ವರ ಎಂಬ ಧರ್ಮಶಾಸ್ತ್ರ ಪಂಡಿತನೂ ಇದ್ದರು. ಇವನು ಸುಮಾರು ೫೦ ವರ್ಷ ಆಳಿದನು. ತಾನು ವೈದಿಕ ಮತಕ್ಕೆ ಸೇರಿದ್ದರೂ ಆ ಕಾಲಕ್ಕೆ ಜೈನ ಮುಂತಾದ ಮತದವರನ್ನು ಪ್ರೀತಿಯಿಂದ ನೋಡುತ್ತಿದ್ದನು. ಅವರಿಗಾಗಿ ಬಳ್ಳಿಗಾವಿ, ಅಣ್ಣೀಗೇರಿಗಳಲ್ಲಿ ಬಸ್ತಿಗಳನ್ನು ಕಟ್ಟಿಸಿದನು. ಸಾವಿರಾರು ದೇವಾಲಯಗಳಿಗೆ ಇವನು ಭೂಮಿಗಳನ್ನು ದಾನ ಕೊಟ್ಟನು. ಇಡೀ ಹಿಂದುಸ್ಥಾನದಲ್ಲೆಲ್ಲ ಕನ್ನಡಿಗರ ಧ್ವಜವನ್ನು ಹಾರಾಡಿಸಿದ ವೀರ ನೆಂದರೆ ಇವನೇ.

---

## ೧೦
# ಚಂದಲದೇವಿಯ ಸ್ವಯಂವರ

[ಚಂದಲದೇವಿಯು ಕರಹಾಟ (ಕರ್ಹಾಡ) ದೇಶದ ಶಿಲಾಹಾರ ವಂಶದ ಅರಸನಾದ ವಿದ್ಯಾಧರ ರಾಜನ ಮಗಳು. ಸಂಸ್ಕೃತದಲ್ಲಿ ಈಕೆಗೆ ಚಂದ್ರಲೇಖಾ ಎಂದೂ ಅನ್ನುವರು. ವಿದ್ಯಾಧರನು ಈಕೆಯ ಸ್ವಯಂವರವನ್ನು ಸಾರಿದನು. ಎಲ್ಲ ದೇಶದ ಅರಸರು ಬಂದಿದ್ದರು. ಕೊನೆಗೆ, ಚಂದಲದೇವಿಯು ಕಲ್ಯಾಣದ ಚಾಲುಕ್ಯ ವಿಕ್ರಮನನ್ನೇ ವರಿಸಿದಳು. ಈ ವಿಷಯವನ್ನು ಬಿಲ್ಹಣನ ವಿಕ್ರಮಾಂಕದೇವಚರಿತ ಎಂಬ ಸಂಸ್ಕೃತ ಕಾವ್ಯದಿಂದ ತೆಗೆದುಕೊಳ್ಳಲಾಗಿದೆ.]

ಚಂದಲದೇವಿಯು ಆ ಕಾಲದ ತರುಣಿಯರಲ್ಲೆಲ್ಲ ಬಹು ರೂಪವತಿಯಾಗಿದ್ದಳು. ವಿದ್ಯಾಧರ ರಾಜನು ಮಗಳ ಸ್ವಯಂವರವನ್ನು ನಿಶ್ಚಯಿಸಿ, ಆ ಕಾಲಕ್ಕೆ ಹಿಂದುಸ್ಥಾನದಲ್ಲಿದ್ದ ಎಲ್ಲ ಮುಖ್ಯ ಮುಖ್ಯ ಅರಸರಿಗೆ ಸ್ವಯಂವರಕ್ಕೆ ಬರಬೇಕೆಂದು ಓಲೆಗಳನ್ನು ಕಳುಹಿದನು. ಚಾಲುಕ್ಯ ವಿಕ್ರಮನು ಅದೇ ತಾನೇ ದಕ್ಷಿಣದ ದಾಳಿಯಿಂದ ಜಯಶಾಲಿಯಾಗಿ ಬಂದಿದ್ದನು. ಕರಹಾಟದ ಶಿಲಾಹಾರ ಅರಸನ ಮಗಳ ಸ್ವಯಂವರದ ಪತ್ರಿಕೆಯನ್ನೋದಿ ತಾನೂ ಹೊರಡುವ ಸಿದ್ಧತೆ ನಡಿಸಿದನು.

ತನ್ನ ಸಂಗಡ ಮೊದಲಿನ ರಾಣಿಯರು, ಕೆಲ ಮಂತ್ರಿಗಳು, ದಂಡನಾಯಕರು,ದಂಡಾಳುಗಳು,ಪರಿಚಾರಕರು,ಆನೆ, ಒಂಟೆ, ಕುದುರೆ ಮುಂತಾದವುಗಳ ಪರಿವಾರ ಸಹಿತವಾಗಿ ಸಾವಿರರು ಜನರನ್ನು ಕಟ್ಟಿಕೊಂಡನು. ಕಲ್ಯಾಣದಿಂದ ಹೊರಟವನು ಅಲ್ಲಲ್ಲಿ ಇಳಿಯುತ್ತ ಹದಿನೈದು ಇಪ್ಪತ್ತು ದಿನಗಳಲ್ಲಿ ಕರಹಾಟಕ್ಕೆ ತಲ್ಪಿದನು. ಸ್ವಯಂವರದ ದೆಸೆಯಿಂದಲೇ ಚೇದಿ, ಗುರ್ಜರ, ಕಾಲಂಜರ, ಕನ್ಯಾಕುಜ್ಜ, ಮಾಲವ, ಅಯೋಧ್ಯೆ, ಪಾಂಡ್ಯ, ಚೋಳ, ಮೊದಲಾದ ದೇಶಗಳ ವೀರಾಧಿವೀರ ಅರಸರು ಹೋಗಿದ್ದರು.

ಸ್ವಯಂವರವು ಗೊತ್ತಾದ ದಿನ, ನಾನಾವಿಧವಾಗಿ ಸಿಂಗರಿಸಲ್ಪಟ್ಟ ಮಂಟಪದೊಳಗೆ ಎಲ್ಲದೇಶದ ಅರಸರು ತಮ್ಮ ತಮ್ಮ ಆಸನಗಳಲ್ಲಿ ಬಗೆ ಬಗೆಯ ಅಲಂಕಾರ, ಆಭರಣಗಳಿಂದ ಕಳೆಗೊಂಡು ಕುಳಿತಿದ್ದರು. ಆಗ, ಚಿನ್ನವನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವಂತೆ, ಚಂದಲಾದೇವಿಯು ಎಲ್ಲ ಅರಸರ

ಭಾಗ್ಯವನ್ನು ಪರೀಕ್ಷಿಸಲು, ತನ್ನ ಕೈಯಲ್ಲಿ ಮಾಲೆಯನ್ನು ಹಿಡಿದುಕೊಂಡು ಸಭೆಯಲ್ಲಿ ಗೌರವದಿಂದಲೂ, ಗಾಂಭೀರ್ಯದಿಂದಲೂ ಕಾಲಿಟ್ಟಳು.

ಚಂದ್ರಲೇಖೆಯು ಸಭೆಯಲ್ಲಿ ಬಂದೊಡನೆ ಕಣ್ಣು ಕುಕ್ಕಿಸುವ ಆಕೆಯ ದಿವ್ಯ ಸೌಂದರ್ಯವನ್ನು ನೋಡಿ ಅರಸರು ಬೆಚ್ಚಿ ಬೆರಗಾದರು; ಆಕೆಯ ಲಕ್ಷವನ್ನು ತಮ್ಮ ಕಡೆಗೆ ಎಳೆದುಕೊಳ್ಳಲು ಅರಸರ ಸಭೆಯಲ್ಲಿ ಕ್ಷಣಹೊತ್ತು ಗದ್ದಲ ನಡೆಯಿತು. ಒಬ್ಬನು ತನ್ನ ತಲೆಯಮೇಲಿನ ಸಡಿಲಾದ ಮುತ್ತಿನ ತುರಾಯಿಯನ್ನು ಸರಿಪಡಿಸಿಕೊಂಡನು; ಇನ್ನೊಬ್ಬನು ಕ್ಯಾಕರಿಸುತ್ತ ಆಸನದ ಮೇಲೆ ಒಳ್ಳೇ ಠೀವಿಯಿಂದಲೂ ಕಾಲಕೆಳಗಿರುವ ಮಂಚದ ಮೇಲೆ ಮುಂದಕ್ಕೆ ಒಂದು ಕಾಲು ಚಾಚಿಕೊಂಡೂ ಕುಳಿತನು. ಮತ್ತೊಬ್ಬ ಅರಸನು ಚಂದಲೆಯ ಮನಸ್ಸನ್ನು ತನ್ನ ಕಡೆಗೆ ಎಳೆಯಲಿಕ್ಕೆಂದು ಸುಮ್ಮ ಸುಮ್ಮನೆ ತನ್ನ ಕಿವಿಗಳಲ್ಲಿಟ್ಟಿರುವ ಕುಂಡಲಗಳನ್ನು ತನ್ನ ಕೈಯಿಂದ ತಿರುಗಿಸಹತ್ತಿದನು. ಇನ್ನೊಬ್ಬನು ತನ್ನ ತಾಂಬೂಲದ ಡಬ್ಬಿಯನ್ನು ಬಾರಿಸುವದಲ್ಲದೆ, ವೀಳ್ಯೆದೆಲೆಯ ಮೇಲೆ ಹುಚ್ಚನಂತೆ ಉಗುರುಗಳಿಂದ ಬರೆಯ ತೊಡಗಿದನು. ಮಗದೊಬ್ಬನು ಆಕಳಿಸುವ ಭರದೊಳಗೆ ಎರಡು ಕೈಗಳನ್ನೂ ಬಾರಿಸಿ ಸಪ್ಪಳ ಮಾಡಿದನು. ಹೀಗೆ, ಅಲ್ಲಿ ನೆರೆದ ಅರಸರು ಚಂದಲೆಯ ಮನಸ್ಸನ್ನು ಆಕರ್ಷಿಸಲು ವಿವಿಧ ಚೇಷ್ಟೆಗಳನ್ನು ಮಾಡಿದರು.

ಚಂದಲಾದೇವಿಯು ತನ್ನ ಗೆಳತಿಯರೊಡನೆ ಕೂಡಿಕೊಂಡು ಸಭೆಯಲ್ಲಿ ಬಂದಾಗ ಆಕೆಯ ಮುಂದೆ ಭಟ್ಟಂಗಿಯು ಆಕೆಯನ್ನು ಮುಂದುಮಾಡಿಕೊಂಡು ಇವರು ಅಯೋಧ್ಯೆಯ ಅರಸರು, ಇವರು ಚೇದಿ ರಾಜರು, ಇವರು ಕಾನ್ಯಕುಬ್ಜ ರಾಜರು, ಇವರು ಕಲಿಂಜರ ಅರಸರು, ಇವರು ಮಾಲವೇಂದ್ರರು, ಇವರು ಪಾಂಡ್ಯಭೂಪಾಲರು, ಇವರು ಧಾರಾಪತಿಗಳು, ಇವರು ಚೋಳ ಅರಸರು, ಎಂದು ಒಬ್ಬೊಬ್ಬರನ್ನೇ ತೋರಿಸುತ್ತಲೂ ಅವರ ಗುಣ-ಶೌರ್ಯಗಳನ್ನು ಹೊಗಳುತ್ತಲೂ ಬರುತ್ತಿದ್ದನು. ದೇವಿಯು ಅವರನ್ನು ಮರ್ಯಾದೆಯಿಂದ ಒಮ್ಮೆ ನೋಡಿ ಮುಂದೆ ಸಾಗುವಳು. ಕೊನೆಗೆ ಚಾಲುಕ್ಯ ಸಿಂಹನಾದ ವಿಕ್ರಮಾದಿತ್ಯನ ಮುಂದೆ ಬಂದಾಗ, ಆಕೆಯ ಕಣ್ಣುಗಳು ಮಂಜು ಮಂಜಾದವು. ಭಟ್ಟಂಗಿಯು ವಿಕ್ರಮಾದಿತ್ಯನ ಗುಣ-ಶೌರ್ಯ

ಗಳನ್ನು ವರ್ಣಿಸುವದನ್ನು ಕೇಳಿಕೊಂಡು, ಚಂದಲೆಯು ಅವನ ಕೊರಳಲ್ಲಿ ಮಾಲೆಯನ್ನು ಹಾಕಿದಳು.

ಚಂದಲೆಯು ವಿಕ್ರಮಾದಿತ್ಯನ ಕೊರಳಲ್ಲಿ **ಮಾಲೆ** ಹಾಕಿದೊಡನೆ, ಎಲ್ಲೆಡೆಯಲ್ಲಿ ವಾದ್ಯಘೋಷಗಳು ಮೊಳಗಿದವು. ಆಗ, ಅವನು ಆಕೆಯನ್ನೊಡ ಗೂಡಿ ಮದುವೆಯ ಮಂಟಪಕ್ಕೆ ನಡೆದನು. ಅಲ್ಲಿ ಅವರಿಬ್ಬರ ಮದುವೆ ಯಾದಮೇಲೆ, ವಿಕ್ರಮಾದಿತ್ಯನು ಆಕೆಯೊಡನೆ ಕಲ್ಯಾಣಕ್ಕೆ ಹೊರಟನು.

---

## ೧೧

# ಹೊಯ್ಸಳ ಬಿಟ್ಟಿದೇವನು

## ವೈಷ್ಣವನಾದುದು

(೧೧೧೪-೧೧೪೧)

[ ಬಿಟ್ಟಿದೇವನು ಹೊಯ್ಸಳರ ಅರಸನು. ಮೊದಲನೆಯ ಬಲ್ಲಾಳನ ಮಗನು. ಇವನ ಆಳಿಕೆಯಲ್ಲಿ ಶ್ರೀ ವೈಷ್ಣವ ಮತಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು ಚೋಳ ಮಂಡಲ ಬಿಟ್ಟು ದ್ವಾರ ಸಮುದ್ರಕ್ಕೆ ಬಂದರು. ಬಿಟ್ಟಿದೇವನ ಮಗಳಿಗೆ ಬ್ರಹ್ಮ ರಾಕ್ಷಸಿ ಗಂಟುಬಿದ್ದದ್ದರಿಂದ ಸಂತುಷ್ಟನಾಗಿ ಅರಸನು ವೈಷ್ಣವನಾದನು. ಈ ದಂತ ಕಥೆಯು ಮಿಥಿಕ್ ಸೊಸೈಟಿ ಜರ್ನಲ್ಲದ ೭ನೆಯ ಪುಸ್ತಕದ ೩೦೬ ಪುಟದಲ್ಲಿ ಡಾ. ಫ್ರಾನ್ಸಿಸ್ ಬುಚನನ್ನರ ಪ್ರವಾಸದಲ್ಲಿ ಬಂದಿದೆ. ]

ಶ್ರೀರಾಮಾನುಜಾಚಾರ್ಯರು ಚೋಳ ದೇಶದವರು. ಚೋಳ ರಾಜನು ಶೈವನು. ಅವನಿಂದ ಆಚಾರ್ಯರಿಗೆ ಬಹಳ ತೊಂದರೆಯಾಯಿತು. ಆಗ ನಿರುಪಾಯರಾಗಿ, ಆಚಾರ್ಯರು ಚೋಳರಾಜ್ಯವನ್ನು ಬಿಟ್ಟು ಹೊಯ್ಸಳ ರಾಜನ ರಾಜಧಾನಿಯಾದ ದ್ವಾರಸಮುದ್ರಕ್ಕೆ ಬಂದರು.

ದ್ವಾರಸಮುದ್ರದಲ್ಲಾಗ ಮೊದಲನೆಯ ಬಲ್ಲಾಳನ ಮಗ ಬಿಟ್ಟಿ ದೇವನು ಆಳುತ್ತಿದ್ದನು. ಹೊಯ್ಸಳ ಅರಸರು ಜೈನ ಮತದವರು. ಆಚಾರ್ಯರು ಹೊಯ್ಸಳ ರಾಜ್ಯಕ್ಕೆ ಬಂದು ಆಶ್ರಯ ಪಡೆಯುವ ಹೊತ್ತಿಗೆ ಬಿಟ್ಟಿದೇವನು ಒಂದು ದೊಡ್ಡ ಚಿಂತೆಯಲ್ಲಿ ಮುಳುಗಿದ್ದನು. ಅದೇನೆಂದರೆ, ಅವನ ಮಗಳಿಗೆ

ಬ್ರಹ್ಮರಾಕ್ಷಸಿಯೊಬ್ಬಳು ಹಿಡಿದುಕೊಂಡಿದ್ದರಿಂದ, ಬಿಟ್ಟಿದೇವನಿಗೆ ಹುಚ್ಚು ಹಿಡಿದಂತಾಗಿತ್ತು. ಆಕೆಯನ್ನು ಹಲವು ಜನರಿಗೆ ತೋರಿಸಿದ್ದಲ್ಲದೆ, ಮಹಾತ್ಮ್ಯವುಳ್ಳ ದೇವಾಲಯಗಳಿಗೆ ಕರಕೊಂಡು ಹೋಗಿ ಸೇವೆಮಾಡಿಸಿದ್ದನು ಕೂಡ. ಮತದಿಂದ ಜೈನನಾದರೂ ಪಂಡಿತರಾದ ಬ್ರಾಹ್ಮಣರಿಗೆ ತೋರಿಸಿ, ಉಪಾಯಗಳನ್ನು ಕೇಳಿ, ಅದರಂತೆ ಮಾಡಲಿಕ್ಕೂ ಹಚ್ಚಿದ್ದನು. ಯಾವುದರಿಂದಲೂ ಆಕೆಗೆ ಗುಣವೆನಿಸಿರಲಿಲ್ಲ.

ಈ ಸಂಧಿಯಲ್ಲಿ ರಾಮಾನುಜಾಚಾರ್ಯರು ದ್ವಾರಸಮುದ್ರಕ್ಕೆ ದಯಮಾಡಿಸಿದರು. ಅವರನ್ನು ಕಂಡು ಅವರ ಮುಂದೆ ತನ್ನ ಮಗಳ ಗೋಳನ್ನು ತೋಡಿಕೊಂಡನು. ಆಕೆಗೆ ಗುಣವಾದರೆ, ಬೇಡಿದ್ದನ್ನು ಕೊಡುವೆನೆಂದು ಬೇಡಿಕೊಂಡನು. ಆಚಾರ್ಯರಿಗೂ ರಾಜಾಶ್ರಯ ಬೇಕಾಗಿತ್ತು. ಅವರು ರಾಜಕನ್ಯೆಯನ್ನು ಬ್ರಹ್ಮರಾಕ್ಷಸಳಿಂದ ಬಿಡಿಸುವೆನೆಂದರು. ಅರಸನಿಗೆ ಆದ ಆನಂದಕ್ಕೆ ಎಣೆಯಿರಲಿಲ್ಲ. ಒಂದು ದಿವಸ ಆಚಾರ್ಯರು ತಮ್ಮ ದೇವರ ಪೂಜಾದಿಗಳನ್ನು ಮುಗಿಸಿಕೊಂಡರು. ಅರಸನಿಗೆ ಮಗಳನ್ನು ಕರಕೊಂಡು ಬರಹೇಳಿದರು. ಆಕೆ ಬರಲಾಗಿ, ಅವರು ದೇವರ ತೀರ್ಥವನ್ನು ಸಿಂಪಡಿಸಿ, ತುಳಸಿಯ ದಳಗಳನ್ನು ತಿನ್ನಲಿಕ್ಕೆ ಕೊಟ್ಟರು. ಇಷ್ಟಕ್ಕೆ, ಆಕೆಯನ್ನು ಬ್ರಹ್ಮರಾಕ್ಷಸಿಯು ಬಿಟ್ಟು ತೆರಳಿದಳು.

ಮಗಳು ಎಲ್ಲರಂತೆ ಎಚ್ಚರಗೊಂಡು ಗುಣವಾದುದನ್ನು ನೋಡಿ ಬಿಟ್ಟಿದೇವನು ಸಂತೋಷಪಟ್ಟು, ಆಚಾರ್ಯರ ಶಿಷ್ಯನಾಗಲಿಕ್ಕೆ ಒಪ್ಪಿದನು. ಆಚಾರ್ಯರು ಅಲ್ಲಿದ್ದುಕೊಂಡು, ಜೈನಸಿದ್ಧಾಂತವನ್ನು ಖಂಡಿಸಿದರು. ಬಿಟ್ಟಿದೇವನು ಆಗ ತನ್ನ ಮೊದಲಿನ ಹೆಸರನ್ನು ಬಿಟ್ಟು ವಿಷ್ಣುವರ್ಧನನಾದನು. ಮುಂದೆ ಅವನು ಜೈನರ ಬಸ್ತಿಗಳಲ್ಲಿದ್ದ ಜೈನದೇವರ ಮೂರ್ತಿಗಳನ್ನು ತೆಗೆದು ಹಾಕಿಸಿ, ನಾರಾಯಣ ಮೂರ್ತಿಗಳನ್ನು ಸ್ಥಾಪಿಸಲಾರಂಭಿಸಿದನು. ಬೇಲೂರಲ್ಲಿಯೇ ವಿಷ್ಣುದೇವಾಲಯ ಕಟ್ಟಿಸಿದನು. ಮೇಲುಕೋಟೆಯಲ್ಲಿ ವೈಷ್ಣವರ ದೊಡ್ಡ ಮಠ ಕಟ್ಟಿಸಿದನು. ಅದಕ್ಕೆ ಬಹಳ ಉತ್ಪನ್ನ ಹಾಕಿಕೊಟ್ಟನು.

ವಿಷ್ಣುವರ್ಧನನು ನಡೆಸಿದ ಈ ಪರಿಯ ಜೈನದ್ರೋಹದ ಪರಿಣಾಮವೇನಾಯಿತೆಂದರೆ, ಬೇಲೂರ ತಾಲೂಕಿನಲ್ಲಿರುವ ಅಡಗೂರೆಂಬಲ್ಲಿ ಭೂಮಿತಾಯಿಯು ಬಿರಿದು ಬಾಯ್ಬಿಟ್ಟಳು. ಎಷ್ಟೋ ಮೈಲುಗಳತನಕ ಭೂಮಿಯಲ್ಲಿ

ದೊಡ್ಡ ತಗ್ಗಾಯಿತು. ಈ ಸುದ್ದಿಯು ಅರಸನಿಗೆ ತಿಳಿಯಿತು. ಎಲ್ಲ ಪಂಡಿತರನ್ನು ಕರೆಯಿಸಿ ಹೀಗಾಗಲಿಕ್ಕೆ ಕಾರಣವೇನಿರಬಹುದೆಂದು ಆಲೋಚನೆ ಮಾಡಿದನು. ಇದಕ್ಕೆಲ್ಲ ಜೈನದ್ರೋಹವೇ ಕಾರಣವೆಂದು ನೆರೆದವರು ಹೇಳಿದರು. ಎಲ್ಲ ಜಾತಿಯವರನ್ನು ಕರೆಕಳಿಸಿ ದೇವತೆಗಳಿಗೆ ಶಾಂತಿಯನ್ನು ಮಾಡಿಸಿದನು. ಆದರಿಂದ ಏನೂ ಉಪಯೋಗವಾಗದೇ ಹೋಯಿತು.

ಕೊನೆಗೆ, ಜೈನಗುರುಗಳ ಸಲಹೆಯನ್ನೇ ಕೇಳಬೇಕೆಂದು ಬಹು ಜನರು ಅಭಿಪ್ರಾಯಪಟ್ಟರು. ಅರಸನು ಬೇರೆ ಮತವನ್ನು ಅವಲಂಬಿಸಿದ್ದರಿಂದ ಅವರ ಮಾತಿಗೆ ಒಪ್ಪಲಿಲ್ಲ; ಆದರೂ, ಜನರೆಲ್ಲರು ಬಹಳ ಹೇಳಿಕೊಂಡದ್ದರಿಂದ ಶುಭಚಂದ್ರಾಚಾರಿ ಎಂಬ ಜೈನ ಗುರುಗಳ ಕಡೆಗೆ ಹೋಗಿ, ತನ್ನ ಪ್ರಜೆಗಳ ಸಂಕಟ ಪರಿಹರಿಸಲು ಬಿನ್ನವಿಸಿದನು. ಆಗ, ಗುರುಗಳು ಜೈನಬಸ್ತಿಗಳ ದಾನಪತ್ರಗಳನ್ನೆಲ್ಲ ತಿರಿಗಿ ಕೊಡಬೇಕೆಂದು ನಿರ್ಬಂಧ ಹಾಕಿದರು. ಅದಕ್ಕೆ ಅರಸನು ಒಪ್ಪಿಕೊಂಡನು. ಇಷ್ಟಾದಮೇಲೆ, ಅರಸನಿಗೆ ೧೦೮ ಕುಂಬಳಕಾಯಿಗಳನ್ನು ತರಿಸಲು ಕೇಳಿದನು. ಅವುಗಳನ್ನು ತರಿಸಿದನಂತರ, ಎಲ್ಲವುಗಳನ್ನು ಮಂತ್ರಿಸಿ ತಗ್ಗಾದ ಭೂಮಿಯಲ್ಲಿ ದಿನಾಲು ಒಂದೊಂದು ಕುಂಬಳಕಾಯಿಯನ್ನು ಬೀಸಾಕಬೇಕೆಂದನು. ಅದರಂತೆ ಕೆಲವು ದಿವಸಗಳವರೆಗೆ ಮಾಡಲು ಭೂಮಿಯು ಮುಚ್ಚಿ ತುಂಬಿಕೊಂಡಿತು. ಜನರ ಆಪತ್ತು ಪರಿಹಾರವಾಯಿತು.

ಅಂದಿನಿಂದ, ವಿಷ್ಣುವರ್ಧನನು ಜೈನರ ದ್ವೇಷ ಬಿಟ್ಟನು. ಅವನು ವೈಷ್ಣವನಾದರೂ ಅವನ ಹೆಂಡತಿಯಾದ ಶಾಂತಲದೇವಿಯು ಸಾಯುವವರೆಗೆ ಜೈನಳಾಗಿಯೇ ಇದ್ದಳು.

ವಿಷ್ಣುವರ್ಧನನು ಮಹಾಪ್ರಬಲನಾದ ಅರಸನಿದ್ದನು. ಅವನು ತನ್ನ ಕೈಯಲ್ಲಿರುವ ಗಂಗರಾಜ, ಬೊಪ್ಪದೇವ ಇವರ ಸಹಾಯದಿಂದ ತನ್ನ ರಾಜ್ಯವನ್ನು ತುಂಗಭದ್ರೆಯಿಂದ ಕೃಷ್ಣಾನದಿಯವರೆಗೆ ಹಬ್ಬಿಸಿದ್ದನು. ಪಲ್ಲವ ಅರಸನ ಕನ್ಯೆಯಾದ ಬೊಮ್ಮಲಾದೇವಿಯು ಇವನ ಎರಡನೆಯ ರಾಣಿಯಾಗಿದ್ದಳು. ಇವನು ಬಂಕಾಪುರದಲ್ಲಿ ಮಡಿದನು. ಇವನ ದೇಹವನ್ನು ಮೈಸೂರು ಸೀಮೆಯಲ್ಲಿಯ ಮೂಡಗೆರೆಗೆ ಒಯ್ಯಲಾಯಿತು.

---

# ೧೨
# ತಂದೆಗೂ ಮೇಲುಗೈಯ್ಯಾದ ಮಗ

[ಜಕ್ಕಣಾಚಾರ್ಯರ ಹೆಸರನ್ನರಿಯದವರು ಕನ್ನಡ ನಾಡಿನಲ್ಲಿ ಇಲ್ಲ. ಇವರು ಹೊಯ್ಸಳ ವೀರ ವಿಷ್ಣುವರ್ಧನನ ಆಳಿಕೆಯಲ್ಲಿದ್ದರೆಂದೂ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಅವರೇ ಕಟ್ಟಿದರೆಂಡೂ ಹೇಳಿಕೆ. ಅವರ ಬಗ್ಗೆ ಈ ದಂತಕತೆಯು ಮೈಸೂರಿನ ವಾಸ್ತುಶಿಲ್ಪ ಎಂಬ ಪುಸ್ತಕದಲ್ಲಿ ಕೊಡಲಾಗಿದೆ.]

ಮೈಸೂರು ಸೀಮೆಗೆ ಸೇರಿದ ತುಮಕೂರು ಜಿಲ್ಹೆಯಲ್ಲಿ ಕೈದಾಳ ಎಂಬುದೊಂದು ಊರು ಇದೆ. ಅಲ್ಲಿ ಹಿಂದಕ್ಕೆ ಜಕಣಾಚಾರ್ಯ ಎಂಬ ಗೃಹಸ್ಥರಿದ್ದರು. ಅವರು ಜ್ಯೋತಿಷಶಾಸ್ತ್ರದಲ್ಲಿಯೂ ಶಿಲ್ಪಶಾಸ್ತ್ರದಲ್ಲಿಯೂ ಬಲು ಗಟ್ಟಿಗರು. ಅವರಿಗೆ ಅದೇ ತಾನೇ ಒಬ್ಬ ಮಗ ಹುಟ್ಟಿದ. ಒಂದು ದಿನ, ಮಗನು ಹುಟ್ಟಿದ ದಿನ-ನಕ್ಷತ್ರ-ರಾಶಿಗಳನ್ನು ನೋಡಿ, ಅವುಗಳನ್ನನುಸರಿಸಿ ಜನ್ಮ ಕುಂಡಲಿಯನ್ನು ಮಂಡಿಸಿ, ಫಲದ ಲೆಕ್ಕ ಹಾಕುತ್ತ ಕುಳಿತಿದ್ದರು. ಅದೇಕೋ ಗ್ರಹಗಳ ಜೋಡಣೆಯು ಸರಿಯಾಗಿರುವಂತೆ ಕಾಣಲಿಲ್ಲ. ಸ್ವಲ್ಪ ಆಳವಾಗಿ ವಿಚಾರಿಸಿದರು. ವ್ಯಭಿಚಾರದಿಂದ ಮಗನು ಹುಟ್ಟಿರುವದಾಗಿ ತಿಳಿಯಿತು. ಮನಸ್ಸಿಗೆ ಅಸಮಾಧಾನವಾಯಿತು. ಮನೆಯಲ್ಲಿದ್ದು ನೀರು ಕುಡಿಯಲಿಕ್ಕೂ ಮನಸ್ಸು ಒಲ್ಲದಾಯಿತು. ಮನೆಯನ್ನು ಬಿಟ್ಟು ಹೊರಟರು.

ಮನೆಯನ್ನು ಬಿಟ್ಟು ಹೊರಟರೆ, ಮುಂದೇನು ಮಾಡಬೇಕೆಂಬುವ ವಿಚಾರವು ಅವರಿಗಿರಲಿಲ್ಲ; ಯಾಕಂದರೆ, ಎರಡು ವಿದ್ಯೆಗಳಲ್ಲಿ ಪ್ರವೀಣರಿದ್ದರು. ಆದುದರಿಂದ ಕರ್ನಾಟಕದಲ್ಲಿಯ ಊರೂರಿಗೆ ಒಂದೋ ಎರಡೋ ದೇವಾಲಯಗಳನ್ನು ಕಟ್ಟುತ್ತ ಹೊರಟರು. ಹೀಗೆ ಹೋಗುತ್ತಿರುವಾಗ, ದಾರಿಯಲ್ಲಿ ಬೇಲೂರಿಗೆ ಬಂದು ತಲ್ಪಿದರು. ಅಲ್ಲಿಂದ ಸಮೀಪದಲ್ಲಿಯೇ ದ್ವಾರಸಮುದ್ರದಲ್ಲಿ ಹೊಯ್ಸಳ ಯಾದವರ ವಿಷ್ಣುವರ್ಧನನು ಆಳುತ್ತಿದ್ದನು. ಅವನಿಗೆ ಗುಡಿ-ಗೋಪುರಗಳನ್ನು ಕಟ್ಟಿಸುವುದರಲ್ಲಿ ಬಲು ಅಚ್ಚು ಮೆಚ್ಚುಗೆ. ಆಚಾರ್ಯರ ಕೀರ್ತಿಯೂ ಅವನ ಕಿವಿಗೆ ಬಿದ್ದಿತ್ತು. ವಿಷ್ಣುವರ್ಧನನೂ ಆಗ ತಾನೇ ಜೈನಮತವನ್ನು ಬಿಟ್ಟು, ವೈಷ್ಣವಮತವನ್ನು ಅಂಗೀಕರಿಸಿದ್ದನು.

ಆಚಾರ್ಯರು ಕೈಯಲ್ಲಿ ನೂರಾರು ಜನ ಆಳುಹೋಳುಗಳನ್ನು ಕಟ್ಟಿಕೊಂಡು ಶ್ರೀ ಚೆನ್ನಕೇಶವ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದರು. ಆಚಾರ್ಯರು ಚೆನ್ನಕೇಶವ ದೇವಾಲಯ ಕಟ್ಟುವದರಲ್ಲಿ ತೋರಿಸಿದ ಶಿಲ್ಪ ಕಲೆಯ ನೈಪುಣ್ಯ, ಕುಸುರಿನ ಕೆಲಸ, ಸಜೀವವಾಗಿರುವಂತೆ ಕಾಣಿಸುವ ಅಲ್ಲಿಯ ಕಲ್ಲಿನ ಮೂರ್ತಿಗಳು, ಅವುಗಳಲ್ಲಿಯ ಮುಖ, ಕಣ್ಣು, ಮತ್ತು ಅಂಗಾಂಗಗಳಲ್ಲಿ ಎದ್ದು ಕಾಣಿಸುತ್ತಿದ್ದ ಭಾವವಿಶೇಷ ಇವೆಲ್ಲವುಗಳನ್ನು ಕಂಡು ಅರಸನು ಆನಂದಪಟ್ಟು ಓಲಾಡಿದನು. ಆಚಾರ್ಯರನ್ನು ಬಾಯಿ ತುಂಬ ಹೊಗಳಿ ಗೌರವಿಸಿದನು. ಅವರಿಗೆ ಏನು ಕೊಟ್ಟರೂ ಅರಸನಿಗೆ ಕಡಿಮೆಯೆಂದೆನಿಸಿತು.

ದೇವಾಲಯದಲ್ಲಿ ಸ್ಥಾಪಿಸತಕ್ಕ ಮೂರ್ತಿಯನ್ನೂ ಜಕಣಾಚಾರ್ಯರು ಸ್ವತಃ ಕೈಯಿಂದ ಮಾಡಿದ್ದರು. ಅದರ ಸೌಂದರ್ಯವನ್ನು ಕಂಡರಂತೂ ಅರಸನಿಗೆ ಹಿಡಿಸಲಾರದ ಹಿಗ್ಗು. ಮಹೋತ್ಸವದಿಂದಲೂ ಲಕ್ಷಗಟ್ಲೆ ಜನರಿಗೆ ಅನ್ನದಾನ ಮಾಡಿಯೂ ಮೂರ್ತಿಯ ಪ್ರತಿಷ್ಠೆ ಮಾಡಿಸಬೇಕೆಂದು ಯೋಚಿಸಿದನು. ದಿಗ್ದೇಶಕ್ಕೆ ಈ ಸುದ್ದಿಯು ಹರಡಿತು. ಬೇರೆಬೇರೆ ಭಾಗಗಳಿಂದ ಜನರು ಬಂದು ಬೇಲೂರಿನಲ್ಲಿ ಇಳಿಯಹತ್ತಿದರು.

ಹೀಗೆಲ್ಲ ಇತ್ತ ನಡೆಯುತ್ತಿರುವ ಸಮಯಕ್ಕೆ, ಕೈದಾಳದಲ್ಲಿಯೇ ಜಕಣಾಚಾರ್ಯರ ಮಗನು ಬೆಳೆಯುತ್ತಿದ್ದನು. ಹೆತ್ತ ಹೊಟ್ಟೆಯ ಕಿಚ್ಚಿನಿಂದ ತಾಯಿಯು ಹೇಗೋ ಕಷ್ಟಪಟ್ಟು, ನಾಲ್ಕು ಜನರ ಆಸರದಿಂದ ಮಗನನ್ನು ದೊಡ್ಡವನನ್ನಾಗಿ ಮಾಡಿದಳು. ತಂದೆಯ ನಿಜವಾದ ಮಗನವನು. ಕೇಳುವದೇನು? ಬುದ್ಧಿಯಲ್ಲಿ ತಂದೆಗೂ ಒಂದು ಕೈ ಮೇಲಿದ್ದನೇ ಹೊರತು ಕೀಳಾಗಿರಲಿಲ್ಲ ವಿದ್ಯಾಭ್ಯಾಸ ನಡಿಸುವಾಗಲೇ ಇತ್ತ ಯಾರೂ ಹೇಳದೆಯೇ ಕೇಳದೆಯೇ ತನ್ನ ಪಟ್ಟಿಗೆ ತಾನು ಬೆಣ್ಣೆಯಂಥ ಕಲ್ಲುಗಳನ್ನು ಆರಿಸಿಕೊಂಡು ಬಂದು, ಅವುಗಳಲ್ಲಿ ಚಂದಚಂದವಾದ ಮೂರ್ತಿಗಳನ್ನು ಮಾಡತೊಡಗಿದನು. ತಾಯಿ, ಬಳಗದವರು, ಜನರು ಹುಡುಗನ ಜಾಣತನವನ್ನು ನೋಡಿ ವಿಸ್ಮಯಪಡುವರು.

ಬೇಲೂರಿನಲ್ಲಿಯ ಚೆನ್ನಕೇಶವ ದೇವಾಲಯದಲ್ಲಿ ಮೂರ್ತಿಯನ್ನು ಸ್ಥಾಪಿಸುವ ಹೊತ್ತಿಗೆ, ಜಕಣಾಚಾರ್ಯರ ಮಗನು ಹದಿನಾರು ವರ್ಷದವ

ನಾಗಿದ್ದನು. ಕಲ್ಲುಗಳು, ಅವುಗಳ ಗುಣಗಳು, ಶುದ್ಧ-ಅಶುದ್ಧ ಕಲ್ಲುಗಳು, ದೇವರ ಮೂರ್ತಿಯನ್ನು ಮಾಡಲಿಕ್ಕೆ ಯಾವ ಬಗೆಯ ಕಲ್ಲುಗಳನ್ನು ಉಪ ಯೋಗಿಸಬೇಕು, ಇವೆಲ್ಲದರ ಜ್ಞಾನ ಅವನಿಗೆ ಚೆನ್ನಾಗಿಯೇ ಆಗಿತ್ತು; ಮತ್ತು ಈ ವಿಷಯದಲ್ಲಿ ಬೇಕಾದವರೊಡನೆ ವಾದಮಾಡಲೂ ಅವನು ಸಿದ್ಧನಿದ್ದನು.

ಬೇಲೂರಿನಲ್ಲಿಯ ಉತ್ಸವದ ಸುದ್ದಿಯನ್ನು ಅತನೂ ಕೇಳಿದನು. ಹೊಸದಾಗಿ ಕಟ್ಟಿದ ದೇವಾಲಯ, ಮೂರ್ತಿ ಮುಂತಾದವುಗಳನ್ನು ಕಣ್ಮುಟ್ಟ ನೋಡಿ ಬರಬೇಕೆಂಬ ಅಪೇಕ್ಷೆ ಅವನಿಗೆ ಉಂಟಾಯಿತು. ತನ್ನ ಓರಿಗೆಯ ಗೆಳೆಯರೊಂದಿಗೆ ಹೊರಟನು. ಎಲ್ಲ ಜನರಂತೆ ಗದ್ದಲದಲ್ಲಿ ಹೊಕ್ಕು ಗುಡಿ-ಮೂರ್ತಿ ಮುಂತಾದವುಗಳನ್ನು ನೋಡುತ್ತಿರುವಾಗ ಗುಡಿಯಲ್ಲಿ ಸ್ಥಾಪಿಸಲ್ಪ ಡುವ ಮೂರ್ತಿಯನ್ನು ಮಾಡಲಿಕ್ಕೆ ಬಳಸಿದ ಕಲ್ಲು ಅಶುದ್ಧವಿರುವದೆಂದೂ ಅದು ಪ್ರಾಣಪ್ರತಿಷ್ಠೆಗೆ ಯೋಗ್ಯವಿಲ್ಲೆಂದೂ ಅವನಿಗೆ ಕಂಡುಬಂದುದರಿಂದ ಈ ಮಾತನ್ನು ಅವನು ಬಾಯಿಬಿಚ್ಚಿ ಆಡಿದನು.

ಒಬ್ಬರ ಕಿವಿಯಿಂದ ಇನ್ನೊಬ್ಬರ ಕಿವಿಗೆ ಹೋಗಿ ಕಡೆಗೆ ಈ ವರ್ತಮಾನ ಅರಸನಿಗೆ ಮುಟ್ಟಿತು. ಅರಸನು ಆಚಾರ್ಯರನ್ನು ಕರೆಯಿಸಿ ಕೇಳಿದನು. ಅಷ್ಟಕ್ಕೆ ಮುಗಿಯದೆ, ಬೆಳೆಯುತ್ತ ಬೆಳೆಯುತ್ತ ಜಕಣಾಚಾರ್ಯ ಮತ್ತು ಅವರ ಮಗ ಇವರಿಬ್ಬರಲ್ಲಿ ವಾದ ನಡೆಯುವದೇ ಗೊತ್ತಾಯಿತು. ಹುಡುಗನಿಗೆ ಇವರು ತನ್ನ ತಂದೆ ಎಂಬುದು ಗೊತ್ತಿಲ್ಲ.

ಪದ್ಧತಿಯಂತೆ, ಅಶುದ್ಧ ಕಲ್ಲೆಂದು ಸಿದ್ಧಮಾಡಿ ಕೊಟ್ಟರೆ, ಬಲಗೈ ಕಡಿದುಕೊಳ್ಳುವೆನೆಂದು ಆಚಾರ್ಯರು ಅರಸನಿಗೆ ಹೇಳಿದರು. ಇಬ್ಬರಿಗೂ ಮಾತು ನಡೆಯಿತು ಅರಸನು ಅಲ್ಲಿಯೇ ಕುಳಿತಿದ್ದನು. ಹುಡುಗನು ಈ ಮೂರ್ತಿಯ ಹೊಕ್ಕಳ ಹತ್ತಿರ ಒಳಗೆ ಒಂದು ಗುಂಡಿ ಇದ್ದು,ಅದರೊಳಗೆ ತುಸು ನೀರೂ ಒಂದು ಕಪ್ಪೆಯೂ ಇರುವದೆಂದೂ ಆದುದರಿಂದಲೇ ಮೂರ್ತಿ ಮಾಡಲಿಕ್ಕೆ ಅದು ಅಶುದ್ಧವೆಂದೂ ಹೇಳಿದನು; ಆದರೆ, ಶ್ರಮಪಟ್ಟು ಮಾಡಿದ ಮೂರ್ತಿಯನ್ನು ಒಡೆದು ನೋಡುವದೆಂತು? ಎಂದು ಎಲ್ಲರೂ ಆಲೋಚನೆಯಲ್ಲಿ ಕುಳಿತರು. ಕೊನೆಗೆ, ಹುಡುಗನೇ ಮುಂದಾಗಿ ಒಡೆಯು ವದು ಸಾಧ್ಯವಿಲ್ಲದಿದ್ದರೆ, ಇನ್ನೊಂದು ಉಪಾಯ ಮಾಡಿರಿ. ಮೂರ್ತಿಯ

ಮೈಗೆಲ್ಲ ಗಂಧ ಹಚ್ಚಿರಿ, ಆಗ ಹೊಕ್ಕಳ ಹತ್ತಿರಿನ ಗಂಧವು ಹಸಿಯುಳಿದು, ಮಿಕ್ಕ ಕಡೆಯ ಗಂಧ ಒಣಗುವದು ಎಂದನು.

ಈ ಹಂಚಿಕೆಯು ಎಲ್ಲರಿಗೂ ಒಪ್ಪಿಗೆಯಾಯಿತು. ಆಚಾರ್ಯರೂ ಆಗ ಬಹುದೆಂದರು. ಅದರಂತೆ ಮಾಡಿ ನೋಡಲಾಗಿ, ಮೂರ್ತಿಯ ಮೈಗೆ ಬಳಿದ ಗಂಧ ಒಣಗಿದರೂ, ಹೊಕ್ಕಳಿನ ಬದಿಯಲ್ಲಿ ಒಣಗಲಿಲ್ಲ. ಆಗ್ಗೆ ಅರಸನಿಗೂ ಆಚಾರ್ಯರಿಗೂ ಮಿಕ್ಕವರಿಗೂ ಆಶ್ಚರ್ಯವೆನಿಸಿತು. ಜಕಣಾಚಾರ್ಯರಂತಹ ನಾನುನಾನು ಎಂಬುವವರ ಮಾತನ್ನು ಸುಳ್ಳುಗೊಳಿಸಿದ ಅವನ ಬುದ್ಧಿಯನ್ನೆಲ್ಲರೂ ಹೊಗಳಿ ಬಾಯಲ್ಲಿ ಬೆರಳಿಟ್ಟುಕೊಂಡರು.

ಆಗ, ಕೂಡಿದವರೂ ಆಚಾರ್ಯರೂ 'ನೀನು ಯಾರ ಮಗನಪ್ಪ! ನಿನ್ನ ಊರು ಯಾವುದು? ಯಾರ ಮನೆಯವನು? ಎಂದು ಮುಂತಾಗಿ ವಿಚಾರಿಸ ತೊಡಗಿದರು. ಹುಡುಗನು ನಮ್ಮೂರು ಕೈದಾಳ ಎಂಬ ಗ್ರಾಮ. ತಂದೆ ಜಕಣಾಚಾರ್ಯರು, ನಾನು ಹುಟ್ಟುತ್ತಲೆ, ನನ್ನ ಜನ್ಮಕುಂಡಲಿಯನ್ನು ನೋಡಿ,ಲೆಕ್ಕತಪ್ಪಿ, ಅವರು ನನ್ನ ಹೆತ್ತ ತಾಯಿಯಮೇಲೆ ಸಲ್ಲದ ತಪ್ಪುಹೊರಿಸಿ, ಮನೆಬಿಟ್ಟು ಹೋದರು. ತಾಯಿಯು ಹೇಗೋ ಜೋಕೆಮಾಡಿ ಅಷ್ಟಿದ್ದವನನ್ನು ಇಷ್ಟುಮಾಡಿದಳು' ಎಂದು ತಮ್ಮ ಮನೆತನದ ಸಮಾಚಾರವನ್ನೆಲ್ಲ ಉಸುರಿದನು.

ಅಲ್ಲಿಯೇ ಕುಳಿತ ಜಕಣಾಚಾರ್ಯರು ಆನಂದಾತಿಶಯದಿಂದ ಕುಳಿತ ಸ್ಥಳದಿಂದ ಓಡಿಬಂದು ಮಗನನ್ನು ಅಪ್ಪಿಕೊಂಡು ಮುದ್ದಾಡಿದರು. ತಮ್ಮ ತಪ್ಪಿಗಾಗಿ ತಾವೇ ಗೋಳಾಡಿದರು. ಕಣ್ಣೀರಿನ ಕೋಡಿ ಹರಿಸಿದರು. ಆದರೆ 'ಆಡಿದ ಮಾತನ್ನು ಸುಳ್ಳುಗೊಳಿಸಬಹುದೇ' ಎಂದು ಆಚಾರ್ಯರು ತಮ್ಮ ಬಲಗೈ ಕಡಿದುಹಾಕಲಿಕ್ಕೆ ಸಿದ್ಧರಾದರು. ಮಗನು, ನೆರೆದವರು, ಅರಸನು, ಕೂಡಿಯೇ ಬೇಡಬೇಡವೆಂದು ಹೇಳಿದರೂ 'ಆಡಿದ ಮಾತನ್ನು ನಡಿಸದಿದ್ದರೆ, ಬದುಕಿದ್ದು ಪ್ರಯೋಜನವೇನು?' ಎಂದು ಬಲಗೈಯನ್ನು ಕಡಿದೊಗೆದೇ ಬಿಟ್ಟರು.

ಮುಂದೆ, ಅರಸನು ಆಚಾರ್ಯರನ್ನೂ ಅವರ ಮಗನನ್ನೂ ತಮ್ಮಲ್ಲಿಯೇ ಇಟ್ಟುಕೊಂಡು ಚೆನ್ನಕೇಶವ ದೇವಾಲಯದ ಕಟ್ಟಡವನ್ನು ಮುಗಿಸಲು ಆಜ್ಞಾಪಿಸಿದನು. ಅದನ್ನು ಮುಗಿಸಿದನಂತರ, ಜಕಣಾಚಾರ್ಯರು

ತಮ್ಮ ಹುಟ್ಟೂರಾದ ಕೈದಾಳಕ್ಕೆ ಹೋಗಿ, ಅಲ್ಲಿಯೂ ತಮ್ಮ ಮಗನೊಂದಿಗೆ ಒಂಟಿ ಕೈಯಿಂದಲೇ ಕೇಶವ ಗುಡಿಯನ್ನು ಕಟ್ಟಿದರು. ಆಗ ಅವರ ಬಲಗೈ ಚಿಗಿಯಿತು. ಮುಂದೆ ಆಚಾರ್ಯರು ಕರ್ನಾಟಕವನ್ನೆಲ್ಲ ಸಂಚರಿಸಿ, ಊರೂರಿಗೆ ದೇವಾಲಯಗಳನ್ನು ಕಟ್ಟಿದರು. ಬೇಲೂರಿನಲ್ಲಿರುವ ಚೆನ್ನಕೇಶವ ದೇವಾಲಯದ ಅಂಗಣದಲ್ಲಿ ಕಪ್ಪೆಚೆನ್ನಿಗರಾಯನ ದೇವಾಲಯವು ಇರುವದು.

---

## ೧೩
## ಬೇಲೂರಿನ ಚೆನ್ನಕೇಶವ
# ದೇವಾಲಯ

(ಕ್ರಿ. ಶ. ೧೧೧೭)

[ಮೈಸೂರು ಸಂಸ್ಥಾನದ ಹಾಸನ ಜಿಲ್ಹೆಯಲ್ಲಿ ಬೇಲೂರು ಎಂಬೊಂದು ತಾಲೂಕಿನ ಸ್ಥಳವಿದೆ. ಇದು ಒಂದುಕಾಲಕ್ಕೆ ಹೊಯ್ಸಳರ ರಾಜಧಾನಿ ಇತ್ತು. ಮೊದಲನೆಯ ಹೊಯ್ಸಳ ಬಲ್ಲಾಳ ಅರಸನು ಬೇಲೂರನ್ನೇ ರಾಜಧಾನಿಯನ್ನು ಮಾಡಿಕೊಂಡಿದ್ದನು. ವಿಷ್ಣುವರ್ಧನನೂ ಅಲ್ಲಿಯೇ ಇದ್ದನು. ವಿಷ್ಣುವರ್ಧನನು ಜೈನಮತ ಬಿಟ್ಟು, ವೈಷ್ಣವನಾದಮೇಲೆ ಈ ದೇವಾಲಯುವನ್ನು ಕಟ್ಟಿಸಿದನು. ಈ ವಿಷಯ ಮೈಸೂರಿನ ವಾಸ್ತುಶಿಲ್ಪ ಎಂಬ ಪುಸ್ತಕದಿಂದ ಸಂಗ್ರಹಿಸಿದೆ.]

**ಪೃಥ್ವಿಯಲ್ಲಿರುವ ಗುಡಿಗಳನ್ನು ಬೇಲೂರ--ಹಳೆಬೀಡುಗಳಲ್ಲಿಯ ಗುಡಿಗಳು ಮೀರಿಸಿರುತ್ತವೆ; ಯಾಕೆಂದರೆ, ಈ ಗುಡಿಗಳಲ್ಲಿ ಕಂಡುಬರುವಂಥ ಕುಸುರಿನ ಕೆಲಸವು ಜಗದೊಳಗಿನ ಯಾವ ದೇವಾಲಯುಗಳಲ್ಲಿಯೂ ಕಾಣಿಸುವದಿಲ್ಲ.**

**ಡಾ. ಫರ್ಗ್ಯುಸನ್ನರು.**

ಬೇಲೂರಿನ ಚೆನ್ನಕೇಶವ ದೇವಾಲಯವು ಹೊಯ್ಸಳ ಅರಸರು ಕಟ್ಟಿಸಿದ ಕಟ್ಟಡಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಈ ದೇವಾಲಯದಲ್ಲಿ ವಿಜಯನಾರಾಯಣ ದೇವರ ಗುಡಿಯೇ ಮುಖ್ಯವಾದುದು; ಆದರೂ ದೇವಾಲಯದ ಅಂಗಳದಲ್ಲಿ ಕಪ್ಪೆಚನ್ನಿಗರಾಯಗುಡಿ, ಅಮ್ಮನವರಗುಡಿ, ವೀರನಾರಾಯಣ ಗುಡಿಗಳಿವೆ. ಇದು ಪೂರ್ವಕ್ಕೆ ಮುಖವಾಗಿದ್ದು ಇದೇ ದಿಕ್ಕಿಗೆ ಎರಡು ಮಹಾದ್ವಾರಗಳಿವೆ. ದೇವಾಲಯದಲ್ಲಿ ನವರಂಗ, ಸುಕನಾಸಿ, ಗರ್ಭಗುಡಿ ಹೀಗೆ

ಮೂರು ಭಾಗಗಳಿವೆ. ನವರಂಗಕ್ಕೆ ಮೂರು ಬಾಗಿಲುಗಳು, ಅದರ ಗೋಡೆಯ ಮೇಲೆ ಹೊರಗಡೆ ಸಾಲಾಗಿ ಸಣ್ಣಸಣ್ಣ ಚಿತ್ರಗಳ ಸಾಲುಗಳಿವೆ. ಒಂದು ಸಾಲಿನಲ್ಲಿ ಆನೆಗಳು, ಎರಡನೆಯ ಸಾಲಿನಲ್ಲಿ ಮಣಿ ತೋರಣಗಳು, ಮೂರನೆಯ ಸಾಲಿನಲ್ಲಿ ಬಳ್ಳಿಮಂಟಪ, ನಾಲ್ಕನೆಯ ಸಾಲಿನಲ್ಲಿ ಸ್ವಲ್ಪ ಮುಂದಕ್ಕೆ ಬಂದಿರುವ ಚಿಕ್ಕ ಗೂಡುಗಳು (ಮಾಡಗಳು) ಇದ್ದು, ಅವುಗಳಲ್ಲಿ ಸುಂದರವಾದ ಸ್ತ್ರೀ ಮೂರ್ತಿಗಳಿವೆ. ಐದನೆಯ ಸಾಲಿನಲ್ಲಿ ಗಿಡ್ಡಾದ ಕಂಬಗಳು, ಎರಡು ಕಂಬಗಳ ನಡುವೆ ಮತ್ತೆ ಸ್ತ್ರೀಮೂರ್ತಿಗಳು, ಆರನೆಯ ಸಾಲಿನಲ್ಲಿ ಸೂರುಗಲ್ಲುಗಳು, ಬಳ್ಳಿಗಳು, ಅದರ ಮೇಲೆ ಸಣ್ಣಗೋಪುರಗಳು, ಸಿಂಹಗಳು, ಅಲ್ಲದೆ ಕೆತ್ತಿದ ಚಿಕ್ಕಚಿಕ್ಕ ಸುಂದರಮೂರ್ತಿಗಳಿವೆ. ಏಳನೆಯ ಸಾಲಿನಲ್ಲಿ ಅಲಂಕಾರದ ಬಳ್ಳಿಗಳು ಕೆತ್ತಲ್ಪಟ್ಟಿವೆ. ನಡುವೆ, ಮಹಾಭಾರತ ರಾಮಾಯಣದಲ್ಲಿಯ ಚಿತ್ರಗಳು, ಬೇರೆ ಸುಂದರವಾದ ಕೆತ್ತಿಗೆಯ ಕೆಲಸವೂ ಇದೆ. ಕಲ್ಲಿನಲ್ಲಿ ಕೊರೆದು ರಂಧ್ರ ಮಾಡಿದ ಹಲವು ಗೋಡೆಗಳಿವೆ. ಅವುಗಳಲ್ಲಿಯ ಕೆಲಸವು ಹೂ-ಬಳ್ಳಿಗಳ ಚಿತ್ರ, ಕೆಲವೆಡೆ ವಾಮನ ಅವತಾರ, ಕಾಳಿಂಗಮರ್ದನ ಮುಂತಾದ ಚಿತ್ರಗಳಿವೆ.

ದೇವಾಲಯದಲ್ಲಿಯ ಕಂಭ, ಕಲ್ಲಿನಗೋಡೆ, ಒಳಮಾಳಿಗೆ ಮುಂತಾದ ಯಾವ ಭಾಗವೂ ಬರಿದಾಗಿರದೆ ಒಂದಿಲ್ಲೊಂದು ಬಗೆಯ ಕೆತ್ತನೆಯ ಕೌಶಲ್ಯದಿಂದ ಮೆರೆಯುತ್ತಿದೆ. ದುಂಡುದುಂಡಾಗಿರುವ ಕುಸುರಿನ ಕೆಲಸದ ವೈಭವವನ್ನು ತೋರಿ ಜನರ ಕಣ್ಣುಗಳನ್ನು ಕುಕ್ಕಿಸುವ ನುಣುಪಾದ ಲಕಲಕ ಹೊಳಿಯುತ್ತಿರುವ ಕಂಭಗಳನ್ನು ನೋಡಿದರೆ ಕಂಭಗಳನ್ನು ಯಾವ ಯಂತ್ರದ ಗಾಡಕ್ಕೆ ಹಿಡಿದು ಅಷ್ಟು ನಯ-ನುಣುಪುಗೊಳಿಸಿದರೆಂಬುದು ತಿಳಿಯದಾಗಿ ಮನುಷ್ಯನ ಮನಸ್ಸು ದಂಗಾಗುತ್ತದೆ. ಕಂಬಗಳಮೇಲೆ, ಒಂದೊಂದೆಡೆಯಲ್ಲಿ ಬೋದಿಗೆಯ ಮೇಲೆ ದೊಡ್ಡಕಲ್ಲಿನಲ್ಲಿ ಕೆತ್ತಲ್ಪಟ್ಟ ಸುಂದರವಾದ ಮೂರ್ತಿಗಳು ನಿಲ್ಲಿಸಲ್ಪಟ್ಟಿವೆ. ಇವುಗಳಿಗೆ ಮದನ ಕೈಗೊಂಬೆಗಳೆನ್ನುವರು. ಇವೆಲ್ಲವೂ ಹೆಣ್ಣುಗೊಂಬೆಗಳು. ಇವು ದೇವಾಲಯದ ಸುತ್ತಲೂ ಇವೆ. ಇವುಗಳ ನಿಲುವಿಕೆ, ಮುಖ, ಕೈಗಳಬೆಡಗು ಬಲು ಸೊಗಸಿನದಾಗಿದೆ. ಒಬ್ಬ ಮನುಷ್ಯನಿಗಾಗಲಿ, ಹೆಂಗಸಿಗಾಗಲಿ, ಆ ತೆರನಾಗಿ ನಿಲ್ಲುವದೆಂದರೆ, ಕೆಲದಿನ ರೂಢಿ ಮಾಡಬೇಕಾಗುವದು. ಈ ಮದನ ಕೈ ಚಿತ್ರಗಳ ಸೌಂದರ್ಯವನ್ನು ಅಷ್ಟಿಷ್ಟೆಂದು ಹೊಗಳಲು ಮನುಷ್ಯನ ನಾಲಿಗೆ ಸಾಲದು.

ಈ ಗೊಂಬೆಗಳಲ್ಲಿ ಒಂದು ಗೊಂಬೆಯನ್ನು ಬೇಟೆಯಲ್ಲಿ ಕೊಂದ ಚಿಗರಿಯನ್ನು ತನ್ನ ಕೋಲಿನ ತುದಿಗೆ ಸಿಕ್ಕಿಸಿ ಹೊತ್ತಿಕೊಂಡಿರುವದಾಗಿ ಕೆತ್ತಲ್ಪಟ್ಟಿದೆ. ಇನ್ನೊಂದು ಗೊಂಬೆಯು ಕಾಲಿನಲ್ಲಿ ನಟ್ಟ ಮುಳ್ಳನ್ನು ತೆಗೆದುಕೊಳ್ಳುವಂತೆಯೂ ಮತ್ತೊಂದು ಗೊಂಬೆಯು ಕೆಳಗೆ ಕುಳಿತು, ಮುಳ್ಳನ್ನು ತೆಗೆಯುತ್ತಿರುವಂತೆಯೂ ಕೆತ್ತಲಾಗಿದೆ; ಇನ್ನೊಂದು ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವಂತಿದೆ; ಮಗದೊಂದು ಗೊಂಬೆಯು ತಾನು ಉಟ್ಟ ಬಟ್ಟೆಯಲ್ಲಿ ಚೇಳು ಕಂಡದ್ದರಿಂದ ತನ್ನ ಸೀರೆಯನ್ನು ಬಿಚ್ಚಿ ಹಾಕಿದಂತೆಯೂ ಒಳಗಿದ್ದ ಚೇಳು ಕೆಳಗೆ ಬಿದ್ದಂತೆಯೂ ಕೆತ್ತಲ್ಪಟ್ಟಿದೆ. ಇವೆಲ್ಲವುಗಳನ್ನು ಕಲ್ಲಿನಲ್ಲಿ ಕೆತ್ತಿರುವದನ್ನು ನೆನೆಸಿಕೊಂಡರೆ, ಮನಸು ಬೆಪ್ಪಾಗುತ್ತದೆ. ಪ್ರತಿಯೊಂದು ಗೊಂಬೆಯ ಕೆಳಮಗ್ಗಲಿಗೆ ಅದನ್ನು ಕೆತ್ತಿದ ಶಿಲ್ಪಿಯ ಹೆಸರು ಇದೆ.

---

## ೧೪

# ಸಂಗಮನಾಥನು ಬಸವೇಶ್ವರರನ್ನು

## ಕಲ್ಯಾಣಕ್ಕೆ ಕಳಿಸಿದ್ದು

(ಕ್ರಿ. ಶ. ೧೧೪೪)

[ ಬಸವಣ್ಣನವರ ತಂದೆಯ ಹೆಸರು ಮಾದಿರಾಜ. ತಾಯಿ ಮಾದಲಾಂಬಿಕೆ. ಚಿಕ್ಕವರಿರುವಾಗಲೆ ಬಸವಣ್ಣನವರು ಮುಂಜಿವೆ ಒಲ್ಲೆಂದು ತಾಯಿ-ತಂದೆಗಳೊಡನೆ ಜಗಳವಾಡಿದರು. ಅಕ್ಕನಾಗಮ್ಮನವರೊಡನೆ ತಂದೆಯ ಮನೆ ಬಿಟ್ಟು, ಬಾಗೇವಾಡಿಯಲ್ಲಿಯ ಶಿವಭಕ್ತರಲ್ಲಿದ್ದರು. ಅಲ್ಲಿಂದ ಸಂಗಮಕ್ಷೇತ್ರಕ್ಕೆ ಹೋದರು. ಅಲ್ಲಿ ಕೆಲಕಾಲ ಇದ್ದು, ದೇವರ ಸೇವೆಮಾಡುತ್ತಿರುವಾಗ ಭಕ್ತವತ್ಸಲನಾದ ಸಂಗಮನಾಥನು ಕನಸಿನಲ್ಲಿ ಬಂದು ಬಸವಣ್ಣನವರಿಗೆ ಕಲ್ಯಾಣಕ್ಕೆ ಹೋಗಲು ಹೇಳಿದನು. ಈ ಕಥೆಯನ್ನು ಹರಿಹರಕವಿಯ ಬಸವರಾಜದೇವರ ರಗಳೆಯಿಂದ ಬರೆಯಲಾಗಿದೆ.

ಸಂಗಮದೊಳಗೆ ದೇವರ ಸೇವೆಯಲ್ಲಿ ಮೈಮರೆತು ಬಸವಣ್ಣನವರು ಇರುತ್ತಿದ್ದರು. ಆಗ ಒಂದು ದಿನ ರಾತ್ರಿ ಈ ಕನಸು ಕಂಡರು:—ಎಳೆ ಬಿಸಿಲಿನಂತೆ ಹೊಳೆಯುವ, ಹುಲಿತೊಗಲನ್ನು ಹೊದ್ದಿರುವ ಸಂಗಮ

ನಾಥನು ಕನಸಿನಲ್ಲಿ ಬಂದು, 'ಮಗನೆ! ಬಸವ! ಬಸವಣ್ಣ! ನಿನ್ನ ಹೆಸರು ಜಗದೊಳಗೆ ಮೆರೆಯಬೇಕೆಂದು ನನ್ನ ಅಪೇಕ್ಷೆ; ಆದುದರಿಂದ ನೀನು ಬಿಜ್ಜಳನಿರುವ ಕಲ್ಯಾಣಕ್ಕೆ ಹೋಗು' ಎಂದು ಹೇಳಿ ಮಾಯವಾದನು. ಬಸವಣ್ಣನವರಿಗೆ ಎಚ್ಚರಿಕೆ ಆಯಿತು. ಕಣ್ಣೊರಸಿಕೊಂಡು ಅತ್ತಿತ್ತ ನೋಡಿದರು. ಯಾರೂ ಇರಲಿಲ್ಲ. ಅಶ್ಚರ್ಯವೆನಿಸಿತು. ಕೆಲಹೊತ್ತು ಹುಚ್ಚು ಹಿಡಿದಂತೆ ಕುಳಿತರು. ಪೂರಾ ಚೇತರಿಸಿಕೊಂಡಬಳಿಕ ದೇವರನ್ನು ಬಿಟ್ಟು ಅಗಲಿರಲು ಆಗದುದಕ್ಕಾಗಿ ದುಃಖದಿಂದ ಕಂಗೆಟ್ಟು, 'ದೇವ ದೇವ ಸಂಗ! ಪರಮ ಬಂಧುವೇ! ಪ್ರಾಣವೇ! ನೀನು ಹೀಗೆ ಆಡಬಹುದೆ? ಮನೆಯಲ್ಲಿಟ್ಟುಕೊಂಡು ಸಲಹಿದವನನ್ನು ಹೊರಗೆ ಹೋಗೆನ್ನುವದು ಸರಿಯೆ? ನಂಬಿದವರ ಕೊರಳ ಕೊಯ್ಯುವರೆ? ಕೂಸನ್ನು ಕೊಲ್ಲುವರೆ? ನನ್ನ ಬಿಟ್ಟು ಅಗಲುವದುಂಟೇ? ಇಷ್ಟು ದಿನ ನಾನು ನಿನ್ನನ್ನು ಸೇವಿಸಿದ್ದಕ್ಕೆ ಇದೇ ಫಲವೇ? ಕರುಣಿ, ಇನ್ನೇನು? ಮುಂದೇನು?' ಎಂದು ನೆಲದ ಮೇಲೆ ಬಿದ್ದು ಹೊರಳಾಡಿ ಸಂಗಮನಾಥನನ್ನು ಅಪ್ಪಿಕೊಂಡು, ಪರಿಪರಿಯಿಂದ ಹಲುಬಿ, ಬೇಡಿಕೊಂಡು ಗೋಳಿಟ್ಟು, ಅತ್ತತ್ತು ಬಿಕ್ಕುತ್ತ, ಬೇಸತ್ತರು.

ರಾತ್ರಿ ಆಯಿತು. ಸುಮ್ಮನಿರಲಿಕ್ಕಾಗದೆ, ಆ ದುಃಖದೊಳಗೇ ಹೊ ಮುಂತಾದವುಗಳಿಂದ ದೇವರನ್ನು ಪೂಜಿಸಿ, ನೈವೇದ್ಯವನ್ನು ಸಮರ್ಪಿಸಿದರು. ಮನಸಿನಲ್ಲಿ 'ಸಂಗಮನಾಥನು ತನಗೆ ಹೋಗೆಂದನಲ್ಲ' ಎಂಬುವ ಕೊರಗು ಎಡೆಬಿಡದೆ ಕೊರೆಯುತ್ತಿತ್ತು. ದೇವರ ಮೇಲಿನ ಸಿಟ್ಟಿನಿಂದ ಪ್ರಸಾದವನ್ನು ಸ್ವೀಕರಿಸದೆ, ಮುಸುಕು ಹಾಕಿಕೊಂಡು, ಸಂಗಮನಾಥನ ಪಾದವಲ್ಲಿಯೇ ಮನವಿಟ್ಟು ನೆಲದ ಮೇಲೆ ಒರಗಿದರು.

ಸಂಗಮನಾಥನಿಗೆ ಬಸವಣ್ಣನವರಿಗಾದ ದುಃಖದ ಕೊರಗನ್ನು ಕಂಡು ಕಳವಳವೆನಿಸಿತು. ಅವರ ಭಕ್ತಿಯ ಭರವನ್ನು ಕಂಡು ಕೌತುಕಪಟ್ಟನು. ತನ್ನನ್ನು ಅಗಲಲು ಒಲ್ಲೆನ್ನುವ ಮಗನ ವಿಷಯದಲ್ಲಿ ಬಲು ಕನಿಕರ ಹುಟ್ಟಿತು. ಆ ದಿನ ರಾತ್ರಿ ಮತ್ತೆ ಕನಸಿನೊಳಗೆ ದೇವರು ಕಾಣಿಸಿಕೊಂಡು 'ಎಲೆ ಮಗನೆ, ಎಲೆ ಕಂದ, ಬಸವ! ನಿನ್ನ ಅಗಲಿ ನಾನು ಇರಲಾರೆ; ಇಷ್ಟು ಹಟವೇಕೆ? ಭಕ್ತಿನಿಧಿಯೆ, ನಾನೂ ನಿನ್ನೊಡನೆ ಬರುವೆ. ನೀನು ಕಲ್ಯಾಣಕ್ಕೆ ನಡೆ,' ಎಂದು ಮತ್ತೆ ನುಡಿದನು.

"ಸಂಗಮನಾಥನು ಕನಸಿನಲ್ಲಿ ಬಂದು, 'ಕಲ್ಯಾಣಕ್ಕೆ ನಡೆ' ಎಂದು ಮತ್ತೆ ಹೇಳಿದನಲ್ಲ! ಕಲ್ಯಾಣಕ್ಕೆ ಹೋಗಿಯಾದರೂ ನನ್ನಲ್ಲಿ ಶಿವಭಕ್ತಿ ಬೇರೂರುವಂತೆ ಶಿವಭಕ್ತ ಜನರ ಸೇವೆ ಮಾಡುವೆನು. ಶಿವಶರಣರ ಕರುಣೆ ಎಂಬ ನೀರೊಳಗೆ ಈಸಾಡುವೆನು" ಹೀಗೆಂದು ಮನಸಿನಲ್ಲಿ ಯೋಚಿಸಿ, ಮೈಯಲ್ಲಿ ತಕ್ಕ ಉಡುಪನ್ನು ಹಾಕಿಕೊಂಡು, ಸಂಗಮನಾಥನ ಹತ್ತಿರಕ್ಕೆ ಬಂದು, ಕೈಮುಗಿದುಕೊಂಡು ನಿಂತರು. ತಾಯಿಯನ್ನು ಅಗಲಲಿಕ್ಕಾಗದೆ ಮಿಡುಕುವ ಮಕ್ಕಳಂತೆ, ಬಸವಣ್ಣನವರ ಮನವು ಕಂದಿ ಕುಂದಿವೆ, ಕಣ್ಣುಗಳೊಳಗಿಂದ ನೀರು ದಳದಳ ಒಂದೇಸವನೆ ಧಾರೆಗಟ್ಟಿ ಸುರಿಯುತ್ತಿವೆ, ಅಳುವು ಒತ್ತರಿಸಿ ಬರುತ್ತಿದ್ದೆ, ಗಂಟಲ ಸಿರಗಳು ಬಿಗಿದುಹೋಗಿವೆ. ಇಂಥ ಸ್ಥಿತಿಯಲ್ಲಿ 'ಸಂಗ, ಹೋಗಿ ಬರುವೆನಯ್ಯ. ನಿನ್ನನ್ನು ನಂಬಿ ಹೋಗುತಿರುವೆ, ನಿನ್ನನ್ನು ಬಿಟ್ಟು ಅಗಲಲಾರೆ, ಅಗಲಲಾರೆ' ಎಂದೆನುತ ಕೈಮುಗಿದುಕೊಂಡು ನಿಂತರು. ಕಾಲುಗಳು ಮುಂದಕೆ ಏಳದಾದವು. ಸಂಗನ ಮೇಲೆ ನೆಟ್ಟ ದೃಷ್ಟಿಯನ್ನು ತಿರುಗಿಸಲಿಕ್ಕಾಗಲೊಲ್ಲದು.

ಆಗ, ಸಂಗಮನಾಥನಿಗೆ ಮುಂದೆ ನಿಂತುಕೊಂಡಿರುವ ಬಸವನನ್ನು ಕಂಡು ಎದೆ ಕರಗಿತು, ಮನ ಮರುಗಿತು, ತಡೆದು ನಿಲ್ಲಲಿಕ್ಕಾಗದೆ ಬಂದು ಬಸವಣ್ಣನವರನ್ನು ಅಪ್ಪಿಕೊಂಡು, ಕಣ್ಣೀರನ್ನು ತನ್ನ ಕೈಯಿಂದ ಒರಸಿ, 'ಬೇಡೆನ್ನ ಕಂದ, ಬೇಡ; ನಿನ್ನೊಡನೆ ನಾನೂ ಬರುವೆ, ನಿನ್ನಾಣೆ ನೋಡು, ನಿನ್ನಗಲಿ ಇರುವದಾದೀತೇ ಬಸವ! ನೀನಿಷ್ಟು ಅಳುವಿಯೆಂದು ನಾನು ತಿಳಿದಿರಲಿಲ್ಲ. ನಿನ್ನ ಹಿಂದಿನಿಂದಲೇ ಬರುವೆ. ನೀನು ನಿಂತಲ್ಲಿ ನಿಲ್ಲುವೆ, ನಡೆದಲ್ಲಿ ನಡೆಯುವೆ, ಆಡಿದುದನು ಆಡುವೆ, ಹಿಡಿದುದನು ಹಿಡಿಯುವೆ, ಮಾಡಿದುದನ ಮಾಡುವೆ, ನಡೆ, ಭೂಮಿಗೆ ಒಡೆಯನಾಗಿ ಬಾಳು,' ಎಂದು ನುಡಿದನು.

## ೧೫
## ಶರಣಶಿರೋಮಣಿಗಳಾದ
# ಶ್ರೀ ಬಸವೇಶ್ವರ ಚರಿತ್ರೆ
( ಕ್ರಿ. ಶ. ೧೧೩೨—೧೧೬೭ )

[ಬಿಜ್ಜಳನ ಆಳಿಕೆಯಲ್ಲಿ ಶ್ರೀ ಬಸವೇಶ್ವರವರ ಕಾರ್ಯವೇ ಮಹತ್ತ್ವವುಳ್ಳದ್ದು; ಈ ವಿಷಯುವನ್ನು 'ಭಕ್ತಿಭಂಡಾರಿ ಬಸವಣ್ಣನವರು' 'ಬಸವೇಶ್ವರರೂ ಅಸ್ಪೃಶ್ಯತೆಯೂ' ಎಂಬ ಪುಸ್ತಕಗಳ ಆಧಾರದಿಂದ ಬರೆಯಲಾಗಿದೆ.]

ವಿಜಾಪೂರ ಜಿಲ್ಹೆಯಲ್ಲಿ ಬಾಗೇವಾಡಿ ಎಂಬುದೊಂದು ಊರು ಇದೆ. ಅದೀಗ ತಾಲೂಕಿನ ಸ್ಥಳವಾಗಿದೆ. ಹಿಂದಕ್ಕೆ ಅದಕ್ಕೆ ಇಂಗಳೇಶ್ವರ ಬಾಗೇವಾಡಿ ಅನ್ನುತ್ತಿದ್ದರು. ಅಲ್ಲಿ ಮಾದಿರಾಜ ಅಥವಾ ಮಾದರಸ ಎಂಬ ಒಬ್ಬ ಶೈವ ಬ್ರಾಹ್ಮಣನಿದ್ದ. ಅವನ ಹೆಂಡತಿ ಮಾದಲಾಂಬಿಕೆ. ಅವರಿಬ್ಬರಿಗೂ ಶಿವನಲ್ಲಿ ಬಹು ಭಕ್ತಿ. ಶಿವನ ಪ್ರಸಾದದಿಂದ ಅವರಿಗೆ ಒಂದು ಗಂಡುಕೂಸು ಹುಟ್ಟಿತು. ಅದಕ್ಕೆ ಬಸವ ಎಂದು ಹೆಸರಿಟ್ಟರು. ಬಸವನು ದಿನದಿನಕ್ಕೆ ಬೆಳೆಯಹತ್ತಿದನು. ಚಿಕ್ಕಂದಿನಲ್ಲಿ ಮಾದಿರಾಜನು ಮಗನನ್ನು ಅಯ್ಯನವರ ಶಾಲೆಗೆ ಕಳಿಸಿ ಅವನಿಗೆ ಅಕ್ಷರಾಭ್ಯಾಸ ಮಾಡಿಸಿದನು. ಆಗಿನ ಅಭ್ಯಾಸವೆಂದರೆ, ಓದು-ಬರೆಹ ಲೆಕ್ಕ ಇವಿಷ್ಟು. ಬಸವಣ್ಣನು ತನ್ನ ಗುರುಗಳು ಕಲಿಸಿದುದನ್ನೆಲ್ಲ ಕಲಿಯುವದಲ್ಲದೆ, ಆಗಾಗ್ಗೆ ದೇವರು-ದಿಂಡರಲ್ಲಿ ಬಹಳ ವಿಶ್ವಾಸತೋರಿಸುತ್ತಿದ್ದನು. ಅವನು ತೋರಿಸುವ ಭಕ್ತಿ-ವಿಶ್ವಾಸಗಳನ್ನು ನೋಡಿದರೆ, ಅವನು ಸಾಮಾನ್ಯ ಹುಡುಗನಲ್ಲವೆಂದು ಎಲ್ಲರೂ ಅಂದು ಆಶ್ಚರ್ಯಪಡುತ್ತಿದ್ದರು.

ಮಗನು ಎಂಟುವರ್ಷದವನಾದ ಕೂಡಲೆ ಮುಂಜಿವೆ ಮಾಡಬೇಕೆಂದನು ಮಾದಿರಾಜನು. ಮನೆಯಲ್ಲಿ ಈ ವಿಷಯವಾಗಿ ತಾಯಿ-ತಂದೆ ಮಾತನಾಡುವ ಸಮಯದಲ್ಲಿ ಬಸವನು ಚಿಕ್ಕವನಾದಾಗ್ಯೂ ಬಹು ದಿಟ್ಟತನದಿಂದ 'ನನಗೆ ಈ ಮೊದಲೇ ವೀರಶೈವ ದೀಕ್ಷೆಯಾಗಿದೆ; ನಾನು ಮುಂಜಿವೆ ಮಾಡಿಕೊಳ್ಳುವದಿಲ್ಲ' ಎಂದು ಎದುರುನುಡಿದನು. ಚಿಕ್ಕ ಮಗುವಿನ ಮಾತುಗಳನ್ನು ತೆಗೆದುಕೊಂಡು ಮಾಡುವದೇನು? ಎಂದು ಮಾದಿರಾಜನು ಮುಂಜಿವೆಯ ಸಿದ್ಧತೆ ನಡಿಸಿದನು. ಬಸವನ ಹಟವು ಬದಲಾಗಲಿಲ್ಲ. ಚಿಕ್ಕವನಾದರೂ ತನ್ನ ಹಟವನ್ನೇ ಸಾಧಿಸುತ್ತಿರುವದನ್ನು ಕಂಡು

ಮಾದಿರಾಜನಿಗೆ ಸಿಟ್ಟು ತಲೆಗೇರಿತು ಬಾಲ ಬಸವಣ್ಣನನ್ನು ಹೊರಗೆ ಹಾಕಿದನು. ಬಸವಣ್ಣನು ಎಳ್ಳಷ್ಟೂ ಹೆದರದೆ ಮನೆ ಬಿಟ್ಟು ಹೊರಟನು. ಬಸವಣ್ಣನ ಸಂಗಡವೇ ಅಕ್ಕ ನಾಗಮ್ಮನೂ ಇದ್ದಳು.

ಬಾಲ ಬಸವಣ್ಣನು ತನ್ನ ನಿಜವಾದ ತಾಯಿ-ತಂದೆಯಾದ ಸಂಗಮ ನಾಥನಿರುವ ಸಂಗಮ ಕ್ಷೇತ್ರಕ್ಕೆ ನಡೆದು ಅಲ್ಲಿ ಭಗವಂತನ ಪೂಜೆ-ಚಿಂತನಾದಿ ಗಳಲ್ಲಿ ಎಲ್ಲವನ್ನೂ ಮರೆತು ಇದ್ದನು. ಹೀಗಿರುವಾಗ ಜಾತವೇದ ಮುನಿ ಗಳೆಂಬುವರು ಅವನಿಗೆ ದೇವರನ್ನು ಪಡೆಯುವ ಮಾರ್ಗವನ್ನು ಹೇಳಿ ಕೊಟ್ಟರು.

ಬಸವಣ್ಣನವರು ಚಿಕ್ಕವಯಸ್ಸಿನಲ್ಲಿಯೇ ಈಮೇರೆಗೆ ಬರಿಯ ದೇವರ ಸೇವೆಯಲ್ಲಿಯೇ ಕಾಲಕಳೆಯುತ್ತಿರುವದನ್ನು ಕಂಡು ಎಲ್ಲರಿಗೂ ದೊಡ್ಡ ಅಚ್ಚರಿ ಎನಿಸಿತು. ದಿನ ರಾತ್ರಿ ದೇವರ ಸೇವೆಯಲ್ಲಿರುವದರಿಂದ ಬಸವಣ್ಣ ನವರ ಮನಸು ತಿಳಿಯಾಯಿತು; ಬುದ್ಧಿ ಬೆಳಗಿತು; ಅಂತಃಕತಣವು ಹೂವಿ ನಂತೆ ಮಿದುವಾಯಿತು. ಅವರ ಮುಖದಲ್ಲಿ ಭಗವದ್ಭಕ್ತಿಯ ಮೆರಗು, ಕಣ್ಣು ಗಳಲ್ಲಿ ಭಕ್ತಿಯ ಕಿರಣ, ಮಾತಿನಲ್ಲಿ ದೇವರ ಪ್ರಸಾದದ ಮಿಂಚು, ಇವು ಎಡೆಬಿಡದೆ ಹೊಳೆಯಲಾರಂಭಿಸಿದವು. 'ನಾನು' 'ನನ್ನ' ದೆಂಬುವ ಹುಚ್ಚು ಕಡಿಮೆ ಆಯಿತು. ತಮ್ಮ ತಪ್ಪುಗಳನ್ನು ಜನರಿಗೆ ಹೇಳಲಿಕ್ಕೂ ಕೇಳಲಿಕ್ಕೂ ನಾಚಿಕೆ ಎನಿಸದಾಯಿತು. ಈ ಸ್ಥಿತಿಯಲ್ಲಿ ಬಸವಣ್ಣನವರು ತಮ್ಮ ತಪ್ಪು ಗಳನ್ನು ತಾವೇ ಹೇಳಿಕೊಂಡು ಕೊರಗಿದ್ದಾರೆ, ಮರುಗಿದ್ದಾರೆ. ಸಂಗಮ ಕ್ಷೇತ್ರದಲ್ಲಿರುವ ವರೆಗೆ ಬಸವಣ್ಣನವರು ಭಗವಂತನ ಸಾಧನೆಯಲ್ಲಿಯೇ ಇದ್ದರು. ಅಲ್ಲಿಯ ಕೆಲಸ ಮುಗಿದನಂತರ ಅವರು ಕಲ್ಯಾಣಕ್ಕೆ ಹೊರಟರು. ಅಷ್ಟೊತ್ತಿಗೆ ಅವರ ಹೆಸರು ಎಲ್ಲೆಡೆಯಲ್ಲಿ ಹರಡಿತ್ತು.

ಆಗ ಕಲ್ಯಾಣ ( ಈಗ ಕಲಬುರ್ಗಿಯಿಂದ ಮೂವತ್ತು ಮೈಲಿನಮೇಲಿ ರುವ ಊರು ) ವು ಬಿಜ್ಜಳನ ರಾಜಧಾನಿಯಾಗಿತ್ತು. ಅವನಲ್ಲಿ ಬಲದೇವ ನೆಂಬ ಮಂತ್ರಿ ಇದ್ದನು. ಈ ಬಲದೇವನು ಬಸವಣ್ಣನವರ ಸೋದರಮಾವ ನಾಗಿದ್ದನು. ಅವನು ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನ ವರಿಗೆ ಕೊಟ್ಟು ಮದುವೆಮಾಡಿದನು. ಬಸವಣ್ಣನವರಿಗೆ ಮಾವನ ಮನೆ ಯಲ್ಲಿ ಸುಮ್ಮನೆ ಇರುವದು ಸರಿದೋರಲಿಲ್ಲ. ದೊಡ್ಡವರಾದ ಮೇಲೆ ತಮ್ಮ

ಅನ್ನವನ್ನು ತಾವು ದುಡಿದು ಗಳಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಶಿವಭಕ್ತರಿಗೆ ಮೇಲು-ಕೀಳು ಕೆಲಸವೆಂಬುದಿಲ್ಲ. ಮಾಡುವ ಕೆಲಸವೇ ಪೂಜೆ. ಅದನ್ನು ಭಕ್ತಿಯಿಂದಲೂ ಆಸೆ-ಮೋಸವಿಲ್ಲದೆ ದೇವರಿಗೆ ಅರ್ಪಿಸಿ ಮಾಡುವದೇ ಮುಖ್ಯ ಗುರಿ. ಅದಕ್ಕೆ ಕಾಯಕವೆಂದು ಹೆಸರು. ಹೀಗಿರುವದರಿಂದ ಬಸವಣ್ಣನವರು ಎಲ್ಲಕ್ಕೂ ಮೊದಲು ಸಿದ್ದಣ್ಣ ಮಂತ್ರಿಯ ಕೈಯಲ್ಲಿ ಗುಮಾಸ್ತರಾಗಿದ್ದರು. ಕೆಲಸದಲ್ಲಿ ಅಚ್ಚುಕಟ್ಟುತನ, ಪ್ರಾಮಾಣಿಕತೆ, ಇವು ಬಸವಣ್ಣನವರು ಮಾಡುವ ಕೆಲಸದ ಕೀಲಗಳಾಗಿದ್ದರಿಂದ ಅವರ ಸ್ವಭಾವ, ಸುಗುಣಗಳು ಎಲ್ಲರಿಗೆ ಗೊತ್ತಾಗಿ ಮೇಲಾದ ಸತ್ಯವಂತರೆಂದು ಹೆಸರು ಪಡೆದರು. ಸಿದ್ದಣ್ಣ ಮಂತ್ರಿಯು ತನ್ನ ಮಗಳಾದ ನೀಲಾಂಬಿಕೆಯನ್ನು ಬಸವಣ್ಣನವರಿಗೆ ಕೊಟ್ಟು ಮದುವೆ ಮಾಡಿದನು.

ಆ ಕಾಲಕ್ಕೆ ವಿದ್ಯೆಗಿಂತ ಸದ್ಗುಣಗಳಿಗೆ ಹೆಚ್ಚಿನ ಬೆಲೆ ಇತ್ತು. ದುಡ್ಡಿಗಿಂತ ಸತ್ಯವಂತಿಕೆಗೆ ಜನರು ಮರುಳಾಗುತ್ತಿದ್ದರು. ಬಸವಣ್ಣನವರಲ್ಲಿ ಅದು ಯಾರಲ್ಲಿರದಷ್ಟು ಎದ್ದು ಕಾಣಿಸುತ್ತಿದ್ದಿತು. ಲೋಭ-ಆಸೆಗಳಿಂದಲೇ ಮನುಷ್ಯನ ಜೀವನಕ್ಕೆ ಹುಳಹತ್ತುವದು. ಆ ಲೋಭ-ಆಸೆಗಳ ಸೋಂಕು ಬಸವಣ್ಣನವರ ಮನಸ್ಸಿಗೆ ಇರಲಿಲ್ಲ. ಇದರಿಂದ ಎಲ್ಲರಿಗೂ ಅವರು ಮಹಾನುಭಾವರಾಗಿ ಕಾಣಿಸಿದರು. ಅವರ ವರ್ತಮಾನವು ಬಿಜ್ಜಳನಿಗೂ ತಿಳಿಯಿತು. ಅವನೂ ಬಸವಣ್ಣನವರಲ್ಲಿ ಆದರ-ವಿಶ್ವಾಸ ತೋರಿಸುತ್ತಿದ್ದನು.

ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಬಲದೇವಮಂತ್ರಿ ಮಡಿದನು. ಮಂತ್ರಿ ಪದಕ್ಕೆ ನಾನು ತಾನೆಂದು ಜನರು ಮೇಲೇರಿ ಬರಹತ್ತಿದರು. ಬಸವಣ್ಣನವರು ತಮ್ಮ ಕೆಲಸದಲ್ಲಿ ತಾವು ತಣ್ಣಗೆ ಇದ್ದರು. ಅವರಿಗೆ ಇದಾವುದರ ಸುದ್ದಿ ಗೊತ್ತಿಲ್ಲ. ತಾವಾಯಿತು, ತಮ್ಮ ಕೆಲಸವಾಯಿತು, ತಮ್ಮ ಶಿವಭಕ್ತಿ ಆಯಿತು; ಮತ್ತೊಂದು ಕೆಲಸಕ್ಕೆ ಮನಗೊಡುತ್ತಿರಲಿಲ್ಲ. ಅವರ ಶಾಂತ ಮತ್ತು ಸಮಾಧಾನದ ಗುಣ, ಒಬ್ಬರ ವಿಷಯಕ್ಕೆ ಕೆಡಕು ಬುದ್ಧಿ ಇಲ್ಲದಿರುವದನ್ನು ಕಂಡೇ ಬಿಜ್ಜಳನು ಬಸವಣ್ಣನವರನ್ನು ಮಂತ್ರಿಯನ್ನಾಗಿ ಮಾಡಿಕೊಂಡನು. ರಾಜ್ಯದ ಕೆಲವು ಭಾರವನ್ನವರಿಗೆ ಒಪ್ಪಿಸಿದನು. ಬಸವಣ್ಣನವರಿಗೆ ಮಂತ್ರಿಪದ ಬೇಕಿರಲಿಲ್ಲ; ಆ ದೊಡ್ಡಿಸ್ತಿಕೆ ಬೇಕಿರಲಿಲ್ಲ; ಅದರಿಂದ ವಿಪುಲ ಹಣಗಳಿಸಿ, ಮನೆಮಾರು ಕಟ್ಟಿಸಬೇಕು,

ಆಸ್ತಿ ಸಂಪಾದಿಸಬೇಕೆಂಬ ಆಸೆ ಇರಲಿಲ್ಲ. ಗಳಿಸಿದ ಹಣವನ್ನೆಲ್ಲ ಶಿವ ಶರಣರಿಗಾಗಿ, ದೇವರಿಗಾಗಿ ಉಪಯೋಗಿಸಬೇಕೆಂಬುದೇ ಅವರ ನಿಯಮ, ಇದಕ್ಕೆ ಮೀರಿ ನಡೆದರೆ ತಲೆಯನ್ನೇ ದಂಡವೆಂದು ಅರ್ಪಿಸುವೆನೆಂದು ಅವರು ನುಡಿದಿರುವರು.

ಬಸವಣ್ಣನವರು ಮಹಾ ಭಕ್ತರಾದ್ದರಿಂದ ಅವರ ಕಣ್ಣಿಗೆ ಎಲ್ಲರೂ ಶಿವನಂತೆಯೇ ಕಾಣಿಸುತ್ತಿದ್ದರು. ಒಂದು ದಿನ ರಾತ್ರೆ ಒಬ್ಬ ಕಳ್ಳನು ಜಂಗಮ ನಂತೆ ಸುಳ್ಳು ವೇಷ ಹಾಕಿಕೊಂಡು ಬಸವಣ್ಣನವರು ಮಲಗಿದ್ದ ಕೋಣೆಯಲ್ಲಿ ಹೊಕ್ಕನು. ಬಸವಣ್ಣನವರಿಗೂ ಅವರ ಹೆಂಡತಿ ನೀಲಾಂಬಿಕೆಗೂ ನಿದ್ದೆ ಹತ್ತಿರುವದನ್ನು ಕಂಡು, ಮೆಲ್ಲಗೆ ಆಕೆಯ ಮೈಮೇಲಿನ ವಸ್ತು-ಒಡವೆಗಳನ್ನು ಉಚ್ಚಿಕೊಳ್ಳಹತ್ತಿದನು. ನೀಲಾಂಬಿಕೆಗೆ ಎಚ್ಚರಿಕೆಯಾಗಿ, ಪತಿರಾಜರ ನ್ನೆಬ್ಬಿಸಿದಳು. ಬಸವಣ್ಣನವರಿಗೆ ಹಗಲಿರುಳು ಶಿವನ ಧ್ಯಾನ; ಬೇರೆ ಆಸೆ ಇಲ್ಲ; ವಾಸನೆ ಇಲ್ಲ. ಬಂದೀತು ಹೋದೀತು ಎಂಬುದರ ಮೋಹ-ಆಸೆಗಳಿರ ಲಿಲ್ಲ; ಆದುದರಿಂದ ಹೆಂಡತಿಯು ಎಬ್ಬಿಸಿದೊಡನೆ, ಬಸವಣ್ಣನವರು ಆ ಕಳ್ಳನು ತಮ್ಮ ಜೀವದ ಜೀವನಾದ ಕೂಡಲಸಂಗಮ ದೇವನೇ ಎಂದು 'ತೆಗೆದುಕೊಡಾ ಎಲೆ ಚಂಡಾಲಗಿತ್ತೀ, ನಮ್ಮಯ್ಯನ ಕೈ ನೊಂದಿತು' ಎಂದು ಹೆಂಡತಿಯ ಮೈಮೇಲಿನ ಒಡವೆಗಳನ್ನು ಉಚ್ಚಿಸಿ ಕೊಟ್ಟರು. ಇಂತಹ ಮಹಾ ಮಹಿಮರಿಗೆ ಮಂತ್ರಿಪದದಮೇಲೆ ಆಸೆ ಎಲ್ಲಿಯದು?

ಮಂತ್ರಿಗಳಾದನಂತರ ಬಸವಣ್ಣನವರು ರಾಜಕಾರ್ಯವನ್ನು ಅತ್ಯಂತ ನ್ಯಾಯ್ಯದಿಂದ ನಡೆಯಿಸಿದರು. ಯಾವ ಜಾತಿಯವರಿಗೂ ಪಕ್ಷಪಾತ ತೋರಿಸುತ್ತಿರಲಿಲ್ಲ. ಮನೆಗೆ ಬಂದಬಳಿಕ ಅವರು ಜಂಗಮರಿಗೆ ಊಟ-ಉಪ ಚಾರ, ಅವರ ಸೇವೆ, ಶಿವ ಧ್ಯಾನಾದಿಗಳಲ್ಲಿಯೂ ಶಿವಾನುಭವ ಚರ್ಚೆಯ ಲ್ಲಿಯೂ ಕಾಲ ಕಳೆಯುವರು. ಇವರ ಶಿವಭಕ್ತಿಯಿಂದ ಕಲ್ಯಾಣದ ತುಂಬೆಲ್ಲ ಶಿವಭಕ್ತರು ಬಂದು ನೆಲೆಗೊಂಡರು. ಬಸವಣ್ಣನವರು ಬಹು ಲೋಕಸಂಗ್ರಹಿ ಗಳಾದ್ದರಿಂದ, ಎಲ್ಲರೊಡನೆ ಹೊಂದಿಕೊಂಡು ಅತ್ಯಂತ ವಿನಯದಿಂದಲೂ ಪ್ರೀತಿಯಿಂದಲೂ ನಡೆಯುತ್ತಿದ್ದರು. ಆಗಾಗ ಶಿವಶರಣರ ಸಂಗಡ ಹೊಕ್ಕು-ಬಳಕೆ, ಮಾತು-ಕತೆ, ವಾದ-ವಿವಾದ ನಡೆಯಬೇಕೆಂದು ಅನುಭವ ಮಂಟಪವೆಂಬುವ ಸಂಘವನ್ನು ಮಾಡಿಕೊಂಡರು. ಅಲ್ಲಿ ಆಗಾಗ ಶಿವ

ಶರಣರೆಲ್ಲರೂ ಸೇರಿ ತಮ ತಮಗಾದ ಶಿವಾನುಭವದ ಚರ್ಚೆ ಮಾಡುತ್ತಿದ್ದರು. ಈ ಚರ್ಚೆ ಮಾಡುವ ಸಂಘಕ್ಕೆ ಬನವಾಸಿಯ ಅಲ್ಲಮ ಪ್ರಭುದೇವರು ಅಧ್ಯಕ್ಷ ರಿರುತ್ತಿದ್ದರು. ಬಸವಣ್ಣನವರ ದಿವ್ಯಜ್ಞಾನ, ಸದ್ಭಕ್ತಿ, ಶುದ್ಧವಾದ ಸದಾ ಚಾರ, ಇವೆಲ್ಲವುಗಳನ್ನು ಕಂಡು ಸಾವಿರಾರು ಜನರು ಆಗ ಅವರ ಮತಕ್ಕೆ ಸೇರಿದರು.

ಹೀಗೆ ಇರುತ್ತಿರಲು, ಶಿವಶರಣರ ಸಂಘಕ್ಕೆ ಸೇರಿದ ಹರಳಯ್ಯನಿಗೂ ಮಧುವಯ್ಯನಿಗೂ ಬೀಗತನವಾಯಿತು. ಹರಳಯ್ಯ ಹೊಲೆಯ, ಮಧು ವಯ್ಯ ಬ್ರಾಹ್ಮಣ. ಇಬ್ಬರೂ ಶಿವಶರಣರು. ಇದು ಜನರಿಗೂ ಬಿಜ್ಜಳನಿಗೂ ಸೇರಲಿಲ್ಲ. ಬಿಜ್ಜಳನು ಹರಳಯ್ಯ ಮಧುವಯ್ಯರ ಕಣ್ಣು ಕೀಳಿಸಿದನು. ಶಿವಶರಣರನ್ನು ಕೊಲ್ಲಿಸಿದ ಸೇಡನ್ನು ತೀರಿಸಿಕೊಳ್ಳಬೇಕೆಂದು ಶಿವಶರಣ ರಲ್ಲಿಯೂ ಈರ್ಷೆ ಹುಟ್ಟಿತು. ಆ ಬಗ್ಗೆ ಘನವಾದ ಚರ್ಚೆ ಆಯಿತು. ಬಸವಣ್ಣ ನವರಿಗೆ ಇದು ಸರಿ ಬರಲಿಲ್ಲ. ಶಿವಶರಣರು ಬಿಜ್ಜಳನ ಕೊಲೆಯ ಸಂಚು ನಡಿಸಿದರು. ಇದೆಲ್ಲವನ್ನೂ ನೋಡಲಾಗದೆ ಮಿದು-ಮನದ ಮಹಾ ಶಿವಭಕ್ತಾ ಗ್ರಣಿಗಳಾದ ಬಸವಣ್ಣನವರು ನಿಂತುಕೊಂಡ ಹಾಗೆಯೇ ಉಟ್ಟ ಪಂಜೆ, ಹೊತ್ತ ಧೋತರದ ಮೇಲೆ ಮನೆ-ಮಾರು ಬಿಟ್ಟು, ಹೆಂಡತಿಗೆ ಹೇಳಿ ಕಳಿಸಿ, ಸಂಗಮಕ್ಕೆ ನಡೆದು 'ತೆರಪುಗೊಡೈ ಸಂಗಮದೇವ' ಎಂದು ಕಣ್ಣೀರು ಸುರಿಸುತ್ತ ನಿಂತು, ಅವನಲ್ಲಿಯೇ ಐಕ್ಯವಾದರು. ಬಿಜ್ಜಳನು ಬಸವಣ್ಣನವರಿ ಗಾಗಿ ಆಮೇಲೆ ಬಲು ಹಲುಬಿದನು.

ಬಸವಣ್ಣನವರೆಂದರೆ ಕಾರುಣ್ಯದ ಮೂರ್ತಿ. ಅವರಿಗೆ ನಾನು-ನನ್ನದು ಎಂಬುವ ಮೋಹ ಇರಲಿಲ್ಲ. ಶಿವಭಕ್ತಿಗಾಗಿಯೇ ಅವರು ಹುಟ್ಟಿ ಬಂದರು. ಚಿಕ್ಕಂದಿನಿಂದ ಕೊನೆಯುವರೆಗೆ ತಮ್ಮ ವ್ರತವನ್ನೇ ಎಡೆಬಿಡದೆ ನಡಿಸಿದರು.

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,' 'ಗರ್ವ ದ್ದಿಂದ ಮಾಡುವ ಭಕ್ತಿ ದ್ರವ್ಯದ ಕೇಡು, ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ' 'ತಂದೆ ನೀವು, ತಾಯಿ ನೀವು, ನೀವಲ್ಲದೆ ಮತ್ತಾರಿಲ್ಲ ಕೂಡಲಸಂಗಮ ದೇವಾ' ಎಂದು ನುಡಿದಿರುವರು.

## ೧೬

## ಶಿವಶರಣೆಯಾದ

# ಮಹಾದೇವಿಯಕ್ಕನ ವಿರಕ್ತಿ

[ಈ ವಿಷಯವನ್ನು ಪ್ರೊ. ಕುಂದಣಗಾರ ಅವರು ಬರೆದ ಅಕ್ಕ ಮಹಾದೇವಿಯವರ ಚರಿತ್ರದಿಂದ ಸಂಗ್ರಹಿಸಿದೆ.]

ಮೈಸೂರು ಸೀಮೆಯಲ್ಲಿ ಉಡುತಡಿ ಎಂಬುವದೊಂದು ಊರು. ಅಲ್ಲಿ ನಿರ್ಮಲ ಎಂಬೊಬ್ಬ ಶಿವಭಕ್ತನಿದ್ದ. ಅವನಿಗೆ ಸುಮತಿ ಎಂಬುವ ಹೆಂಡತಿ ಇದ್ದಳು. ಶಿವನಲ್ಲಿ ಅತ್ಯಂತ ಭಕ್ತಿಯಿಟ್ಟು ಇವರು ಬಾಳ್ವೆ ನಡಿಸಿದ್ದರಿಂದ, ಇವರಿಬ್ಬರ ಹೊಟ್ಟೆಯಿಂದ ಪಾರ್ವತೀ ದೇವಿಯ ಅಂಶದವಳಾದ ಕನ್ಯೆಯು ಹುಟ್ಟಿದಳು. ಆಕೆಗೆ ಮಹಾದೇವಿ ಎಂದು ಹೆಸರಿಟ್ಟರು. ಮಹಾದೇವಿಯು ಹೆಸರಿನಂತೆ ಮಹಾ-ದೇವಿಯೇ. ಆಕೆಯ ಮುಖದಲ್ಲಿ ದೇವಾಂಶದ ಬೆಳಕು ಬೆಳಗುತ್ತಿತ್ತು. ಮಾತಿನಲ್ಲಿ ಜ್ಞಾನದ ಮಿಂಚು ಮಿಂಚುತ್ತಿದ್ದಿತು. ಚಿಕ್ಕ ಮಗಳು ಒಂದೊಂದು ಮಾತುಗಳನ್ನಾಡಿದರೆ, ತಪಸ್ವಿಗಳಾದ ಮುದುಕರ ಬಾಯಿಂದ ಹೊರಡುವಂತಹ ತಿಳಿವಳಿಕೆಯ ನುಡಿಗಳು ಹೊರಡುತ್ತಿದ್ದವು. ಆಕೆಯ ನಡೆ-ನುಡಿಗಳಲ್ಲಿ ಹೆದರಿಕೆ, ಅನುಮಾನ, ಸಂಶಯಗಳಿರಲಿಲ್ಲ. ಯಾವ ಮಾತನ್ನಾಡಿದರೂ ಶಾಂತವಾಗಿಯೂ ಸೌಮ್ಯವಾಗಿಯೂ ಸ್ಪಷ್ಟವಾಗಿಯೂ, ಜ್ಞಾನಿಗಳಂತೆ ಆಡುವಳು. ಕಣ್ಣುಗಳಲ್ಲಿ ಜ್ಞಾನದ ಕಿರಣಗಳು ಹೊರ ಹೊಮ್ಮುತ್ತಿರುವಂತೆ ಕಾಣಿಸುತ್ತಿತ್ತು. ಈ ಮೇರೆಗೆ ಮಹಾದೇವಿಯು ತಾಯಿ ತಂದೆಗಳಿಗೆ, ನೆರೆಯವರಿಗೆ, ಬಳಗದವರಿಗೆ, ಊರವರಿಗೆ ಹರುಷಗೊಳಿಸುತ್ತ ಬೆಳೆದಳು. ಎಲ್ಲರೂ ಆಕೆಯ ಜ್ಞಾನದ ಮಾತು, ಸಮಾಧಾನ, ವಿವೇಕ ಮುಂತಾದವುಗಳನ್ನು ಕಂಡು 'ಮಹಾದೇವಿಯಕ್ಕ' ಎಂದು ಕರೆಯಲಾರಂಭಿಸಿದರು.

ಉಡುತಡಿಯಲ್ಲಿ ಕೌಶಿಕನೆಂಬ ದೊರೆ ಇರುತ್ತಿದ್ದ. ಅವನು ಒಂದು ದಿನ ಬೀದಿಯೊಳಗಿಂದ ಹಾಯ್ದು ಹೋಗುತ್ತಿದ್ದ. ಮಹಾದೇವಿಯಕ್ಕ ತನ್ನ ಮನೆಯ ಬಾಗಿಲಲ್ಲಿ ನಿಂತಿರುವದನ್ನು ಕಂಡನು. ಆಕೆಯ ಮುಖದಲ್ಲಿ ಬೆಳಗುತ್ತಿದ್ದ ಸಾತ್ವಿಕ ಸೌಂದರ್ಯವು ಆ ಕೌಶಿಕನನ್ನು ಹುಚ್ಚನನ್ನಾಗಿ ಮಾಡಿತು.

ಆಕೆಯನ್ನು ಮದುವೆಯಾಗಬೇಕೆಂದು ನಿಶ್ಚಯಿಸಿ ಅರಮನೆ ಸೇರಿದನು. ತನ್ನ ಅರಮನೆಯ ದಾಸಿಯರನ್ನು ಮಹಾದೇವಿಯಕ್ಕನನ್ನು ಕರೆಯಲಿಕ್ಕೆ ಕಳಿಸಿದನು. ಅವರು ಬಂದು ಅರಸನ ಅಪೇಕ್ಷೆಯನ್ನು ಮಹಾದೇವಿಯಕ್ಕನ ತಂದೆಯಾದ ನಿರ್ಮಲನಿಗೆ ತಿಳಿಸಿದರು. 'ಅರಸುಕುಲದವರಿಗೆ ನಮ್ಮ ಮಗಳನ್ನು ಕೊಡಲಾರೆ' ನೆಂದನು. ಆಗ ದಾಸಿಯು 'ನೀವು ದೊರೆಗಳಿಗೆ ಇದಿರು ನಿಲ್ಲಬೇಡಿರಿ, ಸುಮ್ಮನೆ ಪ್ರೀತಿಯಿಂದ ಮಗಳನ್ನು ಕೊಡಿರಿ. ಅರಸನು ಸಿಟ್ಟಾದರೆ ನೀವು ಮಾಡುವದೇನು?' ಎಂದು ಬೋಧಿಸಿದಳು. ಯಾರ ಮಾತೂ ಬಗೆಹರಿಯದೆ ಇಬ್ಬರೂ ಚಿಂತೆಯಲ್ಲಿ ಮುಳುಗಿದರು.

ಕೌಶಿಕನು ದುಡ್ಡಿನ ಆಸೆ ತೋರಿಸಿ, ಹೆದರಿಸಿ, ಬೆದರಿಸಿ, ಹೇಗಾದರೂ ಮಹಾದೇವಿಯನ್ನು ಮದುವೆಯಾಗಬೇಕೆಂದು ತನ್ನ ಮಂತ್ರಿಗಳ ಮೂಲಕ ಯತ್ನಿಸಿದನು. ಅರಸನಿಂದ ತಮಗೆ ಯಾವ ಕೇಡು ಬಂದೀತೋ ಎಂದು ಮಹಾದೇವಿಯ ತಾಯಿ-ತಂದೆಗಳು ಹೆದರಿದರು. ಮಗಳಿಗೆ ದೊರೆಯನ್ನು ಮದುವೆಯಾಗಲು ಉಪದೇಶಮಾಡಿದರು. ತನ್ನಿಂದ ತಾಯಿ-ತಂದೆಗಳಿಗೆ ಕಷ್ಟಬಂತೆಂದು ಗೋಳಾಡಿದಳು. ಏನು ಮಾಡಬೇಕೆಂಬುದು ತಿಳಿಯದಾಯಿತು. ಒಂದೆರಡು ದಿನ ಇದೇ ಯೋಚನೆಯಲ್ಲಿಯೇ ಕಾಲ ಕಳೆದಳು. ಮುಂದೆ, ತಾಯಿ-ತಂದೆಗಳ ಸಲುವಾಗಿ ಕಷ್ಟಪಡಬೇಕೆಂದು ನಿಶ್ಚಯಿಸಿದಳು. ನಿಮ್ಮ ಮಾತು ನಡಿಸುವೆನೆಂದಳು. ಮಂತ್ರಿಗಳನ್ನು ಕರೆಯಿಸಿ, 'ನಾನು ಅರಸನನ್ನು ಮದುವೆಯಾಗುವೆ; ಆದರೆ, ಅವನು ನನ್ನ ಮಾತು ನಡಿಸಬೇಕು. ನನ್ನ ಶಿವಪೂಜೆ, ಶಿವಧ್ಯಾನ, ಗುರು-ಲಿಂಗ-ಜಂಗಮಪೂಜೆ, ಇವುಗಳಿಗೆ ಅರಸನು ಅಡ್ಡಬಂದರೆ ಅವನನ್ನು ಬಿಡುವೆನು. ಇದರಂತೆ ಅರಸನಿಂದ ನನಗೆ ಒಪ್ಪಿಗೆ ಕೊಡಿಸಬೇಕು.' ಎಂದಳು.

ಮಹಾದೇವಿಯ ಮಾತಿಗೆ ಅರಸನು ಒಪ್ಪಿದನು. ಕೂಡಲೆ ಮದುವೆಯ ಸಂಭ್ರಮ ನಡೆಯಿತು. ಮದುವೆಯೂ ಆಯಿತು. ಅರಸನು ಲೋಕದೊಳಗಿನ ಶ್ರೇಷ್ಠಮಾನವ; ಆದರೂ ಆಸೆ-ಅಪೇಕ್ಷೆಗಳಿಂದ ತುಂಬಿದವ. ಮಹಾದೇವಿಯು ಮಹಾದೇವನ ಲೋಕದವಳು. ಮಹಾ ವಿರಕ್ತೆಳು. ಆಕೆಗೆ ಲೋಕದ ಆಸೆ-ವ್ಯಸನಗಳಿಲ್ಲ. ಶಿವನ ಆಸೆಯೇ ಆಸೆ. ಅರಸನಿಗೆ ಶಿವಭಕ್ತರು, ಶಿವಶರಣರು, ಶಿವಪೂಜೆ ಎಂಬಿವು ಗೊತ್ತಿರಲಿಲ್ಲ. ಅಕ್ಕನವರಿಗೆ ಶಿವಶರಣರ ಪೂಜೆ, ಅವರಿಗೆ

ದಾನ ಇವುಗಳಲ್ಲಿ ಪ್ರೀತಿ. ಒಂದು ದಿನ ಮಹಾದೇವಿಯಕ್ಕನ ದರ್ಶನಕ್ಕಾಗಿ ಶರಣರು ಗುಂಪುಗಟ್ಟಿಕೊಂಡು ಬಂದರು ಇದನ್ನು ನೋಡಿ, ಕೌಶಿಕನು ಸಿಟ್ಟಿಗೆದ್ದನು. ಮಹಾದೇವಿಗೆ ಇದು ಸರಿಬರಲಿಲ್ಲ. ಅಷ್ಟೇ ಅಲ್ಲ, 'ನಿನ್ನಿಂದ ಜಂಗಮದ್ರೋಹವಾಯಿತು. ಸುಡಲಿ ನಿನ್ನ ಜನುಮ,' ಎಂದು ಹೊರಟು ಹೋಗಲಿಕ್ಕೆ ಸಿದ್ಧಳಾದಳು. ಅರಸನು ಹೆದರಿ ಶಾಂತಗೊಳಿಸಿದನು. ಅವರ ಚಿತ್ತ ಪ್ರಸನ್ನವಾಗುವಂತೆ ಯತ್ನಿಸಿದನು. ಆಗ ಹೇಗೋ ಅಕ್ಕನವರ ಕೋಪ ಶಾಂತವಾಯಿತು.

ಮತ್ತೊಮ್ಮೆ, ಮಹಾದೇವಿಯು ಶಿವಶರಣರನ್ನು ನೆರೆಯಿಸಿ, ಅವರ ಪೂಜೆ ನಡಿಸಿರಲು, 'ಈ ದುಷ್ಟ ಮನುಷ್ಯರ ಪೂಜೆಯಿಂದೇನು?' ಎಂದು ಕೌಶಿಕನು ಜರಿದನು. ಆಗ ಶರಣ-ದ್ರೋಹದ ನುಡಿಯನ್ನು ಕಿವಿಯಿಂದ ಕೇಳಲಿಕ್ಕಾಗದೆ, ಮಹಾದೇವಿಯು ಅರಸನು ಕೊಟ್ಟ ತನ್ನ ಮೈಮೇಲಿನ ವಸ್ತ್ರಾಲಂಕಾರಗಳನ್ನೆಲ್ಲ ಬಿಸುಟೆ, ತಮ್ಮ ಮೈಯನ್ನು ಕೂದಲುಗಳಿಂದ ಮುಚ್ಚಿಕೊಂಡು ಅರಮನೆಯಿಂದ ಹೊರಬಿದ್ದಳು. ತಾಯಿ-ತಂದೆ, ಆಪ್ತರು, ನೆಂಟರು, ಯಾರು ಎಷ್ಟು ಹೇಳಿದರೂ ಕೇಳದೆ ಕಲ್ಯಾಣದ ದಾರಿ ಹಿಡಿದಳು. ಕಲ್ಯಾಣದಲ್ಲಿಯ ಅನುಭವಮಂಟಪಕ್ಕೆ ಹೋಗಿ ಸೇರಿದಳು. ಅಕ್ಕನವರಿಗೆ ಅಲ್ಲಮನೇ ತಂದೆ, ಬಸವಣ್ಣನವರು ಅಣ್ಣ, ಶರಣರ ಬಳಗವೇ ಅವರ ಬಳಗ. ಅಕ್ಕನವರು ಅಲ್ಲಿಯೇ ಕೆಲಕಾಲ ಇದ್ದು ಮುಂದೆ ಶ್ರೀಶೈಲಕ್ಕೆ ಹೋದರು.

ಅಕ್ಕನವರು ಮಹಾ ಮಹಿಮರು. ಮಹಾಶಿವಶರಣೆಯರು; ಆದುದರಿಂದ ಶಿವನ ವಿಷಯದಲ್ಲಿ ಅವರ ಭಕ್ತಿ ಹೇಗಿತ್ತು? ಅದರ ವಿಧವೇನೆಂಬುದನ್ನು ಅವರ ವಚನದಿಂದಲೇ ನಿಮಗೆ ತಿಳಿಯುವದು ನೋಡಿರಿ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ। ಸರವೆತ್ತಿ ಪಾಡುವ ಗಿಳಿಗಳಿರಾ। ಎರಗಿಬಂದಾಡುವ ತುಂಬಿಗಳಿರಾ। ಗಿರಿಗಂಹರದೊಳಗಾಡುವ ನವಿಲುಗಳಿರಾ। ನೀವು ಕಾಣಿರೆ। ಚನ್ನಮಲ್ಲಿಕಾರ್ಜುನನು ಎಲ್ಲಿರ್ದನೆಂದು ನೀವು ಹೇಳಿರೇ। ಹೇಳಿರೇ।

ಮಾಮರವೇ! ಬೆಳದಿಂಗಳೇ! ಕೋಗಿಲೆಯೇ! ನಿಮ್ಮನ್ನೆಲ್ಲರನ್ನು ಒಂದು ಬೇಡುವೆ, ಎನ್ನೊಡೆಯ ಚೆನ್ನಮಲ್ಲಿಕಾರ್ಜುನನ ಕಂಡರೆ ಕರೆದು ತೋರಿರೇ!

## ೧೩

### ತ್ಯಾಗವೀರ

# ಕುವರ ಲಕ್ಷ್ಮದಂಡಾಧಿಪ

( ಕ್ರಿ. ಶ. ೧೧೯೦–೧೨೨೦ )

[ ಹೊಯ್ಸಳ ವೀರಬಲ್ಲಾಳನ ಆಳಿಕೆಯಲ್ಲಿ ಅವನಿಗೆ ಅತಿಶಯ ಪ್ರೀತಿಯವನಾದ ದಂಡನಾಯಕ ಲಕ್ಷ್ಮ ಎಂಬುವನಿದ್ದನು. ಇವನು ವೀರಬಲ್ಲಾಳನ ಕರುಳಿನವ. ಬಲ್ಲಾಳನು ಸತ್ತನಂತರ ತಾನೂ ತನ್ನ ಹೆಂಡತಿಯೊಡನೆ ತನ್ನ ಕೈಯಿಂದ ರುಂಡವನ್ನು ಕಡಿದುಕೊಂಡು ಪ್ರಾಣಬಿಟ್ಟನು. ಎಪಿಗ್ರಾಫಿಕಾ ಕರ್ನಾಟಿಕಾ ೫ನೆಯ ಪುಸ್ತಕ ೧ನೆಯ ಭಾಗದಲ್ಲಿ ಈ ವಿಷಯ ಬಂದಿದೆ.]

ಲಕ್ಷ್ಮನು ಬಲ್ಲಾಳನ ಅರಮನೆಯಲ್ಲಿರುವ ಒಬ್ಬ ಆಳಿನ ಮಗ. ವೀರಬಲ್ಲಾಳನಿಗೆ ಅದೇಕೋ ಬಾಲ್ಯದಿಂದಲೇ ಲಕ್ಷ್ಮನಲ್ಲಿ ಪ್ರೀತಿ ವಿಶೇಷ. ಅವನನ್ನು ಅರಸನು ಅರಮನೆಯ ತೊಟ್ಟಿಲೊಳಗಿರಿಸಿ ಕಾಪಾಡಿದನು. ಲಕ್ಷ್ಮನೆಂದರೆ ವೀರಬಲ್ಲಾಳನಿಗೆ ಮಗನಂತೆ; ಬಲ್ಲಾಳನು ಲಕ್ಷ್ಮನಿಗೆ ತಂದೆ, ತಾಯಿ, ಗುರು, ಬಂಧು; ಅರಸನಿಗೂ ಅವನಿಗೂ ಏನೂ ಭೇದಭಾವವಿರಲಿಲ್ಲ. ತನ್ನ ಕಣ್ಣರಿಕೆಯಲ್ಲಿ ಬಲ್ಲಾಳನು ಲಕ್ಷ್ಮನಿಗೆ ಚಿಕ್ಕಂದಿನಲ್ಲಿಯೇ ಅಕ್ಷರಾಭ್ಯಾಸ, ಮಲ್ಲ-ಯುದ್ಧ, ವಿದ್ಯಾಭ್ಯಾಸಗಳನ್ನು ಮಾಡಿಸಿದನು. ಲಕ್ಷ್ಮನು ದೊಡ್ಡವನಾದನು.

ಅವನಿಗೆ ಒಂದೊಂದಾಗಿ ತನ್ನ ರಾಜ್ಯದೊಳಗೆ ಪದವಿಗಳನ್ನು ಕೊಟ್ಟನು. ಪ್ರತಿಯೊಂದು ಕೆಲಸವನ್ನು ಲಕ್ಷ್ಮನಾದರೂ ತನ್ನೊಡೆಯನಿಗೆ ಪ್ರೀತಿಯಾಗುವಂತೆಯೇ ನೆರವೇರಿಸುತ್ತಿದ್ದನು. ತನ್ನ ವೀರ್ಯ-ಶೌರ್ಯಗಳಿಂದ ಲಕ್ಷ್ಮನು ಅರಸನಿಗೆ ದಕ್ಷಿಣ ಪ್ರಾಂತವನ್ನು ಗೆದ್ದು ಕೊಟ್ಟನು. ಆಗ ಅರಸನು ಅತ್ಯಂತ ಸಂತೋಷಗೊಂಡು ತನ್ನಲ್ಲಿರುವ ದಂಡನಾಯಕರಲ್ಲಿ ಲಕ್ಷ್ಮನನ್ನೂ ಸೇರಿಸಿದನು. ಅವನಲ್ಲಿ ತಂತ್ರಪಾಲ, ಹೆಮ್ಮಾಡಿ, ಕೇಶಿರಾಜ, ರೇಚರಸ, ಸೋಮಿದೇವ, ಅಪ್ಪಣ್ಣ, ಗೋಪಯ್ಯ, ಕುಮ್ಮಟಮಲ್ಲ ಮೊದಲಾದ ದಂಡನಾಯಕರಿದ್ದರೂ ಅವರೊಳಗೆಲ್ಲ ಲಕ್ಷ್ಮದಂಡಾಧಿಪನೇ ಮುಖ್ಯಸ್ಥನು. ತನ್ನ ಬೆಂಗಾವಲಿಗಿರುವ ಗರುಡರ ದಳಕ್ಕೆ ಲಕ್ಷ್ಮನನ್ನು ಮುಖಂಡನನ್ನಾಗಿ ಮಾಡಿದ್ದನು.

ವೀರ್ಯದಲ್ಲಿ ಹೇಗೋ ಹಾಗೇ ಗುಣದಲ್ಲಿಯೂ ಲಕ್ಷ್ಮನು ಮೇಲಾಗಿದ್ದನು. ಬೇಡಿದವರಿಗೆ ಇಲ್ಲವೆನ್ನುವದು ಅವನಿಗೆ ಗೊತ್ತಿರಲಿಲ್ಲ. ಸೋಲೆಂಬುದನ್ನು ಅರಿಯನು ಅವನು. ಅರವತ್ತುನಾಲ್ಕು ವಿದ್ಯೆಗಳಲ್ಲಿ ನಿಪುಣನು. ಆಡಿದ ಮಾತಿಗೆ ತಪ್ಪುವವನಲ್ಲ. ಅವನೀ ಸದ್ಗುಣ-ಶೌರ್ಯಗಳಿಗೆ ಮೆಚ್ಚಿ, ಬಲ್ಲಾಳರಾಯನು ತನ್ನಂತೆ ಅವನಿಗೆ ಕಾಲೊಳಗೆ ಚಿನ್ನದ ತೊಡರುಗಳನ್ನು ಮತ್ತು ಕಿವಿಯಲ್ಲಿ ಮುತ್ತಿನ ಪೆಂಡೆಗಳನ್ನು ಧರಿಸಲು ಅಪ್ಪಣೆ ಕೊಟ್ಟಿದ್ದನು. ವೀರಬಲ್ಲಾಳನಿಗೆ ಲಕ್ಷ್ಮದಂಡೇಶನೆಂದರೆ ತನ್ನದೇ ಎರಡನೆಯ ಪ್ರಾಣ. ತನ್ನ ಸರಿ ಅವನನ್ನು ಕಾಣುತ್ತಿದ್ದು, ಅವನನ್ನು ಬಹುಬಗೆಯ ಗೌರವ-ಮರ್ಯಾದೆಗಳಿಂದಿಟ್ಟಿದ್ದನು.

ಹೀಗೆ, ಅತ್ಯಂತ ವೈಭವದಿಂದ ವೀರಬಲ್ಲಾಳನು ಆಳುತ್ತಿರಲು ಬೇನೆಯಿಂದ ಮಡಿದನು. ಆಗ ಲಕ್ಷ್ಮದಂಡೇಶನಿಗೆ ಸಹಿಸಲಾರದಷ್ಟು ದುಃಖವಾಯಿತು. ಇರುವವರೆಗೆ ಒಂದು ಜೀವ, ಎರಡು ದೇಹ ಎಂಬುವಷ್ಟರ ಮಟ್ಟಿಗೆ ಪ್ರೇಮದಿಂದ ಇದ್ದು, ತನ್ನ ಒಡೆಯನು ಸತ್ತು ಹೋದನಂತರ, ಅವನಿಲ್ಲದೆ ಇರುವದೆಂತು ಎಂಬುದು ಲಕ್ಷ್ಮನಿಗೆ ತೋಚದ ಮಾತಾಯಿತು. ಲಕ್ಷ್ಮನಿಗೆ ಅನುಕೂಲಳಾದ ಹೆಂಡತಿಯೊಬ್ಬಳಿದ್ದಳೆಂದು ಅದು ಇನ್ನಷ್ಟು ಅಶಕ್ಯವೆನಿಸಿತು.

ಆಗ ಲಕ್ಷ್ಮನು ತನ್ನ ಹೆಂಡತಿಯಾದ ಸುಗ್ಗಲದೇವಿಯ ಸಂಗಡ ತನ್ನ ಒಡೆಯನಿಗಾಗಿ ಪ್ರಾಣ ನೀಗಬೇಕೆಂದು ನಿಶ್ಚಯಿಸಿದನು. ಒಂದು ದಿನ ಗೊತ್ತು ಮಾಡಿ, ತನ್ನ ಹಿಂದಾಳುಗಳಾದ ಗರುಡ ವರ್ಗದವರೊಡನೆ ತಾನು ತನ್ನ ಹೆಂಡತಿಯೊಂದಿಗೆ ಕಲ್ಲುಕಂಬದ ಮೇಲೆ ನಿಂತು ತನ್ನ ರುಂಡವನ್ನು ಕತ್ತಿಯಿಂದ ಕಡಿದುಕೊಂಡು ವೀರಸ್ವರ್ಗವನ್ನು ಪಡೆದನು. ವೀರ ಸತಿಯಾದ ಸುಗ್ಗಲದೇವಿಯೂ ತನ್ನ ಪತಿಯ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಪತಿಯ ಒಡೆಯನಿಗಾಗಿ ತನ್ನ ಪ್ರಾಣವನ್ನು ಒಲಾಗಿಟ್ಟು ಕೀರ್ತಿವಂತೆಯಾದಳು.

## ೧೮

## ವಿಜಯ ಸಮುದ್ರನಾದ

# ದೇವಗಿರಿಯ ಯಾದವ ಸಿಂಹಣರಾಯ

( ಕ್ರಿ. ಶ. ೧೨೧೦ - '೪೭ )

[ ಇವನು ದೇವಗಿರಿಯ ಯಾದವರ ಮೊದಲನೆಯ ಜೈತುಗಿಯ ಮಗನು. ತನ್ನ ಅಜ್ಜ ಭಿಲ್ಲಮನ ಕಾಲಕ್ಕೆ ಹೊಯ್ಸಳರಿಂದ ಪಟ್ಟ ಸೋಲುಗಳನ್ನು ತಿರುಗಿಸಿದನು. ದೇವಗಿರಿ ಯಾದವರಲ್ಲಿ ಇವನೇ ಮಹಾವೀರ. ಇವನ ಆಳಿಕೆಯಲ್ಲಿ ಇಡೀ ದಕ್ಷಿಣಕ್ಕೆ ದೇವಗಿರಿಯ ಅರಸರು ಚಕ್ರಾಧಿಪತಿಗಳೆನಿಸಿಕೊಂಡರು. ಈ ವಿಷಯವನ್ನು ಇಂಡಿಯನ್ ಹಿಸ್ಟಾರಿಕಲ್ ಜರ್ನಲ್ಲದ ೧೯೩೮ ಇಸ್ವಿಯ ೧೪ನೆಯ ಸಂಚಿಕೆಯಲ್ಲಿ ಬಂದಿದೆ.]

ಸಿಂಹಣನು ಜೈತುಗಿಯ ತರುವಾಯ ಪಟ್ಟಕ್ಕೆ ಬಂದನು. ಜೈತುಗಿಯು ತಂದೆ ಭಿಲ್ಲಮನಷ್ಟು ವೀರನಿರದ್ದರಿಂದ, ಕಲ್ಯಾಣದವರೆಗೆ ಹೊಯ್ಸಳರ ರಾಜ್ಯವೇ ಹಬ್ಬಿತ್ತು. ಜೈತುಗಿಯು ಅವರ ಮುಂದೆ ಮೂಲೆಗುಂಪಾಗಿದ್ದನು.

ಸಿಂಹಣನು ಕ್ರಿ. ಶ. ೧೧೯೭ರಲ್ಲಿ ಪಟ್ಟಕ್ಕೆ ಬಂದೊಡನೆ, ಮೆಲ್ಲಗೆ ತನ್ನ ಸೈನ್ಯವನ್ನು ಬೆಳೆಯಿಸತೊಡಗಿದನು; ಅಲ್ಲದೆ ಇದ್ದ ಸೈನಿಕರನ್ನು ಒಳ್ಳೇ ಗಟ್ಟಿಗರನ್ನಾಗಿ ಮಾಡಿದನು. ಕರ್ನಾಟಕದಲ್ಲಿದ್ದ ಅರಸರಲ್ಲಿ ಆಗ ಪರಸ್ಪರರಲ್ಲಿ ಸಾರ್ವಭೌಮತ್ವದ ಬಗ್ಗೆ ಯುದ್ಧಗಳು ನಡೆಯುತ್ತಿದ್ದುದರಿಂದ, ಸಿಂಹಣನ ಈ ಪ್ರಯತ್ನವು ಯೋಗ್ಯವಾಗಿತ್ತು.

ಹೊಯ್ಸಳ ಯಾದವರು ಬಹುದಿನಗಳಿಂದ ದೇವಗಿರಿ ಯಾದವರ ಶತ್ರುಗಳು; ಅವರು ಪರಿಪರಿಯಿಂದ ತನ್ನ ಅಜ್ಜ-ತಂದೆಯವರನ್ನು ಕಾಡಿದ ಸಂಗತಿಯನ್ನು ಕೇಳಿದ್ದನು; ಆದುದರಿಂದ ಅವರ ಸೇಡು ತೀರಿಸಿಕೊಳ್ಳಲು ತಾನೇ ಸ್ವತಃ ದಂಡು ಕಟ್ಟಿಕೊಂಡು ಸಿಂಹಣನು ಹೊರಟನು. ಹೊಯ್ಸಳ ರಾಜ್ಯದೊಳಗೆ ಹೊಕ್ಕು ಸುಲಿಗೆ ನಡಿಸಿದನು. ಆಗ ವಿಜಾಪುರದಲ್ಲಿದ್ದು ಸುತ್ತು ಮುತ್ತಲಿನ ನಾಡನ್ನು ಕೇಶವದೇವ ದಂಡನಾಥನು ಆಳುತ್ತಿದ್ದನು. ಸಿಂಹಣನು ಅಲ್ಲಿಯವರೆಗೆ ಇದ್ದ ನಾಡನ್ನು ಗೆದ್ದು, ಶಿವಮೊಗ್ಗೆ ಜಿಲ್ಹೆಯಲ್ಲಿರುವ ಬಂದಲಿಕೆಯ ಊರನ್ನು ಸುಲಿದನು. ಹೊಯ್ಸಳ ಬಲ್ಲಾಳನಿಗೆ ಇವನನ್ನು ತಡೆಯಲಿಕ್ಕಾಗಲಿಲ್ಲ; ಮುಂದೆ ಸಿಂಹಣನು ಬನವಸೆಯ ಪ್ರಾಂತವನ್ನೂ ಗೆದ್ದನು.

ಆ ಕಾಲಕ್ಕೆ ಶಿಲಾಹಾರ ಅರಸನಾದ ಭೋಜ ಎಂಬವನು ಕೊಂಕಣ ವನ್ನಾಳುತ್ತಿದ್ದನು. ಈಗ ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿದ ಪನ್ಹಾಳ ಕೋಟೆಯು ಅವನ ರಾಜ್ಯದಲ್ಲಿತ್ತು. ಸಿಂಹಣನು ಭೋಜನ ರಾಜ್ಯಕ್ಕೆ ದಂಡೆತ್ತಿಹೋಗಿ, ಹಾವಳಿನಡಿಸಿದನು ಭೋಜನು ಸ್ವತಂತ್ರ ಅರಸ ನಿದ್ದಾಗ್ಯೂ ಹೆದರಿ, ಪನ್ಹಾಳ ಕೋಟೆಯಲ್ಲಿ ಅಡಗಿಕೊಂಡನು. ಸಿಂಹಣನು ಪನ್ಹಾಳ ಕೋಟೆಯನ್ನೇ ಮುತ್ತಿದನು. ಆಗ ದಿಕ್ಕುಗಾಣದೆ ಭೋಜನು ಓಡಿದನು. ಶಿಲಾಹಾರ ರಾಜ್ಯವನ್ನೆಲ್ಲ ಸಿಂಹಣನು ತನ್ನ ರಾಜ್ಯಕ್ಕೆ ಸೇರಿಸಿ ದನು. (ಕ್ರಿ. ಶ. ೧೨೧೭) ತರುವಾಯ, ವಿಕ್ಕಣ್ಣನೆಂಬ ತನ್ನ ದಳವಾಯಿ ಯನ್ನು ದಕ್ಷಿಣವನ್ನಾಳಲಿಕ್ಕೆ ನಿಯಮಿಸಿ, ತಾನು ದೇವಗಿರಿಗೆ ನಡೆದನು.

ವಿಕ್ಕಣ್ಣನು ಮಹಾ ಸಮರ್ಥನಿದ್ದುದರಿಂದ ಧಾರವಾಡ ಸೀಮೆಯ ನ್ನಾಳುತ್ತಿದ್ದ ಗುತ್ತರನ್ನು ಸೋಲಿಸಿ, ಕದಂಬರನ್ನು ಹತ್ತಿಕ್ಕಿ, ಅವರನ್ನು ಸಾಮಂತ ರಾಜರನ್ನಾಗಿ ಇರಗೊಟ್ಟನು. ಸಂವದತ್ತಿಯ ರಟ್ಟ ಅರಸರ ಎರಡನೆಯ ಲಕ್ಷ್ಮೀದೇವನನ್ನು ಬಗ್ಗುಬಡಿದನು. ವಿಕ್ಕಣ್ಣನ ಶೌರ್ಯದಿಂದ ದೇವಗಿರಿಯ ಯಾದವರ ರಾಜ್ಯವು ದಕ್ಷಿಣದಲ್ಲಿ ತುಂಗಭದ್ರೆಯವರೆಗೆ, ಉತ್ತರ ದಲ್ಲಿ ಅರಬೀ ಸಮುದ್ರದವರೆಗೆ ಹರಡಿತು. ಆ ಹೊತ್ತಿಗೆ, ದಕ್ಷಿಣದೊಳಗೆ ಸಿಂಹಣನಿಗೆ ಯಾರೂ ಎದುರಾಳಿಗಳೇ ಉಳಿಯಲಿಲ್ಲ. ಇಡೀ ದಕ್ಷಿಣದ ರಾಜ್ಯಕ್ಕೆ ಅವನೇ ಅಧಿಪತಿಯಾದನು.

# ೧೯
# ಸ್ವಾತಂತ್ರ್ಯಕ್ಕಾಗಿ
# ವೀರಬಲ್ಲಾಳನು ನಡಿಸಿದ ಹೋರಾಟ

( ಕ್ರಿ. ಶ. ೧೩೧೬ )

[ ದ್ವಾರಸಮುದ್ರದಲ್ಲಿ ಹೊಯ್ಸಳ ಯಾದವರ ೩ನೆಯ ವೀರಬಲ್ಲಾಳ ರಾಯನು ಆಳುತ್ತಿರುವಾಗ ಉತ್ತರದಿಂದ ಅಲ್ಲಾವುದ್ದೀನನ ದಳವಾಯಿಯಾದ ಮಲೀಕ ಕಾಫೂರನು ದಂಡೆತ್ತಿ ಬಂದನು. ಆಗ ದ್ವಾರಸಮುದ್ರ,ದಲ್ಲಿ ನಡೆದ ಸಂಗತಿ. ವಿಜಯನಗರ ಸ್ಮಾರಕ ಎಂಬ ಇಂಗ್ಲೀಷ ಪುಸ್ತಕದಲ್ಲಿಯ ದಕ್ಷಿಣದ ಹಿಂದೂ ಸಂಸ್ಕೃತಿಯ ವಿವೇಚನೆ ಎಂಬ ಲೇಖದಿಂದ.]

ದಿಲ್ಲಿಯ ಬಾದಶಹನಾದ ಅಲ್ಲಾಉದ್ದೀನನ ದಳವಾಯಿಯಾದ ಮಲೀಕ ಕಾಫೂರನು ದ್ವಾರಸಮುದ್ರಕ್ಕೆ ದಂಡೆತ್ತಿ ಬರುವ ಸುದ್ದಿಯು ೩ನೆಯ ವೀರಬಲ್ಲಾಳನಿಗೆ ತಿಳಿಯಿತು ಮುಸಲ್ಮಾನರ ಸೈನ್ಯದ ಮುಂದೆ ತನ್ನವರ ಪಾಡು ನೆಟ್ಟಗಾಗದೆಂದು ಯೋಚಿಸಿ, ವೀರಪಾಂಡ್ಯನು ತನ್ನ ಸಹಾಯಕ್ಕಾಗಿ ದಂಡು ಕಳಿಸಿದ್ದರೂ, ಒಪ್ಪಂದ ಮಾಡಿಕೊಳ್ಳಲು ಮುಂದಾದನು; ತನ್ನ ದಳವಾಯಿಯೊಬ್ಬನನ್ನು ಸಂಧಾನಕ್ಕೆ ಕಾಫೂರನ ಕಡೆ ಕಳಿಸಿದನು.

ಕಾಫೂರನ ದರ್ಪ ಬಹಳ. ಎಲ್ಲೆಡೆಯಲ್ಲಿ ಗೆಲ್ಲುತ್ತ ಬಂದುದರಿಂದಂತೂ ಅವನ ಹೆಮ್ಮೆ ಅಳತೆಗೆಟ್ಟಿತ್ತು; ಆದುದರಿಂದ ಬಲ್ಲಾಳನ ದಳವಾಯಿಗೆ ಕೆಳಗಿನಂತೆ ಮಾತು ಕಳುಹಿದನು. 'ನಿಮ್ಮಿಂದ ಜಿಜಿಯಾ ಕರವನ್ನು ತೆಗೆದುಕೊಂಡು ಮಾಂಡಲಿಕನನ್ನಾಗಿ ಮಾಡಿಕೊಳ್ಳಬೇಕು ಅಥವಾ ಮುಸಲ್ಮಾನನ್ನು ಮಾಡಬೇಕು. ಇವೆರಡಕ್ಕೂ ನೀವು ಒಪ್ಪದಿದ್ದರೆ ನಿಮ್ಮನ್ನು ಕೊಲ್ಲಬೇಕೆಂದು ನಮ್ಮ ಬಾದಶಹರ ಅಪ್ಪಣೆಯಾಗಿದೆ.'

ವೀರಬಲ್ಲಾಳನಿಗೆ ಬೇರೆ ದಾರಿಯೇ ತೋಚಲಿಲ್ಲ. ತನ್ನ ದಂಡನಾಯಕ ದಳವಾಯಿಗಳನ್ನು ಕೇಳಿಕೊಂಡು, ತನ್ನ ಆಸ್ತಿಯನ್ನೆಲ್ಲ ಮಲೀಕ ಕಾಫೂರನಿಗೆ ಒಪ್ಪಿಸಬೇಕೆಂದು ನಿಶ್ಚಯಿಸಿದನು. ಕಲ್ಲು ಮನಸುಮಾಡಿ ತನ್ನ ಭಂಡಾರವನ್ನೆಲ್ಲ- ಮೈಮೇಲಿನ ಜನಿವಾರವನ್ನೊಂದು ಬಿಟ್ಟು - ಕಾಫೂರನಿಗೆ ಒಪ್ಪಿಸಿದನು. ಆತನು ತನ್ನ ಜನರಿಂದ ಇಡೀ ರಾತ್ರಿಯೆಲ್ಲ ಭಂಡಾರದಲ್ಲಿಯ

ಸಾಮಾನು-ಸಟ್ಟುಗಳನ್ನು ತನ್ನ ಬಿಡಾರಕ್ಕೆ ಸಾಗಿಸಿದನು; ಮತ್ತು ವೀರ ಬಲ್ಲಾಳನನ್ನು ಆನೆಯ ಮೇಲೆ ಕುಳ್ಳಿರಿಸಿ, ಅಲ್ಲಾವುದ್ದೀನನ ಸಂಗಡ ದಿಲ್ಲಿಗೆ ಒಪ್ಪಂದದ ಮಾತುಗಳನ್ನಾಡಲು ಕಳಿಸಿದನು. ಅಲ್ಲಿ ಶಹನೊಡನೆ ಮಾತಾಡಿ ಕೊಂಡು ವೀರಬಲ್ಲಾಳನು ತಿರುಗಿ ದ್ವಾರಸಮುದ್ರಕ್ಕೆ ಬಂದನು.

ವೀರಬಲ್ಲಾಳನು ಒಳ್ಳೇ ಮಹತ್ವಾಕಾಂಕ್ಷಿ; ಹಿರಿಯರು ಬಹು ಕಷ್ಟ ಪಟ್ಟು ಕಟ್ಟಿದ ಹಿಂದೂ ರಾಜ್ಯವನ್ನು ಕಳೆದುಕೊಳ್ಳಬಾರದೆಂಬುದೇ ಅವನ ಹಿರಿಯಾಸೆ; ಆದರೆ ಏನು ಮಾಡುವದು? ತನ್ನ ಪಾಡು ಹೀಗಾಯಿತು. ದೇವ ಗಿರಿಯ ಯಾದವರೂ ತನ್ನಂತೆ ಮುಸಲ್ಮಾನರಿಂದ ಪೂರಾ ಹಾಳಾದ ಸಂಗತಿ ಯನ್ನು ಕೇಳಿ ಮರಮರ ಮರುಗಿದನು. ದಕ್ಷಿಣ ಹಿಂದುಸ್ಥಾನದಲ್ಲಿ ಅಲ್ಲಲ್ಲಿ ಅದೇ ತಾನೇ ರಾಜ್ಯ ಕಟ್ಟುವದರಲ್ಲಿ ತೊಡಗಿರುವ ಮುಸಲ್ಮಾನ ದಾಳಿಗಾರ ರನ್ನು ಅಲ್ಲಲ್ಲಿ ಎದುರಿಸಿ, ಅವರ ಹೆಸರನ್ನೇ ತೊಡೆದುಬಿಡಬೇಕೆಂದು ನಿಶ್ಚಯಿ ಸಿದನು. ಈ ಕಾರ್ಯವು ತಾನು ದ್ವಾರಸಮುದ್ರದಲ್ಲಿದ್ದುಕೊಂಡರೆ ನೆರವೇರ ದೆಂದು ತಾನು ಒಂದೆಡೆಯಲ್ಲಿ ನಿಲ್ಲದೆ, ಅಲ್ಲಲ್ಲಿ ಜನರನ್ನು ಕೂಡಿಸುತ್ತ, ಹುರಿ ಗೊಳಿಸುತ್ತ, ಹಿಂದೂ-ಸಂಸ್ಕೃತಿಯನ್ನು-ರಾಜ್ಯವನ್ನು ಉಳಿಸಲಿಕ್ಕೆ ಹೆಣಗಾಡ ಹತ್ತಿದನು.

ಈ ಪ್ರಸಂಗದೊಳಗೆ ದ್ವಾರಸಮುದ್ರದಿಂದ ತೊಣ್ಣೂರು, ಅಲ್ಲಿಂದ ಅನ್ನಾಮಲೆ, (ತಿರುವಣ್ಣಾಮಲೆ) ಹೀಗೆ ತನ್ನ ರಾಜಧಾನಿಯನ್ನು ಬದ ಲಾಯಿಸುತ್ತ ಅಡ್ಡಾಡಿದನು. ಕೊನೆಗೆ ಅವನು ತಿರುವಣ್ಣಾಮಲೆಯಿಂದ ದೊಡ್ಡ ದಂಡು ಕಟ್ಟಿಕೊಂಡು, ಯೋಗ್ಯರೂ ಸಮರ್ಥರೂ ಆದ ದಳವಾಯಿ ಗಳೊಡನೆ ಕಣ್ಣಾನೂರಲ್ಲಿ (ಶ್ರೀರಂಗದ ಹತ್ತರ) ಮುಸಲ್ಮಾನರಿಗೆ ಎದುರಾಗಿ ಹೋರಾಡಿದನು. ಮುಸಲ್ಮಾನರ ಯುದ್ಧದ ಬಗೆಯು ಅವನಿಗೆ ಚನ್ನಾಗಿ ತಿಳಿದಿದ್ದರೆ, ಈ ಯುದ್ಧದಲ್ಲಿ ವೀರಬಲ್ಲಾಳನು ಸೋಲುತ್ತಿರಲಿಲ್ಲ; ಮತ್ತು ಹಿಂದೂಸಂಸ್ಕೃತಿಯ ಸಲುವಾಗಿ ಹೋರಾಡಿದುದಕ್ಕಾಗಿ ಅವನು ಎಲ್ಲರಿಗಿಂತ ಹೆಚ್ಚಿನ ಹೆಸರು ಪಡೆಯಬಹುದಾಗಿತ್ತು; ಆದರೆ ಮುಸಲ್ಮಾನರ ಕಾಯಕವ ನ್ನರಿಯದೆ ವೀರಬಲ್ಲಾಳನು ಒಪ್ಪಂದಕ್ಕೆ ಒಪ್ಪಿ, ಯುದ್ಧ ನಿಲ್ಲಿಸಿದನು. ಆಗ ಅವರು ತಮ್ಮ ಒಪ್ಪಂದ ಮುರಿದು, ಹಿಂದೂ ದಂಡಿನ ಮೇಲೆ ಬಿದ್ದು ಅವರ ನ್ನೆಲ್ಲ ಕೊಂದು, ಬಲ್ಲಾಳನನ್ನು ಸೆರೆಹಿಡಿದರು. ಅವನಲ್ಲಿದ್ದ ಸಂಪತ್ತಿಯನ್ನೆಲ್ಲ ಸುಲಿದರು; ತರುವಾಯ ಅವನನ್ನು ಕೊಂದುಹಾಕಿದರು.

ಮೂರನೆಯ ವೀರಬಲ್ಲಾಳನು ಸತ್ತುದರಿಂದ ಹಿಂದೂ ಸಂಸ್ಕೃತಿ ಮತ್ತು ಹಿಂದೂ ಸ್ವರಾಜ್ಯಕ್ಕಾಗಿ ಹೋರಾಡುವವರಾರೂ ಉಳಿಯಲಿಲ್ಲ. ಆಗ ಯಾವ ಹಿಂದೂ ರಾಜರಲ್ಲಿಯೂ ಸಮರ್ಥವಾದ ದಂಡೂ, ದಣ್ಣಾಯಕರೂ ಇರಲಿಲ್ಲ. ಇದರಿಂದಲೇ ಒಂದರಹಿಂದೊಂದು ಹಿಂದೂ ರಾಜ್ಯಗಳು ಮುಸಲ್ಮಾನರಿಗೆ ಈಲಾದವು. ಅಂತೂ ಹಿಂದೂ ರಾಜ್ಯ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಹೆಣಗಿದವರಲ್ಲಿ ಮೂರನೆಯ ವೀರಬಲ್ಲಾಳನೇ ಮೊದಲಿಗನೆನ್ನಬಹುದು.

---

## ೨೦

## ಶ್ರೀರಂಗದ

# ರಂಗನಾಥ ಮೂರ್ತಿಯ ಕಥೆ

( ಕ್ರಿ. ಶ. ೧೩೧೦—೧೨ )

[ದಿಲ್ಲಿಯ ಸುಲ್ತಾನನ ದಳವಾಯಿಯಾದ ಮಲೀಕ ಕಾಫೂರನು ದಕ್ಷಿಣಕ್ಕೆ ದಾಳಿ ಮಾಡಿದಾಗ, ಅವನು ಕಾಕತೀಯ ವಂಶದ ಪ್ರತಾಪರುದ್ರ ದೇವನನ್ನು ಸೋಲಿಸಿ, ಹಾಗೇ ದಕ್ಷಿಣಕ್ಕೆ ನಡೆದು ಅಲ್ಲಿರುವ ಮುಖ್ಯ ಮುಖ್ಯ ಪ್ರಾಚೀನ ದೇವಾಲಯಗಳನ್ನು ಸುಲಿದು ಹಾಳುಗೆಡವಿದಂತೆ, ಶ್ರೀರಂಗದೇವಾಲಯವನ್ನೂ ಹೊಕ್ಕನು. ಶ್ರೀರಂಗದೇವಾಲಯದಲ್ಲಿ ಪ್ರಚಂಡವಾದ ಹಾವಿನ ಮೇಲೆ ಮಲಗಿರುವ ಮನುಷ್ಯನಾಳುದ್ದ ರಂಗನಾಥನಮೂರ್ತಿ ಇದೆ. ಅದರ ಉತ್ಸವ ಮೂರ್ತಿಯನ್ನು ದಾಳಿಗಾರರು ಒಯ್ದರು. ಅದನ್ನು ಭಕ್ತರು ತಿರಿಗಿ ಸಂಪಾದಿಸಿದ್ದು. ಈ ವಿಷಯವನ್ನು ದಕ್ಷಿಣ ಹಿಂದುಸ್ತಾನದ ದಾಳಿಗಾರರು ಎಂಬ ಇಂಗ್ಲೀಷ ಪುಸ್ತಕದಿಂದ ಎತ್ತಿ ಬರೆಯಲಾಗಿದೆ.]

ಮುಸಲ್ಮಾನರ ಸೈನಿಕರು ಮಲೀಕ ಕಾಫೂರನ ಅಪ್ಪಣೆಯಂತೆ, ದೇವಾಲಯಗಳನ್ನು ಸುಲಿಯುತ್ತ ಮೂರ್ತಿಗಳನ್ನು ಒಡೆಯುತ್ತ, ದೇಶದಲ್ಲೆಲ್ಲ ಹಾವಳಿ ನಡಿಸಿದರು. ಆ ಸಮಯದಲ್ಲಿ ಶ್ರೀರಂಗ ದೇವಾಲಯದ ದಾರಿಯು ಸಿಕ್ಕಿತು. ಆ ಕಾಲಕ್ಕೆ ಉತ್ತರದ ಬ್ರಾಹ್ಮಣರಾದ ಆರ್ಯಭಟ್ಟರ ವಶದಲ್ಲಿ ದೇವಾಲಯವಿತ್ತು. ಅವರನ್ನು ಲಕ್ಷಿಸದೆ ಬಲುಮೆಯಿಂದ ದಾಳಿಗಾರರು, ಉತ್ತರ ದಿಕ್ಕಿನ ಬಾಗಿಲಿನಿಂದ ಒಳಹೊಕ್ಕರು. ಅಲ್ಲಿಟ್ಟಿರುವ ಶ್ರೀರಂಗನ ಮಾಟಾದ ಬೆಲೆಯುಳ್ಳ ಉತ್ಸವ ಮೂರ್ತಿಯನ್ನೂ, ಅದರೊಡನೆ ಸಿಕ್ಕ ಅಮೂಲ್ಯವಾದ ದೇವರ ಆಭರಣಗಳನ್ನೂ ಒಯ್ದರು.

ಶ್ರೀರಂಗದಲ್ಲಿ ರಂಗನಾಥದೇವರ ದರ್ಶನ-ಪೂಜಾದಿಗಳಿಲ್ಲದೆ, ಎಷ್ಟೋ ಜನರು ಬಾಯಲ್ಲಿ ನೀರು ಹಾಕಿಕೊಳ್ಳುತ್ತಿರಲಿಲ್ಲ. ಈ ಬಗೆಯ ನಿಷ್ಠೆಯುಳ್ಳ ಜನರಲ್ಲಿ ದೇವರಿಗೆ ತುಂಬಾ ಕಟ್ಟುನಿಟ್ಟಿನಿಂದ ನಡೆದುಕೊಳ್ಳುವ ಒಬ್ಬ ಹೆಂಗಸು ಇದ್ದಳು. ಆಕೆಯು ಕರಂಬನೂರಿನವಳು. ಮುಸಲ್ಮಾನ ದಾಳಿಗಾರರು ತನ್ನ ಇಷ್ಟ ದೇವತೆಯನ್ನು ತೆಗೆದುಕೊಂಡು ಹೋದರೆಂಬುವ ಸುದ್ದಿಯನ್ನು ಕೇಳಿ, ತಾನು ಹೆತ್ತ ಕಂದಮ್ಮನನ್ನು ಪರರು ಎತ್ತಿಕೊಂಡೊಯ್ದಷ್ಟು ಆಕೆಗೆ ಕಳವಳ ವಾಯಿತು. ಮನೆಗೆಲಸ ತೋಚದೆ, ಆಕೆ ಹೇಗಾದರೂ ಮಾಡಿ, ಪರರಾಯರ ಕೈಗೆ ಹೋದ ತನ್ನ ದೇವರ ಮೂರ್ತಿಯನ್ನು ಉಳಿಸಬೇಕೆಂದು ಹಂಚಿಕೆ ಹಾಕತೊಡಗಿದಳು. ಆ ಕಾಲಕ್ಕೆ, ಜೋಗತಿಯ ವೇಷದಿಂದ ಮುಸಲ್ಮಾನರ ಸೈನ್ಯವನ್ನು ಬೆನ್ನಟ್ಟಿ, ತಾನೂ ದಿಲ್ಲಿಗೆ ಹೋದಳು.

ದಿಲ್ಲಿಗೆ ಹೋದಬಳಿಕ ದಾಳಿಗಾರರು ತಾವು ತಂದಿರುವ ಮೂರ್ತಿ, ಅಮೂಲ್ಯವಾದ ವಸ್ತು-ಒಡವೆಗಳನ್ನೆಲ್ಲ ಸುಲ್ತಾನನಿಗೆ ಒಪ್ಪಿಸಿದರು. ಆಗ ಆತನ ಪ್ರೀತಿಯ ಮಗಳೂ ಅಲ್ಲಿಯೇ ಇದ್ದಳು. ಅವುಗಳನ್ನೆಲ್ಲ ಕಂಡು ಸಂತೋಷಪಟ್ಟು, ಬಾದಶಹನು ತನ್ನ ಕೋಣೆಯಲ್ಲಿರುವ ಬೊಕ್ಕಸದಲ್ಲಿಟ್ಟು ಬೀಗ ಹಾಕಿದನು. ಸುಲ್ತಾನನ ಮಗಳ ಮನಸು ಅದೇಕೋ ಸುಂದರವಾದ ಆ ಶ್ರೀರಂಗನಾಥನ ಮೂರ್ತಿಗೆ ಮರುಳಾಯಿತು. ತನ್ನ ಆಟಿಗೆಯ ವಸ್ತುಗಳಲ್ಲಿ ಆ ಮೂರ್ತಿಯೂ ಒಂದಾಗಿರಬೇಕೆಂದು ಆಕೆ ಹಟಹಿಡಿದಳು. ಅರಸನು ಮಗಳ ಹಟಕ್ಕೆ ಮನಸೋತು ಅದನ್ನಾಕೆಗೆ ಆಡಲಿಕ್ಕೆ ಕೊಟ್ಟನು. ಆಕೆಯು ಒಂದರಕ್ಷಣವಾದರೂ ಆ ಮೂರ್ತಿಯನ್ನು ಬಿಟ್ಟಿರುತ್ತಿರಲಿಲ್ಲ. ಇಷ್ಟರಮಟ್ಟಿಗೆ ಆ ಮೂರ್ತಿಯಲ್ಲಿ ಆಕೆಯ ಪ್ರೀತಿಯು ಬೆಳೆಯಿತು.

ಜೋಗತಿಯ ವೇಷದಿಂದ ದಿಲ್ಲಿಗೆ ಹೋದ ಹೆಂಗಸು ಇಪ್ಪತ್ತುನಾಲ್ಕು ತಾಸು, ಆ ಮೂರ್ತಿಯ ಸಮಾಚಾರವನ್ನು ತಿಳಿದುಕೊಳ್ಳುತ್ತಲೇ ಇದ್ದಳು. ಅದು ಅರಸನ ಮಗಳ ಆಟಿಗೆಯಲ್ಲಿ ಸುರಕ್ಷಿತವಾಗಿರುವ ಸಂಗತಿಯನ್ನೂ ತಿಳಿದು ಆಕೆಗೆ ಹಾಯವೆನಿಸಿತು. ಆಕೆಯ ವಶದಲ್ಲಿ ಇರುವ ಕಾಲದಲ್ಲಿಯೇ ಅದನ್ನು ಹೇಗಾದರೂ ದೊರಕಿಸಬೇಕೆಂದು ಜೋಗತಿಯು ಲಗುಬಗೆಯಿಂದ ಶ್ರೀರಂಗಕ್ಕೆ ತಿರುಗಿ ಬಂದು, ಅಲ್ಲಿಯ ಭಕ್ತ ಜನರಿಗೆ ರಂಗನಾಥಮೂರ್ತಿಯ ಸಮಾಚಾರವೆಲ್ಲವನ್ನೂ ಅರುಹಿದಳು.

ಆಕೆಯು ಹೇಳಿದ ಸಂಗತಿಯನ್ನೆಲ್ಲ ಕುರಿತು ನಾಗರಿಕರು ಕೂಡಿ ಯೋಚನೆಮಾಡಿದರು. ರಂಗನಾಥಮೂರ್ತಿಯನ್ನು ಬಾದಶಹನ ಅಪ್ಪಣೆ ಪಡೆದು ತರಬೇಕೆಂದು ಶ್ರೀರಂಗದಿಂದ ಅರವತ್ತು ಮಂದಿ ಹೊರಟರು. ಅವರಲ್ಲಿ ಶ್ರೀರಂಗನಾಥ ದೇವರ ಮುಂದೆ ನಿತ್ಯದಲ್ಲಿಯೂ ಬೆಳಿಗ್ಗೆ-ರಾತ್ರಿ ಪೂಜೆಯ ಕಾಲಕ್ಕೆ ಹಾಡುವ-ಕುಣಿಯುವ ಜನರಿದ್ದರು. ಹಲವು ದಿನಗಳಿಂದ ತಮಗೆ ದೇವರ ಸೇವೆ ತಪ್ಪಿದ್ದರಿಂದ, ದೇವರನ್ನು ಕಣ್ತುಂಬ ನೋಡಿ, ಅವನ ಮುಂದೆ ಮೈಮರೆತು ಹಾಡಿ,ಯಾವಾಗ ಕುಣಿಯುವೆವೋ ಎಂದು ಹಾತೊರೆಯುತ್ತಿದ್ದರು.

ಅಂತು, ಎಲ್ಲರೂ ಒಮ್ಮೆ ದಿಲ್ಲಿಗೆ ತಲ್ಪಿದರು. ಪ್ರಸಂಗ ಸಾಧಿಸಿ ಸುಲ್ತಾನನನ್ನು ಕಂಡರು. ತಮ್ಮಲ್ಲಿರುವ ಗಾಯನ-ನೃತ್ಯಗಳ ಕೌಶಲ್ಯವನ್ನು ಅವನಿಗೆ ತೋರಿಸಿ, ಸಂತೋಷಪಡಿಸಿದರು. ಮುಸಲ್ಮಾನ ಅರಸನು ಲಹರಿಯ ಸ್ವಭಾವದವನು. 'ನಿಮಗೆ ಇಷ್ಟವಿದ್ದ ಕಾಣಿಕೆಯನ್ನು ಕೇಳಬಹುದು ಕೊಡುತ್ತೇನೆಂದನು.' ತಮ್ಮಲ್ಲಿದ್ದ ಶ್ರೀರಂಗನಾಥ ಮೂರ್ತಿಯನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಆಗಬಹುದೆಂದು ಆಜ್ಞಾಪಿಸಿದನು. ಅರಸಾಳುಗಳು ಮೂರ್ತಿಯನ್ನು ಹುಡುಕಲಾಗಿ, ಅದು ಕೋಣೆಯಲ್ಲಿ ಇಲ್ಲವೆಂದೂ ಅರಸುಕನ್ಯೆಯಲ್ಲಿರುವದೆಂದೂ ಹೇಳಿದರು. ಆಗ ಸುಲ್ತಾನನು ನಗೆಚಾಟಿಕೆಯಿಂದ 'ನಿಮ್ಮ ದೇವರನ್ನು ನೀವು ಕರೆದುಕೊಂಡು ಹೋಗಿರಿ.' ಎಂದನು. ಆಗ ಆ ಗಾಯಕರು-ಕುಣಿಯುವವರು ಅತ್ಯಂತ ಭಕ್ತಿಯಿಂದ ಹಾಡಿ ಕುಣಿಯಲು, ರಂಗನಾಥಮೂರ್ತಿಯು ಅವರನ್ನು ಬೆನ್ನಟ್ಟಿತು. ಸುಲ್ತಾನನ ಅಪ್ಪಣೆಯಿಂದ ಮೂರ್ತಿಯನ್ನು ತೆಗೆದುಕೊಂಡರು. ರಾತ್ರಿಯಲ್ಲಿಯೇ ಅವರು ಶ್ರೀರಂಗದ ದಾರಿ ಹಿಡಿದರು. ತಮ್ಮ ದೇವರು ತಮಗೆ ದೊರೆತನೆಂದು ಅವರಿಗೆ ಹಿಡಿಸಲಾರದಷ್ಟು ಆನಂದ.

ಬೆಳಗಾಯಿತು. ಅರಸು ಕನ್ಯೆಯು ತನ್ನ ತೊತ್ತುಗಳಿಗೆ 'ಆ ಮೂರ್ತಿ ಎಲ್ಲಿ?' ಎಂದು ಕೇಳಲಾಗಿ ಶ್ರೀರಂಗದವರು ಒಯ್ದರೆಂದು ತಿಳಿಯಿತು.'ಅದಿಲ್ಲದೆ ನಾನು ಬದುಕಲಾರೆ. ನನಗದನ್ನು ಈಗಿಂದೀಗ ತಂದುಕೊಟ್ಟರೆ ಸರಿ, .ಇಲ್ಲವಾದರೆ ಪ್ರಾಣ ಕೊಡುವೆ' ಎಂದು ಹಟವಿಡಿದು ಕುಳಿತಳು. ನಗೆಹೋಗಿ ಹೊಗೆಯಾದುದನ್ನು ಕಂಡು ಸುಲ್ತಾನನಿಗೆ ಮೀರಿದ ವ್ಯಸನವಾಯಿತು. ಮೂರ್ತಿಯನ್ನು ಒಯ್ದವರನ್ನು ಹುಡುಕಲು ನಾನೇ ಹೋಗುವೆನೆಂದು

ಮಗಳು ನುಡಿದಾಗಂತೂ ಅರಸನಿಗಾದ ಕಷ್ಟಕ್ಕೆ ಪಾರವಿಲ್ಲ. ಅರಮನೆಯಲ್ಲಿ ಅದೊಂದು ದೊಡ್ಡ ರಂಬಾಟವೇ ಆಯಿತು. ಕೊನೆಗೆ ಕೆಲವುಜನರನ್ನುಜೊತೆಗೆ ಕೊಟ್ಟು, ಅರಸನು ಮಗಳನ್ನು ಮೂರ್ತಿಯ ಶೋಧಕ್ಕಾಗಿ ಕಳಿಸಿದನು.

ಶ್ರೀರಂಗದವರು ಮೂರ್ತಿಯನ್ನು ಬಚ್ಚಿಕೊಂಡು ಸುಸೂತ್ರವಾಗಿ ತಿರುಪತಿಗೆ ಮುಟ್ಟಿದರು. ಅಲ್ಲಿ ಹೋದ ಮೇಲೆ ಸುಲ್ತಾನನ ಮಗಳು ಮೂರ್ತಿಯನ್ನು ತಿರುಗಿ ಒಯ್ಯಲಿಕ್ಕೆ ಕೆಲವು ಜನರೊಡನೆ ಬರುತ್ತಿರುವ ಸಮಾಚಾರ ಅವರು ಕೇಳಿದರು; ಆಗ ನಚ್ಚಿನ ನಂಬಿಗೆಯ ಮೂವರ ಕೈಯಲ್ಲಿ ಮೂರ್ತಿಯನ್ನೊಪ್ಪಿಸಿ, ತಾವೆಲ್ಲರೂ ಅತ್ತಿತ್ತ ನಡೆದರು. ಅರಸುಕನ್ಯೆಯು ತನ್ನ ಪರಿವಾರದೊಂದಿಗೆ ಶ್ರೀರಂಗಕ್ಕೆ ನಡೆದಳು. ಅಲ್ಲಿ ತನ್ನ ಮೋಹದ ಮುದ್ದು ಮೂರುತಿಯು ಇಲ್ಲದ್ದನ್ನು ಕಂಡು, ಅದನ್ನು ತೊರೆದು ನಿಲ್ಲಲಾರದೆ, ಆಕೆಯ ಎದೆಯೊಡೆಯಿತು; ಪ್ರಾಣಬಿಟ್ಟಳು.

ಇಷ್ಟಕ್ಕೆ ಸುಮ್ಮನಿರದೆ, ಮುಸಲ್ಮಾನರು ತಿರುಪತಿಗೆ ಹೋಗಿ ಮೂರುತಿಯ ಶೋಧ ನಡಿಸುವರೆಂಬ ವರ್ತಮಾನವು ಶ್ರೀರಂಗಸ್ವಾಮಿಯ ಮೂರುತಿಯನ್ನಿಟ್ಟುಕೊಂಡವರಿಗೆ ತಿಳಿಯಿತು. ಆ ಮೂವರು ಒಂದೇ ಬಳಗದವರು. ಒಬ್ಬನು ತಂದೆ, ಇನ್ನೊಬ್ಬ ಮಗ, ಮತ್ತೊಬ್ಬ ಹುಡುಗನ ಮಾವ ಹೀಗೆ. ದಿಲ್ಲಿಯಿಂದ ಇಲ್ಲಿಯವರೆಗೆ ತಂದ ದೇವರನ್ನು ಇನ್ನು ಮುಸಲ್ಮಾನರ ಕೈಗೆ ಕೊಡುವದುಂಟೇ? ಅದೆಂದೂ ಆಗದು. ಹೀಗೆಂದು ತಂದೆಯು ತನ್ನ ಮಗ ಮತ್ತು ಭಾವನನ್ನು ಕರೆದು, ಮುಸಲ್ಮಾನರ ಕಾಟ ತಪ್ಪುವವರೆಗೆ ತಿರುಪತಿಯ ಬೆಟ್ಟದ ದರಿ-ಕಂದರಗಳಲ್ಲಿ ಅಡಗಿರಬೇಕೆಂದು ಯೋಚಿಸಿದನು. ಯಾರ ಸುಳಿವಿಲ್ಲದ ಒಂದು ದರಿಯಲ್ಲಿಯ ಗುಹೆಯನ್ನಾರಿಸಿ, ಎಲ್ಲರೊಡನೆ ಅಲ್ಲಿರಹತ್ತಿದನು. ಶ್ರೀರಂಗದವರು ಬಲುದಿನ ದಾರಿ ಕಾಯ್ದು, ನಿರಾಸೆಗೊಂಡು ದೇವಸ್ಥಾನದಲ್ಲಿ ಬೇರೆ ದೇವರನ್ನು ಸ್ಥಾಪಿಸಿ, ಪೂಜೆಯನ್ನು ನಡೆಯಿಸಿದರು.

ಇತ್ತ, ತಿರುಪತಿಯ ಗವಿಯಲ್ಲಿದ್ದ ಆ ತಂದೆ,ಮಗ,ಭಾವರು ಯಾರಿಗೂ ತಿಳಿಯಗೊಡದಂತೆ, ಶ್ರೀರಂಗದಲ್ಲಿ ನಡೆಯುವಂತೆಯೇ, ನಿತ್ಯವೂ ದೇವರಿಗೆ ಪೂಜಾ- ವಿಧಿಗಳನ್ನು ಸಲ್ಲಿಸುತ್ತ ಇದ್ದರು. ಹೀಗೆಯೇ, ಅರವತ್ತು ವರ್ಷ ಕಾಲಕಳೆದರು. ಅಷ್ಟೊತ್ತಿಗೆ, ತಂದೆ, ಮತ್ತು ಭಾವ ಇವರಿಬ್ಬರು ಮಡಿದರು. ಮಗನೊಬ್ಬನೇ ಉಳಿದನು. ಅವನೂ ಎಂಭತ್ತು ವರ್ಷದ ಮುಪ್ಪಿನವನಾದನು.

ಹಲವು ವರ್ಷ ಜನರ ಸಹವಾಸವಿಲ್ಲದೆ, ಅಡವಿಯಲ್ಲಿಯೇ ಕಾಲ ಕಳೆದುದರಿಂದ, ಅವನೊಬ್ಬ ಅಡವಿಯ ಮನುಷ್ಯನೇ ಆಗಿದ್ದನು. ತನ್ನ ವಯಸ್ಸೂ ಮುಗಿದು, ಹೆಚ್ಚು ದಿನ ಬಾಳುವ ಆಸೆ ಇಲ್ಲವೆಂದರಿತು, ಅವನು ಅಡವಿಯಲ್ಲಿದ್ದ ಜನರ ಗುರುತುಮಾಡಿಕೊಂಡು, ಅವರಿಗೆಲ್ಲ ತನ್ನ ನಿಜಸಂಗತಿಯನ್ನು ತಿಳಿಸಿದನು. ಹೀಗೆ, ಒಬ್ಬರ ಕಿವಿಯಿಂದ ಇನ್ನೊಬ್ಬರಿಗೆ ತಲಪುತ್ತ ಈ ಸಂಗತಿಯು ಶ್ರೀರಂಗಕ್ಕೆ ಮುಟ್ಟಿತು.

ಅಷ್ಟೊತ್ತಿಗೆ, ವಿಜಯನಗರದಲ್ಲಿ ಕನ್ನಡಿಗರ ರಾಜ್ಯವು ಸ್ಥಾಪಿಸಲ್ಪಟ್ಟು ಕಂಪಣ್ಣನ ದಳವಾಯಿಯಾದ ಗೋಪಣಾರ್ಯನು ಜಿಂಜಿಯಲ್ಲಿದ್ದು ಆಳುತ್ತಿದ್ದನು. ತಿರುಪತಿಯ ಜಾತ್ರೆಗೆಂದು ಬಂದಾಗ, ಅವನು ಶ್ರೀರಂಗ ಸ್ವಾಮಿಯ ಮೂರ್ತಿಯನ್ನು ಜಿಂಜಿಯಲ್ಲಿಟ್ಟುಕೊಂಡು, ಪೂಜಾದಿಗಳನ್ನು ನಡಿಸಿದನು. ಕಂಪಣ್ಣನು ಮುಸಲ್ಮಾನರನ್ನು ದಕ್ಷಿಣ ಹಿಂದುಸ್ತಾನದಿಂದ ಹೊಡೆದಟ್ಟಿ, ದಕ್ಷಿಣ ದೇಶವನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡನಂತರ, ಶ್ರೀರಂಗ ಸ್ವಾಮಿಯ ಮೂರ್ತಿಯನ್ನು ಶ್ರೀರಂಗದೇವಾಲಯಕ್ಕೆ ಕಳಿಸಿ, ಸ್ಥಾಪಿಸಿ, ಪೂಜಾದಿಗಳ ಏರ್ಪಾಟು ಮಾಡಿಕೊಟ್ಟನು.

---

## ೨೧

### ಪರದಾರಸೋದರ

# ಕುಮಾರ ರಾಮನ ಕತೆ

( ಕ್ರಿ. ಶ. ೧೩೦೦–೩೫ )

[ ಕುಮಾರರಾಮನು ಆನೇಗುಂದಿಯ ಕಂಪಿಲರಾಯನ ಮಗ. ಮಹಾ ವೀರ. ಕೆಳಗಿನ ಕತೆಯಿಂದ ಅವನ ಶೀಲ-ಶೌರ್ಯಗಳು ಎಷ್ಟು ಲೋಕೋತ್ತರವಾಗಿದ್ದವೆಂಬುದು ಸ್ಪಷ್ಟವಾಗುವದು. ಈ ವಿಷಯವನ್ನು ಮಿಥಿಕ್ ಸೊಸಾಯಿಟಿ ಜರ್ನಲ್ ಎಂಬ ಇಂಗ್ಲೀಷ ಮಾಸಪತ್ರಿಕೆಯಲ್ಲಿ ಶ್ರೀ. ಹಟ್ಟಿ ರಾಮ ಶರ್ಮರು ಬರೆದ ಲೇಖನದಿಂದ ಸಂಗ್ರಹಿಸಲಾಗಿದೆ. ]

ಆನೇಗುಂದಿಯ ಅರಸ ಕಂಪಿಲರಾಯನಿಗೆ ಇಬ್ಬರು ಹೆಂಡಿರು. ಹಿರಿಯವಳು ಹರಿಹರದೇವಿ, ಚಿಕ್ಕವಳು ರತ್ನಾಜಿ. ಕುಮಾರರಾಮನು ಹರಿಹರದೇವಿಯ ಮಗ. ಚಲುವಿಕೆಯಲ್ಲಿಯೂ ಗಟ್ಟಿತನದಲ್ಲಿಯೂ ಹಾಗೇ ಇದ್ದನು.

ಕುದುರೆ ಹತ್ತುವದರಲ್ಲಿ ಬಲು ಜಾಣನು. ಗೋವೆಗೆ ಹೋಗಿ, ಅಲ್ಲಿರುವ ಒಬ್ಬ ಸಾವುಕಾರನ ಎಡವಟ್ಟಾದ ಕುದುರೆಯನ್ನು ಹತ್ತಿ, ದಾರಿಗೆ ತಂದು, ಹತ್ತು ಸಾವಿರ ಟೆಂಕಿಗಳನ್ನು ಕಾಣಿಕೆ ಪಡೆದ ಬಂಟ.

ರಾಮನಿಗೆ ಪ್ರಾಯ. ಕುಡಿಮೀಸೆ ಒಡೆಯುತ್ತಿದ್ದವು. ಕಾಮನಂಥವ. ಒಂದುದಿನ ತನ್ನ ಗೆಳೆಯರೊಡನೆ ಮುತ್ತಿನ ಚಂಡನ್ನಾಡುತ್ತಲಿದ್ದ. ಆಗ ಆ ಚಂಡು ಪುಟಿದು ಮಲತಾಯಿಯಾದ ರತ್ನಾಜಿಯ ಕೋಣೆಯಲ್ಲಿ ಹೋಗಿ ಬಿದ್ದಿತು. ರತ್ನಾಜಿಯು ಕೆಟ್ಟವಳು. ಕುಮಾರರಾಮನನ್ನು ತನ್ನ ಬಲೆಯಲ್ಲಿ ಹಿಡಿಯಬೇಕೆಂದು ಬಹುದಿನಗಳಿಂದ ಹೊಂಚುಹಾಕಿದ್ದಳು. ರಾಮನು ಚಂಡುತರಲಿಕ್ಕೆಂದು ಕೋಣೆಯಲ್ಲಿ ಹೋದನು. ಅಂಥವನನ್ನು ಮಗನೆಂದು ಪ್ರೀತಿಸುವ ಭಾಗ್ಯವಿರಲಿಲ್ಲ. ತನ್ನ ಬುದ್ಧಿಯನ್ನು ತಾನೇ ಕೆಡಿಸಿಕೊಂಡಳು. ಅಲ್ಲದ ಕೆಲಸಕ್ಕೆ ಮಲಮಗನನ್ನು ಎಳೆಯಬೇಕೆಂದಳು. ಅವನು ಒಪ್ಪಲಿಲ್ಲ.

ಆಗ, ರತ್ನಾಜಿಯು ಕುಮಾರನವಿರುದ್ಧ ಗಂಡನ ಮುಂದೆ ಇಲ್ಲದ ಚಾಡಿಗಳನ್ನು ಹೇಳಿ, ಅವನ ಮನಸು ಕೆಡಿಸಿದಳು. ಕಂಪಿಲರಾಯನು ಮುಪ್ಪಿನ ಮುದುಕ. ಚಿಕ್ಕಹೆಂಡತಿಯ ಮಾತು ಕೇಳಿ, ತನ್ನ ಮಂತ್ರಿ ಬೈಚಪ್ಪನಿಗೆ ಕುಮಾರರಾಮನನ್ನು ಕೊಲ್ಲಿಸಲಿಕ್ಕೆ ಹೇಳಿದನು. ಆದರೆ, ಬೈಚಪ್ಪನು ಅವನನ್ನು ಕೊಲ್ಲಿಸದೆ ಒಂದು ಗವಿಯಲ್ಲಿ ಬಚ್ಚಿಟ್ಟನು. ಕೊಲ್ಲಿಸಿದೆನೆಂದು ಹೇಳಿದನು.

ದಿಲ್ಲಿಯ ಸುಲ್ತಾನನಾದ ಮಹಮ್ಮದ ತಘಲಕನು ಕುಮಾರರಾಮನ ಚಲ್ವಿಕೆಯನ್ನು ಕೇಳಿ, ತನ್ನ ಮಗಳನ್ನು ಅವನಿಗೆ ಕೊಡಬೇಕೆಂದು ಕಂಪಿಲ ರಾಯನಿಗೆ ಹೇಳಿಕಳಿಸಿದನು. ಕಂಪಿಲನು ಸುಮ್ಮನಿದ್ದನು. ಆಗ, ಕುಮಾರ ರಾಮನನ್ನು ಸೆರೆಹಿಡಿಯಲು ಅವನು ದಂಡುಕಳಿಸಿದನು. ನೇಮಿಖಾನ ನೊಡನೆ ಸುಲ್ತಾನನ ದಂಡು ಬಂದು ಆನೇಗುಂದಿಯನ್ನು ಮುತ್ತಿತು. ಆ ವೇಳೆಯಲ್ಲಿ ತನ್ನ ರಾಮನಿದ್ದರೆ ಏನಾಗುತ್ತಿತ್ತೋ ಎಂದು ಕಂಪಿಲರಾಯ ಮಿಡುಕಿದನು.

ಇನ್ನು ರಾಮನಿಲ್ಲದೆ, ಯಾರಿಂದಲೂ ಸುಲ್ತಾನನ ದಂಡನ್ನು ಸೋಲಿ ಸುವ ಕೆಲಸವಾಗದೆಂದು, ಬೈಚಪ್ಪ ಮಂತ್ರಿಯು ಗವಿಯಿಂದ ಕುಮಾರ ರಾಮನನ್ನು ಕರೆತಂದು, ಯುದ್ಧಕ್ಕೆ ಹಚ್ಚಿದನು. ಪ್ರತಾಪಿಯಾದ ರಾಮನ ಮುಂದೆ, ಸುಲ್ತಾನನ ದಂಡಿನವರು ಸೋತರು. ಕಂಪಿಲರಾಯನಿಗೆ ಗೆಲ

ವಾಯಿತು. ಬೈಚಪ್ಪ ಮಂತ್ರಿಯು ಕುಮಾರರಾಮನನ್ನು ಕಂಪಿಲರಾಯನ ಪಾದಗಳಿಗೆ ತಂದು ಹಾಕಿದನು. ಮಗನ ಶೀಲ-ಶೌರ್ಯಗಳನ್ನು ಕಂಡು, ಸಂತುಷ್ಟನಾದನು. ರಾಮನು ಕಾಳಗದಲ್ಲಿ ಗೆದ್ದುದನ್ನು ಕೇಳಿ, ರತ್ನಾಜಿಯು ನಾಚಿಕೆಯಿಂದ ಯಾರಿಗೂ ಮುಖತೋರಿಸದೆ ಸತ್ತು ಹೋದಳು. ಇತ್ತ, ಕುಮಾರರಾಮನಿಗೆ ನೇಮಿಖಾನನು ಸೋತುಬಂದುದನ್ನು ಕೇಳಿ, ದಿಲ್ಲಿಯ ಸುಲ್ತಾನನಿಗೆ ತಾಳಲಿಕ್ಕಾಗದಷ್ಟು ಕೋಪಬಂದಿತು. ಅವನನ್ನು ಸೋಲಿಸುವ ವೀರರಾರೂ ಇಲ್ಲವೆ? ಎಂದು ಪೇಚಾಡಿದನು. ಆಗ ಸುಲ್ತಾನನ ಬಾಗಿಲ ಕಾಯುವ ಮಾತಂಗಿ ಎಂಬುವಳು ಮುಂದೆ ಬಂದು ಕೈಮುಗಿದು 'ಅಪ್ಪಣೆ ಯಾದರೆ ನಾನು ಅವನನ್ನು ಹೆಡಮುರಿಕೆ ಕಟ್ಟಿ ತರುವೆನು' ಎಂದಳು. ಮೊದಲು ಈ ಮಾತಿಗೆ ಸುಲ್ತಾನನು ಒಪ್ಪಲಿಲ್ಲ; ಆಮೇಲೆ ಒಪ್ಪಿ, ಮಾತಂಗಿಯ ಸಹಾಯಕ್ಕೆ ಸರದಾರರನ್ನೂ ಸೈನ್ಯವನ್ನೂ ಕೊಟ್ಟು ಕಳುಹಿದನು.

ಮಾತಂಗಿಯು ದಿಲ್ಲಿಯಿಂದ ಹೊರಟವಳು ಪಯಣಮಾಡುತ್ತ ಬಂದು, ಕಂಪಿಲರಾಯನ ರಾಜಧಾನಿಯಾದ ಕುಮ್ಮಟದುರ್ಗವನ್ನೇ ಮುತ್ತಿ 'ಬಾಹುದ್ದೀನನನ್ನು ಒಪ್ಪಿಸಬೇಕು, ಕುಮಾರರಾಮನು ಸುಲ್ತಾನನ ಮಗಳನ್ನು ಮದುವೆಮಾಡಿಕೊಳ್ಳಲಿಕ್ಕೆ ಬೇಕು. ಇವೆರಡಕ್ಕೂ ಒಪ್ಪದಿದ್ದರೆ, ಯುದ್ಧಕ್ಕೆ ಬರಬೇಕೆಂದು' ಹೇಳಿ ಕಳುಹಿದಳು. ಆಗ ಕಂಪಿಲರಾಯನು ಹೊಸದುರ್ಗದಲ್ಲಿದ್ದು ಕುಮಾರರಾಮನು ಕುಮ್ಮಟದುರ್ಗದಲ್ಲಿದ್ದ. ಕುಮಾರ ರಾಮನು ಮಾತಂಗಿಯೊಡನೆ ಯುದ್ಧಮಾಡುವ ಸಿದ್ಧತೆ ನಡಿಸಿದನು. ಅಷ್ಟೇ ಅಲ್ಲದೆ, ಆಕೆಯನ್ನು ಸೋಲಿಸಿಯೇ ತಂದೆಗೆ ಮುಖ ತೋರಿಸುವ ನಿರ್ಧಾರ ಮಾಡಿದನು. ತಾಯಿತಂದೆಗಳಿಗೆ ನಿಶ್ಚಿಂತೆಯಿಂದ ಇರಲು ತಿಳಿಸಿದನು.

ಇಬ್ಬರಿಗೂ ಕಾಳಗ ನಡೆಯಿತು. ರಾಮನಾಥನು ತನ್ನ ದಳವಾಯಿ ಯಾದ ಕ್ಯಾತಣ್ಣನನ್ನು ಮೂವತ್ತುಸಾವಿರ ಬಂಟರೊಡನೆ ಮಾತಂಗಿಯ ದಂಡಿನಮೇಲೆ ದಾಳಿಮಾಡಲು ಗುಟ್ಟಾಗಿ ಕಳುಹಿದನು. ಇದರೊಳಗೆ ಕ್ಯಾತ ಣ್ಣನ ದಂಡಿನವರು ಗೆದ್ದುಬಂದರು.

ಇಬ್ಬರಲ್ಲಿ ಯುದ್ಧದ ಚಟುವಟಿಕೆಗಳು ನಡೆದಂತೆ, ಹೊಸದುರ್ಗದಲ್ಲಿದ್ದ ಕಂಪಿಲರಾಯ-ಹರಿಯಮ್ಮ (ರಾಮನ ತಂದೆ-ತಾಯಿ) ಅವರಿಗೆ ಮಗನ

ವಿಷಯದಲ್ಲಿ ಚಿಂತೆ ಎನಿಸಿ ಮುಖ ನೋಡುವ ಆಸೆಹುಟ್ಟಿತು. ಕೂಡಲೆ, ಬಂದು ಭೆಟ್ಟಿಯಾಗಿ ಹೋಗಬೇಕಾಗಿ ಓಲೆಕಾರನೊಡನೆ ಕಾಗದ ಕೊಟ್ಟು ಕಳಿಸಿದರು. ರಾಮನು ತನ್ನ ದಂಡನಾಯಕರಿಗೆ ಮುಂದಿನ ಚಟುವಟಿಕೆ ಗಳನ್ನು ಮಾಡಹೇಳಿ, ತಾನು ತಂದೆ-ತಾಯಿಯನ್ನು ಕಾಣಲಿಕ್ಕೆ ಹೋದನು. ಮಾತುಕತೆ ನಡೆದವು. ಯುದ್ಧದ ವೆಚ್ಚಕ್ಕಾಗಿ ಕಂಪಿಲರಾಯನು ವೆಗ್ಗಳವಾಗಿ ದುಡ್ಡು ಕೊಟ್ಟನು. ಬಹು ಜೋಕೆಯಿಂದ ಯುದ್ಧನಡಿಸಲು ಸೂಚಿಸಿದನು. ಮಗನನ್ನು ಅಗಲುವಾಗ ತಾಯಿ-ತಂದೆಗಳಿಗಾದ ದುಃಖಕ್ಕೆ ಎಣೆ ಇಲ್ಲ.

ರಾಮನಾಥನು ತಂದೆಯಿಂದ ತಂದ ಹಣವನ್ನು ವೀರರಿಗೆ ಹಂಚಿ, ಯುದ್ಧಕ್ಕೆ ಹುರಿಗೊಳಿಸಿದನು. ಮೊದಲು ಒಂದೆರಡು ದಾಳಿಗಳಲ್ಲಿ ರಾಮ ನಾಥನ ದಂಡಿನವರಿಗೆ ಜಯವಾಯಿತು. ಮಾತಂಗಿಯು ರೇಗಿದಳು. ರಾಮ ನಾಥನೊಡನೆ ಕಾಳಗಮಾಡಬೇಕೆಂದು ತಾನೇ ಆನೆಯಮೇಲೆ ಕುಳಿತು, ಹೋರಾಡುತ್ತಿದ್ದಳು. ರಾಮನಾಥನ ಹೋರಾಟವನ್ನು ಕಂಡು ಮಾತಂಗಿಯು ಬೆರಳು ಕಚ್ಚಿಕೊಂಡಳು.

ಹೀಗೆ ಇತ್ತ ಯುದ್ಧ ನಡೆದಿರುವಾಗ, ಮಾತಂಗಿಯ ಸರದಾರನಾದ ಮಧುರಖಾನ ಎಂಬುವನು ಒಂದೆಡೆಯಲ್ಲಿ ಕೋಟೆಯ ಗೋಡೆಯನ್ನು ಒಡೆ ಯಿಸುವ ಕೆಲಸ ನಡಿಸಿದ್ದನು. ಇದನ್ನು ಅಡ್ಡಗಟ್ಟುವ ಕಾರ್ಯದಲ್ಲಿ ರಾಮ ನಾಥನ ವೀರರಾದ ಕೋಲಂಚಿಯ ಕಂಪ, ಗಿಂಡಿಯ ಲೆಕ್ಕ, ಅಕ್ಕಸಾಲೆಯ ಚಿಕ್ಕ, ಸತ್ತಿಯ ಲಿಂಗ, ಮಾದಿಗರ ಹಂಪ, ಹೊಲೆಯರ ಹುಲ್ಲ ಮೊದಲಾ ದವರು ರಣದಲ್ಲಿ ಮಲಗಿದರು.

ರಾಮನಾಥನ ಕಡೆಯ ವೀರರು ಸೋತು ಮಡಿಯುತ್ತಿರುವ ಸುದ್ದಿಯು ಕುಮ್ಮಟದುರ್ಗದ ಅರಮನೆಯಲ್ಲಿರುವ ಹೆಂಗಸರಿಗೆ ಮುಟ್ಟಿತು. ಇನ್ನು, ಜೀವ ದಿಂದಿದ್ದು, ಶತ್ರುಗಳ ಕೈಯಲ್ಲಿ ಸಿಲುಕುವದಕ್ಕಿಂತ ಸಾಯುವದೇ ಲೇಸೆಂದು ಅರಮನೆಯ ಹೆಂಗಸರು ಬೆಂಕೆಯನ್ನು ಹೊತ್ತಿಸಿ, ತಾವು ಅದರೊಳಗೆ ಹಾರಿ ಕೊಂಡು ಪ್ರಾಣಬಿಟ್ಟರು.

ಈ ಸುದ್ದಿಯನ್ನು ಕೇಳಿ, ರಾಮನಾಥನು ಈ ನೋಟವನ್ನು ನೋಡಲಿಕ್ಕೆ ಹೋದನು. ನೋಡಿ ಎಚ್ಚರತಪ್ಪಿತು, ಅರಮನೆಯಲ್ಲಿರುವ ದೇವರಮನೆಯಲ್ಲಿ ಹೋಗಿ, ದೇವರಿಗೆ ಸಾಷ್ಟಾಂಗವೆರಗಿ, ಕುಲದೇವತೆಯಾದ ಈಶ್ವರನಿಗೆ ಬೇಡಿ

ಕೊಂಡು ಹೊರಗೆ ಬಂದನು; ಮತ್ತು ತಾನು ಕಡೆಯ ಹೋರಾಟಕ್ಕೆ ಟೊಂಕ ಕಟ್ಟಿದನು. ಕುದುರೆಯನ್ನು ಹತ್ತಿ ಭರದಿಂದ ಕಾಳಗದೊಳಗೆ ಧುಮುಕಿ, ಶತ್ರುಗಳನ್ನು ಸರಸರನೆ ಕತ್ತಿಯಿಂದ ಸವರಲಾರಂಭಿಸಿದನು. ಅವನ ಪರಾಕ್ರಮವನ್ನು ನೋಡಿ ಶತ್ರುಗಳು ದಂಗಾಗಿ ನಿಂತರು; ಆದರೆ ಶತ್ರುಗಳ ದಂಡು ಲೆಕ್ಕವಿಲ್ಲದಷ್ಟು ಇದ್ದುದರಿಂದ ರಾಮನ ಕೈ ನಿಂತಿತು. ಕಾದುತ್ತ ಕಾದುತ್ತ ಅವನು ಒಬ್ಬ ವೀರನ ಕತ್ತಿಗೆ ತುತ್ತಾದನು. ಅವನ ರುಂಡವು ಧಡದಿಂದ ಬೇರೆ ಆಯಿತು.

ಇದನ್ನು ಕಂಡು ಮಾತಂಗಿಯು ಮರಮರನೆ ಮರುಗಿದಳು. ಒಂದು ಕ್ಷಣವಾದರೂ ತಡಮಾಡದೆ, ರಾಮನಾಥನ ರುಂಡವನ್ನು ಒಂದು ಜರದ ಅರಿವೆಯಲ್ಲಿ ಕಟ್ಟಿ ದಿಲ್ಲಿಗೆ ಕಳಿಸಿದಳು. ಸುಲ್ತಾನನು ರಾಮನ ರುಂಡವನ್ನು ಕಂಡು ಮಿಡುಕಿದನು. ಅವನ ಮಗಳು ರುಂಡವನ್ನು ಕೈಯಲ್ಲಿ ತೆಗೆದು ಕೊಂಡು, ಅತ್ತು, ನಿಟ್ಟುಸಿರುಬಿಟ್ಟು, ನಿರಾಶೆಯಿಂದ ಪ್ರಾಣನೀಗಿದಳು. ರಾಮನ ರುಂಡವನ್ನು ಸುಲ್ತಾನನು ತನ್ನ ಸರದಾರರ ಸಲಹೆಯಿಂದ ಕುಮ್ಮಟ ದುರ್ಗಕ್ಕೆ ಕಳಿಸಿದನು. ಕುಮಾರರಾಮನ ಶೀಲ - ಶೌರ್ಯಗಳನ್ನು ನೆನೆದು ಅವನ ಸಮಾಧಿಗೆ ಎಷ್ಟೋಜನರು ಬಹುದಿನ ಭಕ್ತಿಯಿಂದ ನಡಕೊಳ್ಳುತ್ತಿದ್ದರು.

## ೨೨

## ಉಪಕಾರ ಮಾಡಿ
# ರಾಜ್ಯ ಕಳಕೊಂಡ ಕಂಪಿಲರಾಯ

( ಕ್ರಿ. ಶ. ೧೩೨೭ )

[ ಉತ್ತರ ಹಿಂದುಸ್ಥಾನದಲ್ಲಿ ಮುಹಮ್ಮದ ತಘಲಖನು ಆಳುತ್ತಿರುವಾಗ ಕರ್ನಾಟಕದಲ್ಲಿ ಹೊಯ್ಸಳ ರಾಜ್ಯವಿತ್ತು. ಕಂಪ್ಲಿಯಲ್ಲಿ ಕಂಪಿಲರಾಯನೆಂಬ ಅರಸನು ಆಳುತ್ತಿದ್ದನು. ಮುಹಮ್ಮದನ ತಮ್ಮನ ಮಗನೊಬ್ಬನು ಕಕ್ಕನೊಡನೆ ಜಗಳಾಡಿ ದಕ್ಷಿಣಕ್ಕೆ ಬಂದಾಗ, ಕಂಪಿಲರಾಯನು ಅವನಿಗೆ ಆಶ್ರಯ ಕೊಟ್ಟು, ಉಪಕಾರ ಮಾಡಹೋಗಿ ತನ್ನ ರಾಜ್ಯವನ್ನೇ ಕಳೆದುಕೊಂಡನು. ಈ ಕತೆಯನ್ನು ಮಿಥಿಕ್ ಸೊಸಾಯಟಿ ಮಾಸ ಪತ್ರಿಕೆಯಲ್ಲಿಯ ಶ್ರೀ. ರಾಮಶರ್ಮರು ಬರೆದ ಲೇಖನದ ಆಧಾರದಿಂದ ಬರೆಯಲಾಗಿದೆ.

ದಿಲ್ಲಿಯ ಅರಸನಾದ ಸುಲ್ತಾನ ಮುಹಮ್ಮದ ತಘಲಕನು ಆಳುತ್ತಿರುವಾಗ ಅವನ ತಮ್ಮನ ಮಗನಾದ ಬಾಹುದ್ದೀನನು ಕಕ್ಕನ ವಿರುದ್ಧ ಬಂಡಾಯ ನಡಿಸಿ, ಅಲ್ಲಿ ನಿಲ್ಲಲಿಕ್ಕಾಗದೆ ದಕ್ಷಿಣಕ್ಕೆ ಓಡಿ ಬಂದನು. ದಕ್ಷಿಣ ದೇಶವನ್ನೆಲ್ಲ ಗೆಲ್ಲಬೇಕೆಂದು ಅವನ ಆಸೆ; ಆದರೆ ಇಷ್ಟರಲ್ಲಿ ಕಕ್ಕನು ತನ್ನನ್ನು ದಂಡಿಸಲು ಸೈನ್ಯವನ್ನು ಕಳಿಸಿರುವನೆಂದು ತಿಳಿಯಿತು. ದಿಕ್ಕುಗಾಣದಂತಾಗಿ ಹತ್ತಿರವೇ ಇರುವ ಕಂಪಿಲರಾಯನಿಗೆ ಮೊರೆಹೊಕ್ಕನು. ಕಂಪಿಲರಾಯನು ಮೊರೆಹೊಕ್ಕವರನ್ನು ಕಾಯಬೇಕೆಂಬುವ ದಯಾಳು ಅರಸು. ಕಂಪಿಲರಾಯನ ರಾಜಧಾನಿಯು ಆನೇಗುಂದಿಯಾದರೂ ಅವನು ಕಂಪ್ಲಿಯಲ್ಲಿರುತ್ತಿದ್ದನು; ಅವನಿಗೆ ಆಶ್ರಯ ಕೊಟ್ಟನು.

ಇತ್ತ, ಬಾಹುದ್ದೀನನನ್ನು ಹುಡುಕುತ್ತ ಮುಹಮ್ಮದನ ಸೈನ್ಯದವರು ಬಂದರು. ಆಗ ರಾಯನು, ಬಾಹುದ್ದೀನನನ್ನು ದ್ವಾರಸಮುದ್ರದ ಬಲ್ಲಾಳರಾಯನ ಆಶ್ರಯಕ್ಕೆ ಕಳುಹಿಸಿದನು. ಬಲ್ಲಾಳರಾಯನು ಆಗ ತನ್ನ ಊರಲ್ಲಿದ್ದನು.

ಮುಹಮ್ಮದನ ಸೇನಾನಾಯಕರ ಸೈನ್ಯವು ಪ್ರಚಂಡವಾಗಿತ್ತು. ಅದರೊಡನೆ ಕಾದುವಷ್ಟು ಜಿಗಟು ಕಂಪಿಲರಾಯನಲ್ಲಿರಲಿಲ್ಲ. ಕೆಲವು ದಿನ ದಾರಿ ಕಾಯ್ದನು. ಇನ್ನು ಸುಮ್ಮನಿದ್ದರೆ ನಡೆಯದೆಂದೂ ಒಮ್ಮೆಲೆ ಶತ್ರುವು ತನ್ನ ಮೇಲೇರಿ ಬಂದರೆ, ಹೆಂಡಿರು-ಮಕ್ಕಳ ಗತಿ ಏನಾಗುವದೋ ತಿಳಿಯದೆಂದೂ

ರಜಪೂತ ವೀರರಂತೆ ದೊಡ್ಡ ಜ್ವಾಲೆಯನ್ನು ಹೊತ್ತಿಸಿ ಅದರಲ್ಲಿ ತನ್ನ ಮಂತ್ರಿಗಳ, ಸರದಾರರ, ದಂಡನಾಯಕರ ಹೆಂಗಸರಿಗೆ ಹಾರಿಕೊಳ್ಳಲಿಕ್ಕೆ ಹೇಳಿ, ತಾನು ನಿಶ್ಚಿಂತೆಯಿಂದ ತನ್ನ ವೀರಾಳುಗಳೊಡನೆ ಶತ್ರುಗಳ ಸಂಗಡ ಹೋರಾಡಿದನು; ಆದರೆ ದುರ್ದೈವದಿಂದ ಆ ಕಾಳಗದಲ್ಲಿ ಕಂಪಿಲರಾಯನು ಮಡಿದನು. ಕಂಪ್ಲಿಯು ಮುಸಲ್ಮಾನರ ಕೈಸೇರಿತು.

ಮುಸಲ್ಮಾನ ಸೇನಾನಾಯಕರು ಕಂಪಿಲರಾಯನ ಹನ್ನೊಂದು ಮಂದಿ ಮಕ್ಕಳನ್ನು ಸೆರೆ ಹಿಡಿದುಕೊಂಡು ದಿಲ್ಲಿಗೆ ಒಯ್ದರು. ಅಲ್ಲಿ ಅವರನ್ನೆಲ್ಲ ಮುಸಲ್ಮಾನರನ್ನಾಗಿ ಮಾಡಿದರಂತೆ. ಮುಂದೆ ಬಾಹುದ್ದೀನನನ್ನು ಬೆನ್ನಟ್ಟಿ, ಅವನನ್ನೂ ಸೆರೆಹಿಡಿದು ಸುಲ್ತಾನನೆಡೆಗೆ ಒಯ್ದರು; ಸುಲ್ತಾನನು ಪರಿಪರಿಯಿಂದ ಅವನನ್ನು ಕಾಡಿ ಕೊಲ್ಲಿಸಿದನು.

---

## ೨೩

## ' ಕನ್ನಡ ಕುಲದೀಪಕ '

# ಶ್ರೀ ವಿದ್ಯಾರಣ್ಯ ಸ್ವಾಮಿಗಳ ಚರಿತ್ರೆ

( ಕ್ರಿ. ಶ. ೧೨೯೬–೧೩೮೬ )

[ ಕರ್ನಾಟಕದಲ್ಲಿ ಬಾಳಿದ ಮಹಾತ್ಮರಲ್ಲಿ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಒಬ್ಬರು. ಇವರು ಶುದ್ಧ ಕನ್ನಡಿಗರು, ಘನವಿದ್ವಾಂಸರು, ಮಹಾತಪಸ್ವಿಗಳು, ಧರ್ಮರಕ್ಷಕರು ಕರ್ನಾಟಕ ಸಿಂಹಾಸನ ಸ್ಥಾಪಕರು, ಸಂಸ್ಕೃತದಲ್ಲಿ ಹಲವು ಗ್ರಂಥಗಳನ್ನು ಬರೆದವರು. ಈ ಚರಿತ್ರೆಯನ್ನು ವಿಜಯನಗರ ಷಟ್‌ಸಾಂವತ್ಸರಿಕ ಸ್ಮಾರಕ ಗ್ರಂಥದಲ್ಲಿಯ ಇಂಗ್ಲಿಷ ಲೇಖನಗಳಿಂದಲೂ ಶ್ರೀ. ಡಿ. ವಿ. ಗುಂಡಪ್ಪ ಮೊದಲಾದವರು ಬರೆದ ಚರಿತ್ರಗಳಿಂದಲೂ ಸಂಗ್ರಹಿಸಲಾಗಿದೆ. ]

ಶ್ರೀ ವಿದ್ಯಾರಣ್ಯರು ಹುಟ್ಟುವ ಕಾಲಕ್ಕೆ ಅದೇ ತಾನೇ ಉತ್ತರದಲ್ಲಿ ಮುಸಲ್ಮಾನರ ರಾಜ್ಯವಾಗಿ–ಅವರು ದಕ್ಷಿಣದಲ್ಲಿಯೂ ತಮ್ಮ ದಾಳಿಗಳನ್ನು ನಡಿಸಿ, ಕಾಲು ಚಾಚತೊಡಗಿದ್ದರು. ದೇವಗಿರಿಯ ಯಾದವ ಅರಸರು ಅಲ್ಲಾಉದ್ದೀನ-ಮಲೀಕ ಕಾಫೂರರ ದಾಳಿಗಳಿಗೆ ಹೆದರಿ, ಅವರ ಸಾಮಂತರಾಗಿದ್ದರು. ದ್ವಾರಸಮುದ್ರದ ಹೊಯ್ಸಳ ಅರಸರ ರಾಜ್ಯವು ಮುರಕಳಿಗೆ

ಬರಲಾರಂಭಿಸಿತ್ತು. ಓರಂಗಲ್ಲಿನ ಕಾಕತೀಯ ಅರಸರು ಮುಸಲ್ಮಾನರಿಗೆ ಈಲಾಗಿ, ನಿಸ್ತೇಜರಾಗಿ ಬವಣೆಪಡುತ್ತಿದ್ದರು. ಮಧುರೆಯ ಪಾಂಡ್ಯ ಅರಸರೂ ಮುಸಲ್ಮಾನ ದಾಳಿಗಾರರ ಮುಂದೆ ಕೈ ಸಾಗದೆ ಸುಮ್ಮನಿದ್ದರು. ಹಿಂದೂ ಧರ್ಮವೇ ಮುಳುಗುವ ಗಂಡಾಂತರದಲ್ಲಿತ್ತು.

ಇಂಥ ಸಂದುಕಟ್ಟಿನ ಕಾಲದಲ್ಲಿ ಶ್ರೀ ವಿದ್ಯಾರಣ್ಯರು ಆನೇಗುಂದಿ ಯಲ್ಲಿ ಹುಟ್ಟಿದರು. ಇವರ ತಂದೆಯ ಹೆಸರು ಮಾಯಣಭಟ್ಟ; ತಾಯಿಯ ಹೆಸರು ಶ್ರೀಮತಿದೇವಿ. ಇವರಿಗೆ ಸಾಯಣ-ಸೋಮನಾಥ (ಭೋಗನಾಥ) ಎಂಬ ತಮ್ಮಂದಿರೂ ಸಿಂಗಲೆ ಎಂಬ ತಂಗಿಯೂ ಇದ್ದಳು. ಮಾಯಣ ಭಟ್ಟನು ಸಂಗಮರಾಯನ ಕುಲಪುರೋಹಿತನು. ಶ್ರೀ ವಿದ್ಯಾರಣ್ಯರಿಗೆ ತಾಯಿ-ತಂದೆಗಳು ಇಟ್ಟ ಹೆಸರು ಮಾಧವ.

ಮಾಧವನು ಚಿಕ್ಕವಯಸ್ಸಿನಲ್ಲಿ ತಂದೆಯಲ್ಲಿ ಕಲಿಯುವಷ್ಟು ಕಲಿತು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತನ್ನ ತಮ್ಮಂದಿರೊಡನೆ ಕಂಚಿಗೆ ಹೋದನು. ಅಲ್ಲಿ ಶ್ರೀ ವಿದ್ಯಾತೀರ್ಥ ಸ್ವಾಮಿಗಳಲ್ಲಿ ವ್ಯಾಸಂಗವನ್ನು ಮುಗಿಸಿಕೊಂಡು ತಿರುಗಿ ಆನೇಗುಂದಿಗೆ ಬಂದನು. ಮನೆತನದ ಬಡತನ, ಕರ್ನಾಟಕಕ್ಕೆ ಬಂದ ಗಂಡಾಂತರ, ಧರ್ಮಕ್ಕೆ ಬಂದ ದಾಳಿ ಇವೆಲ್ಲವುಗಳನ್ನು ನೋಡಿ ಬಹು ವ್ಯಸನ ಪಟ್ಟನು. ಮನುಷ್ಯನಿಗೆ ಮೀರಿದ ಕಷ್ಟಪ್ರಸಂಗಗಳು ಬಂದಾಗ ಸ್ವಾಭಾವಿಕ ವಾಗಿಯೇ ಮನುಷ್ಯನ ಮನಸ್ಸು ಹೆಚ್ಚಿನ ಶಕ್ತಿಯುಳ್ಳ ದೇವರ ಕಡೆಗೆ ಒಲಿ ಯುತ್ತದೆ. ಅದರಂತೆ ಮಾಧವಾಚಾರ್ಯರು ತಮ್ಮ ಕುಲದೇವತೆಯಾದ ಹಂಪೆಯ ಶ್ರೀ ಭುವನೇಶ್ವರಿಯನ್ನು ಕುರಿತು ಹನ್ನೆರಡು ವರ್ಷಕಾಲ ತಪಶ್ಚರ್ಯ ಮಾಡಿದರು; ಆಗ ಶ್ರೀ ಭುವನೇಶ್ವರಿಯು ಪ್ರತ್ಯಕ್ಷಳಾಗಿ, 'ನಿನಗೆ ಈ ಜನ್ಮದಲ್ಲಿ ದ್ರವ್ಯ ಸಿಗುವಂತಿಲ್ಲ; ನಿನ್ನ ಪ್ರಸಾದದಿಂದ ಪರರು ಭಾಗ್ಯಶಾಲಿ ಗಳಾಗುವರು' ಎಂದು ವರಕೊಟ್ಟಳು. ಮುಂದೆ ಕೆಲಕಾಲ ವಿದ್ಯಾ ವ್ಯಾಸಂಗ ಮತ್ತು ಗ್ರಂಥರಚನೆಯಲ್ಲಿ ಕಾಲಕಳೆದು, ಮದುವೆಯಾಗುವ ಗೋಜಿಗೆ ಹೋಗದೆ, ಶೃಂಗೇರಿಗೆ ಹೋಗಿ, ಸನ್ಯಾಸಾಶ್ರಮ ಸ್ವೀಕರಿಸಿದರು. ಆಗ, ಅವರ ಗುರುಗಳಾದ ಶ್ರೀ ಶಂಕರಾನಂದರು ಮಾಧವಾಚಾರ್ಯರಿಗೆ 'ಶ್ರೀ ವಿದ್ಯಾರಣ್ಯ' ಎಂದು ಹೆಸರು ಕೊಟ್ಟರು. ಶ್ರೀ ವಿದ್ಯಾರಣ್ಯರು ಕೆಲಕಾಲ ಅಲ್ಲಿಯೇ ಇದ್ದರು.

ಆ ಕಾಲದಲ್ಲಿ ಹೊಯ್ಸಳ ಮೂರನೆಯ ವೀರಬಲ್ಲಾಳನೂ ಅವನ ದಂಡನಾಯಕ-ಆಮೇಲೆ ಮಹಾ ಮಂಡಲೇಶ್ವರರಾದ ಹುಕ್ಕ-ಬುಕ್ಕರೂ ಶೃಂಗೇರಿಯ ಪೀಠಕ್ಕೆ ನಡಕೊಳ್ಳುತ್ತಿದ್ದರು. ಶ್ರೀ ವಿದ್ಯಾರಣ್ಯರಂತೂ ಹುಕ್ಕ ಬುಕ್ಕರ ಪರಂಪರೆಯ ಗುರುಗಳೇ ಆಗಿದ್ದರು; ಆದುದರಿಂದ ಆಗಾಗ್ಗೆ ರಾಜ ಕಾರ್ಯದ ವಿಷಯದಲ್ಲಿಯೂ ಹುಕ್ಕ-ಬುಕ್ಕರು ಅವರ ಸಲಹೆ ಆಶೀರ್ವಾದ ಗಳನ್ನು ಪಡೆಯುತ್ತಿದ್ದರು. ಮುಂದೆ ಶ್ರೀ ಶಂಕರಾನಂದರ ತರುವಾಯ ಶ್ರೀ ವಿದ್ಯಾರಣ್ಯರೇ ಶೃಂಗೇರಿಯ ಪೀಠಕ್ಕೆ ಸ್ವಾಮಿಗಳಾದರು.

ಆಗ, ದಕ್ಷಿಣದಲ್ಲಿ ಸ್ವತಂತ್ರವಾದ ಹಿಂದೂ ರಾಜ್ಯಗಳಾವೂ ಇರಲಿಲ್ಲ. ಮುಸಲ್ಮಾನ ದಾಳಿಗಾರರಿಂದ ಹಿಂದೂ ಜನರಿಗೆ ಹಲವು ಬಗೆಯ ಕಷ್ಟ ಅನು ಭವಿಸುವ ಪ್ರಸಂಗ ಬರುತ್ತಿತ್ತು. ದೇಶಕ್ಕೂ-ಧರ್ಮಕ್ಕೂ ಬಂದೊದಗಿದ ಅಂಥ ಸಮಯದಲ್ಲಿಯೇ, ಶ್ರೀ ವಿದ್ಯಾರಣ್ಯರು ಹುಕ್ಕ-ಬುಕ್ಕರಿಗೆ ಸ್ವತಂತ್ರ ಹಿಂದೂ ರಾಜ್ಯ ಸ್ಥಾಪಿಸಲು ಉತ್ತೇಜನವಿತ್ತರು. ತುಂಗಭದ್ರೆಯ ದಂಡೆಯಲ್ಲಿ ಹೇಮಕೂಟ, ಮಾತಂಗ ಪರ್ವತಗಳ ನಡುವೆ ಇರುವ ಸ್ಥಳದಲ್ಲಿ ವಿಜಯನಗರ ಅಥವಾ ವಿದ್ಯಾನಗರವೆಂಬ ಊರನ್ನು ಸ್ಥಾಪಿಸಿದರು. ಶ್ರೀ ವಿದ್ಯಾರಣ್ಯರ ಪ್ರಸಾದದಿಂದ ರಾಜ್ಯಸ್ಥಾಪನೆ ಮಾಡಿದನಂತರ ಹುಕ್ಕ-ಬುಕ್ಕರು ಶೃಂಗೇರಿಗೆ ಹೋಗಿ, ಹೊಸ ರಾಜ್ಯಸ್ಥಾಪನೆಯ ನಿಮಿತ್ತ ಶೃಂಗೇರಿಯ ಮಠಕ್ಕೆ ದಾನ-ಶಾಸನಗಳನ್ನು ಮಾಡಿಕೊಟ್ಟರು. ಈ ದಾನ-ಶಾಸನದಲ್ಲಿ ಹರಿಹರ, ಬುಕ್ಕರಿಗೆ ಶ್ರೀ ವಿದ್ಯಾರಣ್ಯಪಾದಪದ್ಮಾರಾಧಕರೆಂದೂ ಶ್ರೀವಿದ್ಯಾರಣ್ಯ ರಿಗೆ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂದೂ ಹೇಳಲಾಗಿದೆ.

ಶ್ರೀ ವಿದ್ಯಾರಣ್ಯರು ಹುಕ್ಕಬುಕ್ಕರಿಂದ ಹೊಸ ಹಿಂದೂ ರಾಜ್ಯಸ್ಥಾಪನೆ ಮಾಡಿಸಿದಾಗ, ಅವರ ಸಹಾಯಕ್ಕಾಗಿ ತಮ್ಮ ಮಠದಿಂದಲೂ ಶಿಷ್ಯರಿಂದಲೂ ಅವರಿಗೆ ಹೇರಳವಾಗಿ ದ್ರವ್ಯವನ್ನು ಸಹಾಯಮಾಡಿಸಿದರು. ಪ್ರತಿಯೊಂದು ಕಾರ್ಯದಲ್ಲಿ ಅವರಿಗೆ ಮಾರ್ಗದರ್ಶಕರಾಗಿದ್ದರು. ಇದರಿಂದ ಶೃಂಗೇರಿಗೂ ವಿಶೇಷ ಮಹತ್ವ ಪ್ರಾಪ್ತವಾಯಿತು. ಇಷ್ಟು ದಿನ ಕೇವಲ ಧರ್ಮ-ಅಧ್ಯಯನ ಗಳ ಆಶ್ರಮವಾಗಿದ್ದ ಶೃಂಗೇರಿಯು ರಾಜಕಾರ್ಯದ ಕೇಂದ್ರವಾಯಿತು. ವಿಜಯನಗರದವರು ಕೊಟ್ಟ ಭೂಮಿಯದಾನ-ಕಾಣಿಕೆ ಮುಂತಾದವು ಗಳಿಂದ ಅದೊಂದು ಚಿಕ್ಕ ಸಂಸ್ಥಾನದ ಸ್ವರೂಪ ತಾಳಿತು. ಕೆಲದಿನ ಅಲ್ಲಿಯೇ ಶ್ರೀ ಸ್ವಾಮಿಗಳ ಗ್ರಂಥರಚನೆಯಲ್ಲಿ, ಧರ್ಮರಕ್ಷಣೆಯಲ್ಲಿ ಕಾಲಕಳೆದರು.

ಹುಕ್ಕ ಅಂದರೆ ಹರಿಹರರಾಯನು ತೀರಿಕೊಂಡನಂತರ, ತಮ್ಮನಾದ ಬುಕ್ಕಣ್ಣೊಡೆಯನು ವಿಜಯನಗರ ಸಿಂಹಾಸನವನ್ನೇರಿದನು. ಆ ಸಮಯಕ್ಕೆ ಶ್ರೀ ವಿದ್ಯಾರಣ್ಯರು ವೀರಬುಕ್ಕರಾಯನ ಅಪೇಕ್ಷೆಯಂತೆ ಶೃಂಗೇರಿಯ ಪೀಠವನ್ನು ಬಿಟ್ಟು, ವಿಜಯನಗರಕ್ಕೆ ಬಂದು ರಾಜ್ಯದ ಮುಖ್ಯ ಮಂತ್ರಿಯ ಭಾರವನ್ನು ಹೊತ್ತರು. ಆಮೇಲೆ, ಎರಡನೆಯ ಹರಿಹರರಾಯನ ಆಳಿಕೆಯವರೆಗೂ ಅವರೇ ಮಂತ್ರಿಗಳಾಗಿದ್ದು, ರಾಜ್ಯಪದ್ಧತಿಯನ್ನೂ ಗ್ರಾಮಪದ್ಧತಿಯನ್ನೂ ವ್ಯವಸ್ಥೆಗೊಳಿಸಿದರು.

ಶ್ರೀ ವಿದ್ಯಾರಣ್ಯರು ಬುಕ್ಕ-ಹರಿಹರರಾಯರಿಗೆ ಮಂತ್ರಿಗಳಾಗಿರುವಾಗ ಅವರ ತಮ್ಮಂದಿರಾದ ಸಾಯಣರು ಹುಕ್ಕನ ತಮ್ಮನಾದ ಕಂಪಣ್ಣೊಡೆಯನು ಆಳುತ್ತಿದ್ದ ನೆಲ್ಲೂರು,ಕಡಪೆ ಪ್ರಾಂತಕ್ಕೆ ಮಂತ್ರಿಯಾಗಿದ್ದರು. ಕಂಪಣ್ಣನ ಮಗನಾದ ಸಂಗಮರಾಜನು ಚಿಕ್ಕವನಿದ್ದುದರಿಂದ ತಾವೇ ರಾಜ-ಪ್ರತಿನಿಧಿಗಳಾಗಿದ್ದರು. ಆ ಕಾಲಕ್ಕೆ ಸಾಯಣಾಚಾರ್ಯರು ಎಷ್ಟೋಸಾರೆ ಯುದ್ಧಮಾಡಿ ರಾಜ್ಯ ರಕ್ಷಿಸಿದರು.

ಶ್ರೀ ವಿದ್ಯಾರಣ್ಯರು ತಮ್ಮ ವೃದ್ಧಾಪ್ಯದಲ್ಲಿ ಕಾಶಿಗೆ ಹೋಗಿ, ಅಲ್ಲಿಯ ಪಂಡಿತರಿಂದ ತಾವು ಬರೆದ ಗ್ರಂಥಗಳಿಗೆ ಮನ್ನಣೆ ಪಡೆದುಕೊಂಡರು. ತರುವಾಯ ಕೆಲ ದಿನಗಳಲ್ಲಿಯೇ ಹಂಪೆಯಲ್ಲಿ ದೇಹಬಿಟ್ಟರು. ಇವರ ಸಮಾಧಿಯು-ವಿದ್ಯಾರಣ್ಯರ ಮೂರ್ತಿಯೆಂದು ತೋರಿಸುವ ಕಲ್ಲಿನ ಮೂರ್ತಿ ಇವು ಹಂಪೆಯಲ್ಲಿ ಈಗಲೂ ಇವೆ. ಸಮಾಧಿಯ ವೇಳೆಯಲ್ಲಿ ಅವರ ವಯಸ್ಸು ೯೦ ಇದ್ದಿತು.

ಶ್ರೀ ವಿದ್ಯಾರಣ್ಯರು ಧರ್ಮ ಸ್ಥಾಪನೆ, ರಾಜ್ಯ ಸ್ಥಾಪನೆ, ರಾಜ ಕಾರ್ಯಗಳಲ್ಲಿ ತೊಡಗಿರುವಾಗಲೇ ಸಂಸ್ಕೃತ ಗ್ರಂಥರಚನೆಯಲ್ಲಿಯೂ ತೊಡಗಿದ್ದರು. ತಮ್ಮ ತಮ್ಮಂದಿರಾದ ಸಾಯಣರಿಂದ ವೇದಕ್ಕೆ ಭಾಷ್ಯ ಬರೆಯಿಸುವದಲ್ಲದೆ ತಾವೂ ವೇದಾಂತ, ಮೀಮಾಂಸೆ, ಜ್ಯೋತಿಷ, ಮುಂತಾದ ಮೂವತ್ತೆರಡು ಗ್ರಂಥಗಳನ್ನು ಬರೆದಿರುವರು. ಧರ್ಮ, ರಾಜ್ಯ, ಸಂಸ್ಕೃತಿ-ವಾಙ್ಮಯ ಇವೆಲ್ಲ ದೃಷ್ಟಿಯಿಂದ ಕರ್ನಾಟಕಕ್ಕೆ ಒಂದು ಶ್ರೇಷ್ಠತೆಯನ್ನುಂಟುಮಾಡಿಕೊಟ್ಟು, 'ಕನ್ನಡ ಕುಲದೀಪಕ' ರಾದ ಶ್ರೀ ವಿದ್ಯಾರಣ್ಯರನ್ನು ಕನ್ನಡಿಗರು ಮರೆಯಬಹುದೆ?

## ೨೪

## ಹುಕ್ಕ ಬುಕ್ಕರು
# ವಿಜಯನಗರ ಸಾಮ್ರಾಜ್ಯ
## ಸ್ಥಾಪಿಸಿದ್ದು
(ಕ್ರಿ. ಶ. ೧೩೩೬)

[ಹುಕ್ಕ-ಬುಕ್ಕ-ಕಂಪಣ್ಣ-ಮಾರಪ್ಪ-ಮುದ್ದಪ್ಪ ಇವರು ಐದುಮಂದಿ ಸಂಗಮನ ಮಕ್ಕಳು. ತಾಯಿಯ ಹೆಸರು ಕಾಮಾಂಬಿಕೆ. ಜಾತಿಯಿಂದ ಇವರು ಕರ್ನಾಟಕ ಕುರುಬರು. ಎಲ್ಲರೂ ವೀರರು. ಮೊದಲು ಹೊಯ್ಸಳರ ವೀರಬಲ್ಲಾಳನಲ್ಲಿ ದಂಡನಾಯಕರಾಗಿ ಕೆಲಸ ಮಾಡುತ್ತಿದ್ದರು. ಡಾ. ಸಾಲೆತೂರವರ ವಿಜಯನಗರದ ಸಾಮ್ರಾಜ್ಯದ ಇಂಗ್ಲೀಷ ಇತಿಹಾಸದಿಂದ.]

ದಕ್ಷಿಣದಲ್ಲಿ ಮುಸಲ್ಮಾನರ ಹಾವಳಿಯು ಬೆಳೆಯಿತು. ದೇವಗಿರಿಯ ಯಾದವ ರಾಜ್ಯವು ಅವರಿಂದ ಹಾಳಾಯಿತು. ಅಲ್ಲಿಯ ಹರಿಪಾಲನನ್ನು ನಾನಾವಿಧದ ಹಿಂಸೆಗೆ ಗುರಿಪಡಿಸಿ ಕೊಂದರು. ದ್ವಾರಸಮುದ್ರದ ಹೊಯ್ಸಳರ ರಾಜ್ಯವು ಮುರಕಳಿಗೆ ಬಂದಿತು. ಕಾಕತೀಯರ ರಾಜ್ಯದ ಕೃಷ್ಣನಾಯಕನೂ ರಾಜ್ಯ ಕಳಕೊಂಡು ಅಲ್ಲಲ್ಲಿ ತಿರುಗಾಡಲಾರಂಭಿಸಿದನು. ಆಗ ಕೃಷ್ಣನಾಯಕನು ದ್ವಾರಸಮುದ್ರದ ಹೊಯ್ಸಳ ಬಲ್ಲಾಳರಾಯನನ್ನು ಕಂಡು ಮಾತನಾಡಿದನು. ಮುಸಲ್ಮಾನರ ಮೇಲೆ ಎಲ್ಲ ಹಿಂದೂ ಅರಸರೂ ಕೂಡಿ ಏಳಬೇಕೆಂದು ಯೋಚಿಸಿದರು. ವೀರಬಲ್ಲಾಳನು ಎಲ್ಲ ಹಿಂದೂ ಅರಸರದೊಂದು ಸಭೆ ನೆರೆಯಿಸಿದನು. ಎಲ್ಲರಿಗೂ ದೇಶವನ್ನು ಕಾಯುವ ಸೀಮೆಗಳನ್ನು ಹಂಚಿಕೊಟ್ಟನು. ಒತ್ತೊತ್ತಿ ಬರುವ ಅವರ ದಾಳಿಗಳನ್ನು ಹೇಗೆ ಎದುರಿಸಬಹುದೆಂಬುವ ವಿಚಾರಮಾಡಿದನು.

ಹೊಯ್ಸಳರ ರಾಜ್ಯದಲ್ಲಿ ಹುಕ್ಕ ಅಥವಾ ಹರಿಯಪ್ಪ ಒಡೆಯನು ದಂಡನಾಯಕನಾಗಿದ್ದನು. ಮುಸಲ್ಮಾನರ ಮುಂದೆ ಎಲ್ಲ ಹಿಂದೂ ರಾಜ್ಯಗಳು ಪಟಪಟ ಬಿದ್ದು ಸಾಯುವದನ್ನು ಕಂಡು, ಪರರಾಜರಿಂದ ದೇಶ-ಧರ್ಮಗಳನ್ನು ಬದುಕಿಸಬೇಕೆಂದು ನಿಶ್ಚಯಿಸಿದನು. ಹೊಯ್ಸಳ ರಾಜ್ಯದಲ್ಲಿಯ ದಂಡನಾಯಕ ಮಂತ್ರಿಗಳನ್ನು ತನ್ನ ಕಡೆಗೆ ಒಲಿಸಿಕೊಂಡನು. ಎಣ್ಣೆತೀರಿದ ದೀಪದಂತೆ ಕಳೆಗುಂದುತ್ತಿದ್ದ ಹಿಂದೂ ರಾಜ್ಯವನ್ನು ಜೀರ್ಣೋದ್ಧಾರ

ಮಾಡಬೇಕೆಂದು ಯತ್ನಿಸಹತ್ತಿದನು. ಆ ಸಮಯಕ್ಕೆ ವೀರ ಹರಿಯಪ್ಪನು ಮೂರನೆಯ ಬಲ್ಲಾಳರಾಯನಿಂದ ಮನ್ನಿಸಲ್ಪಟ್ಟನು. ಬಲ್ಲಾಳರಾಯನು ಹರಿಯಪ್ಪನಲ್ಲಿ ನಿಜವಾದ ಕ್ಷತ್ರಿಯರ ತೇಜವಿರುವದೆಂದೂ ಅವನಿಂದಲೇ ಮುಸಲ್ಮಾನರನ್ನು ಹೊಡೆದಟ್ಟುವ ಪ್ರಚಂಡ ಕಾರ್ಯವು ನೆರವೇರಬಹು ದೆಂದೂ ತಿಳಿದಿರುವಂತೆ ಕಾಣುತ್ತದೆ; ಆದುದರಿಂದ ತನ್ನ ಜೀವಮಾನ ದೊಳಗೆ ಅವನಿಗೆ ಮಹಾಮಂಡಲೇಶ್ವರ ಎಂಬ ಬಿರುದುಕೊಟ್ಟನು. ಇದೇ ಸಮಯದಲ್ಲಿ ಹರಿಯಪ್ಪನ ತಮ್ಮನಾದ ಕಂಪಣ್ಣ ಒಡೆಯನು ದಕ್ಷಿಣದಲ್ಲಿ ಮುಸಲ್ಮಾನರ ಹಾವಳಿಯನ್ನು ಮುಗ್ಗಿಸಿ, ಅಲ್ಲಿಯ ಪ್ರಜೆಗಳನ್ನು ಉರವಣಿಗೆ ಯಿಂದ ಬಿಡಿಸುವದರಲ್ಲಿ ತೊಡಗಿದ್ದನು.

ಹರಿಯಪ್ಪ ಒಡೆಯನು (ಹುಕ್ಕ ಅಥವಾ ಹರಿಹರ) ಮಹಾಮಂಡಲೇ ಶ್ವರನಾದನು. ತರುವಾಯ ಅವನು ಹೊಯ್ಸಳ ಅರಸು ಮನೆತನಕ್ಕೆ ಸಂಬಂಧಿ ಸಿದ ಬಲ್ಲಪ್ಪ ದಂಡನಾಯಕನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ದನು. ದಿನದಿನಕ್ಕೆ, ಹರಿಯಪ್ಪನ ಶಕ್ತಿ-ವರ್ಚಸ್ಸುಗಳು ಬಲಿಯ ಹತ್ತಿದವು. ಮುಸಲ್ಮಾನರ ಹಾವಳಿಯು ಎಷ್ಟೆಷ್ಟೂ ತಗ್ಗಿರಲಿಲ್ಲ. ಜನರಿಗೆ ವೀರನೂ ಉದಾರನೂ ದೇಶ-ಧರ್ಮರಕ್ಷಕನಾದ ಅರಸನು ಬೇಕಾಗಿದ್ದನು. ಆ ಕಾರ್ಯವು ವೀರಬಲ್ಲಾಳನ ವಂಶದವರಿಂದ ನೀಗದ್ದರಿಂದ, ಹರಿಯಪ್ಪನು ಮುಂದಾಳಾಗಿ ನಿಂತು, ಕ್ರಿಯಾಶಕ್ತಿ ಆಚಾರ್ಯರ ಆಶೀರ್ವಾದದಿಂದಲೂ ಶೃಂಗೇರಿಯ ಶ್ರೀ ವಿದ್ಯಾರಣ್ಯರ ಉತ್ತೇಜನದಿಂದಲೂ ತಾನೇ ಅರಸನಾಗಿ ಹಿಂದೂ ಧರ್ಮ ಧ್ವಜವನ್ನು ಹಾರಾಡಿಸಿದನು. ಹೊಯ್ಸಳ ಅರಸರು ರಾಜ್ಯ ವಾಳಿದಂತೆಯೇ ಹರಿಯಪ್ಪನು ಪೂರ್ವದ ಮರ್ಯಾದೆಯನ್ನು ಅನುಸರಿಸಿ ರಾಜ್ಯ ನಡಿಸಿದನು.

ಹರಿಯಪ್ಪನು ಅಥವಾ ಹರಿಹರನು ವಿಜಯನಗರದಲ್ಲಿ ಪಟ್ಟಕ್ಕೆ ಕುಳಿತಂದಿನಿಂದ ಜನರಿಗೆ ಸುಖ-ಶಾಂತಿಗಳ ಸುಗ್ಗಿ ಆಯಿತು. ತಮ್ಮನಾದ ಬುಕ್ಕರಾಯನನ್ನು ಸೇನಾಪತಿಯನ್ನಾಗಿ ನಿಯಮಿಸಿಕೊಂಡನು. ಕಂಪಣ್ಣ ಒಡೆಯನು ನೆಲ್ಲೂರು-ಕಡಪೆಯ ಪ್ರಾಂತವನ್ನೂ ಮಾರಪ್ಪನು ಬನವಾಸಿಯ ಪ್ರಾಂತವನ್ನೂ ಆಳುತ್ತಿದ್ದರು. ಹುಕ್ಕ-ಬುಕ್ಕರಿಂದ ಸ್ಥಾಪಿಸಲ್ಪಟ್ಟ ವಿಜಯ ನಗರ ಸಾಮ್ರಾಜ್ಯವು ೩೦೦ ವರ್ಷಗಳವರೆಗೆ ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದೂ ಸಂಸ್ಕೃತಿಯನ್ನು ಒಳ್ಳೆಯ ಗೌರವದಿಂದ ಕಾಪಾಡಿತು.

## ೨೫

## ಹಿಂದೂರಾಯ ಸುರತ್ರಾಣ

# ಶ್ರೀ ಬುಕ್ಕರಾಯನ ನ್ಯಾಯಪ್ರಿಯತೆ

( ಕ್ರಿ. ಶ. ೧೩೬೮ )

[ ವಿಜಯನಗರದ ಶ್ರೀ ವೀರಬುಕ್ಕರಾಯನು ಪೃಥ್ವಿಯನ್ನಾಳುವ ಕಾಲಕ್ಕೆ ಜೈನರಿಗೂ ಶ್ರೀ ವೈಷ್ಣವರಿಗೂ ಮತಸಂಬಂಧವಾಗಿ ಜಗಳ ಹುಟ್ಟಿತು. ಅದನ್ನು ಬುಕ್ಕರಾಯನು ಬಗೆ ಹರಿಸಿದ ಸಂಗತಿ. ಈ ಶಾಸನವು ಎಪಿಗ್ರಾಫಿಕಾ ಕರ್ನಾಟಿಕಾ ಎಂಬ ಪುಸ್ತಕದ ೨ನೆಯ ಭಾಗದ ೧೪೫ ಪುಟದಲ್ಲಿ ಸವಿಸ್ತರವಾಗಿ ಬಂದಿದೆ. ಅದನ್ನೇ ಇಲ್ಲಿ ಉದ್ಧರಿಸಲಾಗಿದೆ. ]

ವಿಜಯನಗರದ ಬುಕ್ಕರಾಯನು ಆಳುವ ಕಾಲಕ್ಕೆ ಶ್ರೀ ವೈಷ್ಣವ ಮತ್ತು ಜೈನರಲ್ಲಿ ಜಗಳ ಹುಟ್ಟಿತು. ಆಗ ಆನೇಗುಂದಿ, ಹೊಸಪಟ್ಟಣ, ಪೆನುಗುಂಡಿ, ಕಲ್ಲೆಹ (ಮಾಗಡಿ ತಾಲೂಕಿನಲ್ಲಿ ಈಗ ಹಳ್ಳಿ) ಪಟ್ಟಣಗಳಲ್ಲಿರುವ ಎಲ್ಲ ಜೈನರು ತಮಗೆ ಶ್ರೀ ವೈಷ್ಣವರಿಂದಾಗುವ ಅನ್ಯಾಯಗಳನ್ನು ಬುಕ್ಕರಾಯ ಮಹಾರಾಜರಿಗೆ ಅರುಹಿಕೊಂಡರು. ಆ ಕಾಲಕ್ಕೆ ಬುಕ್ಕರಾಯನು ಮತದ ನ್ಯಾಯ ತೀರಿಸುವದರ ದೆಸೆಯಿಂದ ಶ್ರೀರಂಗ, ತಿರುಪತಿ, ಕಂಚಿ, ಮೇಲುಕೋಟೆಗಳಲ್ಲಿರುವ ಶ್ರೀ ವೈಷ್ಣವ ಆಚಾರ್ಯರನ್ನೂ ಎಲ್ಲ ನಾಡುಗಳ ಸಾತ್ವಿಕರನ್ನೂ ಹೊಲೆಯರನ್ನೂ ಮಾದಿಗರನ್ನೂ ಕರೆಯಿಸಿ ಅವರ ಸಭೆ ನೆರೆಯಿಸಿದನು; ಮತ್ತು ಶ್ರೀ ವೈಷ್ಣವರ ಕೈಯಲ್ಲಿ ತನ್ನ ಕೈಯಿಂದ ಜೈನರ ಕೈ ಹಿಡಿದುಕೊಟ್ಟು, ಜೈನಮತಕ್ಕೂ-ಶ್ರೀ ವೈಷ್ಣವ ಮತಕ್ಕೂ ಭೇದವಿಲ್ಲ. ಜೈನಶಾಸ್ತ್ರಕ್ಕೆ ಮೊದಲಿನಂತೆ ಪಂಚಮಹಾವಾದ್ಯ ಕಲಶಗಳ ಮರ್ಯಾದೆ ಸಲ್ಲುವದು. ಜೈನ ಮತಕ್ಕೆ ಶ್ರೀ ವೈಷ್ಣವರಿಂದ ಏನಾದರೂ ಕುಂದು-ಕೊರತೆಗಳುಂಟಾದರೆ, ಅವು ತಮ್ಮ ಮತಕ್ಕಾದಂತೆ, ಶ್ರೀ ವೈಷ್ಣವರು ತಿಳಿಯುವರು. ಸೂರ್ಯ-ಚಂದ್ರರಿರುವವರೆಗೆ ಜೈನರ-ಶ್ರೀ ವೈಷ್ಣವರ ಪರಸ್ಪರ ಮತಗಳನ್ನು ಕಾಪಾಡುವೆವು; ಇದೇ ಮರ್ಯಾದೆಯಿಂದ ರಾಜ್ಯದಲ್ಲಿರುವ ಎಲ್ಲ ಜೈನಬಸ್ತಿಗಳಲ್ಲಿ ಶ್ರೀ ವೈಷ್ಣವರು ಇದರಂತೆ-ಶಿಲಾಶಾಸನ ಮಾಡಿ ಇಡಬೇಕು. ಶ್ರೀ ವೈಷ್ಣವರೂ-ಜೈನರೂ ಭೇದವಾಗಿ ಕಾಣಲಾಗದು.

ಶ್ರೀ ವೈಷ್ಣವ ಗುರುಗಳಾದ ತಿರುಮಲೆ ತಾತಯ್ಯನವರು ರಾಜ್ಯ ದೊಳಗಿನ ಎಲ್ಲ ಜೈನರ ಅನುಮತಿಯಿಂದ ಜೈನರ ಬೆಳಗುಳ (ಶ್ರವಣ ಬೆಳಗುಳ) ತೀರ್ಥದಲ್ಲಿ ಶ್ರೀ ವೈಷ್ಣವರ ಹಿತರಕ್ಷಣೆಗಾಗಿ ರಾಜ್ಯದೊಳಗಿರುವ ಜೈನರ ಪ್ರತಿಯೊಂದು ಮನೆಗೆ ವರ್ಷಕ್ಕೆ ಒಂದರಂತೆ ಹಣ ಎತ್ತಿ, ಅಲ್ಲಿಯ ದೇವರ ಅಂಗರಕ್ಷಣೆಗಾಗಿ ಇಪ್ಪತ್ತು ಆಳುಗಳನ್ನು ಕಾವಲು ಇಡಬೇಕು. ಅದರೊಳಗಿಂದ ಉಳಿದ ಹಣವನ್ನು ಬೀಳಾದ ಜಿನಾಲಯಗಳಿಗಾಗಿ ವೆಚ್ಚ ಮಾಡತಕ್ಕದ್ದು ಎಂದು ಅವರಿಬ್ಬರ ನ್ಯಾಯ ತೀರಿಸಿದರು. ಆಗ, ಜೈನ-ಶ್ರೀ ವೈಷ್ಣವ ಹೀಗೆ ಇಬ್ಬಣದವರೂ ಕೂಡಿ ಕಲ್ಲೆಹ ಪಟ್ಟಣದ ಜೈನ ವರ್ತಕನಾದ ಬಸವಿ ಸೆಟ್ಟಿಗೆ ಸಂಘ ನಾಯಕತನದ ಪಟ್ಟ ಕಟ್ಟಿದರು.

ಈ ನ್ಯಾಯದೊಳಗೆ ಬುಕ್ಕರಾಯನು ಜೈನಮತ, ಜೈನರು, ಅವರ ಜಿನ ದೇವಾಲಯಗಳನ್ನು ರಕ್ಷಿಸುವ ಭಾರವನ್ನು ತಾತಾರ್ಯರನ್ನು ಮುಂದೆ ಮಾಡಿ ಶ್ರೀ ವೈಷ್ಣವರಮೇಲೆ ಹೊರಿಸಿದನು. ಇದರಿಂದ ಜೈನ-ಶ್ರೀ ವೈಷ್ಣವರಲ್ಲಿ ಪರಸ್ಪರ ಪ್ರೀತಿ-ವಿಶ್ವಾಸಗಳು ಬೆಳೆದವು. ಈ ಬಗೆಯ ಪ್ರೀತಿ-ವಿಶ್ವಾಸಗಳಿಂದಲೇ ಜೈನನಾದ ಇರುಗಪ್ಪನಂಥ ದಂಡನಾಯಕನು ವಿಜಯ ನಗರದ ರಕ್ಷಣೆಗಾಗಿ ತನ್ನ ನೆತ್ತರವನ್ನು ಬಸಿದನು.

## ೨೬

# ಪರರ ದಾಳಿಯಿಂದಾದ

## ದಕ್ಷಿಣದೇಶದ ದುಃಸ್ಥಿತಿ

(ಕ್ರಿ. ಶ. ೧೩೬೭)

[ ಕುಮಾರ ಕಂಪಣನು ಬುಕ್ಕರಾಯನ ಹಿರಿಯ ಮಗ. ಇವನಿಗೆ ವೀರ ಕಂಪಣ ರಾಯನೆಂದೂ ಹೆಸರು. ಇವನ ಹೆಂಡತಿಯಾದ ಶ್ರೀ ಗಂಗಾದೇವಿಯು ಸಂಸ್ಕೃತದಲ್ಲಿ ವೀರ ಕಂಪಣರಾಯಚರಿತ ಅಥವಾ ಮಧುರಾ ವಿಜಯವೆಂಬ ಕಾವ್ಯ ಬರೆದಿರುವಳು. ಮಧುರೆಗೆ ಕಂಪಣರಾಯನು ದಂಡೆತ್ತಿ ಹೋದಾಗ ಮುಸಲ್ಮಾನ ದಾಳಿಗಾರರ ಹಾವಳಿಯಿಂದ ದಕ್ಷಿಣದೇಶವು ಹಾಳಾಗಿತ್ತು. ಮಧುರೆಯ ಗ್ರಾಮ ದೇವತೆಯಾದ ಮೀನಾಕ್ಷಿಯು ಮಲೆಯಾಳ ಸೀಮೆಯನ್ನು ಸೇರಿದ್ದಳು. ಕಂಪಣರಾಯನು ಮಧುರೆಗೆ ಹೋದಾಗ ಮೀನಾಕ್ಷಿ ದೇವತೆಯು ಒಬ್ಬ ಸಾಮಾನ್ಯ ಸ್ತ್ರೀಯಳಂತೆ ವೇಷ ಧರಿಸಿ, ಕಂಪಣರಾಯನನ್ನು ಕಂಡು, ದಕ್ಷಿಣದೇಶಕ್ಕೆ ಬಂದ ಗೋಳನ್ನು ತೋಡಿಕೊಂಡಳಂತೆ. ಈ ಚಿತ್ರವನ್ನು ಗಂಗಾದೇವಿಯು ತನ್ನ ಕಾವ್ಯದಲ್ಲಿ ಬಹು ಹೃದಯಂಗಮವಾಗಿ ವರ್ಣಿಸಿದ್ದಾಳೆ. ಅಲ್ಲಿಂದ ಎತ್ತಿ ಬರೆದ ವಿಷಯವಿದು. ]

ವೀರ ಕಂಪಣರಾಯನು ತೊಂಡಮಂಡಲದಿಂದ ಮಧುರೆಗೆ ದಂಡೆತ್ತಿ ಹೋಗುವಾಗ ದಾರಿಯಲ್ಲಿ ಒಂದು ದಿನ ವಿಲಕ್ಷಣವಾಗಿರುವ ಒಬ್ಬ ಹೆಂಗಸು ಅವನ ಮುಂದೆ ಬಂದು ನಿಂತು, ಹೀಗೆಂದಳು:— ನರಪತಿಯೆ ! ದಕ್ಷಿಣ ದೇಶಕ್ಕೆ ಮುಸಲ್ಮಾನ ದಾಳಿಗಾರರು ಬಂದಂದಿನಿಂದ ನಾಡಿನ ಗೋಳು ಹೆಚ್ಚಾಗಿದೆ. ಜನರಿಂದ ತುಂಬಿ ಮೆರೆಯುತ್ತಿರುವ ಪಟ್ಟಣಗಳು ಹಾಳಾಗಿ ಹುಲಿ, ಕರಡಿಗಳಂತಹ ಕಾಡು ಪ್ರಾಣಿಗಳಿಗೆ ಬೀಡಾಗಿವೆ; ಶ್ರೀರಂಗದಲ್ಲಿಯ ರಂಗನಾಥನ ಗರ್ಭಗುಡಿಯ ಮೇಲಿನ ಗೋಪುರವು ಬಿರಿದು, ಇಟ್ಟಂಗಿಗಳು ಕಳಚಿ, ಒಂದೊಂದಾಗಿ ಬೀಳುತ್ತಿರುವದರಿಂದ, ಶ್ರೀರಂಗನಾಥನ ಮೂರ್ತಿಯ ಮೇಲೆ ಆದಿಶೇಷನು ತನ್ನ ಹೆಡೆಯನ್ನು ಹರವಿ, ಕಾಯುತ್ತ ಲಿದ್ದಾನೆ. ದೇವಾಲಯದ ಮಂಟಪದ ಕಟ್ಟಡವು ಹಾಳುಬಿದ್ದು, ಅದರ ಕಲ್ಲು ಗಳು ಸಡಲಿ ಅಲ್ಲಲ್ಲಿ ಕಡಕೊಂಡು ಬೀಳುತ್ತಿವೆ; ಮಣ್ಣು ಬಳಬಳ ಉದುರು ತ್ತಿದೆ. ಎಲ್ಲೆಡೆಯಲ್ಲಿ ಹುಲ್ಲು, ಕರಿಕೆ ಬೆಳೆದು, ದೇವಾಲಯದ ಮಹಾದ್ವಾರ ಗಳು ಎಣ್ಣೆಕಾಣದೆ ಗೆದ್ದಲ ಪಾಲಾಗಿವೆ. ಒಂದು ಕಾಲಕ್ಕೆ, ಮೃದಂಗ-ಮದ್ದಲೆಗಳ ಇಂಪಾದ ದನಿಯಿಂದ ದಿಮಿಗುಟ್ಟುತ್ತಿರುವ ಸ್ಥಳಗಳಲ್ಲಿ

ನಾಯಿ-ನರಿಗಳ ಕರ್ಕಶವಾದ ಕೂಗಾಟವು ಕೇಳಬರುತ್ತಲಿದೆ. ತುಂಬಿ ಹರಿಯುವ ಕಾವೇರಿಯ ಅಬ್ಬರವು ಆಗ ಕೆರೆ-ಕಾಲುವೆ-ಕಟ್ಟೆಗಳಿಂದ ಮೆತ್ತಗೆ ಹರಿಯುತ್ತಿತ್ತು. ಅವೆಲ್ಲ ಈಗ ಮುರಿದು ಹಾಳುಬಿದ್ದು ಮುಚ್ಚಿರುವದರಿಂದ, ಕಾವೇರಿಯು ಈಗ ದಿಕ್ಕುಗೆಟ್ಟು ಹರಿಯತೊಡಗಿರುವಳು. ಯಜ್ಞ-ಯಾಗಗಳ ಪವಿತ್ರ ಮತ್ತು ಸುಗಂಧವಾದ ಹೊಗೆಯಿಂದಲೂ ವೇದ-ಘೋಷದಿಂದಲೂ ಯಾವಾಗಲೂ ಗಜಬಜಿಸುತ್ತಿರುವ ಅಗ್ರಹಾರಗಳಲ್ಲಿ ಮುಸಲ್ಮಾನರು ಸುಡುತ್ತಿರುವ ಮಾಂಸದ ಹೊಲಸು ವಾಸನೆಯು ಹರಡಿದ್ದು, ಅವರ ಜಗಳಾಟದ ಕಲಕಲ ದನಿಯಿಂದ ಕಿವಿಗಳು ಗಡಚಿಕ್ಕುತ್ತಿವೆ.

ಮಧುರೆಯ ಸುತ್ತಲೂ ನಳನಳಿಸುತ್ತಿರುವ ತೋಟಪಟ್ಟಿಗಳಿಗೆ ಶೋಭೆಯನ್ನು ಕೊಟ್ಟು, ತೂಗಾಡುವ ತೆಂಗುಗಳಿಂದ ತಲೆಯೆತ್ತಿಕೊಂಡು ನಿಂತಿರುವ ಸುಂದರವಾದ ತೆಂಗಿನ ಮರಗಳು ದಾಳಿಗಾರರ ಉರವಣಿಗೆಯಿಂದ ನೆಲಸಮಕ್ಕೆ ಒರಗಿವೆ; ಅವುಗಳ ಬದಲಾಗಿ ಅಲ್ಲಲ್ಲಿ ಸತ್ತವರ ತಲೆಬುರುಡೆಯ ಸರಗಳು ತೂಗಹಾಕಲ್ಪಟ್ಟಿವೆ. ಮೈಗೆ, ಎದೆಗೆ ಶ್ರೀಗಂಧವನ್ನು ದಟ್ಟವಾಗಿ ಬಳಿದುಕೊಂಡಿರುವ ಹರೆಯದ ಹೆಂಗಸರು ದಿನಾಲು ಮೈ ತೊಳೆಯುವದರಿಂದ ಬೆಳ್ಳಗೂ ಸುವಾಸನೆಯುಳ್ಳದೂ ಆಗುತ್ತಿದ್ದ ತಾಮ್ರಪರ್ಣಿ ನದಿಯ ನೀರು ಈ ದಾಳಿಗಾರರು ನಡಿಸಿರುವ ಆಕಳುಗಳ ಕೊಲೆಯಿಂದ ಕೆಂಪಗಾಗುತ್ತಿದೆ. ಮೊದಲು ಪನ್ನೀರಿನ ತಳಿಯಿಂದ ತಂಪಾಗುತ್ತಿದ್ದ ಮನೆಯ ಅಂಗಳಗಳು ಈಗ ಸೆರೆಯಾಳುಗಳ ಕಣ್ಣೀರಿನಿಂದ ತೋಯುತ್ತಿವೆ. ಹೆಣ್ಣುಮಕ್ಕಳ ಕಾಲುಗಳಲ್ಲಿಯ ಕಿರುಗೆಜ್ಜೆಗಳ ಇಂಪಾದ ಜಣಜಣ ಸಪ್ಪಳದಿಂದ ದಾರಿಕಾರರಿಗೆ ಆನಂದವನ್ನುಂಟು ಮಾಡುತ್ತಿರುವ ರಾಯ-ಬೀದಿಗಳಲ್ಲಿ ಈಗ ಬ್ರಾಹ್ಮಣರ ಕಾಲುಗಳಲ್ಲಿ ಹಾಕಿದ ಬೇಡಿ-ಸಂಕೋಲೆಗಳ ಕಠೋರವಾದ ಖಳಖಳ ಸಪ್ಪಳವು ಕಿವಿಗಳಲ್ಲಿ ಚುಚ್ಚುತ್ತಲಿದೆ. ಹಾಳು ಸುರಿಯುತ್ತಿರುವ ಹೂದೋಟಗಳಲ್ಲಿ ಕೇಳಬರುವ ಗೂಗೆಗಳ ಭಯವೆನಿಸುವ ಕೂಗಿನಿಂದ ಆಗುವ ನೋವಿಗಿಂತಲೂ ಯವನರ ಮನೆಗಳಲ್ಲಿಯ ಗಿಳಿಗಳು ಕೂಡ ನುಡಿಯುವ ಪಾರಸೀ ಭಾಷೆಯಿಂದ ಮನಸಿಗೆ ಹೆಚ್ಚು ನೋವಾಗುತ್ತಿದೆ. ಮತ್ತು ಇದನ್ನೆಲ್ಲ ನೋಡಿ ನನ್ನ ಅಂತಃಕರಣಕ್ಕಾಗುವ ವ್ಯಥೆಯನ್ನು ಎಷ್ಟೆಂತು ಬಣ್ಣಿಸಲಿ! ನರವರನೇ! ಗಳಿಗಳಿಗ್ಗೆ, ಅಯ್ಯೋ! ಅಪ್ಪಾ! ಎಂಬ ಎದೆಸುಡುವ ಶಬ್ದಗಳನ್ನು

ನುಡಿದೂ ನುಡಿದೂ ಉಸ್ಸೆಂದು ನಿಟ್ಟುಸಿರು ಹಾಕುತ್ತಿರುವದರಿಂದಲೂ ದಕ್ಷಿಣದೇಶದ ದ್ರಾವಿಡರ ತುಟಿಗಳು ಕಂದಿ ಹೋಗಿವೆ; ಅವರ ಕಣ್ಣುಗಳಲ್ಲಿ ಎಡೆಬಿಡದೆ ಕಂಬನಿಗಳು ಸೂಸಹತ್ತಿವೆ. ಚಿವುಟಿದರೂ ರಕ್ತ ಹೊರಡದಷ್ಟು ಬಾಡಿದ ಅವರ ಮುಖಗಳನ್ನು ಕಂಡು ನನಗೆ ಕಳವಳವಾಗುತ್ತಿದೆ. ಹೆಚ್ಚಿಗೇನು ಹೇಳಲಿ! ಈ ದಾಳಿಗಾರರ ಹಾವಳಿಯಿಂದ ಈ ನಾಡಿನವರ ನೀತಿಯು ನಷ್ಟವಾಯಿತು; ಧರ್ಮವೂ ಮಾಯವಾಯಿತು; ಚರಿತ್ರೆಯು ಚದರಿ ಹೋಯಿತು; ಸುಕೃತವೆಂಬುದು ತುಟ್ಟಿಯಾಯಿತು; ಕುಲೀನತೆಯು ಮಲೀನವಾಯಿತು.

ಈ ಮೇರೆಗೆ ದಾಳಿಗಾರರಿಂದ ದೇಶಕ್ಕೆ-ಧರ್ಮಕ್ಕೆ ಒದಗಿದ ಕೇಡನ್ನು ವರ್ಣಿಸಿ, ಆ ಸ್ತ್ರೀಯು ಹೀಗೆಂದಳು:— ನರನಾಥಾ! ಇಗೋ! ಈ ಕತ್ತಿಯನ್ನು. ಪ್ರಾಚೀನ ಕಾಲದಲ್ಲಿ ದೇವತೆಗಳ ದಿವ್ಯಾಯುಧಗಳ ತುಂಡುಗಳನ್ನೆಲ್ಲ ಕೂಡುಹಾಕಿ, ಕರಗಿಸಿ, ವಿಶ್ವಕರ್ಮನು ಇದನ್ನು (ಈ ಕತ್ತಿಯನ್ನು) ನಿರ್ಮಿಸಿ, ದೈತ್ಯರ ಸಂಹಾರಕ್ಕಾಗಿ ಪರಮೇಶ್ವರನಿಗೆ ಕೊಟ್ಟನು. ಇದನ್ನು ಪಾಂಡ್ಯ ಅರಸನೊಬ್ಬನು ಘೋರ ತಪಶ್ಚರ್ಯ ಮಾಡಿ, ಪರಮೇಶ್ವರನಿಂದ ಸಂಪಾದಿಸಿದನು. ಈ ದಿವ್ಯ ಶಸ್ತ್ರಬದಿಂದಲೇ ಪಾಂಡ್ಯ ಅರಸು ವಂಶದವರು ಬಹುದಿನ ಯಾರಿಗೂ ಬಗ್ಗದೆ, ಜಯಶಾಲಿಗಳಾಗಿ ಬಾಳಿದರು; ಮುಂದೆ ದುರ್ದೈವದಿಂದ ಪಾಂಡ್ಯ ಅರಸರ ಪುಣ್ಯ ತೀರಿತು, ತೇಜವೂ ಅಡಗಿತು, ಪಾಂಡ್ಯ ಅರಸರ ಪುರೋಹಿತನಾದ ಅಗಸ್ತ್ಯ ಋಷಿಯು ಇದನ್ನೀಗ ನಿನಗೆ ಕಾಣಿಕೆಯಾಗಿ ಕೊಟ್ಟಿರುವನು. ಈ ಕತ್ತಿಯನ್ನು ಹಿಡಿದರೆ, ನಿನ್ನೆದುರು ಶತ್ರುಗಳ ಆಟ ನಡೆಯದು. ಮಧುರೆಯ ನೆರೆಯಲ್ಲಿದ್ದ ಮುಸಲ್ಮಾನ ದಾಳಿಗಾರರನ್ನೆಲ್ಲ ಸೋಲಿಸಿ, ಓಡಿಸಿ, ರಾಮೇಶ್ವರದವರೆಗೆ ಹಲವು ಜಯ-ಸ್ತಂಭಗಳನ್ನು ನಡಿಸು. ಕಾವೇರಿ ನದಿಗೆ ದೊಡ್ಡ ಕಟ್ಟೆ ಕಟ್ಟಿಸಿ, ಒಕ್ಕಲಿಗರಿಗೆ ಉಪಯೋಗವಾಗುವಂತೆ ನೀರಿನ ಅನುಕೂಲತೆ ಮಾಡಿಕೊಡು.

ದೇವಿಯ ಅನುಗ್ರಹದಿಂದ ವೀರಕಂಪಣರಾಯನು ಮಧುರೆಯನ್ನು ಗೆದ್ದು ದಾಳಿಗಾರರನ್ನು ಹೊಡೆದಟ್ಟಿ, ಆ ಸೀಮೆಯನ್ನೆಲ್ಲ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿದನು.

---

# ೨೭
## ಎದೆಗಾರ
# ಕದಿರೆಪ್ಪನಾಯಕ

[ ಗುಮ್ಮನಾಯಕನ ಪಾಳ್ಯದ ಕದಿರೆಪ್ಪನಾಯಕನು ವಿಜಯನಗರ ರಾಯರ ಸಭೆಯಲ್ಲಿ ತನ್ನ ಎದೆಗಾರಿಕೆಯನ್ನು ತೋರಿಸಿದ ಸಂಗತಿ. ಗುಮ್ಮನಾಯಕನ ಪಾಳೆಯಗಾರರು ಎಂಬ ಪುಸ್ತಕದಿಂದ. ]

ವಿಜಯನಗರದಲ್ಲಿ ವೀರನರಸಿಂಹನು ಆಳುತಿದ್ದಾಗ ಗುಮ್ಮನಾಯಕನ ಪಾಳ್ಯದಲ್ಲಿ ಎರಡನೆಯ ಕದಿರೆಪ್ಪನಾಯಕನು ಪಾಳೆಯಗಾರನಿದ್ದನು. ಕದಿರೆಪ್ಪನಾಯಕನು ವೀರನಿದ್ದುದರಿಂದ ಹಲವು ಪುಂಡರ ಹಾವಳಿಯನ್ನು ಅಡಗಿಸಿದನು. ಅದರಿಂದ ವೀರ ನರಸಿಂಹನಿಗೆ ಬಲು ಬೇಕಾದವನಾದನು. ಆಗ ಅವನು ನಾಯಕನನ್ನು ವಿಜಯನಗರದ ಓಲಗಕ್ಕೆ ಕರೆಯಿಸಿ ಮರ್ಯಾದೆ ಮಾಡಿದನು.

ಇಷ್ಟರಲ್ಲಿಯೇ ನವರಾತ್ರಿಯ ಉತ್ಸವ ಬಂದಿತು. ವಾಡಿಕೆಯಂತೆ ಸಾಮ್ರಾಜ್ಯದಲ್ಲಿಯ ಎಲ್ಲ ಸಾಮಂತ ರಾಜರೂ ನಾಯಕರೂ ಪಾಳಯಗಾರರೂ ರಾಜಧಾನಿಗೆ ತಮ್ಮತಮ್ಮ ದಂಡು ಸಹಿತವಾಗಿ ಬಂದರು. ಉತ್ಸವವು ಒಳ್ಳೇ ವಿಜೃಂಭಣೆಯಿಂದ ನಡೆಯಿತು.

ಒಂದುದಿನ ವೀರನರಸಿಂಹಭೂಪನು ಸಿಂಹಾಸನದಲ್ಲಿ ಕುಳಿತಿದ್ದಾನೆ. ಸಭೆಯು ಸಾಮಂತರಿಂದಲೂ ದಂಡನಾಯಕರಿಂದಲೂ ಕಿಕ್ಕಿರಿದಿದೆ. ಆಗ ಒಬ್ಬ ಬಂಟನು ಎದ್ದು, ತನ್ನ ಟೊಂಕದಲ್ಲಿ ತೂಗಾಡುತ್ತಿದ್ದ ಕಠಾರಿಯನ್ನು ಬಿರ್ರನೆ ಎಳೆದು ಅದನ್ನು ಆಡಿಸುತ್ತ-ತಿರುಗಿಸುತ್ತ ಅಂದದ್ದು:— ಇದು ರಾಯರ ಓಲಗ. ಇಲ್ಲಿ ಯಾರಾದರೂ ವೀರರಿದ್ದರೆ ಮುದೆ ಬಂದು ನನ್ನನ್ನು ಎದುರಿಸಲಿ! ನಾನವರನ್ನು ಇರಿಯುವೆ. ಯಾರೂ ಬರದಿದ್ದರೆ, ಸಭೆಯಲ್ಲಿ ವೀರರೇ ಇಲ್ಲವೆಂದು ತಿಳಿಯುವೆ ಎಂದು ಗದರಿಸಿದನು.

ನೆರೆದ ಬಂಟರಿಗೆಲ್ಲ ಅವನ ಮಾತು ಕೇಳಿ ಅವಮಾನವೆನಿಸಿತು; ಆದರೂ ಕಠಾರಿಯ ಇರಿತಕ್ಕೆ ಎದೆಗೊಡಲು ಯಾರಿಂದಲೂ ಧೈರ್ಯವಾಗಲಿಲ್ಲ. ಎಲ್ಲರೂ ಬಾಯಿಬಿಡದೆ ಮೈಯನ್ನು ಅಲ್ಲಾಡಿಸದೆ ಕುಳಿತುದುದನ್ನು

ನೋಡಿ, ಕದಿರೆಪ್ಪನಾಯಕನಲ್ಲಿ ಆವೇಶ ತುಂಬಿತು. ಚಳಚಳಿಸುತ್ತಿದ್ದ ಅವನಲ್ಲಿಯ ನೆತ್ತರವು ಅವನನ್ನು ಸುಮ್ಮನಿರಗೊಡಲಿಲ್ಲ. ' ಇದೋ! ನನ್ನನ್ನು ಆ ಕಠಾರಿಯಿಂದ ಬೇಕಾದರೆ ತಿವಿ ' ಎಂದು ಎದ್ದು ನಿಂತು ಸಾರಿದನು.

ಆ ಬಂಟನಿಗೂ ಅದೇ ಬೇಕಾಗಿದ್ದಿತು. ತುಂಬ ಹುರುಪಿನಿಂದ ಅವನಿದ್ದಲ್ಲಿಗೆ ಒಳ್ಳೇ ರಭಸದಿಂದ ಹೋಗಿ ಚುಚ್ಚಿದನು. ಜನರಿಗೆಲ್ಲ ಈ ಘಟನೆಯನ್ನು ನೋಡಿ ಆಶ್ಚರ್ಯವಾಯಿತು. ಅವರ ಕಣ್ಣುಗಳೆಲ್ಲ ಅವರಿಬ್ಬರಲ್ಲಿಯೆ ನೆಲಿಸಿದ್ದವು. ಪಾಳ್ಯಗಾರನ ಎದೆಯ ಗುಂಡಿನಿಂದ ಬಳಬಳ ನೆತ್ತರ ಸುರಿಯಲಾರಂಭಿಸಿತು. ಆ ಹೊಡೆತಕ್ಕೆ ಕೂಡಿದ ಜನರೆಲ್ಲರೂ ಅಹಹ! ಎಂದು ನಡುಗಿದರು.

ಆದರೆ, ಕದಿರೆಪ್ಪನಾಯಕನ ಮುಖದಲ್ಲಿ ಮಾತ್ರ ಎಳ್ಳಷ್ಟೂ ದುಃಖದ ಲಕ್ಷಣವಿರಲಿಲ್ಲ. ಅವನದು ನಗು ಮುಖವಾಗಿತ್ತು. ಇದನ್ನು ನೋಡಿ ಎಲ್ಲರೂ ಬೆರಗಾದರು. ಆಗ ಆ ಬಂಟನು ಅಂದದ್ದು:— ಈ ಸಭೆಯಲ್ಲಿ ಯಾರಾದರೂ ಎದೆಗಾರ ವೀರರು ಇರುವರೋ ಹೇಗೆಂಬುದನ್ನು ಪರೀಕ್ಷಿಸಲು ನಾನು ಬೇಕೆಂದು ಹೀಗೆ ಮಾಡಿದೆ. ನನ್ನ ಕೈಯೊಳಗಿನದು ಪೊಳ್ಳು ಕಠಾರಿ, ನಾಯಕನ ಮೈಗೆ ಹತ್ತಿರುವದು ಓಕುಳಿಯ ಕೆಂಪು. ಇದ್ದರೆ ಇಂಥ ವೀರರಿರಬೇಕು. ಸಾವಿಗಂಜದವನೇ ವೀರನು.

ಕದಿರೆಪ್ಪನಾಯಕನಿಗೆ ಆ ಬಂಟನ ಹಂಚಿಕೆಯನ್ನು ನೋಡಿ ಬಲು ಆನಂದವಾಯಿತು. ತನ್ನ ಕೊರಳಲ್ಲಿದ್ದ ಮುತ್ತಿನ ಸರವನ್ನು ಅವನ ಕೊರಳಿಗೆ ಹಾಕಿ, ತಾನು ಹೊತ್ತ ಬೆಲೆಯುಳ್ಳ ಶಲ್ಯವನ್ನು ಅವನ ಮೈಮೇಲೆ ಹೊದ್ದಿಸಿ, ಅವನ ಜಾಣತನವನ್ನು ಕೊಂಡಾಡಿದನು.

ವೀರ ನರಸಿಂಹರಾಯರು ಇದನ್ನೆಲ್ಲ ನೋಡಿ ಮೆಚ್ಚಿ, ಬಂಟನ ಜಾಣತನಕ್ಕೂ ನಾಯಕನ ಎದೆಗಾರಿಕೆಗೂ ಕೌತುಕಪಟ್ಟು, ಗೌರವಿಸಿದನು.

# ೨೮

## ಆಡಿನ ಕಣ್ಣು ತೋರಿಸಿ
## ಸಾವು ತಪ್ಪಿಸಿದ ತಿಮ್ಮರಸ

[ವಿಜಯನಗರದಲ್ಲಿ ಸಂಗಮ, ಸಾಳ್ವ, ತುಳುವ, ಅರವೀಡು ಹೀಗೆ ನಾಲ್ಕು ವಂಶದವರು ಆಳಿದರು. ತುಳುವಂಶಕ್ಕೆ ನರಸನೆಂಬ ದಂಡನಾಯಕನೇ ಮೂಲಪುರುಷ. ನರಸನಾಯಕನಿಗೆ ಮೂರು ಮಂದಿ ಹೆಂಡಿರಿಂದ ವೀರ ನರಸಿಂಹ, ಕೃಷ್ಣರಾಯ, ಅಚ್ಯುತರಾಯ, ರಂಗರಾಯ, ಹೀಗೆ ನಾಲ್ವರು ಮಕ್ಕಳು. ನರಸನಾಯಕನ ತರುವಾಯ ವೀರನರಸಿಂಹನು ಪಟ್ಟವೇರಿ ಆಳಿದನು. ಇವನು ಸ್ವಲ್ಪಕಾಲ ಆಳಿ, ಸಾಯುವಾಗ ತನ್ನ ಪ್ರೀತಿಯ ಮಂತ್ರಿಯಾದ ಸಾಳುವ ತಿಮ್ಮರಸನನ್ನು ಕರೆಯಿಸಿ ತನ್ನ ತಮ್ಮ ಕೃಷ್ಣರಾಯನನ್ನು ಕೊಂದು ತನ್ನ ಎಂಟು ವರ್ಷದ ಮಗನಿಗೆ ಪಟ್ಟಗಟ್ಟಲಿಕ್ಕೆ ಹೇಳಿದನು. ಆಗ ನಡೆದ ಸಂಗತಿ. ಸಿವೆಲ್ ಸಾಹೇಬರ 'ಮರೆತುಹೋದ ಸಾಮ್ರಾಜ್ಯ'ವೆಂಬ ಇಂಗ್ಲಿಷ ಪುಸ್ತಕದಲ್ಲಿ ಈ ಕತೆಗೆ ಆಧಾರವಿದೆ.]

ವೀರನರಸಿಂಹನು ಆಳುತ್ತಿರುವಾಗ ತಮ್ಮನಾದ ಕೃಷ್ಣದೇವರಾಯನು ಹರೆಯದವನಿದ್ದು, ಆಗಾಗ್ಗೆ ಅಣ್ಣನಿಗೆ ರಾಜ-ಕಾರ್ಯದೊಳಗೆ ನೆರವಾಗುತ್ತಿದ್ದನು. ಸಾಳುವ ತಿಮ್ಮರಸನಲ್ಲಿ ವೀರನರಸಿಂಹನ ವಿಶ್ವಾಸ ವಿಶೇಷ. ಅರಮನೆಯಲ್ಲಿ, ರಾಜ್ಯದಲ್ಲಿ, ಅರಸನ ತರುವಾಯ ಅವನ ಮಾತೇ ನಡೆಯುತ್ತಿತ್ತು.

ಕೃಷ್ಣರಾಯನು ರೂಪ, ಬುದ್ಧಿವಂತಿಕೆ, ಶೌರ್ಯ ಇವುಗಳಲ್ಲಿ ಮಿಗಿಲಾಗಿದ್ದನು. ವೀರನರಸಿಂಹನಿಗೂ ಅವನ ತಾಯಿಯಾದ ತಿಪ್ಪಾಂಬಿಕೆಗೂ ಕೃಷ್ಣರಾಯನನ್ನು ಕಂಡರೆ ಆಗುತ್ತಿರಲಿಲ್ಲ; ಆದರೆ, ಮಂತ್ರಿಯಾದ ತಿಮ್ಮರಸನಿಗೆ ಕೃಷ್ಣರಾಯನಲ್ಲಿ ತುಂಬ ಪ್ರೀತಿ; ಆದುದರಿಂದ ಅವನೇ ಕೃಷ್ಣರಾಯನನ್ನು ಹಲವು ಬಗೆಯಿಂದ ರಕ್ಷಿಸಿದ್ದಲ್ಲದೆ, ಅವನಿಗೆ ರಾಜ-ಕಾರ್ಯದ ಶಿಕ್ಷಣವನ್ನು ಕೊಟ್ಟನು. ಇದರಿಂದ ಕೃಷ್ಣದೇವರಾಯನು ಹಿಂದು-ಮುಂದು ನೋಡದೆ ರಾಜಕೀಯ ವಿಷಯಗಳಲ್ಲಿ ಧುಮುಕುತ್ತಿದ್ದನು; ಆದುದರಿಂದ, ತನ್ನ ತರುವಾಯ ತನ್ನ ಹೊಟ್ಟೆಯ ಮಗನಿಗೆ ಅರಸು-ಪಟ್ಟವು ದಕ್ಕುವದೋ ಇಲ್ಲವೋ ಎಂದು ವೀರನರಸಿಂಹನಿಗೆ ಸಂದೇಹವುಂಟಾಯಿತು; ಆದರೂ ತಾನು ಗಟ್ಟಿಮುಟ್ಟಾಗಿರುವವರೆಗೆ ಅವನು ತನ್ನ ಮಗನ ವಿಷಯದಲ್ಲಿ ಹೆಚ್ಚು

ಯೋಚನೆ ಮಾಡದೆ, ತನ್ನ ಸಂದೇಹವನ್ನು ಮನದೊಳಗೆ ಹುದುಗಿಸಿಟ್ಟು ಕೊಂಡಿದ್ದನು.

ವೀರನರಸಿಂಹನ ಕೊನೆಗಾಲ ಸಮೀಪಿಸಿದ ಹಾಗೆಲ್ಲ ಕೃಷ್ಣರಾಯನು ಬಲಿಯುಹತ್ತಿದನು. ಅವನ ವಿಷಯವಾಗಿದ್ದ ಸಂಶಯವೂ ವೀರನರಸಿಂಹನಲ್ಲಿ ಬೆಳೆಯಿತು. ತನ್ನ ಮಗನ ಜೀವಿತದ ಬಗ್ಗೆ ಭಯವೆನಿಸಿತು. ಯಾರಿಗೆ ಹೇಳಿದರೆ ಹೇಗೋ ಎಂದು ಮನಸಿನಲ್ಲಿದ್ದುದನ್ನು ಅಳೆದಳೆದು ನೋಡಿದನು; ಆಮೇಲೆ, ತನ್ನ ಪ್ರೀತಿಯ ತಿಮ್ಮರಸನನ್ನು ಕರೆಯಿಸಿ ತನ್ನನ್ನು ಕೊರೆಯುತ್ತಿರುವ ಅನುಮಾನವನ್ನು ಅವನ ಮುಂದೆ ಮನಸು ಬಿಚ್ಚಿ ಮಾತಾಡಿದನು; ಮತ್ತು ಕೃಷ್ಣರಾಯನನ್ನು ಕೊಲ್ಲಿಸದಿದ್ದರೆ, ತಾನು ನಿಶ್ಚಿಂತೆಯಿಂದ ಸಾಯುವದಕ್ಕೆ ದಾರಿ ಇಲ್ಲ. 'ನಾನು ನಿಶ್ಚಿಂತೆಯಿಂದ ಪ್ರಾಣ ಬಿಡಬೇಕೆಂದರೆ, ನಾನು ಬದುಕಿರುವಾಗಲೇ ಕೃಷ್ಣರಾಯನನ್ನು ಕೊಂದು ಅವನ ಕಣ್ಣುಗಳನ್ನು ಕಿತ್ತು, ನನಗೆ ತಂದು ತೋರಿಸು. ಹಾಗಾದರೆ ನಾನು ಸುಖದಿಂದ ಪ್ರಾಣಬಿಡುವೆ' ಎಂದನು.

ಸಾಳುವ ತಿಮ್ಮರಸನಿಗೆ ಧರ್ಮಸಂಕಟ ಬಂದಿತು. ಅರಸನ ಮಾತು ನಡಿಸಬೇಕೋ, ಕೃಷ್ಣರಾಯನನ್ನು ಕೊಲ್ಲಬೇಕೋ, ತೋಚದಂತಾಯಿತು. ಅರಸನ ಅಪ್ಪಣೆ ಮನ್ನಿಸದೆ ಗತಿ ಇರಲಿಲ್ಲ. 'ಆಗಲಿ, ಮಹಾಸ್ವಾಮಿ' ಎಂದು, ಕೃಷ್ಣರಾಯನನ್ನು ಒತ್ತಟ್ಟಿಗೆ ಕರೆದುಕೊಂಡು ಹೋಗಿ, ಒಡೆಯನ ಅಪ್ಪಣೆಯನ್ನು ತಿಳಿಸಿದನು. ಆಗ, ಕೃಷ್ಣರಾಯನು 'ನನಗೆ ರಾಜ್ಯವೂ ಬೇಡ, ರಾಜನಾಗುವದೂ ಬೇಡ. ಎಲ್ಲಿಯಾದರೂ ಏಕಾಂತದಲ್ಲಿ ನನ್ನಿಷ್ಟಕ್ಕೆ ನಾನು ದೇವರನ್ನು ನೆನೆಯುತ್ತ ಇರುವೆನು. ನನ್ನ ಕಣ್ಣುಗಳನ್ನು ಮಾತ್ರ ಕಿತ್ತು ಹಾಕಿಸಬೇಡಿರಿ' ಎಂದು ಕೇಳಿಕೊಂಡನು.

ತಿಮ್ಮರಸನಿಗೆ ದಯೆ ಹುಟ್ಟಿತು. ಎಲ್ಲ ಗುಣಗಳಿಂದಲೂ ವೀರನರಸಿಂಹರಾಯನ ಮಗನಿಗಿಂತಲೂ ಅರಸೊತ್ತಿಗೆಗೆ ಯೋಗ್ಯನಾಗಿರುವ ಈತನನ್ನು ಕೊಲ್ಲಿಸುವದು ಸರಿಯಲ್ಲವೆಂದು ಮನಗಂಡನು. ಅನಂತರ ತಿಮ್ಮರಸನು ತನ್ನ ಸೇವಕರಿಗೆ ಗುಟ್ಟಾಗಿ ಆಡಿನ ಕಣ್ಣುಗಳನ್ನು ತಂದುಕೊಡಹೇಳಿದನು. ಅವುಗಳನ್ನು ಒಯ್ದು ಸಾಯುವ ವೀರನರಸಿಂಹನಿಗೆ ತೋರಿಸಿದನು. ಅದನ್ನು ಕಣ್ಣಿನಿಂದ ನೋಡಿಯೇ ವೀರನರಸಿಂಹನು ಜೀವಬಿಟ್ಟನು.

ವೀರನರಸಿಂಹನ ಮರಣದ ಸಮಯಕ್ಕೆ ಕೃಷ್ಣದೇವರಾಯನು ಪ್ರಬುದ್ಧನಿದ್ದನು. ರಾಜ್ಯವಾಳಲಿಕ್ಕೆ ಎಲ್ಲ ದೃಷ್ಟಿಯಿಂದಲೂ ಯೋಗ್ಯನಿದ್ದನು. ವೀರನರಸಿಂಹನ ಮಗನು ಚಿಕ್ಕವನು; ಆದುದರಿಂದ ಎಲ್ಲರ ಅನುಮತಿಯನ್ನು ಪಡೆದು ತಿಮ್ಮರಸನು ಕೃಷ್ಣದೇವರಾಯನನ್ನೇ ಪಟ್ಟಕ್ಕೆ ಕುಳ್ಳಿರಿಸಿದನು. ಆದುದರಿಂದ ಕೃಷ್ಣರಾಯನು ಸಾಳುವ ತಿಮ್ಮರಸನನ್ನು ತಂದೆಯಂತೆ ಕಾಣು ತ್ತಿದ್ದನು. ಅವನಿಗೆ 'ಅಪ್ಪಾಜಿ' ಎನ್ನುತ್ತಿದ್ದನು. ಕೃಷ್ಣದೇವರಾಯನ ಆಳಿಕೆ ಯೆಂದರೆ, ವಿಜಯನಗರ ಸಾಮ್ರಾಜ್ಯದ ಘನತೆಯ ಕಾಲ.

---

## ೨೯

## ದಕ್ಷಿಣ ದೇಶದ ಚಕ್ರವರ್ತಿಯಾದ

# ನರಪತಿ ಶ್ರೀ ಕೃಷ್ಣದೇವರಾಯ

( ಕ್ರಿ. ಶ. ೧೫೦೯-೧೫೩೦ )

[ ವಿಜಯನಗರದ ಅರಸರಲ್ಲಿಯೇ ಶ್ರೀ ಕೃಷ್ಣದೇವರಾಯನ ಆಳಿಕೆಯ ಕಾಲ ವೆಂದರೆ ಅತ್ಯಂತ ಘನತೆಯ ಕಾಲ; ಇಷ್ಟು ಘನತೆಗೆ ಅವನೇ ಬಹುಮಟ್ಟಿಗೆ ಕಾರಣನು. ಅವನ ಆಳಿಕೆಯಲ್ಲಿ ವಿಜಯನಗರದವರಿಗೆ ಸೋಲುಗಳಾಗಲಿಲ್ಲ. ಈ ವಿಷ ಯವು ವಿಜಯನಗರ ಸಾಮ್ರಾಜ್ಯ ಎಂಬ ಕನ್ನಡ ಪುಸ್ತಕದಿಂದ ಶೇಖರಿಸಲ್ಪಟ್ಟಿದೆ.]

ಅಣ್ಣನಾದ ವೀರನರಸಿಂಹನು ಮಡಿದನಂತರ ಅವನ ಮಗನು ಬಲು ಚಿಕ್ಕವನಿದ್ದುದರಿಂದಲೂ ಸಾಳುವ ತಿಮ್ಮರಸನ ದಯೆಯಿಂದ ಕೃಷ್ಣರಾಯ ನಿಗೆ ಅರಸೊತ್ತಿಗೆಯು ಸಿಕ್ಕಿತು.

ಪಟ್ಟಕ್ಕೆ ಕೂಡ್ರುವ ಕಾಲಕ್ಕೆ ಕೃಷ್ಣರಾಯನಿಗೆ ೨೦ ವರ್ಷ; ಅಣ್ಣ ವೀರನರಸಿಂಹನ ಆಳಿಕೆಯಲ್ಲಿ ಪ್ರಜೆಗಳಿಗಾದ ಅನ್ಯಾಯಗಳನ್ನೆಲ್ಲ ನಿವಾರಿಸಿ ದನು. ಮದುವೆಯ ಕರ-ತೆರಿಗೆಗಳನ್ನು ತೆಗೆದುಹಾಕಿದನು. ಸಾಮ್ರಾಜ್ಯ ರಕ್ಷಣೆಗೆ ಅವಶ್ಯವಿರುವ ಸೈನ್ಯವನ್ನು ಬಲಿಸಿದನು. ತನ್ನ ರಾಜ್ಯದೊಳಗಿನ ಸಾಮಂತ ರಾಜರಿಗೂ ದಂಡಿನಬಲ ಬೆಳೆಯಿಸಲು ಎಚ್ಚರಿಕೆ ಕೊಟ್ಟು, ಹದಿನೆಂಟು ನಾಡುಗಳ ನಾಯಕರನ್ನು ಕರೆಯಿಸಿ, ಅವರಿಗೆ ರಾಜ್ಯವಾಳುವ ತಂತ್ರವನ್ನು ತಿಳಿಸಿದನು. ಬೊಕ್ಕಸವು ಬರಿದಾಗಿರುವದನ್ನು ನೋಡಿ ಅದಕ್ಕೆ

ತಕ್ಕಂತೆ ಖರ್ಚನ್ನು ಸರಿಪಡಿಸಿದನು. ಅದೇ ತಾನೇ ಬೆಳೆದು ಬೇರುಬಿಡುತ್ತಿದ್ದ ಪೋರ್ತುಗೀಜರೊಡನೆ ಒಪ್ಪಂದ ಮಾಡಿಕೊಂಡನು. ಉಮ್ಮತ್ತೂರಿನ ಮಲ್ಲರಾಯ ಒಡೆಯನ ಪುಂಡಾಟಿಕೆಯನ್ನಡಗಿಸಿ, ಮೈಸೂರು ಪ್ರಾಂತವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಬಹುದಿನಗಳಿಂದ ವಿಜಯನಗರದವರ ವಶದಲ್ಲಿದ್ದು ವೀರನರಸಿಂಹನ ಆಳಿಕೆಯಲ್ಲಿ ಕೈ ಬಿಟ್ಟುಹೋಗಿ, ಮುಸಲ್ಮಾನ ಅರಸರ ಪಾಲಾದ ರಾಜ್ಯವನ್ನು ತಿರುಗಿ ಗಳಿಸಿದನು. ಆಮೇಲೆ ಕೃಷ್ಣರಾಯನು ಒಡ್ಡೀ ನಾಡಿನ (ಓಡಿಸಾ) ಮೇಲೆ ದಂಡೆತ್ತಿ ಹೋಗಬೇಕೆಂದು ಹೊಂಚು ಹಾಕಿದನು. ಅಲ್ಲಿ ಗಜಪತಿ ಮನೆತನದ ಅರಸರಾಳುತ್ತಿದ್ದರು. ರಾಯನು ಐದಾರು ವರ್ಷಗಳು ಒಂದೇ ಸವನೆ ಬೆನ್ನುಹತ್ತಿ ಗಜಪತಿರಾಯನನ್ನು ಗೆದ್ದು, ಅವನ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾಗಿ ಕೃಷ್ಣಾನದಿಯ ದಕ್ಷಿಣಕ್ಕಿರುವ ಸೀಮೆಯನ್ನೆಲ್ಲ ಮಾವನಿಂದ ವರದಕ್ಷಿಣೆಯಾಗಿ ತೆಗೆದುಕೊಂಡನು. ಅಲ್ಲಿಂದ ಮರಳಿ ಬರುವಾಗ ತೆಲಗು ನಾಡಿನ ಎಷ್ಟೋ ಭಾಗವನ್ನು ತನ್ನ ವಶಕ್ಕೆ ತೆಗೆದುಕೊಂಡು, ಅಲ್ಲಲ್ಲಿ ತನ್ನ ದಂಡನಾಯಕರನ್ನು ವ್ಯವಸ್ಥೆಗಾಗಿ ಇಟ್ಟನು. ತರುವಾಯ ತುಳುನಾಡಿಗೆ ದಂಡೆತ್ತಿಹೋಗಿ ಅಲ್ಲಿಯ ಮಂಗಳೂರಿನ ಅರಸನನ್ನು ಸೋಲಿಸಿ, ಅವನ ರಾಜ್ಯವನ್ನು ತನ್ನ ನಾಯಕರಿಗೆ ಹಂಚಿಕೊಟ್ಟನು. ರಾಯನ ಪರಾಕ್ರಮವನ್ನು ನೋಡಿ ಮುಸಲ್ಮಾನ ಅರಸರು ಮೆತ್ತಗಾದರು.

ರಾಯಚೂರಿನ ದಿಗ್ವಿಜಯ ಎಂಬುದು ರಾಯನ ಆಳಿಕೆಯಲ್ಲಿ ಅತ್ಯಂತ ಮಹತ್ವದ ಪ್ರಸಂಗ. ಆ ಕಾಲಕ್ಕೆ ರಾಯಚೂರು-ಮುದಗಲ್ಲು ಕೋಟೆಗಳು ಗಂಡಮೆಟ್ಟಿನ ಸ್ಥಳಗಳು. ಒಂದಾನೊಂದು ಕಾಲಕ್ಕೆ ವಿಜಯನಗರದ ಅರಸರ ವಶದಲ್ಲಿದ್ದ ಕೋಟೆಗಳು. ಅವು ಕೆಲವು ವರ್ಷಗಳಿಂದ ವಿಜಾಪುರದ ಅದಿಲ ಶಹನ ವಶದಲ್ಲಿದ್ದವು. ಒಡ್ಡೀನಾಡು-ತೆಲಗುನಾಡುಗಳನ್ನು ಗೆದ್ದವನಿಗೆ ನೆರೆಯಲ್ಲಿಯ ಕೋಟೆಗಳು ತನ್ನ ವಶದಲ್ಲಿರದಿರುವದು ಅತ್ಯಂತ ಅವಮಾನವೆನಿಸಿತ್ತು. ರಾಯನು ಅದರ ದೆಸೆಯಿಂದ ದಾರಿ ಕಾಯುತಲಿದ್ದ. ಸಿದ್ಧಿಮರ್ಕಾರ ಎಂಬುವನು ಕುದುರೆಯ ವ್ಯಾಪಾರದಲ್ಲಿ ಮಧ್ಯಸ್ತನಾಗಿ ಕೃಷ್ಣರಾಯನಿಂದ ನಾಲ್ವತ್ತು ಸಾವಿರ ವರಹಗಳನ್ನು ತೆಗೆದುಕೊಂಡು ಆದಿಲಶಹನ ರಾಜ್ಯದಲ್ಲಿ ಸೇರಿದ್ದನು. ಅವನನ್ನು ಒಪ್ಪಿಸಲು ರಾಯನು ಆದಿಲಶಹನಿಗೆ ಕೇಳಿದನು.

ಶಹನು ನನಗದು ಗೊತ್ತಿಲ್ಲವೆಂದನು. ರಾಯನಿಗೆ ಸಿಟ್ಟು ಬಂದಿತು. ರಾಯಚೂರಿನ ಮುತ್ತಿಗೆಯ ಸಿದ್ಧತೆ ಮಾಡಲು ನಾಯಕರಿಗೆ ಅಪ್ಪಣೆ ಮಾಡಿದನು.

ಕಾಮನಾಯಕ, ತಿಮ್ಮನಾಯಕ, ಮಧುರೆಯ ನಾಯಕ, ಗಂಡರಾಜ, ಅಡಪನಾಯಕ ಮೊದಲಾದವರು ತಮ್ಮ ದಂಡಾಳುಗಳೊಡನೆ ರಾಯಚೂರಿನ ಮೇಲೆ ನಡೆದರು. ರಾಯಚೂರಿನ ಸಮೀಪ ಮಲ್ಲಾಬಂಡೆಯ ಹತ್ತರ ತನ್ನ ಶಿಬಿರವನ್ನು ಹಾಕಿಸಿದನು. ಬೇರೆ ಬೇರೆ ನಾಯಕರೂ ಅವರ ದಂಡಿನವರೂ ಇಳಿದುಕೊಂಡ ಸ್ಥಳವೇ ಒಂದು ಪಟ್ಟಣವಾಯಿತು.

ಶುಭ ಮುಹೂರ್ತದಲ್ಲಿ ರಾಯನು ತನ್ನ ನಾಯಕರಿಗೆ ರಾಯಚೂರಿನ ಹಲ್ಲೆಯ ಕೆಲಸ ನಡಿಸಲು ಆಜ್ಞಾಪಿಸಿದನು. ಕಾಮನಾಯಕನು ಕಂದಕದ ಬಳಿಯಲ್ಲಿಯೇ ತನ್ನ ದಂಡಿನೊಡನೆ ಇದ್ದನು. ಕೆಲವರಿಗೆ ಕೋಟೆಯ ಗೋಡೆಯ ಕಲ್ಲುಗಳನ್ನು ಅಗಿದು ತೆಗೆಯಲು ಹೇಳಿದನು. ಅಲ್ಲಲ್ಲಿ ಬಿರುಕುಗಳು ಆದವು. ದಂಡಾಳುಗಳು ಕೇಕೆಹಾಕುತ್ತ ಒಳಕ್ಕೆ ಹೊಕ್ಕರು.

ಅದಿಲಶಹನಿಗೆ ಈ ಸುದ್ದಿ ತಿಳಿದು ತನ್ನ ಸೈನ್ಯದೊಂದಿಗೆ ನದಿಯ ಆಚೆ ಉತ್ತರಕ್ಕೆ ಇಳಿದನು. ಕನ್ನಡ ಬಂಟರು ಹೊತ್ತು ಸಾಧಿಸಿ, ಅದಿಲಶಹನ ದಂಡಿನೊಳಗೆ ನುಗ್ಗಿದರು. ಆಗ ಶಹನು ತೋಫುಗಳನ್ನು ಹಾರಿಸಲು ಹೇಳಿದನು. ಆದುದರಿಂದ ರಾಯನ ಸೈನಿಕರು-ಆನೆಗಳು ಪಟಪಟನೆ ಸತ್ತು ಬೀಳ ಹತ್ತಿದವು. ಕೆಲವರು ಹೆದರಿ ಓಡಲಾರಂಭಿಸಿದರು. ಆಗ ರಾಯನು ಕುದುರೆ ಏರಿ ಬಂದು 'ಓಡಬೇಡಿರಿ, ಇದೀಗ ಪರೀಕ್ಷೆಯ ವೇಳೆ. ನಿಮ್ಮ ಶೌರ್ಯದಿಂದ ವಿಜಯನಗರ ಮರ್ಯಾದೆ ಉಳಿಯಬೇಕು. ನೀವು ಬಂಟರೆಂಬುದನ್ನು ಜಗಕ್ಕೆ ತೋರಿಸಿರಿ' ಎಂದು ಹುರಿದುಂಬಿಸಿದನು. ರಾಯನ ಹುರಿನುಡಿಗಳಿಗೆ ದಂಡಾಳುಗಳು ಸಾವಿಗಂಜದೆ ಶತ್ರುಗಳ ಸೈನ್ಯವನ್ನು ತರಿಯಲಾರಂಭಿಸಿದರು. ಕನ್ನಡ ವೀರರು ನಡಿಸಿದ ಕಗ್ಗೊಲೆಯ ಕಾಳಗದಿಂದ, ಶತ್ರುಗಳು ಹೆದರಿ ಹೊಳೆಯಲ್ಲಿ ಹಾರಿಕೊಂಡರು. ಹಲವರು ಸೆರೆಸಿಕ್ಕರು. ಕೋಟೆಯು ರಾಯನ ವಶವಾಯಿತು. ಅದಿಲಶಹನು ತನ್ನ ಜನರಿಗೆ ಸೋಲು ಬಂದ ಸುದ್ದಿ ಕೇಳಿ, ಮುಖತಪ್ಪಿಸಿ, ಗುಡ್ಡಬೆಟ್ಟಗಳೊಳಗಿಂದ ವಿಜಾಪುರಕ್ಕೆ ಹೋದನು.

ಇತ್ತ ತನ್ನ ದಂಡಾಳುಗಳು ಇನ್ನೂ ಶತ್ರುಗಳನ್ನು ಬೆನ್ನಟ್ಟಿ ನಾನಾ ಬಗೆಯಿಂದ ಹಿಂಸಿಸುತ್ತಿರುವದನ್ನು ಕೇಳಿ, ರಾಯನಿಗೆ ಕರುಣ ಹುಟ್ಟಿತು. 'ಕೊಲೆ ನಿಲ್ಲಿಸಿರಿ, ಶತ್ರುಗಳ ಹೆಂಡಿರು-ಮಕ್ಕಳನ್ನು ಸೆರೆ ಬಿಡಿಸಿರಿ,' ಎಂದು ಹೇಳಿ, ತಾನು ಮುಂದೆ ನಿಂತು, ರಣದಲ್ಲಿ ಸತ್ತುಬಿದ್ದವರ ಹೆಣಗಳನ್ನು ಸುಡಿಸಿದನು.

ಆಮೇಲೆ, ಆನೆಯ ಅಂಬಾರಿಯಲ್ಲಿ ಕುಳಿತು ಅತ್ಯಂತ ವಿಜೃಂಭಣೆಯಿಂದ ರಾಯನು ರಾಯಚೂರಲ್ಲಿ ಪ್ರವೇಶಮಾಡಿದನು. ಊರ ನಾಗರಿಕರು ರಾಯನನ್ನು ಬೀಳ್ಕೊಳ್ಳಲು ಅಲ್ಲಲ್ಲಿ ಹಣ್ಣು-ಕಾಯಿಗಳನ್ನು ತಟ್ಟೆಯಲ್ಲಿಟ್ಟುಕೊಂಡು ಎದುರು ನೋಡುತ್ತ ನಿಂತಿದ್ದರು. ಅಲ್ಲಲ್ಲಿ ರಾಯನಮೇಲೆ ನೋಟಕರು ಹೂವಿನ ಮಳೆಗರೆಯುತ್ತಿದ್ದರು. ಮೆರವಣಿಗೆ ಮುಗಿದಬಳಿಕ, ರಾಯನು ಊರ ಮುಖಂಡರನ್ನು ಕರೆಯಿಸಿ, 'ನಿಮ್ಮ ಮನೆ-ಮಾರು-ಆಸ್ತಿಗೆ ಯಾವ ಬಗೆಯ ಭಯವಿಲ್ಲ; ಹೆದರಬೇಡಿರಿ' ಎಂದು ಹೇಳಿದನು. ಎಲ್ಲರೂ ರಾಯನ ಮಾತಿನಿಂದ ಆನಂದಪಟ್ಟರು. ರಾಯಚೂರಿನ ಮುತ್ತಿಗೆಯ ಗೆಲವಿನಿಂದ ರಾಯನ ಕೀರ್ತಿ ಬೆಳಗಿತು.

ತನ್ನ ಆಳಿಕೆಯ ಹದಿನೈದು-ಹದಿನಾರು ವರ್ಷಗಳಲ್ಲಿ ರಾಯನು ಇಡಿಯ ದಕ್ಷಿಣ ದೇಶಕ್ಕೇ ಸಮ್ರಾಟ ಎನಿಸಿಕೊಂಡನು. ತೀರ್ಥಯಾತ್ರೆಗೆ ಹೊರಟು ದಕ್ಷಿಣದಲ್ಲಿರುವ ದೇವಾಲಯಗಳಿಗೆ ದಾನಗಳನ್ನು ಕೊಟ್ಟನು. ಮುಂದೆ ಕೆಲದಿನ ರಾಯನು ವಿಶ್ರಾಂತಿ ತೆಗೆದುಕೊಂಡನು. ತನ್ನ ಮಗ ತಿರುಮಲರಾಯನಿಗೆ ಯುವರಾಜ ಪಟ್ಟಗಟ್ಟಿದನು.

ಮುಳಬಾಗಿಲಮಠದ ಮಾಧ್ವ ಸಂಪ್ರದಾಯದ ಶ್ರೀ ವ್ಯಾಸರಾಯ ಸ್ವಾಮಿಗಳಲ್ಲಿ ರಾಯನಿಗೆ ಬಲು ಭಕ್ತಿ-ವಿಶ್ವಾಸ. ಸಾಮ್ರಾಜ್ಯದಮೇಲೆ ಕುಹುಯೋಗ ಎಂಬ ದುಷ್ಟ ಗ್ರಹದ ಗಂಡಾಂತರ ಬಂದಾಗ, ಶ್ರೀ ವ್ಯಾಸರಾಯರಿಗೆ ಪಟ್ಟಗಟ್ಟಿ, ತಾನು ಅವರ ಹೇಳಿಕೆಯಂತೆ ಮುಂದೆ ರಾಜ್ಯ ನಡಿಸಹತ್ತಿದನು.

ರಾಯನಿಗೆ ಗರಡೀಸಾಧನೆಯಲ್ಲಿ ಬಹು ಪ್ರೀತಿ, ದಿನಾಲು ಬೆಳಿಗ್ಗೆ ನಾಲ್ಕು ಗಂಟೆಗೆ ಗರಡೀಸಾಧನ ಮಾಡುವನು, ಆಮೇಲೆ ಕುದುರೆಯ ಸವಾರಿ ಮಾಡಿ ಬಂದು ಸ್ನಾನ ಮುಂತಾದವುಗಳನ್ನು ತೀರಿಸಿ ಓಲಗಕ್ಕೆ ಹೋಗು

ವನು. ರಾಯನಿಗೆ ಚಿನ್ನಾದೇವಿ, ತಿರುಮಲಾದೇವಿ ಎಂಬ ರಾಣಿಯರಿದ್ದರು. ಗಂಡುಮಕ್ಕಳು ಇಬ್ಬರಿದ್ದಾಗ್ಯೂ ಚಿರಂಜೀವಿಗಳಾಗಲಿಲ್ಲ. ಹೆಣ್ಣುಮಕ್ಕಳು ಇಬ್ಬರು. ಒಬ್ಬಳನ್ನು ರಾಮರಾಯನಿಗೆ ಕೊಟ್ಟಿತ್ತು. ಸ್ವಭಾವದಿಂದ ಕೃಷ್ಣ ರಾಯನು ಬಹು ಉಲ್ಲಾಸವೃತ್ತಿಯವನು, ಪ್ರಜಾರಂಜಕನು, ಪಂಡಿತ ಪ್ರಿಯನು. ಹಲವು ಸಂಸ್ಕೃತ-ಕನ್ನಡ-ತೆಲಗು ಪಂಡಿತರು ಅವನಾಶ್ರಯದಲ್ಲಿದ್ದರು. ಕನ್ನಡ ಕವಿಯಾದ ತಿಮ್ಮಣ್ಣ ಎಂಬುವನು ರಾಯನ ಅಪ್ಪಣೆಯಿಂದ ಗದುಗಿನ ಕುಮಾರವ್ಯಾಸನ ಕನ್ನಡ ಮಹಾಭಾರತವನ್ನು ಮುಗಿಸಿದನು. ಪುರಂದರದಾಸರಲ್ಲಿ ರಾಯನಿಗೆ ಅತ್ಯಂತ ವಿಶ್ವಾಸ.

ರಾಯನು ತನ್ನ ಆಳಿಕೆಯಲ್ಲಿ ವಿಜಯನಗರದಲ್ಲಿ ಕೃಷ್ಣಸ್ವಾಮಿ, ರಾಮಸ್ವಾಮಿ, ವಿಜಯವಿಠ್ಠಲ ಮೊದಲಾದ ದಿವ್ಯ ದೇವಾಲಯಗಳನ್ನು ಕಟ್ಟಿಸಿದನು.

ರಾಯನ ಹಿರಿಯ ಮಗ ತಿರುಮಲರಾಯನಿಗೆ ಯಾರೋ ವಿಷಹಾಕಿ ಕೊಂದರು. ಈ ಕಾರ್ಯದೊಳಗೆ ಅಪ್ಪಾಜಿಯಾದ ತಿಮ್ಮರಸನ ಕೈ ಇರುವದೆಂದು ಕಂಡುಬಂದಿತು. ಉಪಾಯಗಾಣದೆ, ಅವನ ಕಣ್ಣು ಕೀಳಿಸಿ ಸೆರೆಹಿಡಿಸಿದನು. ಜೀವವು ಬಲು ನೊಂದಿತು ಮುಂದೆ ಸ್ವಲ್ಪದಿನಗಳಲ್ಲಿಯೇ ಬೇನೆಯಿಂದ ಮಡಿದನು.

ಕರ್ನಾಟಕದಲ್ಲಿ ಕಲ್ಯಾಣದ ಚಾಲುಕ್ಯ ವಿಕ್ರಮಾದಿತ್ಯನ ತರುವಾಯ ಮಿಂಚಿದ ಅರಸರಲ್ಲಿ ಶ್ರೀ ಕೃಷ್ಣದೇವರಾಯನೇ ಮಹಾವೀರನೆನ್ನಬಹುದು.

## ೩೦

## ನರಪತಿ

# ಕೃಷ್ಣದೇವರಾಯನ ಅರಮನೆ-ಓಲಗದ ನೀತಿಗಳು

[ಪರದೇಶದ ಪ್ರವಾಸಿಕರು ಕೃಷ್ಣರಾಯನ ಎಲ್ಲ ವೃತ್ತಾಂತವನ್ನೂ ಬರೆದಿಟ್ಟಿದ್ದಾರೆ. ಅವರ ಬರಹಗಳನ್ನು ಮಿ. ಸಿವೆಲ್ಲ ಸಾಹೇಬರು ತಮ್ಮ 'ಮರೆತುಹೋದ ಸಾಮ್ರಾಜ್ಯ' ವೆಂಬ ಇಂಗ್ಲಿಷ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಅವುಗಳನ್ನೇ ಸಾರಾಂಶವಾಗಿ ಕನ್ನಡಿಸಲಾಗಿದೆ.]

ವಿಜಯನಗರದ ಅರಸನಾದ ನರಪತಿ ಕೃಷ್ಣರಾಯನಿಗೆ ಇಬ್ಬರು ಮುಖ್ಯ ರಾಣಿಯರು. ಅವರ ಹೆಸರುಗಳು ತಿರುಮಲದೇವಿ, ಚಿನ್ನಾದೇವಿ. ಹಿರಿಯ ರಾಣಿಯ ಮೇಣೆಯ ದಂಡಿಗೆಗಳು ಬಂಗಾರದಿಂದ ಮಡಾಯಿಸಿದ್ದು. ಅದರಮೇಲೆ ರೇಶ್ಮೆಯ ಗವಸಣಿಕೆ ಇದೆ. ಗವಸಣಿಕೆಯು ಅಲ್ಲಲ್ಲಿ ಮುತ್ತುಗಳಿಂದಲೂ ಮುತ್ತಿನ ಸಿಂಪೆಗಳಿಂದಲೂ ಹೆಣೆಯಲಾಗಿದೆ. ಮಿಕ್ಕವರ ಮೇಣೆಗಳ ದಂಡಿಗೆಗಳಿಗೆ ಬೆಳ್ಳಿಯ ಕಟ್ಟು ಹಾಕಿದ್ದಾರೆ.

ಅರಸನ ದಿನದ ಊಟದ ಖರ್ಚು ಇಲ್ಲ; ಯಾಕಂದರೆ, ಅದೆಲ್ಲವೂ ದಿನಾಲು ಬೇರೆಬೇರೆ ಸರದಾರರಿಂದ ಪೂರೈಸಲ್ಪಡುತ್ತದೆ. ಊಟದಲ್ಲಿ ಅಕ್ಕಿ, ಗೋದಿ, ಮುಂತಾದವುಗಳ ಪದಾರ್ಥಗಳಿರುವವು. ಆಕಳ ಮಾಂಸವನ್ನು ಮುಟ್ಟುವದಿಲ್ಲ. ರಾಜಧಾನಿಯ ಹತ್ತಿರ ಇರುವ ಒಂದು ಝರಿಯಿಂದ ಅರಸನಿಗಾಗಿ ಕುಡಿಯುವ ನೀರು ತರುವರು. ಈ ಝರಿಯನ್ನು ಕಾಯಲಿಕ್ಕೆಂದು ಅರಸನ ನಂಬಿಗೆಯ ಕಾವಲಿಗನೊಬ್ಬನು ಯಾವಾಗಲೂ ಇರುವನು. ಅರಮನೆಯ ಆಳುಗಳು ಅರಸನಿಗಾಗಿ ತರುವ ನೀರಿನ ಪಾತ್ರೆಯನ್ನು ಮುಚ್ಚಿ, ಮುದ್ರೆ ಮಾಡಿ ತರುವರು. ಅದನ್ನು ಅರಮನೆಯೊಳಗಿನ ಹೆಂಗಸರಿಗೆ ಒಪ್ಪಿಸುವರು. ಅರಮನೆಗೆ ಬೇಕಾಗುವ ಹಾಲು-ಬೆಣ್ಣೆಗಾಗಿ ಅರಮನೆಯಲ್ಲಿಯೇ ಸುಮಾರು ಇನ್ನೂರಕ್ಕೆ ಮೇಲ್ಪಟ್ಟು ಹಿಂಡುವ ಆಕಳುಗಳಿರುವವು. ಅರಸನಿಗಾಗಿಯೇ ಅಡಿಗೆಮಾಡುವ ಹತ್ತುಮಂದಿ ಅಡಿಗೆಯವರು ಇರುವರು. ಅರಸನ ಆಜ್ಞೆಯಾದಾಗ ಅವರು ಅವನಿಚ್ಛಿಸಿದ ಪದಾರ್ಥಗಳನ್ನು ಮಾಡಿ ತರುವರು. ಊಟಕ್ಕಾಗಿಯೇ ಒಂದು ಮೂರುಕಾಲಿನ ಚಿನ್ನದ ಅಡ್ಡಣಿಗೆ ಇದೆ. ಅದರಮೇಲೆ ಬಂಗಾರದ ತಟ್ಟೆಯಲ್ಲಿ ಪದಾರ್ಥಗಳನ್ನು ನೀಡುವರು. ಬಡಿಸುವ

ಬಂಗಾರದ ಕೆಲವು ಪಾತ್ರೆಗಳೂ ರತ್ನ-ವಜ್ರಗಳಿಂದ ಕೆತ್ತಲ್ಪಟ್ಟಿವೆ. ಹೆಂಗಸರೂ ಕೊಜ್ಜೆಯರೂ ಬಡಿಸುವರು. ಒಮ್ಮೆ, ಬಳಸಿದ ಉಡಪನ್ನು ಅರಸನು ಮತ್ತೊಮ್ಮೆ ಹಾಕಿಕೊಳ್ಳುವದಿಲ್ಲ. ಅದನ್ನು ತನ್ನ ಬೆಂಗಾವಲಿಗೆ ಇದ್ದ ಬೇರೆ ಬೇರೆ ಸರದಾರರಿಗೆ ಕೊಡುವನು. ಮಿಕ್ಕವರಿಗೆ ಕೊಡುವದಿಲ್ಲ. ಅಂಗಿ, ಕುಲಾಯಿ, ಮುಂತಾದವು ಬಲು ಬೆಲೆಯುಳ್ಳವಿರುತ್ತವೆ.

ಅರಸನು-ಅರಸಿಯರು ಬಳಸುವ ಪದಾರ್ಥಗಳೆಲ್ಲ ಬೆಳ್ಳಿ-ಬಂಗಾರದವು. ಅರಸಿಯರು ಮಲಗುವ ಪಲಂಗಗಳು ಬೆಳ್ಳಿಯ ತಗಡುಗಳಿಂದಲೂ ಅರಸನ ಪಲಂಗವು ಬಂಗಾರದ ಪಟ್ಟಿಗಳಿಂದಲೂ ಅಲಂಕರಿಸಲ್ಪಟ್ಟಿದ್ದು, ಕುತನಿಯ ಗಾದಿಗಳಿಗೆ ದಿಂಬುಗಳಿಗೆ ಮುತ್ತುಗಳ ಗೊಂಚಲುಗಳನ್ನು ಕಟ್ಟಿರುತ್ತಾರೆ. ಸೊಳ್ಳೆಯ ಪರದೆ (ಮಚ್ಛರದಾನಿ) ಹಾಕಲಿಕ್ಕೆಂದು ಬೆಳ್ಳಿಯ ಚೌಕಟ್ಟು ಇರುವದು. ರಣಾಂಗಣಕ್ಕೆ ಹೊರಟಾಗ, ಕಬ್ಬಿಣದ ದೊಡ್ಡ ಪಂಜರದೊಳಗೆ ಅರಸನು ಮಲಗುವನು.

ಊರೊಳಗಿನ ಪ್ರಜೆಗಳಿಗೆ ಏನಾದರು ಅಧಿಕಾರಿಗಳಿಂದಾಗಲಿ, ಮತ್ತ್ಯಾರಿಂದಾಗಲಿ, ಅನ್ಯಾಯ-ಅನಾಚಾರಗಳು ಒದಗಿದರೆ, ಅವರು ಅರಸನ ಮುಂದೆ ಬಂದು ನೆಲದಮೇಲೆ ಉದ್ದಕ್ಕೆ ಬಿದ್ದುಕೊಂಡು, ಅರಸನು 'ಏಳು' ಅನ್ನುವ ವರೆಗೂ ಏಳುವದಿಲ್ಲ. ಅರಸನು ಕುದುರೆಯನ್ನು ಹತ್ತಿ ಸವಾರಿ ಹೊರಟಾಗ ಯಾರಿಗಾದರೂ ತಮ್ಮ ಗೋಳನ್ನು ಹೇಳಿಕೊಳ್ಳುವದಿದ್ದರೆ, ಅವರು ಭಲ್ಲೆಯ ಕೋಲಿಗೆ ಗಿಡದ ಟೊಂಗೆಯನ್ನು ಕಟ್ಟಿ, ಬೀದಿಗಳಲ್ಲಿ ಕೂಗುತ್ತ ಓಡುವರು. ಅಂಥವರಿಗೆ ಏನು ಬೇಕು ಏನು ಬೇಡವೆಂಬದನ್ನು ಅರಸನು ತನ್ನ ಹತ್ತರ ಇರುವ ಅಧಿಕಾರಿಗಳಿಂದ ಕೇಳಿಕೊಂಡು, ಅವರಿಗಾದ ಅನ್ಯಾಯವನ್ನು ಬಗೆ ಹರಿಸಲು ಹೇಳುವನು. ಎಲ್ಲಿಯಾದರೂ ಕನ್ನ-ಕಳ್ಳತನ-ಸುಲಿಗೆ ನಡೆದ ವರ್ತಮಾನ ಬಂದರೆ, ತತ್ ಕ್ಷಣವೇ-ತಾನು ಓಲಗದಲ್ಲಿ ಕುಳಿತಾಗಲೂ ಅದರ ವ್ಯವಸ್ಥೆ ನೋಡಲು ಆಜ್ಞೆಮಾಡುವನು. ಊರಲ್ಲಿ ನಡೆಯುವ ಕನ್ನ-ಕಳ್ಳ ತನಗಳನ್ನು ಕಂಡುಹಿಡಿಯಲಿಕ್ಕೆಂದೇ ಒಬ್ಬ ಮುಖ್ಯ ಅಧಿಕಾರಿ ಇರುವನು. ಅವನು ದಿನಾಲು ಅರಸನಿಗೆ ತನ್ನ ವರದಿಯನ್ನು ಒಪ್ಪಿಸುವನು.

ಯಾವನಾದರೂ ಕಳ್ಳತನ ಮಾಡಿದರೆ, ಆ ತಪ್ಪಿಗಾಗಿ ಅವನ ಕೈ ಇಲ್ಲವೆ, ಕಾಲು ಕಡಿಯುವರು; ಅಪರಾಧವು ದೊಡ್ಡದಿದ್ದರೆ, ಅವನನ್ನು ಗಲ್ಲಿ

ಗೇರಿಸುವರು. ಕುಲೀನ ಹೆಣ್ಣುಮಗಳ ಮರ್ಯಾದೆಯನ್ನು ಯಾವಾತ ನಾದರೂ ಕಳೆದರೆ, ಅವನಿಗೂ ಮೇಲಿನ ದಂಡನೆಯೇ ಆಗುವದು. ರಾಜ ದ್ರೋಹ ಮಾಡಿದವರನ್ನು ಪೇಟೆಯಲ್ಲಿ ತಲೆಹೊಯ್ಯುವರು. ದ್ವಂದ್ವಯುದ್ಧ ದಲ್ಲಿ ಗೆದ್ದವನಿಗೆ ಸೋತವನ ಆಸ್ತಿ ಕೊಡಿಸುವರು. ಕೆಲ ಅಪರಾಧಿಗಳನ್ನು ಆನೆಯ ಕಾಲಿಗೆ ಕಟ್ಟಿಸಿ ಎಳೆಯಿಸುವರು. ಸಣ್ಣಸಣ್ಣ ತಪ್ಪು ಮಾಡಿದವರ ತಲೆಯ ಮೇಲೆ, ಬೆನ್ನಿನ ಮೇಲೆ ಕಲ್ಲುಹೊರಿಸಿ ಇಡೀ ದಿನವೇ ಬೀದಿಯಲ್ಲಿ ನಿಲ್ಲಿಸುವರು.

---

## ೩೦
## ವೈಭವಸಂಪನ್ನ
# ವಿಜಯನಗರ

[ ಪರದೇಶದ ಪ್ರವಾಸಿಯಾದ ಫರ್ನಾವೋ ನ್ಯುನಿಝು ಎಂಬುವನು ಕಣ್ಣುಕಟ್ಟಿ ನೋಡಿದ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರದ ವೈಭವ ಪೂರ್ಣ ಚಿತ್ರವಿದು. ಮಿ. ಸಿವೆಲ್ ಸಾಹೇಬರ 'ಮರೆತುಹೋದ ಸಾಮ್ರಾಜ್ಯ' ವೆಂಬ ಪುಸ್ತಕದಿಂದ ಕನ್ನಡಿಸಿದ್ದು. ]

ವಿಜಯನಗರದ ಸುತ್ತು ಹೊರಬದಿಗೆ ದೊಡ್ಡ ದೊಡ್ಡ ಕಲ್ಲುಗಳಿಂದಲೂ ಗಚ್ಚಿನಿಂದಲೂ ಕಟ್ಟಿದ ಭದ್ರವಾದ ಕೋಟೆ ಇದ್ದು, ಅದಕ್ಕೆ ದೊಡ್ಡದೊಂದು ಹೆಬ್ಬಾಗಿಲು ಇದೆ. ಕೋಟೆಗೆ ಅಲ್ಲಲ್ಲಿ ಭವ್ಯವಾದ ಬುರುಜುಗಳಿರುವವು. ಕೋಟೆಗೆ ಹೊಂದಿಯೇ ನೀರಿನಿಂದ ತುಂಬಿದ್ದೊಂದು ಕಂದಕವಿರುವದು. ಮೇಲಿನ ಹೆಬ್ಬಾಗಿಲಿಂದ ಹಾಯ್ದು, ಒಳಗೆ ಹೋದರೆ, ಅಲ್ಲಿ ಒಂದು ವಿಶಾಲ ವಾದ ಬೈಲು. ಅದರೊಳಗೆ ಹಲವು ಬತ್ತದ ಗದ್ದೆಗಳೂ ತೋಟಗಳೂ ಇರು ವವು. ಆ ಗದ್ದೆಗಳಿಗೂ ತೋಟಗಳಿಗೂ ಎರಡು ಹೆಗ್ಗೆರೆಗಳಿಂದ ನೀರು ಬರು ವದು. ಅಲ್ಲಲ್ಲಿ ಕೆಲವು ತೆಂಗಿನ ಬನಗಳು, ಹಣ್ಣು ಹಂಪಲ ತೋಟಗಳೂ ತೋಟದಲ್ಲಿ ಮನೆಗಳೂ ಇರುವವು.

ಅವುಗಳನ್ನೆಲ್ಲ ದಾಟಿ ಮುನ್ನಡೆದರೆ, ಮತ್ತೆ ಚಿಕ್ಕದೊಂದು ಅಗಳತ ಹತ್ತುವದು. ಅಲ್ಲಿಯೂ ಪಾದ ತೋಯುವಷ್ಟು ನೀರು. ಅಲ್ಲಿ ಮತ್ತೊಂದು

ಹೆಬ್ಬಾಗಿಲು. ಅದಕ್ಕೆ ಎರಡೂ ಬದಿಗೆ ಎರಡು ಹುಡೆಗಳು; ಅವುಗಳ ಮೇಲೆ ಗೋಪುರಗಳು. ಅವುಗಳಿಗೆ ಹೊಂದಿಯೇ ಎರಡೂ ಮಗ್ಗಲಿಗೆ ಕೋಟೆಯ ಗೋಡೆ. ಇದು ಊರಿಗೆ ಸುತ್ತುಗಟ್ಟಿರುವದು. ಇಲ್ಲಿಂದ ಹಾಯ್ದು ಮುನ್ನಡೆದರೆ, ಎರಡು ದೇವಾಲಯಗಳು ಹತ್ತುವವು. ಒಂದು ದೇವಾಲಯಕ್ಕೆ ಸುತ್ತುಮುತ್ತು ಗೋಡೆ ಇದ್ದು, ದೇವಾಲಯದ ಬೈಲಿನಲ್ಲಿ ಹಲವು ಗಿಡಗಳಿರುವವು; ಮತ್ತೊಂದು ದೇವಾಲಯದ ನೆರೆಯಲ್ಲಿ ಮನೆಗಳಿರುವವು. ಇದನ್ನು ದಾಟಿ, ಕೊಂಚ ಮುಂದೆ ನಾಲ್ಕು ಹೆಜ್ಜೆ ಹೋದರೆ, ಮತ್ತೂ ಒಂದು ಹೆಬ್ಬಾಗಿಲು, ಅಲ್ಲದೆ ಊರಿಗೆ ಸುತ್ತು ಹಾಕುವ ಒಂದು ಕೋಟೆ. ಇದರೊಳಗಿಂದ ನಡೆದು ಮುಂದೆ ಸಾಗಿದರೆ, ಅರಮನೆಗೆ ಹೋಗುವ ಬೀದಿ ಬರುವದು. ಅಲ್ಲಿಂದ ಮನೆಗಳ ಸಾಲು ಹತ್ತುವದು. ಇವು ದಂಡನಾಯಕರು, ದಳವಾಯಿಗಳು, ಸಿರಿವಂತರು ಮೊದಲಾದವರಿಗೆ ಸಂಬಂಧಿಸಿರುವದರಿಂದ ಬಹು ಅಂದಚಂದಾಗಿಯೂ ಅಚ್ಚುಕಟ್ಟಾಗಿಯೂ ಕಟ್ಟಲಾಗಿವೆ. ಒಂದರಂತೆ ಇನ್ನೊಂದು ಮನೆಯಿಲ್ಲ. ಎಲ್ಲವೂ ವಿವಿಧ ಮಾದರಿಗಳಿಂದ ಕಟ್ಟಲ್ಪಟ್ಟಿದ್ದು, ಮನೆಗಳಿಗೆ ಹಚ್ಚಿದ ಬಗೆಬಗೆಯ ಬಣ್ಣಗಳು ನೋಟಕರ ಮನಸ್ಸನ್ನು ಸೆಳೆಯುತ್ತವೆ. ಇವುಗಳನ್ನು ನೋಡುತ್ತ ಮುಂದೆ ನಡೆದರೆ, ಅಲ್ಲಿ ಮತ್ತೊಂದು ದೊಡ್ಡ ಬಾಗಿಲು, ಅದರೊಳಗೆ ವಿಶಾಲವಾದ ಬೈಲು; ಅಲ್ಲಿಯೇ ಭವ್ಯವಾದ ಅರಮನೆ. ಅರಮನೆಯ ಎದುರು ದಿಕ್ಕಿಗೆ ಮತ್ತೊಂದು ಬೀದಿ ಹೋಗುವದು. ಆ ಬೀದಿಯಿಂದ ಬಂಡಿಗಳು-ಗಾಡಿಗಳು ಊರೊಳಗೆ ನಡೆದಿರುವವು.

ಈ ಬೀದಿಯಿಂದ ಮುಂದಕ್ಕೆ ಸಾಗಿದರೆ, ಕೆಲವು ಅಂತರದ ಮೇಲೆ ಅಗಲವೂ ಅಂದವೂ ಆದ ರಾಯಬೀದಿ ಬರುವದು. ಅಲ್ಲಿ ಒಳ್ಳೊಳ್ಳೆಯ ಸಿರಿವಂತ ವರ್ತಕರು ಇರುವ ಮನೆಗಳು ಕಾಣಿಸುವವು. ಕೆಲವು ಗುಡಿಗಳಿವೆ. ಮನೆಗಳ ಪಕ್ಕದಲ್ಲಿಯೇ ರತ್ನ, ಹವಳ, ಮಾಣಿಕ್ಯ, ಮುತ್ತು, ಬಂಗಾರ-ಬೆಳ್ಳಿ ಮುಂತಾದ ಬೆಲೆಯುಳ್ಳ ಸರಕುಗಳನ್ನು ಮಾರುವ ಚಿನಿವಾರ ಕಟ್ಟೆ; ಅಲ್ಲಿ ಅಂಗಡಿಗಳನ್ನು ಹಚ್ಚಿರುವರು. ಈ ನಗರಕ್ಕೆ ಪ್ರತಿಯೊಂದು ದೂರದೂರಿನ ಜನಾಂಗದ ವರ್ತಕರು ವ್ಯಾಪಾರಕ್ಕಾಗಿ ಬಂದಿರುವದನ್ನು ನಾವು ನೋಡಬಹುದು. ವಜ್ರ, ಹವಳಗಳ ವ್ಯಾಪಾರ ಬಹಳ ನಡೆಯುವದು. ಜವಳಿಯ ಅಂಗಡಿಗಳು ಅದೇ ಸಾಲಿನಲ್ಲಿ ಇರುವವು. ಈ ಪೇಟೆಯಲ್ಲಿ ಇಂತಹ

ಸಾಮಾನು ಸಿಗುವದಿಲ್ಲವೆಂದು ಹೇಳಲಿಕ್ಕಾಗದು. ದಿನಾಲು ಸಂಜೆಗೆ, ಮಾರಾಟಕ್ಕಾಗಿ ಕುದುರೆ, ಮುಂತಾದ ಉಪಯುಕ್ತ ಪ್ರಾಣಿಗಳಲ್ಲದೆ, ಲಿಂಬೆ ಹಣ್ಣು, ಕಂಚೀಕಾಯಿ, ಕಿತ್ತಳೀಹಣ್ಣು, ದ್ರಾಕ್ಷೆಹಣ್ಣು, ಮುಂತಾದ ಹಣ್ಣು ಹಂಪಲಗಳ ಸಂತೆ ನೆರೆದಿರುವದು. ಈ ಪೇಟೆಯ ಕೊನೆಯಲ್ಲಿ ಇನ್ನೊಂದು ಅಗಸೆ ಬಾಗಿಲು ಬರುವದು.

ಅದನ್ನು ದಾಟಿ ಮುಂದರಿದರೆ, ಆ ಬೀದಿಯಲ್ಲಿ ನಿಮಗೆ ನಾನಾತರದ ಕೈಗಾರಿಕೆಯ ಜನರ ಮನೆಗಳು ತೋರುವವು. ಅಲ್ಲಿ ಎರಡು ಚಿಕ್ಕ ದೇವಾಲಯಗಳಿರುವವು; ಆದರೂ ದೊಡ್ಡ ದೊಡ್ಡ ದೇವಾಲಯಗಳೆಂಬವು ಬಹುತರವಾಗಿ ಊರ ಹೊರಗೆ ಇರುವವು. ಬೀದಿಯ ಕಡೆಯ ಭಾಗದಲ್ಲಿ ಅರಬರ ದಂಡಾಳುಗಳ ಮನೆಗಳಿರುವವು.

ನಾನೊಂದು ಎತ್ತರವಾದ ದಿನ್ನೆಯನ್ನೇರಿ, ಊರು ಎಷ್ಟು ದೊಡ್ಡದಿರುವದೆಂಬದನ್ನು ನೋಡಿದಾಗ, ನನ್ನ ಕಣ್ಣಿಗೆ ನಗರದ ಎಲ್ಲ ಭಾಗವು ಗೋಚರಿಸಲಿಲ್ಲ; ಕಾಣಿಸಿದಷ್ಟು ಭಾಗವು ರೋಮ ಪಟ್ಟಣದಷ್ಟು ಸುಂದರವಾಗಿರುವಂತೆ ಎನಿಸಿತು. ನಗರದ ಹೊರಭಾಗದಲ್ಲಿ ಸರೋವರಗಳು,ಕೆರೆಗಳು, ಹಲವೆಡೆಯಲ್ಲಿ ಮಾವಿನ ತೋಪುಗಳು ಕಂಗೊಳಿಸುತ್ತಿರುವವು. ಅರಮನೆಯ ನೆರೆಯಲ್ಲಿಯೇ ತೆಂಗಿನ ಬನ, ಹಣ್ಣಿನ ತೋಟಗಳಿರುವವು. ನಗರದ ಜನರಿಗೆ ಬೇಕಾಗುವಷ್ಟು ನೀರು ಎರಡು ಕೆರೆಗಳಿಂದ ಒದಗುತ್ತದೆ. ಇಡಿಯ ನಗರವೇ ವಿಧವಿಧದ ಗಿಡಮರಗಳಲ್ಲಿ, ತೋಟಪಟ್ಟಿಗಳಲ್ಲಿ ಮುಚ್ಚಿರುವಂತೆ ಇದೆ.

ಜಗದಲ್ಲಿರುವ ಅತ್ಯಂತ ಹಿರಿದಾದ ಪಟ್ಟಣಗಳಲ್ಲಿ ಇದೊಂದು. ಊರೊಳಗಿನ ಜನರ ಲೆಕ್ಕಮಾಡಲಿಕ್ಕೆ ಬರುವಂತಿಲ್ಲ. ನಗರವೆಂಬುದು ಜನರಿಂದಲೂ ಆನೆಗಳಿಂದಲೂ ತುಂಬಿ ಕಿಕ್ಕಿರಿದಿದೆ. ಊರೊಳಗೆ ಅಕ್ಕಿ, ಗೋದಿ, ಜವೆಗೋದಿ, ಬೇಳೆ, ಕಡಲೆ, ಮುಂತಾದ ಕಾಳುಕಡಿಗಳ ದೊಡ್ಡ ದೊಡ್ಡ ಉಗ್ರಾಣಗಳಿದ್ದು ಕಾಳು-ಕಡಿ ಬಲು ಅಗ್ಗವಾಗಿವೆ. ಗೋದಿಯನ್ನು ಅರಬರ ಹೊರ್ತು ಇನ್ನಾರೂ ದಿನಾಲು ಉಣ್ಣುವದಿಲ್ಲ. ಬೀದಿಗಳಲ್ಲಿ-ಪೇಟೆಗಳಲ್ಲಿ ಸರಕು-ಸಾಮಾನುಗಳನ್ನು ಹೇರಿಕೊಂಡು ನೂರಾರು ಎತ್ತುಗಳು ಹೋಗ-ಬರುವ ಗದ್ದಲ ನಡೆದಿರುತ್ತದೆ. ಎಷ್ಟೋ ಬೀದಿಗಳಲ್ಲಿ ಜನರ ದಟ್ಟಣೆಯ ಮೂಲಕ ಹಾಯಲಿಕ್ಕೆ ದಾರಿ ಇರುವದಿಲ್ಲ.

ಅಬ್ದುರ ರಜಾಕ ಎಂಬ ಪ್ರವಾಸಿಯು ಬರೆಯುವದು—ವಿಜಯನಗರದಂತಹ ಸುಂದರ ವಿಶಾಲ ಪಟ್ಟಣವು ಈ ಪೃಥ್ವಿಯ ಮೇಲೆ ಇರುವದನ್ನು ನಾನು ನೋಡಿಲ್ಲ; ಕೇಳಿಲ್ಲ. ಇಲ್ಲಿಯ ರಾಯನ ಕೈಯಲ್ಲಿ ೩೦೦ ಬಂದರಗಳಿವೆ. ಮೂರು ತಿಂಗಳು ಒಂದೇಸವನೇ ಪಯಣ ಮಾಡಿದರೂ ಇವನ ರಾಜ್ಯವಿಸ್ತಾರ ಮುಗಿಯುವದಿಲ್ಲ. ಈತನಲ್ಲಿ ೧೧ ಲಕ್ಷ ಸೈನ್ಯಬಲವಿದೆ. ಇಂಥ ವೈಭವಸಂಪನ್ನ ಅರಸನನ್ನು ಕಾಣುವದೇ ಅಪರೂಪ. ಅರಮನೆಯ ಮುಂದೆ ಪಗಡಿಯ ಪಟ್ಟದಂತೆ ಎದುರು-ಬದುರು ನಾಲ್ಕು ದಿಕ್ಕಿಗೆ ಪೇಟೆಯ ಸಾಲು ಇರುವವು. ಉತ್ತರಕ್ಕೆ ಅರಸನ ಮನೆ ಇರುತ್ತದೆ. ಪೇಟೆಯಲ್ಲಿ ಎಲ್ಲಿ ನೋಡಿದರೂ ಗುಲಾಬಿಯ ಹೂಗಳು ರಾಶಿರಾಶಿಯಾಗಿ ಮಾರಾಟಕ್ಕಾಗಿ ಇಡಲ್ಪಟ್ಟಿರುವವು. ಇಲ್ಲಿಯ ಜನರಿಗೆ ಹೂವಿನ ಸೊಗಸು ವಿಶೇಷವಾಗಿದೆ.

---

## ೩೧

## ವಿಜಯನಗರ ರಾಯರ ಕಾಲದ

# ಮಹಾನವಮಿ ಉತ್ಸವ

[ ವಿಜಯನಗರ ರಾಯರ ಕಾಲದಲ್ಲಿ ಮಹಾನವಮಿಯ ಉತ್ಸವವು ಎಷ್ಟು ವಿಜೃಂಭಣೆಯಿಂದ ವಿಜಯನಗರದ ಅರಸರಿಂದ ನಡಿಸಲ್ಪಡುತ್ತಿತ್ತೆಂಬದನ್ನು ಪರದೇಶದ ಇತಿಹಾಸಕಾರರು ನೋಡಿ ಬರೆದಿಟ್ಟಿರುವರು. ಅವರಲ್ಲಿ ಅಬ್ದುರ ರಝಾಕ್ ಎಂಬ ಪ್ರವಾಸಿಯು ಬರೆದಿಟ್ಟ ವರ್ಣನೆಯನ್ನು ಕನ್ನಡಿಸಿ ಕೊಡಲಾಗಿದೆ. ]

ವಿಜಯನಗರದ ಅರಸನು ಮಹಾನವಮಿಯ ಉತ್ಸವದ ದೆಸೆಯಿಂದ ತನ್ನ ಸಾಮ್ರಾಜ್ಯದಲ್ಲಿಯ ಎಲ್ಲ ಸರದಾರರನ್ನೂ, ಸಾಮಂತರನ್ನೂ, ರಾಜಧಾನಿಗೆ ಕರೆಕಳಿಸುವನು. ಆ ಸಾಮಂತರು, ಸರದಾರರು ಮೂರು-ನಾಲ್ಕು ತಿಂಗಳಿಂದ ಪ್ರವಾಸಮಾಡುತ್ತ ವಿಜಯನಗರಕ್ಕೆ ಬಂದು ತಲ್ಪುವರು. ಅವರು ತಮ್ಮ ಸಂಗಡ ಸಮುದ್ರದ ತೆರೆಗಳಂತೆ ಹೊಯ್ದಾಡುವಂಥ ಮತ್ತು ಮೋಡಗಳಂತೆ ಗುಡುಗುವ ಸಾವಿರಾರು ಆನೆಗಳನ್ನು ತಮ್ಮ ಸಂಗಡ ತರು

ತ್ತಿದ್ದರು. ಆನೆಗಳ ಹಣೆ, ಸೊಂಡೆ, ಕಿವಿಗಳ ಮೇಲೆ ನಾನಾ ಬಗೆಯ ಬಣ್ಣಗಳಿಂದ ಚಿತ್ರಗಳನ್ನು ತೆಗೆದಿರುತ್ತಿದ್ದರು. ಅವುಗಳ ಮೇಲೆ ಮಾವುತರು ಕುಳಿತಿರುತ್ತಿದ್ದರು.

ಮಹಾನವಮಿಯ ಉತ್ಸವಕ್ಕಾಗಿಯೇ ಎಂದು ಅರಮನೆಯ ವಿಶಾಲವಾದ ಅಂಗಳಲ್ಲಿ ದೊಡ್ಡ ದೊಡ್ಡ ಮತ್ತು ಎತ್ತರವಾದ ಕಂಬಗಳದೊಂದು ಮಂಟಪ. ಮಂಟಪದ ಒಳ ಮೈಯನ್ನು ಕಿರಮಂಜಿ, ಹಸರು, ಹಾಗೂ ಬೇರೆ ಅಂದ-ಚಂದ ಬಣ್ಣದ ಬಟ್ಟೆಗಳಿಂದ ಬುಡದಿಂದ ತುದಿಯ ವರೆಗೆ ಹೊದಿಸಿದ್ದರು. ಹಂದರವು ಒಂಭತ್ತು ಅಂತಸ್ತುಗಳುಳ್ಳದ್ದು. ಅದನ್ನು ಬಗೆ ಬಗೆಯ ಸುಂದರವಾದ ಒಡವೆಗಳಿಂದ ಅಲಂಕರಿಸಿದ್ದರು. ಒಂಭತ್ತನೆಯ ಅಂತಸ್ತಿನಲ್ಲಿ ಅರಸನ ಸಿಂಹಾಸನವು ಇದ್ದಿತು. ಅಲ್ಲಲ್ಲಿ ಕಣ್ಣಿಗೆ ಮನೋಹರವಾಗಿ ಕಾಣುವಂಥ ಬಟ್ಟೆಗಳ ಪರದೆಗಳನ್ನು ಇಳಿಬಿಟ್ಟದ್ದರು. ಪರದೆಗಳ ಮೇಲೆ ವಿಧ ವಿಧದ ಕುಸುರಿನ ಮತ್ತು ಹೂಬಳ್ಳಿಗಳ ಕಸೂತಿಗಳನ್ನು ತೆಗೆದಿದ್ದರು.

ಅರಸನ ಸಿಂಹಾಸನವು ಬಹು ದೊಡ್ಡದು. ಅದು ಬಂಗಾರದಿಂದ ಮಾಡಲ್ಪಟ್ಟದ್ದು, ತರತರದ ಹೊಳೆಯುವ ರತ್ನಗಳನ್ನು ಅದರಲ್ಲಿ ಕೂಡ್ರಿಸಿದ್ದರು. ಶಿಲ್ಪಿಗರು ಅದರಲ್ಲಿ ಮಾಡಿದ ಕೈ ಕೆಲಸವನ್ನು ನೋಡಿದರಂತೂ ಜಗತ್ತಿನಲ್ಲಿ ಯಾವ ಅರಸರಲ್ಲಿ ಅಂತಹ ಸಿಂಹಾಸನ ಸಿಕ್ಕಲಾರದು. ಅದರ ಎರಡೂ ಮಗ್ಗಲಿಗೆ ಸಿಂಹಗಳ ಪ್ರತಿಮೆಗಳಿರುವವು. ಸಿಂಹಾಸನದ ಮೇಲುಗಡೆಯಲ್ಲಿ ಒಂದು ದೇವತಾ ಮೂರ್ತಿಯಿದೆ. ಅದು ಚಿನ್ನದ್ದಿದ್ದು, ಅದರ ಮೇಲೆ ಗುಲಾಬಿ ಹೂವಿನ ಸುಳಿಗಳನ್ನು ಕೆತ್ತಲಾಗಿದೆ.

ಅರಸನು ಬೆಳಿಗ್ಗೆ ಸ್ನಾನ ಮುಂತಾದವುಗಳನ್ನು ತೀರಿಸಿಕೊಂಡು ದೇವರ ಪೂಜೆ-ಪ್ರಾರ್ಥನೆಗಳನ್ನು ಮುಗಿಸಿಕೊಂಡು ಹೊರಗೆ ಬರುವನು. ಅವನ ಮುಮ್ಮಗ್ಗಲಿಗೆ ಒಂದು ಕಡೆ ಸಾಮಂತರೂ ಸರದಾರರೂ ಇನ್ನೊಂದು ಮಗ್ಗಲಿಗೆ ಪರದೆಯಲ್ಲಿ ನಾಯಕಸಾನಿಯರು ಕುಳಿತಿರುವರು. ಅರಸನ ಬೆನ್ನಿಂದೆ ಒಬ್ಬ ಬ್ರಾಹ್ಮಣನು ಗುಲಾಬಿಯ ಹೂವುಗಳ ಒಂದು ಬುಟ್ಟಿಯನ್ನು ತರುವನು. ಮುಂದೆಯೇ ಸಿಂಗರಿಸಲ್ಪಟ್ಟು ನಿಂತಿರುವ ಪಟ್ಟಿದಾನೆ, ಪಟ್ಟದ ಕುದುರೆಯಮೇಲೆ ಮೂರುಹಿಡಿ ಹೂಗಳನ್ನೆರಚಿ, ತಿರುಗಿ ಬಂದು ಸಿಂಹಾಸನಕ್ಕೆ ನಮಸ್ಕರಿಸಿ ಕುಳಿತುಕೊಳ್ಳುವನು. ಸಾಮಂತರು-

ಸರದಾರರು ಬಂದು ಅರಸನಿಗೆ ನಮಸ್ಕಾರಮಾಡಿ, ತಮ್ಮತಮ್ಮ ಕಾಣಿಕೆಗಳನ್ನೊಪ್ಪಿಸುವರು.

ಮತ್ತೆ, ಮಧ್ಯಾಹ್ನ ಮೂರುಗಂಟೆಗೆ ಉತ್ಸವದ ಕೆಲಸ ಪ್ರಾರಂಭವಾಗುವದು. ಅರಸನು ಬಂದು ಕುಳಿತ ಮೇಲೆ ಎಲ್ಲರೂ ಸಲಾಂ ಮಾಡುವರು. ಜಟ್ಟಿಗಳು, ನಾಯಕಸಾನಿಯರು ಅರಸನ ಎದುರಿನಲ್ಲಿಯೇ ಕುಳಿತು ಎಲೆಯಡಿಕೆ ಹಾಕಿಕೊಳ್ಳುತ್ತಿರುವರು. ಇದರ ಹೊರ್ತು ಇನ್ನಾರಿಗೂ ಎಲೆಯಡಿಕೆ ಹಾಕಿಕೊಳ್ಳಲು ಹಕ್ಕು ಇಲ್ಲ.

ಅರಸನ ಮೈಯಲ್ಲಿ ಬಿಳಿಯ ಬಟ್ಟೆಗಳಿದ್ದು, ಅವುಗಳ ಮೇಲೆ ಜರದ ಹೂಬಳ್ಳಿಗಳ ಕಸೂತಿಯ ಕೆಲಸ ಮಾಡಲ್ಪಟ್ಟಿದೆ. ಕೊರಳಲ್ಲಿ ಮುತ್ತು-ರತ್ನಗಳ ಸರಗಳು. ಸುತ್ತುಮುತ್ತಲೂ ಸೇವಕರ ತಂಡವು ನಿಂತಿರುವದು. ಒಬ್ಬರ ಕೈಯಲ್ಲಿ ಎಲೆಯಡಿಕೆಯ ಡಬ್ಬಿ, ಇನ್ನೊಬ್ಬರ ಕೈಯಲ್ಲಿ ಅರಸನ ಖಡ್ಗ, ಮತ್ತೊಬ್ಬನ ಕೈಯಲ್ಲಿ ಚೌರಿ-ಹೀಗೆ ಒಬ್ಬೊಬ್ಬರ ಕೈಯಲ್ಲಿ ಒಂದೊಂದು.

ಮೊದಲು ದಂಡನಾಯಕರು ತಮ್ಮ ಕೈಯಲ್ಲಿ ಢಾಲು-ಕತ್ತಿಗಳನ್ನು ತೆಗೆದುಕೊಂಡು ಬರುವರು; ಅನಂತರ, ಬಿಲ್ಲುಗಾರರು ಬರುವರು. ಜಟ್ಟಿಗಳ ಕುಸ್ತಿಯ ಆಟ ನಡೆಯುವದು. ಜಟ್ಟಿಗಳು ಜೀವದ ಪರವೆ ಇಲ್ಲದೆ, ಒಬ್ಬರನ್ನೊಬ್ಬರು ಗಾಯಗೊಳಿಸುವರು. ಅಷ್ಟೊತ್ತಿಗೆ ಸಂಜೆಯಾಗುವದು.

ಕತ್ತಲೆಯಾಗಹತ್ತಿದೊಡನೆ ಆಳುಗಳು ದೀವಟಿಗೆಗಳನ್ನು ಹಚ್ಚುವರು. ಅರಿವೆಯ ಉಂಡಿಗಳನ್ನು ಎಣ್ಣೆಯಲ್ಲಿ ಅದ್ದಿ ಬೆಂಕೆಹಚ್ಚಿ, ಕೋಟೆಯ ಗೋಡೆಗಳ ಮೇಲೆ ಇಡುವರು. ಇವುಗಳ ಬೆಳಕಿನಿಂದ ರಾತ್ರಿ ಎಂಬುದು ಹಗಲಾಗಿ ಕಾಣುವದು. ಆಗ ಹಲವು ಬಗೆಯ ಆಟ-ನೋಟಗಳು ನಡೆಯುವವು. ಆಮೇಲೆ ನಾನಾತರದ ಮದ್ದು ಸುಡುವ ಕೆಲಸ ಸಾಗುವದು.

ಇಷ್ಟಾದನಂತರ, ದಳವಾಯಿಗಳು ಅಲಂಕರಿಸಿದ ತಮ್ಮ ರಥಗಳನ್ನು, ದಂಡನಾಯಕರು ಸಿಂಗರಿಸಿದ ತಮ್ಮ ಕುದುರೆಗಳನ್ನು, ಅರಸನಿಗೆ ತೋರಿಸಿ ಅವುಗಳನ್ನು ಪಟ್ಟದಾನೆಯ ಮಗ್ಗುಲಲ್ಲಿ ಸಾಲಾಗಿ ನಿಲ್ಲಿಸುವರು. ಆಮೇಲೆ ಆನೆಗಳು ಬರುವವು. ಅವು ಅರಸನಿಗೆ ನಮಸ್ಕಾರಮಾಡಿ ತೆರಳುವವು.

ನವರಾತ್ರಿಯ ಒಂಭತ್ತು ದಿನವೂ ಈ ಮೇರೆಗೆ ಉತ್ಸವಗಳು ನಡೆಯುವವು. ಮಹಾನವಮಿಯ ದಿನ ಅರಸನು ತನ್ನ ದಂಡು-ದಳದ ಸಿರೀಕ್ಷಣೆ ಮಾಡುವನು. ವರ್ಷದ ವಾಡಿಕೆಯಂತೆ, ರಾಜಧಾನಿಯಿಂದ ಸ್ವಲ್ಪ ಅಂತರದಲ್ಲಿ ರಾಯನು ತನ್ನ ರಾಹುಟಿಯನ್ನು ಕಟ್ಟಲಿಕ್ಕೆ ಆಜ್ಞಾಪಿಸುವನು. ಅಲ್ಲಿ ಮೊದಲು ಒಂದು ದೇವತೆಯನ್ನು ತಂದು ಸ್ಥಾಪಿಸುವರು. ಈ ಶಿಬಿರದಿಂದ ಅರಮನೆಯವರೆಗೆ ದಂಡನಾಯಕರು ತಮ್ಮತಮ್ಮ ದಂಡಿನವರನ್ನು ಒಬ್ಬರ ಹಿಂದೊಬ್ಬರನ್ನು ಸಾಲಾಗಿ ನಿಲ್ಲಿಸುವರು. ಹೀಗೆ ನೋಡಿದಲ್ಲೆಲ್ಲ ದಂಡಾಳುಗಳೇ ಕಾಣಿಸುತ್ತಿದ್ದರು. ಇದು ಬೈಲು, ಅದು ತೆಗ್ಗು, ಅದು ದಿನ್ನೆ ಎಂಬುದರ ಗುರುತು ಕೂಡ ಹತ್ತದಂತೆ ಪ್ರದೇಶವು ಮಹಾಸಾಗರದಂತೆ ಕಂಡು ಜನರಿಂದ ತುಂಬಿರುತ್ತಿತ್ತು. ಮೊತ್ತಮೊದಲು ಎಲ್ಲಕ್ಕೂ ಮುಂದೆ ಕಾಲಾಳುಗಳ ಸಾಲು ಅವರ ಹಿಂದೆ ಕುದುರೆ ಸವಾರರ ಪಂಕ್ತಿ, ಅವರ ಹಿಂದೆ ಆನೆಗಳ ಸಾಲು, ಈ ಸೇನಾವ್ಯೂಹದೊಳಗೆ ಪ್ರತಿಯೊಬ್ಬ ನಾಯಕನು ತನ್ನ ದಂಡಿನ ಹತ್ತಿರವೇ ಇರಬೇಕಾಗುತ್ತಿತ್ತು. ಕುದುರೆಯ ಸವಾರರ ಮುಂದಲೆಯಲ್ಲಿ ಕೆಲವು ಚೊಕ್ಕ ಬೆಳ್ಳಿಯ, ಕೆಲವು ಬೆಳ್ಳಿಯ ಮುಲಾಮು ಮಾಡಿದ ಪಟ್ಟಿಗಳಿರುತ್ತಿದ್ದವು. ಅವುಗಳಿಗೆ ಬಗೆಬಗೆಯ ಬಣ್ಣದ ರೇಶ್ಮೆ ಹುರಿಮಾಡಿದ ಕರಿಗಳಿರುತ್ತಿದ್ದವು. ಕೆಲವರು ತಮ್ಮ ಮುಂದಲೆಗೆ ಕಟ್ಟಿರುವ ಪಟ್ಟಿಯ ಸುತ್ತಲೂ ಬೆಲೆಯುಳ್ಳ ಹರಳು-ಕಲ್ಲುಗಳನ್ನು ಕೂಡ್ರಿಸಿರುತ್ತಿದ್ದರು. ಈ ಸವಾರರ ಕುದುರೆಗಳ ಮುಂದಲೆಯ ಪಟ್ಟಿಯ ಮೇಲೆ ಹಾವು, ಗರುಡ, ಹುಲಿ ಮುಂತಾದ ಪ್ರಾಣಿಗಳ ಗೊಂಬೆಗಳಿರುತ್ತಿದ್ದವು.

ನಾನು ಮೊದಲು ಹೇಳಿರುವಂತೆ, ಅರಸನು ಬಿಳಿಯ ರೇಶ್ಮೆಯ ಬಟ್ಟೆಗಳನ್ನು ಹಾಕಿಕೊಂಡು ಕುದುರೆಯನ್ನೇರಿ ಅರಮನೆಯಿಂದ ಹೊರಡುವನು. ಅವನ ಮೇಲೆ ಇಬ್ಬರು ಛತ್ರಗಳನ್ನು ಹಿಡಿದಿರುವರು. ಅರಸನ ಗುಂಟೆ ಬದಿಯಲ್ಲಿಯೇ ಕುಲದೇವತೆಯ ಮೂರ್ತಿಯ ಪಲ್ಲಕ್ಕಿಯನ್ನು ಹದಿನಾರು ಜನರು ಹೊತ್ತುಕೊಂಡು ನಡೆದಿರುವರು. ಅರಸನ ಮುಂದೆ ಇಪ್ಪತ್ತು ಸಿಂಗರಿಸಲ್ಪಟ್ಟ ಕುದುರೆಗಳು, ಆನೆಗಳು ನಡೆದಿರುವವು. ಇವುಗಳ ಮುಂದೆ ಸೈನಿಕರ ತಂಡಗಳು, ಅಲ್ಲದೆ ಲಕ್ಷಗಟ್ಟಲೆ ನೋಟಕರು, ಇವೆಲ್ಲವುಗಳಿಂದ ಇಡಿಯ ಜಗವೇ ಅಲ್ಲಿ ಒಟ್ಟುಗೂಡಿರುವಂತೆ ಕಾಣಿಸುತ್ತಿದ್ದಿತು.

ಈ ಮೆರವಣಿಗೆಯು ಹಿಂದೆ ಹೇಳಿದ ಶಿಬಿರದ ವರೆಗೆ ಹೋದ ಮೇಲೆ, ಅಲ್ಲಿಳಿದು ಅರಸನು ಪೂಜೆ-ಪ್ರಾರ್ಥನಾದಿಗಳನ್ನು ನಡೆಯಿಸುವನು. ಅಲ್ಲಿಂದ ಮುಂದೆ ಅದೇ ಮೆರವಣಿಗೆಯಿಂದ ಅರಮನೆಗೆ ತಿರುಗುವನು. ಅರಮನೆಗೆ ಬಂದು ತಲ್ಪಿದನಂತರ ಎಲ್ಲ ದಂಡಿನವರು ತಮ್ಮ ತಮ್ಮ ಬೀಡುಗಳಿಗೆ ಹೋಗುವರು.

ನವರಾತ್ರಿಯ ಉತ್ಸವ ಮುಗಿದನಂತರ ಅರಸನು ತನ್ನ ಸಾಮಂತರನ್ನು, ಸರದಾರರನ್ನು, ದಂಡನಾಯಕರನ್ನು, ಸಿಪಾಯರನ್ನು, ಆಟಗಾರರನ್ನು, ಹಿಂಡುಗಾರರನ್ನು ಓಲಗಕ್ಕೆ ಕರೆಯಿಸಿ, ಅವರವರ ಯೋಗ್ಯತೆಯಂತೆ, ಅವರವರಿಗೆ ಉಡುಗರೆಗಳನ್ನೂ ಪದಕಗಳನ್ನೂ ಕಾಣಿಕೆಯಾಗಿ ಕೊಟ್ಟು ಮರ್ಯಾದೆ ಮಾಡುವನು.

---

## ೩೨

# ದೇವಾಲಯಗಳೇ-ವಿದ್ಯಾಲಯಗಳು

[ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ, ಬ್ರಾಹ್ಮಣರ ಅಗ್ರಹಾರ, ವೀರಶೈವರ ಮಠ ಮೊದಲಾದ ಸ್ಥಳಗಳಲ್ಲಿ ಶಾಲೆ-ವಿದ್ಯಾಲಯಗಳಿರುತ್ತಿದ್ದವು. ಅರಸರಾಗಲಿ, ದಂಡನಾಯಕರಾಗಲಿ ಅವುಗಳಿಗೆ ಭೂಮಿಯನ್ನು ಕಾಣಿಕೆಯಾಗಿ ಕೊಡುತ್ತಿದ್ದರು. ಈ ಸಂಸ್ಥೆಗಳು ಎಷ್ಟು ಜನೋಪಯೋಗಿಯಾಗಿದ್ದವೆಂಬುದು ಕೆಳಗಿನ ಸಂಗತಿಯಿಂದ ಸ್ಪಷ್ಟವಾಗುವದು. ಈ ವಿಷಯವನ್ನು 'ಎಪಿಗ್ರಾಫಿಕಾ ಕರ್ನಾಟಕ'ದ ಪುಸ್ತಕಗಳಿಂದ ಸಂಗ್ರಹಿಸಲಾಗಿದೆ ]

ಕರ್ನಾಟಕದಲ್ಲಿ ಇಟಗಿ, ಕುಪ್ಪತ್ತೂರು, ಹರಿಹರ, ಬಳ್ಳಿಗಾವಿ, ಸಾಲೋಟಗಿ, ಕಳಸ, ಐಹೊಳೆ ಅಲ್ಲದೆ ಇನ್ನೆಷ್ಟೋ ಊರುಗಳಲ್ಲಿ ವಿದ್ಯಾಲಯಗಳಿದ್ದವೆಂದು ತಿಳಿಯುತ್ತದೆ. ರಾಷ್ಟ್ರಕೂಟ ಕೃಷ್ಣರಾಜನ ಕಾಲಕ್ಕೆ ಸಾಲೋಟಗಿ ಎಂಬೂರಲ್ಲಿ ಒಂದು ವಿದ್ಯಾಲಯವನ್ನು ಗ್ರಾಮಪತಿ ಚಕ್ರಾಯುಧನೆಂಬುವನು ಸ್ಥಾಪಿಸಿದ್ದನು. ಕೃಷ್ಣರಾಜನ ಮಂತ್ರಿಯಾದ ನಾರಾಯಣ ಎಂಬುವನು ವಿದ್ಯಾರ್ಥಿಗಳ ಹೊಟ್ಟೆ-ಬಟ್ಟೆಗೆ ಭೂಮಿಗಳನ್ನು ಕೊಟ್ಟಿದ್ದನು; ಅಲ್ಲದೆ ಊರೊಳಗಿನ ಜನರು ಮದುವೆ ಮುಂಜಿಗಳಲ್ಲಿ ಆ

ವಿದ್ಯಾಲಯಕ್ಕೆ ಹಣ ಸಹಾಯ ಮಾಡಬೇಕೆಂದು ಗೊತ್ತುಮಾಡಿದ್ದನು. ಕಲಿಸುವ ಅಧ್ಯಾಪಕರಿಗೆ ಇರಲಿಕ್ಕೆ ಮನೆ, ಉಪಜೀವನಕ್ಕೆ ಹೊಲಗಳನ್ನು ಕೊಟ್ಟಿದ್ದನು.

೬ನೆಯ ವಿಕ್ರಮಾದಿತ್ಯನ ದಂಡನಾಯಕನಾದ ಮಹಾದೇವನು ಇಟಗಿ ಯವನು; ಆದುದರಿಂದ ತನ್ನ ಹುಟ್ಟೂರೆಂದು ಅಲ್ಲಿ ತಾಯಿಯ ನೆನಪಿಗಾಗಿ ಚಂದಲೇಶ್ವರನ ಗುಡಿಯನ್ನು ಕಟ್ಟಿಸಿ, ಅದರೊಳಗೆ ಒಂದು ಮಠವನ್ನು ಸ್ಥಾಪಿಸಿದ್ದನು. ದೇವಾಲಯದ ಪೂಜೆ, ನೈವೇದ್ಯಗಳಿಗಾಗಿಯೂ ಭೂಮಿ ಗಳನ್ನು ದಾನ ಕೊಟ್ಟನು. ಪೂಜಾರಿಗಳಿಗೆ ಇರಲಿಕ್ಕೆ ಮನೆಗಳನ್ನು ಕಟ್ಟಿಸಿ ದನು. ನಂದಾದೀವಿಗೆಗಾಗಿ ಎರಡು ಎಣ್ಣೆಯ ಗಾಣಗಳನ್ನು, ಒಂದು ತೋಟ ವನ್ನು ಕೊಟ್ಟನು. ವೇದಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗಾಗಿ ಒಂದೊಂದು ಖಂಡುಗದಂತೆ ಕಾಳು ಸಿಗಬೇಕೆಂದು ನೂರಿಪ್ಪತ್ತು ಗದ್ಯಾಣ ಗಳನ್ನು ಮಹಾಜನರಲ್ಲಿ ಇಟ್ಟನು.

ಕ್ರಿ. ಶ. ೧೧೫೧ರಲ್ಲಿ ಕೇಶವ ದಂಡನಾಯಕ ಎಂಬುವನು ತಾಳಗುಂದದ ಪ್ರಣವೇಶ್ವರ ದೇವಸ್ಥಾನಕ್ಕೆ ಕೆಲವು ಭೂಮಿಗಳನ್ನು ಕೊಟ್ಟನು. ಈ ಭೂಮಿ ಗಳನ್ನು ದೇವಸ್ಥಾನದ ಪರಿಚಾರಕರಿಗೂ ಪೂಜೆಯ ಖರ್ಚಿಗಾಗಿಯೂ, ಆರು ಜನ ಪಂಡಿತರ ಉಪಜೀವನಕ್ಕಾಗಿಯೂ ಉಪಯೋಗಿಸುತ್ತಿದ್ದರು. ಈ ಪಂಡಿತರಲ್ಲಿ ಕೆಲವರು ವೇದ-ಶಾಸ್ತ್ರ ಅಭ್ಯಾಸ ಹೇಳುತ್ತಿದ್ದರಲ್ಲದೆ, ಕೆಲವರು ಕನ್ನಡ ಕಲಿಸುವವರೂ ಇದ್ದರು. ಒಂದೊಂದು ವಿಷಯಗಳನ್ನು ಎಂಟೆಂಟು ಮಂದಿ ವಿದ್ಯಾರ್ಥಿಗಳಂತೆ, ೪೮ ಮಂದಿ ಓದುತ್ತಿದ್ದರು.

ಕ್ರಿ. ಶ. ೧೦೫೮ರಲ್ಲಿ ಚಾಲುಕ್ಯರಾಜನಾದ ತ್ರೈಲೋಕ್ಯಮಲ್ಲನ ಆಳಿಕೆ ಯಲ್ಲಿ ದಂಡನಾಯಕ ಮಧುಸೂದನನು ನಾಗಾಂವಿಯಲ್ಲಿ (ಮಳಖೇಡದ ಹತ್ತಿರ) ತ್ರೈಪುರುಷ, ಮಧುಸೂದನ, ರಾಮೇಶ್ವರ ಎಂಬ ದೇವಸ್ಥಾನಗಳನ್ನು ಕಟ್ಟಿಸಿ, ಒಂದು ಪಾಠಶಾಲೆಯನ್ನು ಸ್ಥಾಪಿಸಿದನು. ಮತ್ತು ಅದರಲ್ಲಿ ೨೦೦ ವಿದ್ಯಾರ್ಥಿಗಳು ವೇದವನ್ನು ಕಲಿಯುವಂತೆಯೂ, ೫೨ ವಿದ್ಯಾರ್ಥಿಗಳು ಶಾಸ್ತ್ರ ವನ್ನು ಕಲಿಯುವಂತೆಯೂ, ೬ ಮಂದಿ ಉಪಾಧ್ಯಯರುಗಳನ್ನೂ ೬ ಜನ ಸರಸ್ವತೀ ಭಾಂಡಾರಿಕರನ್ನೂ (ಪುಸ್ತಕಾಲಯದ ವ್ಯವಸ್ಥಾಪಕರನ್ನೂ) ಇಟ್ಟು, ಇವೆಲ್ಲಕ್ಕೂ ತಕ್ಕಷ್ಟು ಭೂಮಿಯನ್ನು ಕೊಟ್ಟನೆಂದು ತಿಳಿಯುತ್ತದೆ.

ಬಳ್ಳಿಗಾವಿಯು ಮೈಸೂರ ಸಂಸ್ಥಾನದ ಶಿವಮೊಗ್ಗ ಜಿಲ್ಹೆಯಲ್ಲಿರುವ ಶಿಕಾರಿಪುರ ತಾಲೂಕಿನಲ್ಲಿದೆ. ಒಂದು ಕಾಲಕ್ಕೆ ಅಂದರೆ ೧೨ನೆಯ ಶತಮಾನದಲ್ಲಿ ಅದು 'ಸಜ್ಜನನಿಧಿ, ಪಟ್ಟಣಂಗಳ ತವರ್ಮನೆ, ಸಾರಮೆನಿಪ್ಪಕೀರ್ತಿ ತದ್ವನನಿಧಿಮೇರೆಯಾಗೆ' ಇದ್ದಿತೆಂದು ಶಿಲಾಶಾಸನಗಳಿಂದ ತಿಳಿಯುತ್ತದೆ. ಅಲ್ಲಿ ಆಗ ಮೂರು ಪುರಗಳು, ಏಳು ಬ್ರಹ್ಮಪುರಿಗಳು, ಐದು ಮೂಲ ಮಠಗಳು; ಇವಲ್ಲದೆ ಕೇದಾರೇಶ್ವರ, ಭೇರುಂಡೇಶ್ವರ, ಅಗ್ನೀಶ್ವರ, ಕುಸುಮೇಶ್ವರ, ಕೇಶವ, ನರಸಿಂಹ ಮುಂತಾದ ದಿವ್ಯವಾದ ದೇವಾಲಯಗಳಿದ್ದುವು. ಮಠಗಳಲ್ಲಿಯೂ ದೇವಾಲಯಗಳಲ್ಲಿಯೂ ವೇದಾಭ್ಯಾಸ ನಡೆಯುತ್ತಿತ್ತು. ಕೋಡಿಯಮಠವೆಂಬುದು ಬಳ್ಳಿಗಾವಿಯ ದಕ್ಷಿಣಕ್ಕೆ ತಾವರಗೆರೆಯ ಹತ್ತರ ಇತ್ತು. ಈ ಮಠದಲ್ಲಿ ಕಾಳಾಮುಖಮತದ ರುದ್ರಶಕ್ತಿ, ಕ್ರಿಯಾಶಕ್ತಿ, ವಾಮಶಕ್ತಿ ಎಂಬ ಹಲವು ಜನ ಘನಪಂಡಿತರು, ಯೋಗಿಗಳು ಅಧಿಪತಿಗಳಾಗಿದ್ದರು. ಅವರಿಗೆ ರಾಜಗುರು ಎಂಬ ಬಿರುದಿತ್ತು. ಅವರು ಹೊಯ್ಸಳ, ವಿಜಯನಗರ ಅರಸರಿಗೆ ಗುರುಗಳಾಗಿದ್ದರು. ಆ ಮಠದಲ್ಲಿ ವೇದ, ಶಾಸ್ತ್ರಗಳ ಅಭ್ಯಾಸ ನಡೆಯುತ್ತಿತ್ತು.

ಮೇಲಾಗಿ, ಆ ಮಠವು ಕುರುಡ, ಕುಂಟ, ಕಿವುಡ, ದೀನ, ಬಾರಿಸುವವರು, ಕೊಳಲೂದುವವರಿಗೂ, ಕೈಕಾಲು ಅದುವಾದವರಿಗೂ, ಏಕದಂಡಿ, ತ್ರಿದಂಡಿ, ಹಂಸ, ಪರಮಹಂಸ ಮೊದಲಾದ ಸನ್ಯಾಸಿಗಳಿಗೂ, ನಾನಾದೇಶದಿಂದ ಬರುವ ಭಿಕ್ಷುಕರಿಗೂ ಅನ್ನದಾನದ ಸ್ಥಾನವೂ ರೋಗದಿಂದ ಪೀಡಿತರಾದವರಿಗೆ ಆಸ್ಪತ್ರಿಯೂ, ಎಲ್ಲ ಪ್ರಾಣಿಗಳಿಗೆ ಅಭಯ ಕೊಡುವ ಸ್ಥಳವೂ ಆಗಿದ್ದಿತು. ತತ್ಕಾಲೀನ ರಾಜರು ಇಂತಹ ಮಠ-ದೇವಾಲಯಗಳಿಗೆ ಭೂಮಿದಾನ ಮಾಡುತ್ತಿದ್ದರು. ಅದರಿಂದಲೇ ಮಠ-ದೇವಾಲಯಗಳು ನಡೆಯುತ್ತಿದ್ದವು.

## ೩೩

## ದಾಸವರ್ಯರಾದ

# ಶ್ರೀ ಪುರಂದರದಾಸರು

( ಕ್ರಿ. ಶ. ೧೬ನೆಯ ಶತಮಾನ )

[ ಕರ್ನಾಟಕದ ಜನಜೀವನವನ್ನು ಬಹುಮಟ್ಟಿಗೆ ಪವಿತ್ರಗೊಳಿಸಿದ ಕೆಲವು ಪ್ರಮುಖ ಸತ್ಪುರುಷರಲ್ಲಿ ಪುರಂದರದಾಸರೊಬ್ಬರು. ಇವರು ಮಾಡಿದ ಹಲವು ಹಾಡುಗಳು ಮುದ್ರಿತವಾಗಿವೆ. ಜನರ ಬಾಯಲ್ಲಿವೆ. ಎಲ್ಲ ಜಾತಿಯ ಜನರೂ ಇವರ ಹಾಡುಗಳನ್ನು ಹಾಡಿ ಹಿರಿಹಿರಿ ಹಿಗ್ಗುವರು. ಈ ಚರಿತ್ರೆಯನ್ನು ಶ್ರೀ. ಬೆಲೂರ ಕೇಶವದಾಸರ ಭಕ್ತ-ವಿಜಯದಿಂದ ಸಂಗ್ರಹಿಸಲಾಗಿದೆ. ]

ಪುಣೆಯ ಹತ್ತರ ಪುರಂದರಗಡ ಎಂಬುವದೊಂದು ದುರ್ಗವಿದೆ. ಈ ಪುರಂದರಗಡವೇ ನಮ್ಮ ಪುರಂದರ ದಾಸರ ಹುಟ್ಟೂರು. ಅಲ್ಲಿ ವರದಪ್ಪ ನಾಯಕ ಎಂಬ ಹೆಸರಿನ ಚಿನವಾರನಿದ್ದನು. ಅವನ ಹೊಟ್ಟೆಯಲ್ಲಿಯೇ ಪುರಂದರ ದಾಸರು ಹುಟ್ಟಿದರು. ದಾಸರ ಮೊದಲಿನ ಹೆಸರು ಶ್ರೀನಿವಾಸ. ನಾಯಕರು ದೊಡ್ಡ ಸಿರಿವಂತರಾದುದರಿಂದ ಶ್ರೀನಿವಾಸನಿಗೆ ಆ ಕಾಲಕ್ಕೆ ಎಲ್ಲರೂ ಕಲಿಸುವಂತೆ ಸಂಸ್ಕೃತ ಅಭ್ಯಾಸಮಾಡಿಸಿದನು. ಮನೆಯ ಮಾತಂತೂ ಕನ್ನಡವೇ ಆಗಿತ್ತು. ಆಗ ಸಂಸ್ಕೃತವಲ್ಲದೆ ಬೇರೆ ಅಭ್ಯಾಸಕ್ಕೆ ಅನುಕೂಲವಿರಲಿಲ್ಲ; ಆದುದರಿಂದ ವರದಪ್ಪನಾಯಕನು ಮಗನಿಗೆ ಊಟವಾದ ಮೇಲೆ ತನ್ನ ಮನೆತನದ ಉದ್ಯೋಗವಾದ ಚಿನವಾರಿಕೆಯನ್ನು ಕಲಿಸುತ್ತಿದ್ದನು. ತಂದೆಯ ಕೈಯಲ್ಲಿ ನುರಿತು, ಆಗಾಗ ಭಂಗಾರ, ಮುತ್ತು-ರತ್ನ ಮುಂತಾದವುಗಳ ವ್ಯವಸಾಯವನ್ನು ನೋಡಿ ನೋಡಿ, ಶ್ರೀನಿವಾಸನಿಗೂ ಚಿನವಾರಿಕೆಯ ಕಲೆಯು ಮನದಟ್ಟಾಯಿತು ಮಗನು ವಯಸ್ಸಿಗೆ ಬಂದ ನಂತರ ವರದಪ್ಪನಾಯಕನು ಮದುವೆ ಮಾಡಿದನು.

ವರದಪ್ಪನಾಯಕನು ಕಾಸಿಗೆ ಕಾಸು ಗಂಟು ಹಾಕುತ್ತಲೆ ಲಕ್ಷಾಧೀಶನಾಗಿದ್ದನು. ತಂದೆ ತೀರಿಕೊಂಡನಂತರ ಸೀನಪ್ಪನಾಯಕನು ತಂದೆಯ ಉದ್ಯೋಗವನ್ನೇ ಮುಂದೆ ನಡಿಸಿ, ವ್ಯಾಪಾರದಲ್ಲಿ ಬಹಳ ಹಣ ಗಳಿಸಿದನು. ದೊಡ್ಡ ದೊಡ್ಡ ಊರುಗಳಲ್ಲಿಯ ವರ್ತಕರೊಡನೆ ಅವನ ವ್ಯಾಪಾರ ಬೆಳೆಯಿತು. ಸೀನಪ್ಪನಾಯಕನು ವಯಸ್ಸಿನಲ್ಲಿ ಮುಂದರಿದಂತೆ, ಅವನಲ್ಲಿ

ದುಡ್ಡಿನ ಲೋಭವೂ ಬೆಳೆಯತೊಡಗಿತು. ಯಾರಾದರೂ ದುಡ್ಡು ಬೇಡಲಿಕ್ಕೆ ಬಂದರೆ ಅವನ ಮನಸಿನ ತಾಳವೇ ತಪ್ಪುತ್ತಿತ್ತು.

ಸೀನಪ್ಪನಾಯಕನು ಭಿಕ್ಷುಕರಿಗೆ ಮೊದಲೇ ಅನುವು ಕೊಡುತ್ತಿರಲಿಲ್ಲ. ತನ್ನ ಹುಬ್ಬುಗಂಟಿನಿಂದಲೇ ಅವರನ್ನು ದೂಡಿ ಬಿಡುತ್ತಿದ್ದನು. ಇಷ್ಟಿದ್ದರೂ ಒಮ್ಮೆ ಒಬ್ಬ ಬಡ ಬ್ರಾಹ್ಮಣನು ಸೀನಪ್ಪನಾಯಕನ ಅಂಗಡಿಗೆ ಏನಾದರೂ ದಾನ ಕೇಳಲಿಕ್ಕೆಂದು ಬಂದನು. ಅವನು ಮುಪ್ಪಿನವನು. 'ಮಗನು ದೊಡ್ಡವನಾದನು; ಆದುದರಿಂದ ನೀವೇ ಮಗನ ಮುಂಜಿ ಮಾಡಿ ಪುಣ್ಯಕಟ್ಟಿಕೊಳ್ಳಬೇಕೆಂದು' ಸೀನಪ್ಪನಾಯಕನಿಗೆ ಬಹು ಬಗೆಯಿಂದ ಹೇಳಿಕೊಂಡನು. ಏನೋ, ಇಂದಿಲ್ಲ ನಾಳೆಯಾದರೂ ತನ್ನ ಕರುಳು ಕರಗಿಸುವ ನುಡಿಗಳಿಂದ ನಾಯಕನ ಮನಸು ಮೆತ್ತಗಾಗಬಹುದೆಂದು ಬಡ ಬ್ರಾಹ್ಮಣನು ನಾಲ್ಕೈದು ದಿನ ಒಂದೇಸವನೆ ಎಡತಾಕಿದನು. ಅವನನ್ನು ಸೇವಕರಿಂದ ಹೊರಗೆ ಹಾಕಿಸಲೂ ಹಿಂಜರಿಯಲಿಲ್ಲ. ಆಗ, ಬ್ರಾಹ್ಮಣನು ಕನಿಕರದಿಂದ ಎಷ್ಟು ಮೊರೆಯಿಟ್ಟರೂ ಅವನಿಗೆ ದಯ ಹುಟ್ಟಲಿಲ್ಲ; ಆದರೂ ಅವನ ಮರುಗನ್ನು ಕಂಡು ಸೀನಪ್ಪನಾಯಕನು ಅದೇಕೋ ಬಲು ಸಿಟ್ಟಿನಿಂದ ಖೊಟ್ಟಿ ದುಡ್ಡು-ಪೈಗಳ ಚೀಲವನ್ನೇ ಅವನ ಮುಂದೆ ಬಿಸುಟಿ, ಇದರೊಳಗೆ ಎರಡು ದುಡ್ಡುಗಳನ್ನು ಮಾತ್ರ ನೀವು ಆರಿಸಿಕೊಂಡು ನಡೆಯಿರಿ ಎಂದು ಜಬರಿಸಿದನು. ಬ್ರಾಹ್ಮಣನು ಅತ್ತ ನೋಡದೆ ನಡೆದನು.

ಬಾಹ್ಮಣನ ಜೀವವು ಬಹು ಕಲಿವಿಲಿಗೊಂಡಿತು. ಇನ್ನೇನು ಮಾಡಬೇಕೆಂದು ಯೋಚಿಸುತ್ತಿರುವಾಗ 'ದಾರಿಯಲ್ಲಿರುವ ಸೀನಪ್ಪ ನಾಯಕನ ಮನೆಗೆ ಹೋಗಿ, ಅವನ ಹೆಂಡತಿಯ ಮುಂದಾದರೂ ಬಂದ ಸಂಕಟ ತೋಡಿಕೊಳ್ಳಬೇಕು' ಎಂದು ಮನಸಿನಲ್ಲಿ ಹೊಳೆಯಿತು. ನಾಯಕನು ಮೆಲ್ಲಗೆ ಮನೆಯಲ್ಲಿ ಹೊಕ್ಕನು.

ಸೀನಪ್ಪನಾಯಕನ ಹೆಂಡತಿಯ ಹೆಸರು ಸರಸ್ವತೀಬಾಯಿ. ಆಕೆ ಮನೆಗೆಲಸದಲ್ಲಿದ್ದಳು. 'ಅಮ್ಮಾ, ಅಮ್ಮಾ, ಮನೆಯಲ್ಲಿ ಯಾರಿದ್ದೀರಿ' ಎಂದು ಕೇಳುತ್ತ ಒಳಕ್ಕೆ ಬ್ರಾಹ್ಮಣನು ನಡೆದನು. 'ಯಾರು? ಯಾರು ಬೇಕು?' ಎಂದು ಸರಸ್ವತೀಬಾಯಿ ಹೊರಗೆ ಬಂದಳು. ಬ್ರಾಹ್ಮಣನು 'ನಾನು ತಾಯೀ! ಬಡವ. ಮಗನ ಮುಂಜಿವೆ ಮಾಡಲಿಕ್ಕೆ ಅನುಕೂಲವಿಲ್ಲದೆ ಗೋಳಾಡು

ತ್ತಿದ್ದೇನೆ. ನಿನ್ನ ಗಂಡನಿಗೆ ನಾಲ್ಕಾರು ದಿನಗಳಿಂದಲೂ ಮುಂಜಿವಿಗೆ ಏನಾದರೂ ಹಣ ಸಹಾಯ ಮಾಡಬೇಕೆಂದು ಕೇಳುತ್ತಿದ್ದರೂ ನನ್ನಂಥ ಬಡವನಿಗೆ ಅವರಿಂದೇನೂ ಸಹಾಯವಾಗಲಿಲ್ಲ; ಅಷ್ಟೇ ಅಲ್ಲ, ಅಂಗಡಿಯ ಆಳುಗಳಿಂದ ತಳ್ಳಿಸಿದರು. ನಿಮ್ಮಂಥ ಪುಣ್ಯವಂತರು ಹೀಗೆ ನಿರ್ದಯರಾದರೆ, ನಮ್ಮಂಥವರು ಯಾರಿಗೆ ಬಾಯಿ ತೆರೆಯಬೇಕು? ನಮ್ಮನ್ನಾರು ಕೇಳಬೇಕು? ಎಂದು ಕಣ್ಣೀರಿಟ್ಟು ಬೇಡಿಕೊಂಡನು.

ಸರಸ್ವತೀಬಾಯಿಯ ಮನಸ್ಸು ದೊಡ್ಡದು; ತಾಯಿಯ ಹೃದಯವದು. ಪರರು, ಅದರೊಳಗೆ ಬಡವರು-ದಿಕ್ಕುಗೇಡಿಗಳು ಕಣ್ಣೀರಿಟ್ಟರೆ, ಆಕೆಯ ಎದೆಯು ತತ್‌ಕ್ಷಣವೇ ಕರಗುತ್ತಿದ್ದಿತು. ತನ್ನ ಗಂಡನು ಜೀನನಾದರೂ ತನ್ನ ಕೈಯಲ್ಲಿದ್ದುದನ್ನು ಕೊಟ್ಟು ಸಂತೋಷ ಪಡಿಸಿ ಕಳಿಸುವಳು. ಆಕೆಯು ನಿಜಸ್ಥಿತಿಯನ್ನು ಬ್ರಾಹ್ಮಣನಿಗೆ ತಿಳಿಸಿ, ನಿಮಗೆ ಭಿಕ್ಷೆಕೊಟ್ಟು ಪುಣ್ಯ ಪಡೆಯುವ ಭಾಗ್ಯ ನಾನು ಬೇಡಿ ಬರಲಿಲ್ಲ ಎಂದು ಕೊರಗಿದಳು.

ಬ್ರಾಹ್ಮಣನಿಗೆ ಸರಸ್ವತೀ ಬಾಯಿಯ ಮೂಗಿನ ಮೇಲೆ ದೃಷ್ಟಿಬಿದ್ದು ತಾಯಿ, ದೇವರು ನಿನಗೆ ದಯಮಾಡಿರುವನು. ಸಾಕಷ್ಟು ಸಂಪತ್ತು ಕೊಟ್ಟಿರುವನು; ಆದುದರಿಂದ, ನನಗೆ ನಿನ್ನ ಮೂಗಿನಲ್ಲಿರುವ ಮೂಗುತಿಯನ್ನು ಕೊಟ್ಟು ಪುಣ್ಯಕಟ್ಟಿಕೊ' ಎಂದು ಅಂಗಲಾಚಿ ಬೇಡಿಕೊಂಡನು. ಸರಸ್ವತೀಬಾಯಿಯಲ್ಲಿ ಧರ್ಮಭಾವನೆಯು ತೀವ್ರವಿದ್ದಾಗ್ಯೂ ಗಂಡನ ಹೆದರಿಕೆಯಿಂದ ಅದು ಕೊಂಚ ಹುದುಗಿ ಕೊಂಡಂತಾಗಿತ್ತು. ಬ್ರಾಹ್ಮಣನು ಇಂಥದನ್ನೇ ಕೊಡೆಂದು ಕೇಳಿದೊಡನೆ ಅದು ಎಚ್ಚತ್ತಿತು. 'ಮೂಗುತಿಯನ್ನು ಬ್ರಾಹ್ಮಣನಿಗೆ ಕೊಟ್ಟರೆ ಅವನು ಸಂತೋಷನಾಗುವನು. ಮೇಲಾಗಿ ಅವನ ಕಾರ್ಯಕ್ಕೂ ನೆರವಾದಂತಾಗುವದು; ಆದುದರಿಂದ ಅದನ್ನೇ ಕೊಡಬೇಕು. ಒಂದು ವೇಳೆ ಅವರು ಬೈದು ಸಿಟ್ಟುಮಾಡಿದರೆ, ಅಥವಾ ಅದಕ್ಕೂ ಮೀರಿ ದಂಡಿಸಿದರೆ, ಧರ್ಮಕ್ಕಾಗಿ ದಂಡನೆಗೂ ತಲೆಗೊಡಬೇಕು. ದೇವರು ಮಾಡಿಸಿದ್ದಾಗಲಿ' ಎಂದು ತನ್ನ ಮೂಗಿನಲ್ಲಿಯ ಮೂಗುತಿಯನ್ನು ತೆಗೆದು ಅವನಿಗೆ ಅತ್ಯಂತ ಭಕ್ತಿಯಿಂದ ಕೊಟ್ಟು ನಮಸ್ಕಾರ ಮಾಡಿದಳು.

ಸರಸ್ವತೀಬಾಯಿಯಿಂದ ಮೂಗುತಿಯನ್ನು ತೆಗೆದುಕೊಂಡು ಬ್ರಾಹ್ಮಣನು ತನ್ನ ಮನೆಗೆ ನಡೆದನು. ದಾರಿಯಲ್ಲಿಯೇ ಸೀನಪ್ಪ ನಾಯಕನ

ಅಂಗಡಿಯು ಇನ್ನೂ ತೆರೆದಿರುವದನ್ನು ಕಂಡು, ಬ್ರಾಹ್ಮಣನು ಒಳಹೊಕ್ಕು 'ನಾಯಕರೇ! ಇದರ ಬೆಲೆ ಏನಾಗಬಹುದು! ನೋಡಿ ದಯವಿಟ್ಟು ಹೇಳಿರಿ!' ಎಂದು ಮೂಗುತಿ ತೋರಿಸಿದನು. ನಾಯಕನು ಗಂಟು ಮುಖದಿಂದಲೇ ಅದನ್ನು ಕೈಯಲ್ಲಿ ತಕ್ಕೊಂಡು ಕಣ್ಣಲ್ಲಿ ಕಣ್ಣಿಟ್ಟು ತಿರುತಿರುಗಿ ನೋಡಿದನು. ಆಗಾಗ್ಗೆ ತನ್ನ ಕಣ್ಣಿಗೆ ಬಿದ್ದ ಒಳ್ಳೆಯ ಗುರುತಿನ ಮೂಗುತಿ ಎಂದನು. ತನ್ನದೇ ಎಂದೂ ಮನಗಂಡನು; ಆದರೆ, ಮನೆಗೆ ಹೋಗಿ, ತನ್ನ ಹೆಂಡತಿಯ ಮೂಗಿನಲ್ಲಿ ಮೂಗುತಿ ಇರುವದೋ ಇಲ್ಲವೋ ನೋಡಿ ಬರಬೇಕೆಂದು ಆ ಮೂಗುತಿಯನ್ನು ಪೆಟ್ಟಿಗೆಯಲ್ಲಿಟ್ಟು ಬೀಗಹಾಕಿ 'ಈಗ ಬರುವೆ; ಸ್ವಲ್ಪ ಕುಳಿತಿರಿ' ಎಂದು ಮನೆಗೆ ನಡೆದನು.

ಸರಸ್ವತೀಬಾಯಿಯು ಏನೋ ಒಂದು ಧೈರ್ಯದಿಂದ ಬ್ರಾಹ್ಮಣನಿಗೆ ಮೂಗುತಿ ಕೊಟ್ಟಿದ್ದಳು; ಆದರೆ, ಗಂಡನು ಮನೆಗೆ ಬಂದು, 'ಮೂಗುತಿ ಎಲ್ಲಿ! ಎಂದು ಕೇಳಿದರೆ ಉತ್ತರವೇನು ಹೇಳಬೇಕು' ಎಂಬುವ ಚಿಂತೆಯಲ್ಲಿದ್ದಳು. ಸೀನಪ್ಪನಾಯಕನು ಮನೆಗೆ ಬಂದು, ನೇರವಾಗಿ ಒಳಗೆ ಹೋಗಿ ಹೆಂಡತಿಯನ್ನು ಉದ್ದೇಶಿಸಿ 'ನಿನ್ನ ಮೂಗುತಿ ಎಲ್ಲಿ? ನೋಡೋಣ!' ಎಂದನು. ಸರಸ್ವತೀ ಬಾಯಿಯು ಗಾಬರಿಗೊಂಡಳು. 'ಪೂಜೆಯನ್ನು ಮುಗಿಸಿಕೊಂಡು ತೆಗೆದು ಕೊಡುವೆ' ಎಂದಳು. ಹಿತ್ತಲಲ್ಲಿರುವ ತುಳಸಿಯ ವೃಂದಾವನಕ್ಕೆ ಪೂಜೆಯ ಸಾಮುಗ್ರಿಗಳನ್ನು ತೆಗೆದುಕೊಂಡು ಹೋಗಿ ದಿಕ್ಕುಗೆಟ್ಟು ಕುಳಿತಳು. 'ಗಂಡನಿಗೆ ಏನು ಸಮಾಧಾನ ಹೇಳಬೇಕು?' ಎಂಬುವ ಚಿಂತೆಯಿಂದ ಎದೆಯು ಡಡಡಡ ಹಾರತೊಡಗಿತು. ತುಳಸೀದೇವಿಯ ಮುಂದೆ ಕುಳಿತು, ತಿರುತಿರುಗಿ 'ತಾಯೆ! ಭಕ್ತಳ ಮರ್ಯಾದೆ ಉಳಿಸು' ಎಂದು ಪರಿಪರಿಯಿಂದ ಮಗುವು ತಾಯಿಗೆ ಕೇಳುವಂತೆ, ಹಂಬಲಿಸಿ ಬೇಡಿದಳು. ಸರಸ್ವತೀ ಬಾಯಿಯದು ಶುದ್ಧ ಹೃದಯ; ಪವಿತ್ರ ಜೀವನ; ದೇವಿಯಿಂದ ಯಾವ ಬಗೆಯ ಸಹಾಯದ ಲಕ್ಷಣ ತೋರದ್ದರಿಂದ ವಜ್ರದ ಹರಳನ್ನು ಅರೆದು ಬಟ್ಟಲಲ್ಲಿ ಹಾಕಿ ಕುಡಿದು ಜನ್ಮನೀಗಬೇಕೆಂದು ಮನಸು ಗಟ್ಟಿ ಮಾಡಿದಳು. ಒಳಗೆ ಹೋಗಿ, ಅರೆದು ಅದನ್ನು ಬಟ್ಟಲಲ್ಲಿ ಹಾಕಿ ತುಲಸಿಯ ಮುಂದೆ ಕುಳಿತು ಕುಡಿಯಬೇಕೆಂದು ಬಾಯಿಗೆ ಬಟ್ಟಲ ಹಚ್ಚುವಷ್ಟರಲ್ಲಿ 'ಬಟ್ಟಲಲ್ಲಿ ಏನೋ ಬಿದ್ದಂತೆ ಸಪ್ಪಳ ಆಯಿತು. ಹೀಗೆ ದಿಟ್ಟಿಸಿ ನೋಡು

ತ್ತಾಳೆ. ಅವರಲ್ಲಿ ತಾನು ಬ್ರಾಹ್ಮಣನಿಗೆ ಕೊಟ್ಟ ಮೂಗುತಿ. ಆಗ, ಅತ್ಯಂತ ಭಕ್ತಿಯಿಂದ ದೇವರನ್ನು ನೆನೆನೆನೆದು, 'ಬಡ ಭಕ್ತಳ ಮರ್ಯಾದೆ ಕಾಯ್ದೆ' ಎಂದು ಅತ್ತು, ಕಣ್ಣೊರಸಿಕೊಂಡು ಹೊರಗೆ ಬಂದು ಗಂಡನ ಕೈಯಲ್ಲಿ ಮೂಗುತಿಯನ್ನಿಟ್ಟಳು.

ಸೀನಪ್ಪನಾಯಕನು ಬ್ರಾಹ್ಮಣನು ಕೊಟ್ಟ ಮೂಗುತಿಯನ್ನು ತನ್ನ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ ಬಂದಿದ್ದನಷ್ಟೇ! ಆದರೆ, ತನ್ನ ಹೆಂಡತಿಯು ಮತ್ತೆ ತನ್ನ ಕೈಯಲ್ಲಿ ಅದೇ ಮೂಗುತಿಯನ್ನು ಕೊಟ್ಟುದನ್ನು ಕಂಡು ಬೆರಗಾದನು. ಅಂಗಡಿಗೆ ಹೋಗಿ, ಪೆಟ್ಟಿಗೆ ತೆರೆದು ನೋಡಿದನು. ಅದರಲ್ಲಿ ಮೂಗುತಿ ಇರಲಿಲ್ಲ. ಸೀನಪ್ಪನಾಯಕನ ಬುದ್ಧಿ ಮಂಕಾಯಿತು. 'ಇದು ದೇವರ ಆಟ' ಎಂದು ತಿಳಿದುಕೊಂಡನು. ದೇವರ ಅಗಾಧ ಮಹಿಮೆಯನ್ನು ಮನಗಂಡು ಒಳಗಣ್ಣು ತೆರೆಯಿತು. ಸಂಸಾರದ ಆಸೆ ತಪ್ಪಿತು.

ದೇವರು ತನ್ನ ಜೀನತನವನ್ನು ಬಿಟ್ಟು, ಉದಾರವಾದ ಜೀವನವನ್ನು ಕೈಕೊಳ್ಳಲು ಈ ಪಾಠವನ್ನು ಕಲಿಸಿರುವನು. 'ಆದದ್ದೆಲ್ಲಾ ಒಳಿತೇ ಆಯಿತು' ಎಂಬುವ ಹಾಡು ಅವನ ಬಾಯಿಂದ ಹೊರಟಿತು. ಆಗ, 'ಮಂಚ ಬಾರದು, ಮಡದಿ ಬಾರಳು, ಕಂಚು-ಕನ್ನಡಿ ಬಾರದು, ಸಂಚಿತಾರ್ಥವು ಮತ್ತೆ ಬಾರದು, ಮುಂಚೆ ಮಾಡಿರಿ ಧರ್ಮವ' ಎಂದು ಹಾಡಿ ಮನೆ-ಮಾರು ಮುಂತಾದ್ದನ್ನೆಲ್ಲ ದಾನಮಾಡಿ ಹೆಂಡತಿ-ಮಕ್ಕಳ ಸಹಿತ ಸೀನಪ್ಪನಾಯಕನು ವಿಜಯನಗರದಲ್ಲಿರುತ್ತಿದ್ದ. ಶ್ರೀ ವ್ಯಾಸರಾಯ ಸ್ವಾಮಿಗಳನ್ನು ಕಂಡು ಅವರಿಂದ ಮಂತ್ರೋಪದೇಶ ಪಡೆದು ಹರಿದಾಸನಾದನು. ಪುರಂದರಗಡದ ನಾಯಕನಿಗೆ ಶ್ರೀ ವ್ಯಾಸರಾಯರು 'ಪುರಂದರದಾಸ' ಎಂದು ಹೆಸರಿಟ್ಟರು. ಪುರಂದರ ವಿಠ್ಠಲ ಎಂಬುವ ಅಂಕಿತದಿಂದ ದಾಸರ ಪದಗಳಿರುವವು.

ಪುರಂದರ ದಾಸರು ದಿನಾಲು ಬೆಳಿಗ್ಗೆ ಎದ್ದು ತಮ್ಮ ಸ್ನಾನ-ದೇವರ ಪೂಜೆ ಮುಂತಾದ್ದನ್ನು ತೀರಿಸಿಕೊಂಡು ಕೈಯಲ್ಲಿ ತಂಬೂರಿ, ತಾಳಗಳೊಂದಿಗೆ ಊರೆಲ್ಲ ಹಾಡುತ್ತ ದಿನಾಲು ತಿರಗುವರು. ದಾಸರು ಭಿಕ್ಷೆಯಿಂದ ತಮ್ಮ ಜೀವನ ನಡಿಸಿದರೂ ಅವರ ಮನೆ ಎಂದರೆ ಸಾರ್ವಜನಿಕ ಮನೆಯಾಗಿತ್ತು. ಅವರು ತಮ್ಮ ಜೀವನವನ್ನು ಆದರ್ಶವನ್ನಾಗಿ ಮಾಡಿ ಆ ಕಾಲದ ಜನರಿಗೆ ಸುಲಭವಾದ ಕನ್ನಡದಲ್ಲಿ ಬಗೆಬಗೆಯ ಪ್ರಸಂಗಗಳಲ್ಲಿ ಪದಗಳನ್ನು ಮಾಡಿ

ಜನರಿಗೆ ಮೇಲಾದ ಶಿಕ್ಷಣವನ್ನು ಕೊಟ್ಟರು. ಬೇರೆಬೇರೆ ಸಂದರ್ಭಗಳಲ್ಲಿ ಅವರು ಮಾಡಿದ ಪದಗಳು ಬಹು ಬೋಧಪರವಾಗಿರುವವು; ಆದುದರಿಂದ ಎಲ್ಲ ಜಾತಿಯ ಜನರ ಬಾಯಲ್ಲಿ ಅವರ ಹಾಡುಗಳು ಆಡಹತ್ತಿದವು. ದಾಸರು ಉಚ್ಚವಾದ ಪಾರಮಾರ್ಥಿಕ, ನೈತಿಕ, ಶುದ್ಧ ತತ್ತ್ವಗಳನ್ನು ಹಾಡಿದರು ಜನ ರಲ್ಲಿರುವ ದೋಷಗಳನ್ನು ಹೊರಗೆಡಹಲು ಅವರೆಂದೂ ಹಿಂಜರಿಯಲಿಲ್ಲ ಡಂಭಕತನದ ಧರ್ಮಾಚರಣೆಯನ್ನವರು ಚೆನ್ನಾಗಿ ಖಂಡಿಸಿ 'ತನುವ ನೀರೊಳಗದ್ದಿ ಫಲವೇನು? ಮನದಲ್ಲಿ ದೃಢಭಕ್ತಿ ಇಲ್ಲದ ಮನುಜರು' ಎಂದೂ 'ದುಷ್ಟರ ಸಂಗ ಬಿಡುವದು ಸ್ನಾನ, ಶಿಷ್ಟರ ಸಂಗದೊಳಿರುವದು ಸ್ನಾನ' ಎಂದೂ 'ಹೊಲೆಯ ಹೊರಗಿಹನೇ ಊರೊಳಗಿಲ್ಲವೇ?' 'ಉಂಡ ಮನೆ ಗೆರಡು ಯೋಚಿಸುವಾತನೇ ಹೊಲೆಯ, ಹೆಂಡತಿಯ ಮಾತು ಕೇಳಿ ತಾಯ ಬಡಿವನೇ ಹೊಲೆಯ, ಪರಸತಿಗೆ ಮನವಳುಕುವಾತನೇ ಹೊಲೆಯ, ಗುರುಹಿರಿಯರನ್ನು ಕಂಡು ಎರಗದಾತನೇ ಹೊಲೆಯ' ಎಂದೂ ಸಾಮಾನ್ಯ ನೀತಿಯನ್ನು ಜನರಿಗೆ ಬೋಧಿಸುತ್ತಲೂ ದೇವರ ಮಹಿಮೆ, ಅವನ ನಾಮ ಮಹಿಮೆ ಇವುಗಳನ್ನು ಹೊಗಳುತ್ತಲೂ ಕಾಲಕಳೆದರು. ಹಂಪೆಯಲ್ಲಿ ಈಗಲೂ ಪುರಂದರದಾಸರು ಇರುತ್ತಿರುವ ಕಲ್ಲಿನ ಮಂಟಪವಿದೆ.

---

## ೩೪

## ಹರಿದಾಸರಾದ

# ಕನಕದಾಸರು

(ಕ್ರಿ. ಶ. ೧೬ನೆಯ ಶತಮಾನ)

[ ಭಗವದ್ಭಕ್ತರಾದ ಕನಕದಾಸರು ವಿಜಯನಗರ ಕೃಷ್ಣದೇವರಾಯನ ಆಳಿಕೆಯ ಲ್ಲಿದ್ದರು. ಅವರ ಜೀವನ ಚರಿತ್ರವನ್ನು ಶ್ರೀ. ಬೇಲೂರ ಕೇಶವದಾಸರ ಭಕ್ತವಿಜಯ ಮತ್ತು ಶ್ರೀ. ಕಟ್ಟಿಯವರ ಕವಿ ಕನಕದಾಸ ಎಂಬ ಪುಸ್ತಕಗಳ ಆಧಾರದಿಂದ ಬರೆಯ ಲಾಗಿದೆ. ]

ಧಾರವಾಡ ಜಿಲ್ಹೆಯಲ್ಲಿರುವ ಬಂಕಾಪುರದಿಂದ ಮೂರು ಮೈಲಿನಲ್ಲಿ ಬಾಡ ಎಂಬುದೊಂದು ಹಳ್ಳಿ. ಅಲ್ಲಿ ಹಂಡೆಕುರುಬ ಜಾತಿಯ ಬೀರಪ್ಪ

ಎಂಬುವ ಬಂಟನಾದ ಚಿಕ್ಕ ಪಾಳ್ಯಗಾರನಿರುತ್ತಿದ್ದನು. ಬಂಕಾಪುರದ ಸುತ್ತಲಿನ ನೂರಾರು ಊರುಗಳ ಕಂದಾಯವನ್ನು ಎತ್ತಿ ವಿಜಯನಗರದ ಅರಸರಿಗೆ ಕಳಿಸುವದೇ ಬೀರಪ್ಪನ ಕೆಲಸ. ಹೊತ್ತು ಬಂದಾಗ ತನ್ನ ಕೈಯಲ್ಲಿರುವ ಊರುಗಳಿಂದ ವೀರಾಳುಗಳನ್ನು ಆರಿಸಿ ಯುದ್ಧಕ್ಕೂ ಒಯ್ಯುತ್ತಿದ್ದನು. ಬೀರಪ್ಪನ ಹೆಂಡತಿ ಬಚ್ಚಮ್ಮ. ಆಕೆಯ ಹೊಟ್ಟೆಯಲ್ಲಿ ಕನಕದಾಸನು ಹುಟ್ಟಿದನು. ಮಗನಿಗೆ ಬೀರಪ್ಪನು ತಿಮ್ಮಪ್ಪ ಎಂದು ಹೆಸರಿಟ್ಟನು.

ಚಿಕ್ಕಂದಿನಲ್ಲಿ ತಿಮ್ಮಪ್ಪನಿಗೆ ಗರಡೀ ಸಾಧನೆ, ಕುಸ್ತೀಯಾಡುವದು ಇವುಗಳಲ್ಲಿ ವಿಶೇಷ ಪ್ರೀತಿ. ಕತ್ತಿಯನ್ನು ತಿರುಗಿಸುವದು, ಬೇಟೆಗಾರಿಕೆ ಇವೂ ತಿಮ್ಮಪ್ಪನ ಆಟಗಳಾಗಿದ್ದವು. ಗೆಳೆಯರೊಡನೆ ಅಡವಿಗೆ ಹೋಗಿ, ಹುಲಿ-ಚಿರ್ಚು ಮೊದಲಾದ ಕಾಡುಮೃಗಗಳನ್ನು ಒಳ್ಳೆಯ ಹುರುಪಿನಿಂದ ಬೇಟೆಯಾಡುವನು. ಹೀಗೆ ಆಟ-ನೋಟಗಳಲ್ಲಿ ಮನಸ್ಸನ್ನು ತೊಡಗಿಸಿ ತಿಮ್ಮಪ್ಪನು ಕಾಲ ಕಳೆಯುತ್ತಿರುವಾಗ ಒಮ್ಮಿಂದೊಮ್ಮೆ ತಂದೆಯಾದ ಬೀರಪ್ಪ ಮಡಿದನು. ತಾಯಿಯು ಅವನನ್ನು ಕಾಪಾಡಿ ದೊಡ್ಡವನನ್ನಾಗಿ ಮಾಡಿದಳು.

ತಿಮ್ಮಪ್ಪನು ತಂದೆಯಂತೆ ವೀರನೂ ಸಮರ್ಥನೂ ಇದ್ದುದರಿಂದ, ವಯಸ್ಸಿಗೆ ಬಂದನಂತರ ತಂದೆಯ ಕೆಲಸವೇ ಅವನಿಗೆ ದೊರಕಿತು. ತಿಮ್ಮಪ್ಪ ಒಮ್ಮೆ ಭೂಮಿಯನ್ನು ಅಗಿಸುತ್ತಿರುವಾಗ ಕನಕರಾಸಿಯು (ಬಂಗಾರದ ನಿಧಿಯು) ಅವನಿಗೆ ಸಿಕ್ಕಿತು. ಇದರಿಂದ ಜನರೆಲ್ಲರೂ ಅವನಿಗೆ ಕನಕನಾಯಕ ಎಂದು ಕರೆಯಲಾರಂಭಿಸಿದರು. ಕನಕನು ವೀರನಾಗಿದ್ದರೂ ಮಹಾ ಧಾರ್ಮಿಕನು. ಅವನಿಗೆ ದೇವರಲ್ಲಿ ವಿಶ್ವಾಸ ಬಹಳ; ಆದುದರಿಂದ, ತಾಯಿಯ ಹೇಳಿಕೆಯಂತೆ ದೇವರು ತನಗೆ ದಯಪಾಲಿಸಿದ ದುಡ್ಡಿನಿಂದ ಕಾಗಿನೆಲ್ಲಿಯಲ್ಲಿ ದೇವಾಲಯ ಕಟ್ಟಿಸಿ, ಬಾಡದಲ್ಲಿದ್ದ ಆದಿಕೇಶವ ಮೂರ್ತಿಯನ್ನು ಆ ಗುಡಿಯಲ್ಲಿ ಸ್ಥಾಪಿಸಿದನು.

ಹೀಗಿರುತಿರಲು, ಒಂದು ದಿನ ರಾತ್ರಿ, ಕೇಶವ ದೇವರು ಕನಕನ ಕನಸಿನಲ್ಲಿ ಬಂದು 'ಕನಕಾ! ನನ್ನ ದಾಸನಾಗು' ಎಂದು ನುಡಿದನು. ಇದೇನಿರಬಹುದೆಂದು ಕನಕನಾಯಕನು ತನ್ನೊಳಗೆ ತಾನೇ ಆಲೋಚಿಸಿದನು; ಬಲ್ಲವರನ್ನೂ ಕೇಳಿದನು; ತಾಯಿಗೂ ತಿಳಿಸಿದನು. ಎಲ್ಲರೂ ತಮಗೆ ತೋಚಿದಂತೆ

ಅರ್ಥ ಹೇಳಿದರು. ಕನಕನಾಯಕನು ಸುಮ್ಮನಿದ್ದನು; ಆದರೂ ದೇವರು ಕನಸಿನಲ್ಲಿ ಬಂದು ಹೇಳಿದ ವಿಚಾರವು ಮನಸಿನಲ್ಲಿಯೇ ಕುದಿಯುತ್ತಿದ್ದಿತು.

ಕೆಲದಿನಗಳಲ್ಲಿ ಕನಕ ನಾಯಕನ ಹೆಂಡತಿ ತೀರಿಕೊಂಡಳು. ನಾಯಕನಿಗೆ ಬಹಳ ವ್ಯಸನವಾಯಿತು. ಅವನ ಜೀವನದೊಳಗಿನ ಸ್ವಾರಸ್ಯವೇ ಹೋದಂತಾಯಿತು. ಆಟ-ಬೇಟೆಗಳಲ್ಲಿದ್ದ ನಾಯಕನ ಪ್ರೀತಿಯು ಇಲ್ಲದಾಯಿತು. ಸಂಸಾರವು ಅಸಾರವೆನಿಸಿತು. ಅದರಿಂದ ವೈರಾಗ್ಯ ಉಂಟಾಗಿ ದೇವರ ಸೇವೆ, ತಾಯಿಯ ಸೇವೆಯಲ್ಲಿ ಹೆಚ್ಚಾಗಿ ಕಾಲಕಳೆಯಲನುವಾದನು. ಇದು ಮನಸನ್ನು ಪ್ರಪಂಚದಿಂದ ತಿರುಗಿಸಲು ಹೆಚ್ಚು ಅನುಕೂಲವಾಯಿತು. ಆಗ ತಾನೇ ನಾಯಕನಿಗೆ ತನ್ನ ಜೀವನದ ಗುಟ್ಟು ಏನೆಂಬುದು ಅಲ್ಪಸ್ವಲ್ಪ ಮನಸಿನಲ್ಲಿ ಹೊಳೆಯಲಾರಂಭಿಸಿತು.

ಅಷ್ಟರಲ್ಲಿ, ತನಗೆ ಮೂರ್ತಿಮಂತ ದೇವರಾಗಿದ್ದ ತಾಯಿಯು ಮಡಿದಳು. ನಾಯಕನ ದುಃಖಕ್ಕೆ ಆಗ ಪಾರವಿರಲಿಲ್ಲ. ಅವನಿಗೆ ದಿಕ್ಕು ತೋಚದಾಯಿತು. ಮನಸು ತಲ್ಲಣಗೊಂಡಿತು. ಸ್ವಾಭಾವಿಕವಾಗಿಯೇ, ಅವನ ಮನಸು ಸಂಪೂರ್ಣವಾಗಿ ದೇವರ ಕಡೆಗೇ ಒಲಿಯಿತು ಆ ಸಮಯದಲ್ಲಿ ಮತ್ತೆ ಕೇಶವ ದೇವರು ಕನಕನ ಕನಸಿನಲ್ಲಿ ಕಾಣಿಸಿಕೊಂಡು 'ನನ್ನ ದಾಸನಾಗುವದಿಲ್ಲವೆ?' ಎಂದು ಕೇಳಿದನು. 'ದಾಸನಾಗು, ದಾಸನಾಗು ಎಂದು ಈತನೇನು ನನ್ನನ್ನು ಪೀಡಿಸುತ್ತಿರುವನಪ್ಪಾ!' ಎಂದು ಬಹು ಗೋಳಾಡಿದನು. ಆಗಲೂ ಕನಕನಲ್ಲಿ ಬೆಳಕು ಬೀಳಲಿಲ್ಲ.

ಒಮ್ಮೆ, ಕನಕನಾಯಕನಿಗೆ ಯುದ್ಧದಲ್ಲಿ ಸೇರಿ ಕಾದಾಡುವ ಪ್ರಸಂಗ ಒದಗಿತು. ಆ ಕಾಲದಲ್ಲಿ ಕನಕನು ಶತ್ರುಗಳ ಕೈಯಲ್ಲಿ ಸಿಕ್ಕನು. ವೈರಿಗಳ ಬಾಣಗಳ ಮುಂದೆ ಆಟ ನಡೆಯದೆ ನಾಯಕನ ಮೈಗೆ ಹಲವು ಗಾಯಗಳಾಗಿ ದೇವರನ್ನು ನೆನೆಯುತ್ತ ನೆಲಕ್ಕೆ ಉರುಳಿದನು. ನಾಯಕನು ಸತ್ತನೆಂದು ಶತ್ರುಗಳು ಓಡಿದರು. ಆಗ ದೇವರು ಮನುಷ್ಯರೂಪದಿಂದ ಬಂದು, ಹತ್ತರ ಕುಳಿತು, ಬಹುಪರಿಯಿಂದ ಅವನ ಆರೈಕೆ ಮಾಡಿ, ಮತ್ತೆ ಮೊದಲಿನಂತೆ 'ಇನ್ನಾದರೂ ನನ್ನ ದಾಸನಾಗುವಿಯೋ ಇಲ್ಲವೋ?' ಎಂದು ವಿಚಾರಿಸಿದನು. 'ಮೈ ನೋವು ಗುಣವಾದ ಮೇಲೆ ಏನೆಂಬುದನ್ನು ಹೇಳುವೆ. ಈಗೇಕೆ ಆ ಮಾತು?' ಎಂದನು. 'ಅದಕ್ಕೆಷ್ಟು ಹೊತ್ತು? ನೋಡುನೋಡುವಷ್ಟರಲ್ಲಿ

ಗುಣಪಡಿಸುವೆ' ಎಂದು ಮನುಷ್ಯನ ರೂಪಿಯಾದ ದೇವರು ನುಡಿದನು; ಮತ್ತು ತನ್ನ ಕೈಯಿಂದ ಅವನ ಮೈಮೇಲೆ ಕೈಯಾಡಿಸಿದನು. ವಿಲಕ್ಷಣ ಸುಖವಾದಂತೆ ಎನಿಸಿ, ಬಾಯಿಂದ ಆಡಿ ತೋರಿಸದಂತಹ ಆನಂದವೆನಿಸಿತು. ದೇವರ ಅಗಾಧವಾದ ಲೀಲೆಯನ್ನು ನೆನೆದು, 'ಅಪ್ಪ, ನಿನ್ನ ಇಚ್ಛೆಯೇ ನನ್ನ ಇಚ್ಛೆ. ನನ್ನ ಇಚ್ಛೆ ಎಷ್ಟುದಿನ ನಡೆಯುವದು? ಅಂತೂ ಕೊನೆಗೆ, ನಿನ್ನ ಮಾತನ್ನೇ ನಡಿಸಿದೆ' ಎಂದು ದೇವರನ್ನು ಕೊಂಡಾಡಿ, ಕೈಯಲ್ಲಿ ಏಕತಾರಿಯನ್ನು ಹಿಡಿದು, ಪ್ರಪಂಚದ ಹುಚ್ಚಿನಿಂದ ದೂರಾಗಿ, ಆದಿಕೇಶವ ದೇವಾಲಯಕ್ಕೆ ಹೋಗಿ, 'ಶರಣು ಹೊಕ್ಕೆನಯ್ಯ' ಎಂದು ಬೇಡಿಕೊಂಡು ಹರಿದಾಸರಾದರು. ಮುಂದೆ ಕೆಲದಿನಗಳಲ್ಲಿ ಕನಕದಾಸರಿಗೆ ಶ್ರೀ ವ್ಯಾಸರಾಯರಿಂದ ಉಪದೇಶ ದೊರೆಯಿತು.

ಕನಕದಾಸರು ಆಗಾಗ್ಗೆ ವಿಜಯನಗರಕ್ಕೆ ಶ್ರೀ ವ್ಯಾಸರಾಯರ ದರ್ಶನಕ್ಕೆ ಹೋಗುತ್ತಿದ್ದರೂ, ಅವರು ಹೆಚ್ಚಾಗಿ ಕಾಗಿನೆಲ್ಲಿಯ ಶ್ರೀ ಕೇಶವ ದೇವರ ಗುಡಿಯಲ್ಲಿಯೇ ಇದ್ದುಕೊಂಡು ಕಾಲಕಳೆಯುತ್ತಿದ್ದರು. ಅಲ್ಲಿರುವಾಗಲೇ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ ಎಂಬ ಚಿಕ್ಕ ದೊಡ್ಡ ಕಾವ್ಯಗಳನ್ನು ರಚಿಸಿದರಲ್ಲದೆ, ಸಾವಿರಾರು ಅನುಭವದ ಹಾಡುಗಳನ್ನೂ ಮುಂಡಿಗೆಗಳನ್ನೂ ರಚಿಸಿದರು. ದಾಸರ ಹಾಡುಗಳು ಎಲ್ಲ ಜಾತಿಯ ಜನರ ಬಾಯಲ್ಲಿ ಈಗ್ಯೂ ನಲಿಯುತ್ತಿವೆ. ಪುರಂದರ ದಾಸರಂತೆ, ಅವರು ಧರ್ಮದ ತಿರುಳನ್ನೇ ಸುಲಭ ಕನ್ನಡದಲ್ಲಿ ಜನರಿಗೆ ಬೋಧಿಸಿದ್ದಾರೆ. ಹರಿಭಕ್ತಿಸಾರದಲ್ಲಿ ಭಕ್ತಿಯ ಮಹಿಮೆಯನ್ನು ಪಾಡಿದ್ದಾರೆ. ಅವರ ಮುಂಡಿಗೆಗಳಂತೂ ವೇದಾಂತ ವಿಚಾರದಿಂದ ತುಂಬಿವೆ. 'ಕುಲವಾವುದು ಸತ್ಯ ಸುಖವುಳ್ಳ ಜನರಿಗೆ, ಎಲ್ಲರು ಮಾಡುವದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎಂಬೀ ಅವರ ಹಾಡುಗಳು ಸಾಮಾನ್ಯ ಜನರಿಗೆ ಬಹು ಪ್ರಿಯವಾಗಿವೆ.

ಕನಕದಾಸರು ಒಮ್ಮೆ ತೀರ್ಥಯಾತ್ರೆಗೆಂದು ಹೊರಟು, ತಿರುಪತಿ, ಉಡುಪಿ, ಮುಂತಾದ ವೈಷ್ಣವ ದೇವಾಲಯಗಳಿಗೆ ಹೋಗಿದ್ದರು. ಉಡುಪಿಯಲ್ಲಿರುವಾಗ ಅಲ್ಲಿಯ ಶ್ರೀ ಕೃಷ್ಣನ ಸಂದರ್ಶನಕ್ಕಾಗಿ ಬಹು ಮಿಡುಕಿದರೂ ಹೀನ ಕುಲದವರೆಂದು ದರ್ಶನಕ್ಕೆ ಅವಕಾಶ ಸಿಗದೆಹೋಯಿತು. ದರ್ಶನದ ಕುತೂಹಲವಂತೂ ಮಿತಿಮೀರಿತು. ದೇವರ ಪೂಜಾರಿಗಳು ಕುರುಬನಾದ

ಕನಕದಾಸನನ್ನು ಒಳಗೆ ಬಿಡಲೊಲ್ಲರು. ಆ ವೇಳೆಯಲ್ಲಿ ದಾಸರು ದೂರಕ್ಕೆ ಒಂದೆಡೆಯಲ್ಲಿ ನಿಂತು ದೇವರನ್ನು ಸ್ತುತಿಸಿ ಹಾಡುತ್ತಿರಲು, ದೇವರು ಪೂರ್ವಕ್ಕಿದ್ದ ತನ್ನ ಮುಖವನ್ನು ಕನಕದಾಸನು ನಿಂತ ದಿಕ್ಕಿಗೆ ತಿರುಗಿಸಿದನು. ಅಂದಿನಿಂದ ಶ್ರೀ ಕೃಷ್ಣನು ಪಶ್ಚಿಮಕ್ಕೆ ಮುಖ ಮಾಡಿಕೊಂಡು ನಿಂತಿರುವನು. ಕನಕದಾಸರಿಗೆ ದೇವರು ದರ್ಶನ ಕೊಟ್ಟ ಸ್ಥಳದಲ್ಲಿ ಕಿಂಡಿಯನ್ನು ಮಾಡಿಸಿದರು. ಅದಕ್ಕೆ 'ಕನಕನ ಕಿಂಡಿ' ಎಂದು ಅನ್ನುವ ವಾಡಿಕೆ ಆಯಿತು. ಆ 'ಕಿಂಡಿಯನ್ನು' ಈಗಲೂ ಉಡುಪಿಯ ಶ್ರೀ ಕೃಷ್ಣ ದೇವಾಲಯದಲ್ಲಿ ತೋರಿಸುತ್ತಾರೆ ಅದರೊಳಗಿಂದಲೇ ಈಗಲೂ ಜನರು ಎಲ್ಲಕ್ಕೂ ಮೊದಲು ದೇವರ ದರ್ಶನ ಮಾಡಿಕೊಳ್ಳುವರು.

ದಾಸರು ೯೦ ವರ್ಷಗಳವರೆಗೆ ಬಾಳಿದ್ದರೆಂದು ಹೇಳುವರು.

---

೩೫

# ಲಕ್ಷ್ಮಮ್ಮನ ಸ್ವಾರ್ಥತ್ಯಾಗ

(ಕ್ರಿ. ಶ. ೧೬ನೆಯ ಶತಮಾನ)

[ಬೆಂಗಳೂರು-ಯಲಹಂಕ ನಾಡುಗಳನ್ನು ಆಳುತ್ತಿದ್ದ ಗೌಡ ಪ್ರಭುಗಳಲ್ಲಿ ಮಾಗಡಿಯ ಕೆಂಪೇ ಗೌಡನು ಶೌರ್ಯ-ಧೈರ್ಯ-ಧರ್ಮಗಳಲ್ಲಿ ಮುಂದಾಗಿದ್ದನು. ಈತನೇ ವಿಜಯನಗರ ಚಕ್ರವರ್ತಿಗಳ ಅಪ್ಪಣೆಯಿಂದ ಕ್ರಿ. ಶ. ೧೫೩೭ರಲ್ಲಿ ಬೆಂಗಳೂರು ಪಟ್ಟಣ ಕಟ್ಟಿಸಿದನು. ಬೆಂಗಳೂರಿನ ಕೋಟೆ ಕಟ್ಟಿಸುವಾಗ ನಡೆದ ಸಂಗತಿ ಇದು. ಈ ವಿಷಯವನ್ನು ಮಾಗಡಿಯ ಕೆಂಪೇಗೌಡನ ಚರಿತ್ರೆಯಿಂದ ಉದ್ಧರಿಸಲಾಗಿದೆ.]

ಕೆಂಪೇಗೌಡನು ಬೆಂಗಳೂರಿನ ಕೋಟೆಯ ಬಾಗಿಲನ್ನು ಇಡುತ್ತಿರುವಾಗ ಎಷ್ಟು ಪ್ರಯತ್ನಿಸಿದರೂ ಬಾಗಿಲು ನಿಲ್ಲದಾಯಿತು. ಮುಂದೇನು ಮಾಡಬೇಕೆಂಬುದು ಗೌಡನಿಗೆ ತೋಚಲಿಲ್ಲ. ಗೌಡನು ಬಹು ಧಾರ್ಮಿಕನು. ದೇವರಿಗೆ ಹಲವು ಬಗೆಯಿಂದ ಬೇಡಿಕೊಂಡನು. ಉಪಯೋಗವಾಗಲಿಲ್ಲ; ಆಗ ಕೆಲವರು ಬಸಿರಿದ್ದ ಹೆಂಗಸನ್ನು ಬಲಿ ಕೊಟ್ಟರೆ, ಬಾಗಿಲು ನಿಲ್ಲುವದೆಂದು ಸೂಚಿಸಿದರು. ಹೆಣ್ಣು ಮಗಳನ್ನು-ತುಂಬಿದ ಹೆಣ್ಣುಮಗಳನ್ನು-ಬಲಿ ಕೊಡಲು

ಆವನ ಮನಸು ಒಪ್ಪಲಿಲ್ಲ. ಕೋಟೆಯ ಬಾಗಿಲು ನಿಲ್ಲದ್ದರಿಂದ ಮುಂದಿನ ಕೆಲಸವೇ ಕಟ್ಟಾಯಿತು. ಗೌಡನಿಗೆ ಊಟ ಸವಿ ಹತ್ತಲೊಲ್ಲದು, ನಿದ್ದೆ ಬರ ಲೊಲ್ಲದು; ಒಂದೇ ಸಮನಾಗಿ ಆತನು ಚಿಂತೆಯಲ್ಲಿ ಮುಳುಗಿರುವದನ್ನು ಕಂಡು, ಗೌಡನ ಸೊಸೆಯಾದ ಲಕ್ಷ್ಮವ್ವನ ಮನಸು ಕಳವಳಗೊಂಡಿತು. ಕೋಟೆಯ ಬಾಗಿಲು ನಿಲ್ಲಲಿಕ್ಕೆ ಬಸಿರಿದ್ದ ಹೆಂಗಸಿನ ಬಲಿ ಕೊಡಬೇಕೆಂಬುವ ಮಾತೂ ಅದನ್ನು ಯಾರಿಗೆ ಹೇಗೆ ಕೇಳಬೇಕೆಂಬ ಯೋಚನೆಯಿಂದ ಮಾವ ನವರು ಕೊರಗುತ್ತಿರುವ ಮಾತೂ ಆಕೆಗೆ ತಿಳಿದಿತ್ತು. ಲಕ್ಷ್ಮವ್ವನಿಗೆ ಮಾವ ನವರಲ್ಲಿ ತುಂಬಾ ಆದರ; ಆದರೂ ಅವರೊಡನೆ ಎಂದೂ ಪಿಟ್ಟೆಂದು ಮಾತಾ ಡಿದವಳಲ್ಲ. ಮಾವನವರು ಎಂದಾದರೂ ಮಾತನಾಡಿಸಿದರೆ, ಒತ್ತಟ್ಟಿಗೆ ಕತ್ತಲೆಯಲ್ಲಿ ದೂರಕ್ಕೆ ನಿಂತು, ಅವರ ಪಾದಗಳನ್ನು ನೋಡುತ್ತ ಮೆಲು ಮಾತುಗಳಿಂದ ಉತ್ತರ ಕೊಡುವಳು. ಹೀಗಿದ್ದುದರಿಂದ, ಈಗ ಕೂಡ ಮಾವನವರನ್ನು ಮಾತಾಡಿಸುವದೆಂದರೆ, ಆಕೆಗೆ ಜೀವದಸುತ್ತು ಬಂದಿತು. ರಾತ್ರಿಎಲ್ಲಾ ಇದೇ ವಿಚಾರದಲ್ಲಿ ಕಾಲ ಕಳೆದಳು. ಕೊನೆಗೆ, ಮಾವನವರ ನ್ನೊಂದು ಮಾತು ಕೇಳಿಯೇ ಬಿಡಬೇಕೆಂದು ಮನಸು ಗಟ್ಟಿಮಾಡಿದಳು.

ಮರುದಿನ ಬೆಳಿಗ್ಗೆ, ಮಾವನವರು ಪಡಸಾಲೆಯಲ್ಲಿ ದಿಂಬಿಗೆ ಒರಗಿ ಕೊಂಡು ಚಿಂತೆಯಲ್ಲಿ ಕುಳಿತಿರುವಾಗ, ಲಕ್ಷ್ಮವ್ವನು ನಡುಮನೆಯ ಬಾಗಿಲಲ್ಲಿ ನಿಂತುಕೊಂಡು, ಹೀಗೆಂದಳು:—'ಮಾವನವರೇ! ನನ್ನದೊಂದು ಮಾತು ನಡಿಸಬೇಕು. ಕೋಟೆಯ ಬಾಗಿಲು ನಿಲ್ಲದ್ದರಿಂದ ತಮಗೆ ತುಂಬಾ ಚಿಂತೆಯಾಗಿರುವಂತಿದೆ. ತಮ್ಮ ಮಗಳಾದ ನನ್ನನ್ನು ಬಲಿಕೊಟ್ಟು ನಿಮ್ಮ ಚಿಂತೆಯನ್ನು ಪರಿಹರಿಸಿಕೊಳ್ಳಿರಿ! ತಾವು ನಡಿಸಿರುವ ಮಹಾತ್ಕಾರ್ಯಕ್ಕೆ ಒಬ್ಬ ಸ್ತ್ರೀಯಳಿಂದ ಅಡ್ಡಿಯಾಗಿದ್ದರೆ, ನನ್ನನ್ನು ಬಲಿಕೊಟ್ಟು, ಕೋಟೆಯ ಬಾಗಿಲನ್ನು ನಿಲ್ಲಿಸಬಹುದು.' ಮಗಳ ಸಮನಾದ ಸೊಸೆಯ ಅಂತಃಕರಣದ ಮನಕರಗಿಸುವ ಮಾತುಗಳನ್ನು ಕೇಳಿ, ಗೌಡನ ಕಣ್ಣುಗಳಲ್ಲಿ ನೀರು ತುಳುಕಿ ದವು. ಮೈ ಮೇಲೆ ಹೊದ್ದಿರುವ ದುಪ್ಪಟಿಯಿಂದ ಕಣ್ಣೊರಸಿಕೊಂಡು 'ಅಮ್ಮಾ! ಯಾವ ಪ್ರಾಣಿಯನ್ನೂ ಬಲಿಕೊಡಲು ಒಪ್ಪದ ನಾನು ನನ್ನ ಮನೆಯ ಲಕ್ಷ್ಮಿಯಾದ ನಿನ್ನನ್ನೆಂತು ಬಲಿಕೊಡಲು ಒಪ್ಪೇನು? ಆಗಲಿ ಹೋಗಮ್ಮ. ನಾನು ನಿನ್ನ ಪ್ರೀತಿಗೂ ಧೈರ್ಯಕ್ಕೂ ಮೆಚ್ಚಿರುವೆ.' ಎಂದು ನುಡಿದು ಸುಮ್ಮನಾದನು.

ಮುಂದೆ, ಹಲವು ದಿನಗಳವರಗೆ ಕೋಟೆಯ ಬಾಗಿಲು ನಿಲ್ಲಿಸುವ ಕೆಲಸವು ಸಾಗದೆ, ಹಗಲು ಮಾಡಿದ ಕೆಲಸವು ರಾತ್ರಿಯಲ್ಲಿ ಬಿದ್ದುಹೋಗು ತ್ತಿದ್ದಿತು. ಇದರಿಂದ ದಿನದಿನಕ್ಕೂ ಕೆಂಪೇಗೌಡನು ಚಿಂತೆಯಿಂದ ಕೊರಗಿ ಸೊರಗಿದನು. ಮಾವನವರ ಮುಖವನ್ನು ನೋಡಿದಾಗೆಲ್ಲ ಲಕ್ಷ್ಮಮ್ಮನ ಎದೆಯು ಬೆಂದು ಮುಖವು ಕಂದಿ ಕುಂದುವದು. ಕಣ್ಣುಗಳಲ್ಲಿ ನೀರು ನಿಲ್ಲು ವದು. ಮಾವನವರಿಗಾದ ದುಃಖವು ಲಕ್ಷ್ಮಮ್ಮನನ್ನು ಹೀಗೆ ಬಾಧಿಸ ತೊಡಗಿದಾಗ, ಆಕೆಗೂ ಅದನ್ನು ತಾಳಿಕೊಳ್ಳುವದಾಗಲಿಲ್ಲ. ಹೇಗಾದರೂ ಮಾಡಿ, ತನ್ನ ದೇಹವನ್ನು ಬಲಿಕೊಟ್ಟು, ಮಾವನವರು ಕೈಕೊಂಡ ಕಾರ್ಯವನ್ನು ಪೂರೈಸಬೇಕೆಂದು ನಿಶ್ಚಯಿಸಿದಳು.

ಒಂದು ದಿನ ರಾತ್ರಿ ಎಲ್ಲರೂ ಮಲಗಿರುವಾಗ ತಟ್ಟನೆ ಲಕ್ಷ್ಮಮ್ಮನು ಎದ್ದು, ಗಂಡನಿಗೆ ನಮಸ್ಕಾರಮಾಡಿ, ದೇವರ ಮನೆಗೆ ಹೋಗಿ, ಅಲ್ಲಿ ದೇವ ರಿಗೆ ಎರಗಿ, ಕೈಯಲ್ಲಿ ಕಠಾರಿ ತೆಗೆದುಕೊಂಡು, ಬಾಗಿಲ ಚಿಲಕ ತೆಗೆದು, ನೆಟ್ಟಗೆ ಕೋಟೆಯ ಮಹಾದ್ವಾರದ ಬಳಿಯಲ್ಲಿ ಬಂದಳು. ಗ್ರಾಮ ದೇವತೆ ಯನ್ನು ನೆನಿಸಿ, ಅತ್ಯಂತ ಭಕ್ತಿಯಿಂದ 'ತಾಯೇ! ನನ್ನ ದೇಹವನ್ನು ನಿನಗ ರ್ಪಿಸುವೆ. ಕೋಟೆಯ ಬಾಗಿಲನ್ನು ನಿಲ್ಲಿಸಿ, ನನ್ನ ಮಾವನವರಿಗೆ ಕೀರ್ತಿ ಯನ್ನು ದಯಪಾಲಿಸು,' ಎಂದು ಕೈಮುಗಿದು ಬೇಡಿಕೊಂಡು, ತನ್ನ ತಲೆ ಯನ್ನು ಕಠಾರಿಯಿಂದ ಕೊಯ್ದುಕೊಂಡು ಪ್ರಾಣಬಿಟ್ಟಳು.

ಬೆಳಗು ಮುಂಜಾವಿನಲ್ಲಿ ಆಳುಗಳು ಕೆಲಸಕ್ಕೆಂದು ಬಂದು ನೋಡು ತ್ತಾರೆ; ಹಲವು ದಿನಗಳಿಂದ ಕಾಡಿಸಿ ಪೀಡಿಸುತ್ತಿದ್ದ ಕೋಟೆಯ ಮಹಾ ದ್ವಾರವು ಅಂದು ನಿಂತಿರುವದನ್ನು ದೂರಿನಿಂದಲೇ ಕಂಡು ಅಚ್ಚರಿಗೊಂಡರು. ಆನಂದದಿಂದ ಗೌಡದೊರೆಗೆ ಈ ಸಮಾಚಾರವನ್ನು ತಿಳಿಸಲು ಓಡಿದರು. ಆಗ ಕೆಂಪೇಗೌಡನು ಬಂದು ನೋಡುವಲ್ಲಿ ತನ್ನ ಕುಲದೀಪಕಳೂ ಸೊಸೆಯೂ ಆದ ಲಕ್ಷ್ಮಮ್ಮನ ರುಂಡ ಒತ್ತಟ್ಟಿಗೆ, ಇನ್ನೊತ್ತಟ್ಟಿಗೆ ಆಕೆಯ ಧಡ ಬಿದ್ದಿ ರುವದನ್ನು ನೋಡಿ, ಕೆಂಪೇಗೌಡನು ಹಲುಬಿದನು. ಆಕೆಯ ನಡೆ-ನುಡಿ, ದೇವರು-ಹಿರಿಯಲ್ಲಿದ್ದ ಭಕ್ತಿ-ವಿಶ್ವಾಸಗಳನ್ನು ನೆನೆನೆನೆದು ಕಣ್ಣೀರಿಟ್ಟನು. ತನ್ನ ಆಸೆಯನ್ನು ಪೂರೈಸಲು ದೇಹವನ್ನು ಚೆಂಡಾಡಿದ ಆ ಮಹಾ ಮಹಿಮ ಳನ್ನು ಹಲವು ಬಗೆಯಿಂದ ಕೊಂಡಾಡಿದನು. ಇಂಥ ತ್ಯಾಗಿಯ ಹೆಸರು ಬಹು

ದಿನಗಳವರೆಗೆ ಎಲ್ಲರ ಕಣ್ಮುಂದೆ ಇರಬೇಕೆಂದು ಹವಣಿಸಿ, ಬೆಂಗಳೂರಿನ ಪೂರ್ವದಿಕ್ಕಿನಲ್ಲಿರುವ ಕೋರಮಂಗಲ ಗ್ರಾಮದ ನಡುವೆ ಒಂದು ಗುಡಿ ಕಟ್ಟಿಸಿ, ಲಕ್ಷ್ಮಮ್ಮನ ಮೂರ್ತಿಯನ್ನು ಅದರಲ್ಲಿಟ್ಟು, ದಿನಾಲು ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದನು. ಇಂದಿಗೂ ಅಲ್ಲಿಯ ಜನರು ಲಕ್ಷ್ಮಮ್ಮನಿಗೆ ನಡಕೊಳ್ಳುತ್ತಾರೆ. ತನ್ನ ಆತ್ಮತ್ಯಾಗದಿಂದ, ದೇಹವನ್ನು ಬಲಿ ಕೊಟ್ಟು, ಮನುಷ್ಯಳಾದ ಲಕ್ಷ್ಮಮ್ಮನು ದೇವತೆಯ ಪದವಿಯನ್ನು ಪಡೆದಳು.

---

## ೩೬
## ದೊಡ್ಡ ಮನಸಿನ
## ಅನಂತಪುರದ ಸಿದ್ದಪ್ಪನಾಯಕ

(ಕ್ರಿ. ಶ ೧೭೦೮)

[ ಕೆಳಗಿನ ಕಥೆಯು ಬುಕ್ಕರಾಯ (ಸಮುದ್ರ) ಚರಿತ್ರೆ ಎಂಬ ಪುಸ್ತಕದೊಳಗಿನ ಒಂದು ಪ್ರಸಂಗ. ಈ ಕಥೆಯು ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಸಿದ್ಧವಾಗಿರುವ ಬುಕ್ಕರಾಯ ಚರಿತ್ರೆಯಿಂದ ತೆಗೆದು ಹಾಕಲ್ಪಟ್ಟಿದೆ. ]

ವಿಜಯನಗರದ ರಾಮರಾಯರ ಆಳಿಕೆಯಲ್ಲಿ ಸೊನ್ನಲಾಪುರದ (ಸೊಲ್ಲಾಪುರದ) ಹಂಡೆ ಹನುಮಪ್ಪನಾಯಕನೆಂಬ ಶೂರ ಸರದಾರನಿದ್ದನು. ರಾಮರಾಯರು ಇವನ ಶೌರ್ಯಕ್ಕೆ ಮೆಚ್ಚಿ ತಮ್ಮ ಹತ್ತಿರ ಇಟ್ಟುಕೊಂಡಿದ್ದರು. ಇವನು ಕುತುಬಶಹ, ಫರೀದಶಹರನ್ನು ಸೋಲಿಸಿದ್ದಲ್ಲದೆ, ಒಂದು ಸಾರೆ, ಅಹಮ್ಮದ ನಗರದ ನಿಜಾಂಶಹನನ್ನು ಯುದ್ಧದಲ್ಲಿ ಸೋಲಿಸಿ, ಅವನನ್ನು ಹಿಡಿದು ತಂದು ರಾಮರಾಯ-ತಿರುಮಲರಾಯರಿಗೆ ಕಾಣಿಕೆ ಎಂದು ಒಪ್ಪಿಸಿದ್ದನು. ಇದರಿಂದ ಸಂತುಷ್ಟರಾಗಿ, ಅವನ ಶೌರ್ಯಕ್ಕೆ ಮೆಚ್ಚಿ ರಾಯರು ನಂದ್ಯಾಲ ಗ್ರಾಮ, ಬುಕ್ಕರಾಯಸಮುದ್ರ, ಧರ್ಮಾವರ, ಬಳ್ಳಾರಿ ಈ ಗ್ರಾಮಗಳನ್ನು ಜಹಗೀರಾಗಿ ಕೊಟ್ಟರು. ಮುಂದೆ, ಈ ಹನುಮಪ್ಪನ ವಂಶದ ಅಣ್ಣ-ತಮ್ಮಂದಿರಿಬ್ಬರಲ್ಲಿ ಒಬ್ಬನು ಅನಂತಪುರದಲ್ಲಿ, ಇನ್ನೊಬ್ಬನು ಬಳ್ಳಾರಿಯಲ್ಲಿ ಆಳುತ್ತಿದ್ದರು. ಬಳ್ಳಾರಿಯ ರಾಮಪ್ಪನಾಯಕನಿಗೆ ಮಕ್ಕಳಿರಲಿಲ್ಲ. ಅನಂತಪುರದ ರಾಮಪ್ಪನಾಯಕನಿಗೆ ಮಕ್ಕಳಿದ್ದುದರಿಂದ ಅವನಿಗೆ

ಕಾಗದ ಬರೆದು, 'ಬಳ್ಳಾರಿಯ ಸಂಸ್ಥಾನಕ್ಕೆ ಸಂತಾನವಿಲ್ಲ. ನನ್ನ ಮನೆ ದೀವಿಗೆಯ ಎಣ್ಣೆ-ಬತ್ತಿ ಮುಗಿದಿದೆ. ನೀವು ಆ ದೀಪವನ್ನು ಬೆಳಗಿಸಲು ಹಕ್ಕುದಾರರು. ನಿಮ್ಮ ಒಬ್ಬ ಮಗನನ್ನು ನನಗೆ ಕೊಡಿರಿ' ಎಂದು ಕೇಳಿದನು. ಅನಂತಪುರದ ರಾಮಪ್ಪನಾಯಕ ಸಾಧು ಪುರುಷ. ಬೆಳ್ಳಗಿರುವದೆಲ್ಲ ಹಾಲು ಎಂದು ನಂಬುವವ. ತನ್ನ ಹಿರಿಯ ಮಗನಾದ ಸಿದ್ಧರಾಮಪ್ಪನಾಯಕನನ್ನು ಬಳ್ಳಾರಿಗೆ ಕಳಿಸಿದನು; ಹೀಗೆ ಅನಂತಪುರದ ರಾಮಪ್ಪನಾಯಕನೊಡನೆ ಸ್ನೇಹ ನಡಿಸಿ, ಬಳ್ಳಾರಿ ರಾಮಪ್ಪನಾಯಕನು ಅವನನ್ನು ಕೊಲ್ಲಿಸಿದನು; ಮತ್ತು ತನ್ನಲ್ಲಿ ಸಾಕಿದ ಸಿದ್ಧರಾಮಪ್ಪನಾಯಕ ಹಾಗೂ ರಾಮಪ್ಪನಾಯಕರ ಅಳಿಯ ಬಸಪ್ಪನಾಯಕರನ್ನು ಬಹುಪರಿಯಿಂದ ಪೀಡಿಸಹತ್ತಿದನು.

ಅನಂತರ, ರಾಮಪ್ಪನಾಯಕನು ಸಿದ್ಧಪ್ಪನಾಯಕ ಅಳಿಯ ಬಸಪ್ಪ ಇವರಿಬ್ಬರಿಗೂ ಒಂದೇ ಬೇಡಿ ಹಾಕಿ, ಬಳ್ಳಾರಿ ಗುಡ್ಡದ ಮೇಲೆ ಕಾವಲಿನಲ್ಲಿ ಟ್ಟನು. ಅಳಿಯ ಬಸಪ್ಪನು ಬಹು ಚತುರ. ತಮ್ಮಿಬ್ಬರ ಪ್ರಾಣ ಉಳಿಸಿ ಕೊಂಡು ಪಾರಾಗಬೇಕೆಂದು ಯೋಚಿಸಿ, ಕಾವಲಿನವರೊಡನೆ ಸ್ನೇಹ ಬೆಳಿಸಿ ದನು. ತನ್ನ ಮಾವನ ಮನೆಯನ್ನು ಮಣ್ಣುಗೂಡಿಸಲು ಯತ್ನಿಸಿದ ರಾಮಪ್ಪ ನಾಯಕನು ತಮ್ಮಿಬ್ಬರನ್ನೆಂದೂ ಜೀವದಿಂದ ಇಡಲಾರನು; ಆದುದ ರಿಂದ 'ನೀವು ನಮ್ಮನ್ನು ಬದುಕಿಸಿ ಪ್ರಾಣದಾನ ಕೊಟ್ಟರೆ, ನಾವು ನಿಮ್ಮ ಹೆಸರಿನಿಂದ ದೀವಿಗೆ ಇರಿಸುತ್ತೇವೆ. ಇದರಿಂದ ನಿಂಮ ಮಕ್ಕಳು-ಮರಿಗೆ ಧರ್ಮ ಬರುತ್ತದೆ' ಎಂದು ಬೇಡಿಕೊಂಡನು. ಕಾವಲುಗಾರರಿಗೆ ಅವರ ಬಗ್ಗೆ ದಯ ಹುಟ್ಟಿತು; ಆದರೆ, ಅವರನ್ನು ಬಿಟ್ಟರೆ, ತಮ್ಮ ಪ್ರಾಣವೂ ಉಳಿಯದ್ದ ರಿಂದ ಅವರನ್ನು ಬಿಟ್ಟು, ಎಲ್ಲಿಯಾದರೂ ಹೋಗಬೇಕೆಂದು ನಿಶ್ಚಯಮಾಡಿ ದರು. ಇಬ್ಬರನ್ನೂ ಬಿಗಿದಿರುವ ಬೇಡಿಗಳನ್ನು ಕಡಿದು ಹಾಕಿ, ರಾತ್ರಿಯಲ್ಲಿ ಚಿಕ್ಕವನಾದ ಸಿದ್ಧಪ್ಪನನ್ನು ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು, ಗುಡ್ಡ ಇಳಿದು, ಮುಂದೆ ಕಳ್ಳಹಾದಿ ಹಿಡಿದು, ಹಾಗಲಕೆರೆ ಏರಿಯ ಬಳಿಗೆ ಬಂದು, ಹಿರೇಹಾಳಿನ ದಾರಿ ಇದೇ ಎಂದು ತೋರಿಸಿ ಅವರು ಹೊರಟು ಹೋದರು.

ಸಿದ್ದಪ್ಪನಾಯಕನು ಅರಸುಮಗ. ಎಂದೂ ಬರಿಗಾಲಿನಿಂದ ನಡೆದವ ನಲ್ಲ. ಹಸಿವೆ ಕಟ್ಟಿದವನಲ್ಲ. ಇಂಥವನು ದಾರಿ ನಡೆದು ಬಳಲಿದನು. ಮುಂದೆ ನಡೆಯಲಿಕ್ಕೆ ಕಾಲುಗಳು ಏಳದಾದವು. ಸಂಕಟವಾಗಹತ್ತಿತು.

ಅಲ್ಲಿಯೇ ಒಂದು ಹೊಲದ ಬದುವಿನಲ್ಲಿದ್ದ ಗಿಡದ ನೆರಳಿನಲ್ಲಿ ಮಲಗಿದನು. ಶತ್ರುಗಳ ಕೈಗೆ ಸಿಗಬಾರದೆಂದು ಓಡಿ ಬಂದದ್ದು ವ್ಯರ್ಥವಾಯಿತಲ್ಲಾ ಎಂದು ಅಳಿಯ ಬಸಪ್ಪನು ಬಲು ಬಗೆಯಿಂದ ಮರುಗುತ್ತ ಕುಳಿತನು. ಅತ್ತಲಿಂದ ಬಣಜಿಗರ ಗೌಡನೊಬ್ಬನು ತಂಗುಳ ಬುತ್ತಿ ಕಟ್ಟಿಕೊಂಡು ತನ್ನ ಹೊಲಕ್ಕೆ ಹೋಗುತ್ತಿರಲು, ಗಿಡದ ಕೆಳಗೆ ಒಬ್ಬನು ದಣಿದು ಮಲಗಿ, ಇನ್ನೊಬ್ಬ ಚಿಂತೆಯಲ್ಲಿ ಕುಳಿತಿರುವದನ್ನು ಕಂಡನು. ಹತ್ತಿರ ಬಂದು ನೀವು ಯಾರು? ಎಲ್ಲಿಯವರು? ಎಲ್ಲಿಗೆ ಹೋಗುತ್ತಿದ್ದೀರಿ? ಎಂದು ಕೇಳಿದನು. ಬಸಪ್ಪನು ಎಲ್ಲ ಸಂಗತಿ ತಿಳಿಸಿದನು. ಗೌಡನಿಗೆ ಬಹು ಕನಿಕರ ಹುಟ್ಟಿತು. ಅವರಿಗೆ ಹೆದರಬೇಡಿರಿ ಎಂದು ಧೈರ್ಯಕೊಟ್ಟು, ತನ್ನ ಎತ್ತಿನ ಮೇಲೆ ಸಿದ್ಧಪ್ಪನನ್ನು ಕುಳ್ಳಿರಿಸಿ, ಬಸಪ್ಪನೊಡನೆ ತನ್ನ ಹೊಲದ ಕಣಕ್ಕೆ ಕರೆದುಕೊಂಡು ಹೋದನು. ತರುವಾಯ ಅವರಿಗೆ ಕೈ-ಕಾಲು, ಮುಖ ತೊಳೆಯಲಿಕ್ಕೆ ನೀರು ಕೊಟ್ಟು, ತನ್ನ ಬಳಿಯಲ್ಲಿದ್ದ ತಂಗುಳ ಅನ್ನವನ್ನು ಅವರಿಗೆ ಕೊಟ್ಟು ಊಟ ಮಾಡಿಸಿ, ಅವರನ್ನು ನವಣೆಯ ಹುಲ್ಲಿನಲ್ಲಿ ಅಡಗಿಸಿ ಇಟ್ಟನು.

ಅನಂತರ, ರಾತ್ರಿ ಹೊತ್ತು, ಗೌಡನು ಸಿದ್ಧಪ್ಪ, ಬಸಪ್ಪನಾಯಕರಿಗೆ ಕಂಬಳಿಯ ಕೊಪ್ಪೀ ಹೊದ್ದಿಸಿ, ಎತ್ತುಗಳ ಮೇಲೆ ಕುಳ್ಳಿರಿಸಿ ಯಾರಿಗೂ ತಿಳಿಯದಂತೆ, ತನ್ನ ಹೊಲದಿಂದ ಮನೆಗೆ ಕರಕೊಂಡು ಹೋದನು. ಅಲ್ಲಿ ಅವರಿಗೆ ಸ್ನಾನ ಮಾಡಿಸಿ, ಅವರೊಡನೆ ಊಟಮಾಡಿ, ಉಂಡನಂತರ ಕಮ್ಮಾರನನ್ನು ಕರೆತರಿಸಿ, ಬಸಪ್ಪನಾಯಕನ ಕಾಲಿನಲ್ಲಿದ್ದ ಬಿಗಿಯಾದ ಬೇಡಿಗಳನ್ನು ಕಡಿಸಿ, ಕೆಲ ಜನರನ್ನು ಸಂಗಡ ಕರೆದುಕೊಂಡು, ಅವರಿಬ್ಬರನ್ನು ಎತ್ತುಗಳ ಮೇಲೆ ಕುಳ್ಳಿರಿಸಿಕೊಂಡು, ಅವರಿಬ್ಬರು ದೊರೆಗಳನ್ನು ಹಿರೇಹಾಳಿನ ಅಮಲದಾರ ಶಿವಪ್ಪನವರ ಸ್ವಾಧೀನ ಮಾಡಿದನು.

ಮುಂದೆ, ಶಿವಪ್ಪನವರು ಗುತ್ತಿಯ ಮುರಾರಿರಾಯನೊಡಗಡಿ ಸಿದ್ಧಪ್ಪನಾಯಕನಿಗೆ ಬೆಂಬಲರಾಗಿ ನಿಂತು, ಅನಂತಪುರದ ಸಂಸ್ಥಾನವನ್ನು ಅವನಿಗೆ ಕೊಡಿಸಿ, ಶ್ರೀ ವಿರೂಪಾಕ್ಷೇಶ್ವರ ದೇವರ ರಥೋತ್ಸವದ ಮುಹೂರ್ತದಲ್ಲಿ ಸಿದ್ಧಪ್ಪನಾಯಕರಿಗೆ ದೇವರ ದರ್ಶನ ಮಾಡಿಸಿ, ಅನಂತಪುರ ಸಂಸ್ಥಾನ ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಬಸಪ್ಪನಾಯಕನು ದಳವಾಯಿಯಾಗಿ ಕೆಲಸ ಮಾಡಹತ್ತಿದನು. ತಾನು ಪಟ್ಟಕ್ಕೆ ಕುಳಿತ ಮೇಲೆ ಸಿದ್ಧಪ್ಪ

ನಾಯಕನು ಕಷ್ಟಕಾಲದಲ್ಲಿ ತನಗೆ ಸಹಾಯ ಮಾಡಿದವರನ್ನೆಲ್ಲ ನೆನೆದು ಕರೆಕಳಿಸಿ-ತಕ್ಕ ಮರ್ಯಾದೆ ಮಾಡಿದನು. ಹೊಲದ ದಂಡೆಯಲ್ಲಿ ಗಿಡದ ಕೆಳಗೆ ನೆರಳುತ್ತ ಬಿದ್ದಾಗ ತನ್ನನ್ನು ಎತ್ತಿನ ಮೇಲೆ ಕುಳ್ಳಿರಿಸಿ, ಹೊಲದ ಕಣಕ್ಕೆ ಕರ ಕೊಂಡು ಹೋಗಿ, ತಂಗುಳ ಬುತ್ತಿ-ರೊಟ್ಟಿ ಕೊಟ್ಟು ಸಂರಕ್ಷಿಸಿದ ಬಣಜಿಗ ಗೌಡನನ್ನು ಕರೆಕಳಿಸಿ, 'ನೀನು ಅನ್ನ ಕೊಟ್ಟು ಪ್ರಾಣ ಉಳಿಸಿದ್ದರಿಂದ ಈ ಭಾಗ್ಯವು ನಿನ್ನದೇ' ಎಂದು ಅಂದಿನ ಕಷ್ಟದ ದಿನಗಳನ್ನು ನೆನಿಸಿಕೊಂಡು ಕಣ್ಣೀರು ತಂದು, ಅವನನ್ನು ಬಹುಪರಿಯಾಗಿ ಸಂತೋಷಪಡಿಸಿ, ಎರಡು ಸಾವಿರ ರೂಪಾಯಿ ಉಡುಗೊರೆ ಕೊಟ್ಟು ಕಳಿಸಿದನು. 'ನಾನು ಕೊಟ್ಟ ತಂಗುಳ ಬುತ್ತಿಗೆ ಇಷ್ಟು ಮರ್ಯಾದೆಯೆ?' ಎಂದು ನುಡಿಯುವಾಗ ಗೌಡ ನಿಗೆ ಪ್ರೇಮ-ಆದರಾತಿಶಯಗಳಿಂದ ಕಂಠವು ಬಿಗಿಯಿತು, ದನಿ ನಡುಗಿತು, ಮುಂದೆ ಅವನ ಬಾಯಿಂದ ಮಾತುಗಳು ಹೊರಡದೆ, ಕಣ್ಣೀರಿನ ಕಾಣಿಕೆ ಒಪ್ಪಿಸಿ, 'ಇದ್ದರೆ ಇಂಥ ಒಡೆಯನಿರಬೇಕು' ಎಂದು ಹೊಗಳುತ್ತ ಮನೆಗೆ ನಡೆದನು.

## ೩೭

## ನರಪತಿ ರಾಮರಾಯರು
# ತಾಯಿಯನ್ನು ಕಂಡದ್ದು

[ಮುಸಲ್ಮಾನ ಬಾದಶಹರು ವಿಜಯನಗರ ರಾಮರಾಯನ ಸಂಗಡ ಯುದ್ಧ ಹೂಡಬೇಕೆಂದು ನಿಶ್ಚಯಿಸಿದ ಸಂಗತಿಯನ್ನು ತಿಳಿದು ರಾಮರಾಯರೂ ಯುದ್ಧದ ಸಿದ್ಧತೆ ನಡಿಸಿದರು. ಆಗ, ಒಂದುದಿನ ತಮ್ಮ ತಾಯಿಯವರ ಅರಮನೆಗೆ ಹೋದಾಗಿನ ಪ್ರಸಂಗ. ಇದನ್ನು ರಾಮರಾಯನ ಬಖೈರು ಎಂಬ ಪುಸ್ತಕದ ಆಧಾರದಿಂದ ಬರೆಯಲಾಗಿದೆ.]

ನರಪತಿ ರಾಮರಾಯರು ತಮ್ಮ ಮಾತೃಶ್ರೀಯವರ ಚಂದ್ರಶಾಲೆಯ ಮಹಲಿನ ಮೇಲಕ್ಕೆ ಹೋಗಿ, ವಿನಯಪೂರ್ವಕವಾಗಿ ಅವರಿಗೆ ನಮಸ್ಕಾರ ಮಾಡಿದರು. ತಾಯಿಯವರು ಬಹಳ ಸಂತೋಷಪಟ್ಟು, ಆಶೀರ್ವಾದ ಮಾಡಿ, ನವರತ್ನ, ಸುವರ್ಣಪುಷ್ಪ ಮೊದಲಾದುವನ್ನು ರಾಮರಾಯರಮೇಲೆ

ನಿವಾಳಿಸಿ, ಮಗನ ಕೈಹಿಡಿದು, ತಮ್ಮ ಮಹಲಿನೊಳಗೆ ಕರೆದುಕೊಂಡು ಹೋದರು. ಕುಶಲ ಪ್ರಶ್ನೆಗಳಾದ ಮೇಲೆ ರಾಮರಾಯರು ತಾಯಿಯವರನ್ನು ಕುರಿತು ಈ ರೀತಿಯಾಗಿ ಬಿನ್ನವಿಸಿಕೊಂಡರು:—

ಮೂರುಮಂದಿ ಬಾದಶಹರು ಕೂಡಿ ಒಂದಾಗಿ, ಕರ್ನಾಟಕ ದೇಶವನ್ನೇ ಹಾಳುಮಾಡಿ ಬಿಡಬೇಕೆಂದು ನನ್ನ ಮೇಲೆ ದಂಡೆತ್ತಿ ಬರುವುದರಲ್ಲಿದ್ದಾರೆ. ನಮ್ಮದು ಧರ್ಮರಾಜ್ಯ. ನಿಮ್ಮ ಅನುಗ್ರಹದಿಂದಲೂ ಕುಲದೇವರ ಪ್ರಸಾದದಿಂದಲೂ ನನಗೆ ಯಾವುದಕ್ಕೂ ಕಡಿಮೆ ಇಲ್ಲ. ಬಲವಾದ ಸೈನ್ಯವಿದೆ, ವಿಪುಲ ದ್ರವ್ಯವಿದೆ; ಆದುದರಿಂದ ಎಲ್ಲ ಸೈನ್ಯ ಕಟ್ಟಿಕೊಂಡು ಹೋಗಿ, ಶತ್ರುಗಳನ್ನು ಸದೆ ಬಡಿದು ಬರುವೆನು. ತಮ್ಮ ಆಶೀರ್ವಾದವಾಗಬೇಕು.

ಆಗ ತಾಯಿಯವರು ಅಂದದ್ದು:— "ಅಪ್ಪ, ನೀನು ದೊಡ್ಡ ನರಪತಿ. ಇಂದಿಗೆ ನಮ್ಮ ಪಟ್ಟವನ್ನು ಏಳುಮಂದಿ ಅರಸರು ಆಳಿದರು. ಇದುವರೆಗೆ ಅವರು ತಮ್ಮ ತಮ್ಮ ಮರ್ಯಾದೆಗಳನ್ನು ಉಳಿಸಿಕೊಂಡರು. ಈಗಬೇರೆ ಬಾದಶಹರ ಕಾಟ ಹೆಚ್ಚಾಗಿದೆ. ನೀನಾದರೋ ಒಬ್ಬನು. ಅವರೊಡನೆ ಮಾತುಕತೆ ನಡಿಸಿ, ಒಪ್ಪಂದ ಮಾಡಿಕೊಳ್ಳುವದು ಉತ್ತಮವೆಂದು ನನಗೆ ತೋರುತ್ತದೆ."

ರಾಜಭೂವರರಾದ ರಾಮರಾಯರು ಅಂದದ್ದು:— "ನಾನು ದೊಡ್ಡ ಚಕ್ರವರ್ತಿ. ನನ್ನ ಮುಂದೆ ಅವರೆಲ್ಲಿ? ಅಂಥವರೊಡನೆ ನಾನು ಅನುಸಂಧಾನ ನಡೆಸುವದು ನನ್ನ ಗೌರವಕ್ಕೆ ತಕ್ಕುದಲ್ಲ. ವಿಜಯಿಯಾಗುವವರೆಗೂ ಯುದ್ಧ ನಡಿಸಲಿಕ್ಕೇನೂ ಅಡ್ಡಿ ಇಲ್ಲ. ಶತ್ರುಗಳನ್ನು ಕ್ಷಣದಲ್ಲಿ ಸೋಲಿಸುವೆ."

ಆಗ, ತಾಯಿಯವರು ರಾಮರಾಯರಿಗೆ ಜಯವಾಗಲೆಂದು ಬಹು ಬಗೆಯಿಂದ ಹರಸಿದರು. ಸಿಂಹಾಸನದ ಮೇಲೆ ಕುಳ್ಳಿರಿಸಿ ಕನಕಾಭಿಷೇಕ ಮಾಡಿ, 'ಗೆದ್ದು ಬಾರಪ್ಪ' ಎಂದು ಕಳಿಸಿದರು.

ಆ ದಿನವೇ ರಾತ್ರಿ ರಾಮರಾಯರು ಒಂದು ಕೆಟ್ಟ ಕನಸು ಕಂಡರು. ಅದರಲ್ಲಿ ತಮ್ಮ ಕಿವಿಯೊಳಗಿನ ಕುಂಡಲಗಳನ್ನು ಯಾರೋ ಕಸಿದುಕೊಂಡಂತೆ ತೋರಿತು. ಕೂಡಲೆ, ದೇವರನ್ನು ನೆನೆಯುತ್ತ ರಾಮರಾಯರು ಎದ್ದು, ಕಂಡ ಕನಸಿನ ಸಂಗತಿಯನ್ನು ಪಂಡಿತರ ಮುಂದೆ ಹೇಳುತ್ತ, ಇಂಥ ಕೆಟ್ಟ ಕನಸನ್ನು ನಾನೆಂದೂ ಕಂಡಿಲ್ಲ. ದೇವರು ನನ್ನ ಮೇಲೆ ಎಂದೂ

ಸಿಟ್ಟಾಗಿರಲಿಲ್ಲ. ಅದೇಕೋ ಈಗ ಐಶ್ವರ್ಯಕ್ಕೆ ಹಾನಿ ಬಂದಿತು. ಭಾಗ್ಯಲಕ್ಷ್ಮಿ, ಕುಲ-ದೇವತೆ, ನನ್ನ ಮೇಲೆ ಸಿಟ್ಟಾದಳು. ದೇವರ ಅನುಗ್ರಹ ತಪ್ಪಿದ ಮೇಲೆ ನನ್ನ ಯತ್ನವಿಲ್ಲ. ನನ್ನ ಕೈಯಿಂದಾದಷ್ಟು ಧೈರ್ಯಗೆಡದೆ, ಕರ್ತವ್ಯ ಬಿಡದೆ ಹೋರಾಡುವೆನು. ಮುಂದೆ, ದೇವರು ಮಾಡಿಸಿದ್ದಾಗಲಿ, ಅಂದರು. ಆದರೂ ಚಿಂತೆಯು ತಪ್ಪಲಿಲ್ಲ. ಗುರು-ಹಿರಿಯರು 'ಚಿಂತೆ ಬೇಡ. ದೇವರು ಪರಿಹಾರ ಮಾಡುವನು.' ಎಂದು ಆಶೀರ್ವದಿಸಿದರು. ದೇವರ ಮೇಲೆ ಭಾರಹಾಕಿ ರಾಮರಾಯರು ಯುದ್ಧದ ಸನ್ನಾಹ ನಡಿಸಿದರು.

---

## ೩೮

## ಸಿಂಹಲದ್ವೀಪದ ಮೇಲೆ
# ಕನ್ನಡಿಗರ ಧ್ವಜ

[ಸಿಂಹಲ ದ್ವೀಪವು ಹಿಂದುಸ್ಥಾನದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿದ್ದರೂ ಅದನ್ನು ವಶ ಪಡಿಸಿಕೊಳ್ಳಬೇಕೆಂದು ಆಗಾಗ್ಗೆ ಪಾಂಡ್ಯ-ಚೋಳ-ಚೇರ ರಾಜರು ಅವರ ಮೇಲೆ ದಾಳಿ ನಡಿಸುತ್ತಿದ್ದರು. ಅವರ ಇಳಿಗೆಯನಂತರ ಕನ್ನಡಿಗರಾದ ರಾಷ್ಟ್ರಕೂಟರ ಮುಮ್ಮಡಿಕೃಷ್ಣನು ದಂಡೆತ್ತಿ ಹೋಗಿ ಸಿಂಹಲದ್ವೀಪದ ಅರಸನಿಂದ ಕಪ್ಪವನ್ನೆತ್ತಿದನು. ಆಮೇಲೆ, ವಿಜಯನಗರದ ರಾಯರ ಆಳಿಕೆಯಲ್ಲಿ ಸಿಂಹಲದ್ವೀಪದ ಅರಸನು ವಿಜಯನಗರದ ಅರಸರಿಗೆ ಕಪ್ಪ-ಕಾಣಿಕೆಯನ್ನು ಕೊಟ್ಟು, ಅವರ ಮಾಂಡಲಿಕನಾಗಿದ್ದನು. ಸಿಂಹಲದ್ವೀಪ, ಮಲಿಯಾಳ ಮುಂತಾದ ದೂರ ದೂರಿನ ಅರಸರು ಸಹ ತಮ್ಮ ರಾಯಭಾರಿಗಳನ್ನು ವಿಜಯನಗರದಲ್ಲಿ ಇಟ್ಟಿದ್ದರಂತೆ. ಈ ವಿಷಯವನ್ನು ಮಿಥಿಕ್ ಸೊಸಾಯಟಿ ಜರ್ನಲ್ ಎಂಬ ಪುಸ್ತಕದಿಂದ ಬರೆಯಲಾಗಿದೆ.]

ವಿಜಯನಗರದ ಸಂಗಮವಂಶದ ಎರಡನೆಯ ಹರಿಹರನ ಆಳಿಕೆಯಲ್ಲಿ ಆತನ ಮಗ ವಿರೂಪಾಕ್ಷನು ದಕ್ಷಿಣಕ್ಕೆ ದಂಡೆತ್ತಿ ಹೋದನು. ಅವನು ಆಗ ದಕ್ಷಿಣದಲ್ಲಿ ಆಳುತ್ತಿದ್ದ. ತುಂಡೀರ, ಚೋಳ ಪ್ರಾಂತ ಅರಸರನ್ನುಗೆದ್ದು, ಆ ರಾಜ್ಯಗಳಿಗೆಲ್ಲ ತನ್ನ ಪ್ರತಿನಿಧಿಯನ್ನು ನಿಯಮಿಸಿದನು. ಇವನೇ ಮುಂದೆ ಸಿಂಹಲದ್ವೀಪಕ್ಕೂ ಹೋಗಿ, ಅಲ್ಲಿ ತನ್ನ ಜಯಸ್ತಂಭವನ್ನು ನೆಡಿಸಿ ಬಂದನು.


ಮುಂದೆ, ಸದಾಶಿವರಾಯನಿಗೂ 'ಸಿಂಹಲದ್ವೀಪ-ವಿಜಯಿ' ಎಂದು ಬಿರುದು ಬಂದಂತೆ ತೋರುತ್ತದೆ. 'ಈತನ ಆಳಿಕೆಯಲ್ಲಿ ಮಾಂಡಲಿಕನಾದ

ಮಧುರೆಯ ಕುಮಾರ ಕೃಷ್ಣಪ್ಪನಾಯಕನು ವಿಜಯನಗರದ ರಾಯರ ಸಹಾಯದಿಂದ ಸಿಂಹಲದ್ವೀಪಕ್ಕೆ ದಾಳಿ ಮಾಡಿದನು. ಕೃಷ್ಣಪ್ಪನಾಯಕನು ತನ್ನ ಸಂಗಡ ಆಗ ಐವತ್ತು ಜನ ಪಾಳ್ಯಗಾರರನ್ನು ಒಯ್ದಿದ್ದನಂತೆ. ಸಿಂಹಲ ದ್ವೀಪದ ಅರಸನಿಗೆ ಎಲ್ಲಕ್ಕೂ ಮೊದಲು ಕೃಷ್ಣಪ್ಪನಾಯಕನು ಶರಣು ಬರ ಲಿಕ್ಕೆ ಹೇಳಿ ಕಳಿಸಿದನು. ಅವನು ಈಲಾಗಲಿಲ್ಲ. ಪುತ್ತಾಲಂ ಎಂಬಲ್ಲಿ ಕನ್ನಡಿಗರಿಗೂ ಸಿಂಹಲೀ ಜನರಿಗೂ ಯುದ್ಧವಾಯಿತು. ದಳವಾಯಿ ಚೆನ್ನ ಕೇಶವ ನಾಯಕನು ಸಿಂಹಲದ್ವೀಪದ ಅರಸನ ದಂಡಿನವರನ್ನು ಸೋಲಿಸಿ ದನು. ಅವನ ದಂಡನಾಯಕರನ್ನು ಸೆರೆಹಿಡಿದು ಅವರನ್ನು ಒಳ್ಳೇ ರೀತಿ ಯಿಂದ ನಡಿಸಿಕೊಂಡನು. ಈ ಸಿಟ್ಟಿನಿಂದ ಸಿಂಹಲದ್ವೀಪದ ಅರಸನು ಮತ್ತೆ ದಂಡು ಕೂಡಿಸಿ, ಕೃಷ್ಣಪ್ಪನಾಯಕನ ದಂಡಿನಮೇಲೆ ಹಲ್ಲೆ ನಡಿಸಿ ದನು. ಈ ಹಲ್ಲೆಯಲ್ಲಿ ಮಾತ್ರ ಸಿಂಹಲದ್ವೀಪದ ಅರಸನು ಸಿಕ್ಕು ಮಡಿದನು. ಕೃಷ್ಣಪ್ಪನಾಯಕನು ಮೂರು ದಿನಗಳವರೆಗೆ ಸಿಂಹಲ ರಾಜ್ಯದ ರಾಜಧಾನಿ ಯಲ್ಲಿ ಇದ್ದು, ಅವನ ಮನೆಯ ಹೆಂಗಸರನ್ನೆಲ್ಲ ಹಳೆಯ ರಾಜಧಾನಿಯಾದ ಔರಂಗಂ ಎಂಬಲ್ಲಿಗೆ ಕಳಿಸಿ, ತನ್ನ ಬೀಗನಾದ ವಿಜಯಗೋಪಾಲ ಎಂಬುವ ನನ್ನು ಪ್ರತಿನಿಧಿಯನ್ನಾಗಿ ಇಟ್ಟು, ತಾನು ಮಧುರೆಗೆ ಮರಳಿದನು.

ರಾಮರಾಯನ ಆಳಿಕೆಯಲ್ಲಿಯೂ ಸಿಂಹಲದ್ವೀಪದ ಅರಸರು ವಿಜಯನಗರದ ಮಾಂಡಲಿಕರಾಗಿದ್ದರು. ಅವನ ಆಳಿಕೆಯಲ್ಲಿ ರಾಮರಾಯನ ತಮ್ಮನಾದ ತಿರುಮಲರಾಯ, ರಾಮರಾಯವಿಠ್ಠಲದೇವ ಎಂಬುವರು ಹೋಗಿ ಸಿಂಹಲದ ಅರಸನಿಂದ ಕಪ್ಪಕಾಣಿಕೆ ತಂದಿದ್ದರು.




ಅಳಿಯ ರಾಮರಾಯ ಮಹಾರಾಯರು




ರಕ್ಕಸತಂಗಡಿಗಿ ಕಾಳಗ — ರಾಮರಾಯರ ಶಿರಚ್ಛೇದ

( ಭಾ. ಇ. ಮಂಡಳ ಪುಣೆ)

# ೩೯
# ರಕ್ಕಸಿಗಿ-ತಂಗಡಗಿಯ
# ಕಾಳಗ

( ಕ್ರಿ.ಶ. ೧೫೬೫ )

[ ವಿಜಾಪುರ ಆದಿಲಶಾಹಿಯವರಿಗೂ ವಿಜಯನಗರದವರಿಗೂ ರಾಜಕಾರ್ಯ ಸಂಬಂಧವಾಗಿ ಪತ್ರವ್ಯವಹಾರ ನಡೆಯುತ್ತಿತ್ತು. ಒಮ್ಮೆ, ಆದಿಲ್‌ಶಹನ ಮಹಲುದಾರನು ವಿಜಯನಗರದ ರಾಮರಾಯರ ಕಡೆಗೆ ಕಾಗದಪತ್ರ ತೆಗೆದುಕೊಂಡು ಬಂದನು. ಅವುಗಳನ್ನು ರಾಮರಾಯರು ಸ್ವಲ್ಪ ಉದಾಸೀನ ಮಾಡಿದರು; ಅಲ್ಲದೆ ಜಾತಿಯ ವಿಷಯವಾಗಿ ಮುಸಲ್ಮಾನನಾದ ಮಹಲುದಾರನಿಗೂ ನರಪತಿಗಳಾದ ರಾಮರಾಯರಿಗೂ ನಗೆಯಲ್ಲಿ ಮಾತಿಗೆ ಮಾತು ಹತ್ತಿತು. ಈ ಯುದ್ಧವು ಮುಸಲ್ಮಾನರ ಐದು ಶಾಹೀ ರಾಜರಲ್ಲಿ ಮತ್ತು ವಿಜಯನಗರದವರಲ್ಲಿ ನಡೆಯಿತು. ಇದಕ್ಕೆ ರಕ್ಕಸಿಗಿ-ತಂಗಡಗಿಯ ಕಾಳಗವೆಂದು ಹೆಸರು. ಈ ಕಥೆಯನ್ನು 'ರಾಮರಾಯನ ಬಖೈರು' ಎಂಬ ಹಳೆಯ ಪುಸ್ತಕದಿಂದ ತೆಗೆದುಕೊಂಡಿದೆ. ]

ಇಬ್ಬಣದವರೂ ಯುದ್ಧಕ್ಕೆ ಸಿದ್ಧರಾಗಿ ತಂತಮ್ಮ ಸೈನ್ಯದೊಡನೆ ಬಾದಶಹರು ಅತ್ತಲಿಂದಲೂ ವಿಜಯನಗರದವರು ಇತ್ತಲಿಂದಲೂ ಹೊರಟರು. ರಾಜಭೂವರರು ತಾವರೆಗೆರೆ-ಕೃಷ್ಣಗಿರಿಗಳ ನಡುವೆ ಇಳಿದರು. ನಿಜಾಂಶಹನು ಭೀಮಾನದಿಯ ದಂಡೆಯಲ್ಲಿ, ಕುತುಬಶಹನು ಮುದಗಲ್ಲು, ರಾಯಚೂರುಗಳ ನಡುವೆ, ಆದಿಲ್‌ಶಹನು, ಇಮಾಮ ಉಲ್ಮುಲ್ಕ ಬಾದಶಹರು ಕೃಷ್ಣಾನದಿಯ ಬಳಿಯಲ್ಲಿ, ಹೀಗೆ ಠಾಣ್ಯಗಳನ್ನು ಹಾಕಿದರು.

ರಾಜಭೂವರರು ತಮ್ಮ ಕಡೆಯ ಅಷ್ಟಮಂತ್ರಿಗಳು, ಬಿಸಲಪ್ಪನಾಯಕ, ದಳವಾಯಿ ಕಾರ್ತಿಕನಾಯಕ, ಮದಗಮಾಸುರ ವೀರಪ್ಪನಾಯಕ, ಇಕ್ಕೇರಿ ಕೃಷ್ಣಪ್ಪನಾಯಕ, ಸೋದೆ ರಘುನಾಥನಾಯಕ, ಚಿತ್ರಕಲ್ಲು ಶೀನಪ್ಪನಾಯಕ, ಚಂದವರದ ಭೀಮಪ್ಪನಾಯಕ, ಆದವಾನಿ ವೆಂಕಟನಾಯಕ, ಹರಪನಹಳ್ಳಿ ಪೆದ್ದನಾಯಕ, ಗುತ್ತಿಯ ತಿಮ್ಮಪ್ಪನಾಯಕ, ಬಿದನೂರಿನ ಸೋಮಶೇಖರನಾಯಕ, ಬಂಕಾಪುರದ ಯಲ್ಲಪ್ಪನಾಯಕ, ಮೊದಲಾದವರನ್ನು ತಮ್ಮಲ್ಲಿಗೆ ಕರೆಯಿಸಿ, 'ಯುದ್ಧದಲ್ಲಿ ನಿಮ್ಮ ಶೌರ್ಯ-ಪರಾಕ್ರಮಗಳನ್ನು ತೋರಿಸಿ, ಕರ್ನಾಟಕ ದೇಶದ ಕೀರ್ತಿಯನ್ನು ಉಳಿಸಿರಿ' ಎಂದು ಹೇಳಿದರು.

ರಕ್ಕಸಿಗಿ-ತಂಗಡಿಗಿ ಹತ್ತರ ವಿಜಯನಗರದವರ ಸೈನ್ಯ ಬೀಡು ಬಿಟ್ಟಿತ್ತು. ಅಲ್ಲಿಂದ ಮೂರು ನಾಲ್ಕು ಗಾವುದಗಳಲ್ಲಿ ಸುತ್ತಲೂ ಮುಸಲ್ಮಾನರ ಸೈನ್ಯವು ನಿಂತಿತು. ಎರಡು ಪಕ್ಷದವರಿಗೂ ಯುದ್ಧ ಪ್ರಾರಂಭವಾಯಿತು. ಬಾಣ-ಮದ್ದುಗಳ ಸಪ್ಪಳದಿಂದ ಆಕಾಶವೆಲ್ಲ ತುಂಬಿತು. ಹೊಗೆಯಿಂದ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣದಾಯಿತು. ಹೀಗೆ ಮೂರು ದಿನಗಳವರೆಗೆ ನಡೆಯಿತು. ಎರಡೂ ಕಡೆಯ ಸೈನ್ಯದೊಳಗೆ ಅನೇಕರು ಸತ್ತರು, ಗಾಯಗೊಂಡರು.

'ಕನ್ನಡ ಜಾಣ'ನೆಂದು ಹೆಸರುಪಡೆದ ವಿಜಾಪುರದ ಆದಿಲ್‌ಶಹನೂ ವಹಿಮ ಉಲ್ಮುಲ್ಕನೂ ತಮ್ಮ ತಮ್ಮ ಸೈನ್ಯದೊಂದಿಗೆ ಠಾಣ್ಯಗಳಲ್ಲಿಯೇ ಇದ್ದರು. ರಾಜಭೂವರರಿಗೆ ಆದಿಲ್‌ಶಹನು ಮುಸಲ್ಮಾನರೊಂದಿಗೆ ಕೂಡಿದ ಸಂಗತಿಯು ತಿಳಿಯಿತು. ಆಗ, ದಳವಾಯಿ ಗಿರಿಯಪ್ಪನಾಯಕ, ಜಮಾದಾರ-ಖಾನಿ ಪವಾಡಿನಾಯಕರನ್ನು ಆದಿಲ್‌ಶಹನ ಬಳಿಗೆ ಕಳಿಸಿ, ಹೀಗೆ ಹೇಳಲು ಅಪ್ಪಣೆ ಮಾಡಿದರು.

'ನೀನು ಚಿಕ್ಕಂದಿನಿಂದ ರಾಜಭೂವರರಿಂದ ಬೆಳೆದು ದೊಡ್ಡವನಾದೆ ಆಗ, ನಿನಗಾಗಿ ಹಾಲು-ಬೆಣ್ಣೆಗಳ ದೆಸೆಯಿಂದ ನರಪತಿಗಳು ರಾಯಚೂರು-ಮುದಗಲ್ಲುಗಳನ್ನು ಕೊಡಲಿಲ್ಲವೇ? ನೀನೀಗ ಶತ್ರುಗಳೊಂದಿಗೆ ಸೇರಿ, ನಮ್ಮ ಮೇಲೆ ಕೈ ಮಾಡುವದು ಸರಿಯಲ್ಲ. ಅದಕ್ಕೆ ಆದಿಲ್‌ಶಹನು 'ನಿಮ್ಮಲ್ಲಿ ನನಗೆ ಹೆತ್ತ ತಂದೆಯಷ್ಟು ಆದರವಿದೆ. ನಾನು ನಿಮ್ಮನ್ನೇ ಅನುಸರಿಸಿದ್ದೇನೆ. ನನ್ನಲ್ಲಿ ಅನುಮಾನ ಪಡಬೇಡಿರಿ' ಎಂದು ಉತ್ತರ ಕಳಿಸಿದನು.

ಈ ಸುದ್ದಿಯು ಮೂರೂ ಮಂದಿ ಬಾದಶಹರಿಗೆ ತಿಳಿಯಿತು. ಅವರು ಆದಿಲ್‌ಶಹನಿಗೆ ಹೀಗೆ ಕಾಗದ ಬರೆದು ಕಳಿಸಿದರು. 'ನಾವೆಲ್ಲರೂ ಈಗ ನರಪತಿಯ ಮೇಲೆ ದಂಡೆತ್ತಿ ಬಂದಿರುವೆವು. ನೀನು ಒಳಗಿಂದೊಳಗೆ ಅವರೊಡನೆ ಕೂಡಿಕೊಂಡಿರುವೆ. ಇದರಲ್ಲಿ ಫಿತೂರಿ ಕಾಣಿಸುತ್ತದೆ.' ಆದಿಲ್‌ಶಹನು ಈ ಬೆದರಿಕೆಯಿಂದ ಹೆದರಿ, 'ನೀವು ಹೇಳಿದಂತೆ ನಡೆಯುವೆನು' ಎಂದು ಹೇಳಿ ಕಳಿಸಿದನು.

ತರುವಾಯ, ಮತ್ತೆ ಯುದ್ಧಕ್ಕೆ ಪ್ರಾರಂಭವಾಯಿತು. ರಾಜಭೂವರರು ರಣಗಂಟೆಯನ್ನು ಹೊಡೆಯಿಸಿ, ರಣಸ್ತಂಬ ಕಟ್ಟಿಸಿದರು. ತಾವು ಸ್ವತಃ

ರಾಜಹಂಸಾಪ್ಪೃತವೆಂಬ ಆನೆಯ ಮೇಲೆ ಕುಳಿತು, ದಂಡಿನೊಡನೆ ರಣಭೂಮಿಗೆ ಹೊರಟರು. ಕರ್ನಾಟಕ ಸೈನ್ಯದವರ ಹೊಡೆತವನ್ನು ತಡೆಯಲಾರದೆ ಬಾದಶಹರ ದಂಡಿನವರು ಓಡಿದರು. ನರಪತಿಗಳಿಗೆ ಜಯವಾಯಿತು. ತಮಗೆ ಗೆಲುವಾದ ಆನಂದದೊಳಗೇ ರಾಜಭೂವರರ ಸೈನ್ಯವು ತಮ್ಮ ರಾಣ್ಯಕ್ಕೆ ಹಿಂತಿರುಗಿತು.

ತಮಗಾದ ಸೋಲಿನಿಂದ ಬಾದಶಹರು ಬಲು ಖಿನ್ನರಾಗಿ, ಆದಿಲ್ ಶಹನ ಕಡೆಗೆ ತಮ್ಮ ಹೇಜೀಬನನ್ನು ಕಳಿಸಿ, 'ಈಗಲಾದರೂ ದೂರದೃಷ್ಟಿಯಿಂದ ಯೋಚನೆ ಮಾಡಿ ಯುದ್ಧಕ್ಕೆ ಸಿದ್ಧರಾಗಿರಿ. ಮುಸಲ್ಮಾನ ಜನಾಂಗವೇ ಹೆಸರಿಲ್ಲದಂತಾಗುವ ಹೊತ್ತು ಬಂದಿದೆ'—ಎಂದು ಎಚ್ಚರಿಕೆ ಕೊಟ್ಟರು. ಆಗ, ಆದಿಲ್‌ಶಹನು ಯುದ್ಧಕ್ಕೆ ಸಿದ್ಧನಾದನು.

ವಿಜಯನಗರದವರ ಸೈನಿಕರು ತಮಗೆ ಜಯವಾಯಿತೆಂಬ ಆನಂದದೊಳಗೆ ಎಚ್ಚರದಪ್ಪಿ ಇದ್ದರು. ಒಮ್ಮೆಲೆ, ನಾಲ್ಕೂ ಜನ ಬಾದಶಹರ ಸೈನ್ಯವು ಹಿಂದೂ ಸೈನ್ಯವನ್ನಾವರಿಸಿತು. ಹಿಂದೂಗಳು ಹೌಹಾರಿದರು. ಒಂದೇ ಸವನೆ ಗಲಭೆ ಎದ್ದಿತು. ಹಿಂದೂಗಳ ಠಾಣ್ಯವೆಲ್ಲಾ ಲೂಟಿ ಆಯಿತು. ಮುಸಲ್ಮಾನ ದಂಡಾಳುಗಳು ಹಿಂದೂಗಳನ್ನು ಕೊಂದು ಹೆಣಗಳ ರಾಸಿ ಒಟ್ಟಿದರು.

ಈ ಗದ್ದಲದೊಳಗೆ ರಾಮರಾಯರನ್ನು ಶತ್ರುಗಳು ಸೆರೆ ಹಿಡಿದು ಆದಿಲ್‌ಶಹನ ಮುಂದೆ ಒಯ್ದರು. ಆಗ, ರಾಮರಾಯರು 'ನೀನು ನನ್ನ ಮಗನೆನಿಸಿಕೊಂಡು ಹೀಗೆ ಮಾಡಿದಿ. ನೀನು ಪಿತೃದ್ರೋಹಿ. ನೀನೇ ಈ ಘಾತುಕತನಕ್ಕೆ ಹೇಸಲಿಲ್ಲವೆಂದಮೇಲೆ ನಾನು ಇನ್ನೇನು ಮಾಡುವದು.' ನನ್ನನ್ನು ವಂಚಿಸಿದೆ. ಅದಿರಲಿ, ನನ್ನ ಮಗನಾದುದಕ್ಕೆ ನನ್ನನ್ನು ವೈರಿಗಳಿಗೆ ಕೊಟ್ಟು ತಲೆ ಹೊಯ್ಸದಿರು. ನೀನೇ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು' ಎಂದು ಹೇಳಿ, ಮೈಯಲ್ಲಿ ಕರಿಯ ಉದ್ದಂಗಿ, (ನಿಲುವಂಗಿ) ತಲೆಗೆ ಮಾಣಿಕ್ಯದ ಕುಲಾಯಿ, ಮೈಮೇಲೆ ಶಾಲು ಹೊದ್ದುಕೊಂಡು ದೇವರನ್ನು ಚಿಂತಿಸುತ್ತ ನಿಂತರು.

ಆದಿಲ್‌ಶಹನು ಸ್ವಲ್ಪ ತಡೆದು, ತರುವಾಯ ತಾನೇ ಫಿರಂಗಿಯನ್ನು ಹಾರಿಸಿ, ರಾಜಭೂವರರ (ರಾಮರಾಜನ) ತಲೆ ಹೊಯ್ದನು. ಆಮೇಲೆ

ಕರ್ನಾಟಕದ ಸೈನ್ಯವು ಚದುರಿತು. ಉಳಿದ ಸೈನ್ಯವು ವಿಜಯನಗರಕ್ಕೆ ಓಡಿತು. ರಾಮರಾಜನು ಸತ್ತ ಸುದ್ದಿ ಕೇಳಿ, ಅವನ ತಾಯಿಯು ದುಃಖದಿಂದ ಪ್ರಾಣ ಬಿಟ್ಟಳು. ಅರಸಿಯರು ತಮ್ಮ ಮೈ ಮೇಲಿನ ವಸ್ತ್ರಾಭರಣಗಳನ್ನೆಲ್ಲ ದೇವರಿಗೆ ಅರ್ಪಿಸಿ, ವಿಷ ಕುಡಿದು ಪ್ರಾಣಗಳನ್ನು ನೀಗಿದರು.

---

## ೪೦

## ಹಾಳುಬಿದ್ದ ವಿಜಯನಗರ ಅಥವಾ ಹಂಪೆ

[ ರಾಮರಾಯನು ರಕ್ಕಸಗಿ-ತಂಗಡಗಿಯ ಕಾಳಗದೊಳಗೆ ಸೋತು ಸತ್ತನು. ತರುವಾಯ ಮುಸಲ್ಮಾನ ದಾಳಿಗಾರರು ವಿಜಯನಗರಕ್ಕೆ ಓಡುತ್ತ ಬಂದು, ರಾಜಧಾನಿಯನ್ನು ಸುಲಿದರು, ದೇವಾಲಯಗಳನ್ನು ಕೆಡವಿದರು. ಸಿಕ್ಕ ಸುಲಿಗೆಯನ್ನೆಲ್ಲ ಒಯ್ದರು. ಆದರಿಂದ ವಿಜಯನಗರವನ್ನು ಬಿಟ್ಟು ನಾಗರಿಕರೆಲ್ಲರೂ ಬೇರೆ ಬೇರೆ ಊರುಗಳನ್ನು ಸೇರಿದರು. ಮುಸಲ್ಮಾನ ದಾಳಿಗಾರರ ಸುಲಿಗೆಯು ಎಡಬಿಡದೆ ಐದು ತಿಂಗಳ ವರೆಗೆ ನಡೆದಿತ್ತು. ರಾಮರಾಯನ ತಮ್ಮ ತಿರುಮಲರಾಯನು ಅರಸು ಮನೆತನದವರನ್ನು ಮತ್ತು ಸದಾಶಿವರಾಯನನ್ನು ಕರಕೊಂಡು ಪೆನುಗುಂಡಿಗೆ ಹೋದನು. ಈ ವಿಷಯವು ಮಿ. ಲಾಂಗಹರ್ಸ್ಟ ಅವರ ಹಾಳುಹಂಪೆ ಎಂಬ ಇಂಗ್ಲಿಷ ಪುಸ್ತಕದಿಂದ ಎತ್ತಿ ಬರೆಯಲ್ಪಟ್ಟಿದೆ. ]

ನಾಲ್ಕುನೂರು ವರ್ಷಗಳಾಚೆ ಲಕ್ಷಗಟ್ಲೆ ಜನರಿಂದ ತುಂಬಿದ ಪಟ್ಟಣ; ಹೇಮಕೂಟ-ಮಾಲ್ಯವಂತ ಪರ್ವತಗಳ ನಡುವೆ ತುಂಗಭದ್ರಾ ನದಿಯ ದಂಡೆಯ ಮೇಲೆ ಸುತ್ತ ಹತ್ತು-ಹನ್ನೆರಡು ಮೈಲುಗಳ ವರೆಗೆ ಹಬ್ಬಿದ ರಾಜಧಾನಿ. ಮುನ್ನೂರು ವರ್ಷಗಳವರೆಗೆ ಪರರಾಜರ ದಾಳಿಗಳನ್ನು ತಡೆದ ವೀರರ ಗಂಡು ಮೆಟ್ಟು. ಪರರಾಜರ ದಾಳಿಗೆ ಕೊನೆಗೆ ತುತ್ತಾಗಿ ಹಾಳು ಕೊಂಪೆ ಆಯಿತು.

ಹಾಳು ವಿಜಯನಗರವನ್ನು ನೋಡಲಿಕ್ಕೆಂದು ಹೊಸಪೇಟೆಯಿಂದ ಹೊರಟರೆ, ನಮಗೆ ಅಲ್ಲಿಂದಲೇ ಒಂದೊಂದು ಹಾಳು ಗೋಡೆಗಳು, ಕಟ್ಟಡ

ಗಳು, ಕಾಣಲಾರಂಭಿಸುವವು. ಮುಂದೆ ಹೋದಂತೆ, ಹಾಳು ದೇವಾಲಯ ಗಳು ಮತ್ತು ಕೋಟೆಗಳ ಸಂಖ್ಯೆ ಬೆಳೆಯುವದು. ಹಾಗೇ ಹಂಪೆಗೆ ಹೋಗುವೆವು.

ಹಂಪೆಗೆ ಹೋದಮೇಲೆ, ಅಲ್ಲಿ ಶ್ರೀ ವಿರೂಪಾಕ್ಷದೇವರ ವಿಶಾಲವಾದ ದೇವಾಲಯವಿರುವದು. ವಿರೂಪಾಕ್ಷ ದೇವರ ಗುಡಿಯ ಮೊದಲನೆಯ ಹೆಬ್ಬಾಗಿಲಕ್ಕೇ ಎತ್ತರವಾದ ಗೋಪುರವಿದೆ. ಅದರ ಎದುರಿಗೆ ಹೊರಮಗ್ಗಲು ಅಗಲವಾದ ಬೀದಿ ಇರುವದು. ಆ ಬೀದಿಯಲ್ಲಿ ನಾಲಾಗಿ ಎರಡೂ ಮಗ್ಗ ಲಿಗೆ ದೊಡ್ಡ ದೊಡ್ಡ ಕಲ್ಲಿನ ಮಂಟಪಗಳಿರುವವು. ದೇವಾಲಯದೊಳಗೆ ಒಳ ಮಗ್ಗಲು ವಿಶಾಲವಾದ ಅಂಗಳ. ಸುತ್ತಲೂ ಜನರು ಇಳಿದುಕೊಳ್ಳಲಿಕ್ಕೆ ಪೌಳಿಗಳಿರುವವು. ಅಲ್ಲಿಂದ ಒಳಗೆ ಹೋದ ಮೇಲೆ ಶ್ರಿ ವಿರೂಪಾಕ್ಷೇಶ್ವರನ ಗುಡಿ. ಬಲಗಡೆಗೆ ಸ್ವಲ್ಪ ಒಳಗೆ ಹೋದರೆ, ಶ್ರೀ ಭುವನೇಶ್ವರಿಯ ದೇವಾ ಲಯ, ಅಲ್ಲಿಯೇ ಒತ್ತಟ್ಟಿಗೆ ಶ್ರೀ ವಿದ್ಯಾರಣ್ಯರ ಕಲ್ಲಿನ ಮೂರ್ತಿ ಇದೆ.

ಇನ್ನು, ಹಾಳು ಪಟ್ಟಣ ಅಥವಾ ಹಾಳು ವಿಜಯನಗರವನ್ನು ನೋಡ ಲಿಕ್ಕೆ ಹೋಗುವಾ! ಹಂಪೆಯಿಂದ ವಿಜಯನಗರಕ್ಕೆ ಹೋಗಬೇಕೆಂದರೆ ದಕ್ಷಿಣಕ್ಕೆ ನಡೆಯಬೇಕು. ಹೀಗೆ ಹೊರಟರೆ, ದಾರಿಯಲ್ಲಿ ಸಾಸಿವೆಕಾಳು ಗಣಪತಿ, ಕಡಲೆಕಾಳ ಗಣಪತಿ, ನರಸಿಂಹಮೂರ್ತಿ, ಉದ್ದನ ವೀರಭದ್ರ ದೇವರ ಭವ್ಯವಾದ ಮೂರ್ತಿಗಳು ಕಾಣಿಸುವವು. ಇವು ಒಂದರಕಿಂತ ಒಂದು ಆಕಾರದಲ್ಲಿ ದೊಡ್ಡವಿರುವವು.

ತುಸು ಮುಂದೆ ನಡೆದಮೇಲೆ, ದೊಡ್ಡದೊಂದು ಹಾಳು ಕೋಟೆ, ಅದ ಕ್ಕೊಂದು ಹೆಬ್ಬಾಗಿಲು, ಅದರೊಳಗಿಂದ ಹಾಯ್ದು ನಡೆದರೆ, ನಮಗೆ ಅಲ್ಲಿ ಕುಮಾರರಾಮನ ಗರಡೀಮನೆ, ರಾಣಿಯರು ಇರುವ ಎತ್ತರವಾದ ಮಹಾಲು ಗಳು ಕಾಣಿಸುವವು. ಅವುಗಳನ್ನು ನೋಡಿಕೊಂಡು, ತಿರುಗಿ ದಕ್ಷಿಣಕ್ಕೆ ತಿರುಗಿದರೆ, ವಿಜಯನಗರದ ರಾಯರು ಮಹಾ ನವಮಿಯ ಹಬ್ಬದ ಉತ್ಸವ ದಲ್ಲಿ ಸಿಂಹಾಸನಕ್ಕಾಗಿ ಉಪಯೋಗಿಸುತ್ತಿದ್ದ ಮಹಾನವಮಿಯ ಸುಂದರ ವಾದ ಕಟ್ಟೆಗಳುಳ್ಳ-ದಿಬ್ಬ ಹತ್ತುವದು. ಅದರ ನೆರೆಯಲ್ಲಿಯೇ ಕಮಲ ಭವನವಿರುವದು. ಇದೂ ಅಂತಃಪುರದ ಪ್ರಾಕಾರದೊಳಗಿನದೇ ಒಂದು ಸುಂದರವಾದ ಕಟ್ಟಡ. ಇವುಗಳಿಗೆ ಹಚ್ಚಿದ ನಾನೂರು ವರ್ಷಗಳಾಚೆಯ ಬಣ್ಣವಿನ್ನೂ ಇದೆ.

ಅದನ್ನು ಬಲಕ್ಕೆ ಮಾಡಿಕೊಂಡು ಮುಂದೆ ನಡೆದರೆ, ಕುಸುರಿನ ಕೆಲಸದಿಂದ ಒಪ್ಪುವ ಹಜಾರ ರಾಮಸ್ವಾಮಿಯ ದೇವಾಲಯ, ಶಿಲ್ಪಕಲೆಯಿಂದ ಮೆರೆಯುವ ಶ್ರೀ ವಿಜಯ ವಿಠ್ಠಲ ದೇವಾಲಯ, ಒಂದೇ ಕಲ್ಲಿನಲ್ಲಿ ಮಾಡಿ ನಿಲ್ಲಿಸಿದ ಅದರ ರಥ ಇವು ಬರುವವು. ದಾರಿಯಲ್ಲಿ ಅಲ್ಲಲ್ಲಿ ಮನೆಗಳು ನೆಲಸಮವಾಗಿ, ಮುಳ್ಳ-ಗಿಡಗಂಟಿಗಳು ಬೆಳೆದಿರುವದನ್ನು ಹಲವು ಮೈಲುಗಳವರೆಗೆ ಕಂಡರೆ, ಮನಸು ಔದಾಸೀನ್ಯದಿಂದ ಹುಚ್ಚಾಗುವದು. ಇವುಗಳನ್ನೆಲ್ಲ ನೋಡಿ, ಹಾಗೇ ಮುಂದೆ ಸಾಗಿದರೆ, ದಕ್ಷಿಣದ ದೊಡ್ಡ ಹೆಬ್ಬಾಗಿಲಿನ ಮುಂದೆಯೇ ಅಂತಃಪುರದ ಹೆಣ್ಣುಮಕ್ಕಳ ಜಲವಿಹಾರಕ್ಕಾಗಿ ಕಟ್ಟಿಸಿದ ಕಟ್ಟಡ ಬರುವದು. ಅದರೊಳಗೆ ಹೊಕ್ಕು ನೋಡಿದರೆ ಮೇಲು ಬದಿಗೆ ಸುತ್ತು ಕಮಾನುಗಳು, ಕೆಳಮುಗ್ಗಲಿಗೆ ನೀರಿನ ಹೊಂಡ, ಆ ನೀರು ಒಂದು ಕಡೆಗೆ ಹರಿದು ಹೋಗುವಂತೆಯೂ ಇನ್ನೊಂದು ಕಡೆಯಿಂದ ಒಳಗೆ ಬರುವಂತೆಯೂ ಯೋಜನೆ ಇದೆ. ಇವಲ್ಲದೆ, ಆನೆಗಳನ್ನು ಕಟ್ಟುವ ಗಜಶಾಲೆ ಮುಂತಾದವುಗಳು ಇರುವವು.

ಈ ಮೇರೆಗೆ, ಹಾಳು ವಿಜಯನಗರವು ಇಂಥ ಅದ್ಭುತ ಸುಂದರ ಕಟ್ಟಡಗಳಿಂದ ಈಗಲೂ ತನ್ನ ಹಳೆಯ ವೈಭವವನ್ನು ಜಗತ್ತಿಗೆ ಸಾರುತ್ತ ನಿಂತಿದೆ. ಕನ್ನಡಿಗರಾದ ಪ್ರತಿಯೊಬ್ಬರೂ ಒಮ್ಮೆಯಾದರೂ ಹಂಪೆ-ವಿಜಯನಗರವನ್ನು ನೋಡಲಿಕ್ಕೆ ಬೇಕು.

# ೪೧

# ವೆಂಕಟಪತಿರಾಯನ ಮರಣ

( ಕ್ರಿ. ಶ. ೧೬೧೪ )

[ ವಿಜಯನಗರದ ಕೊನೆಗಾಲದ ಅರಸರಲ್ಲಿ ಈತನೊಬ್ಬ. ತಿರುಮಲರಾಯನ ಕಿರಿಯಮಗ. ಚಂದ್ರಗಿರಿಯಲ್ಲಿ ಇರುತ್ತಿದ್ದ. ಇವನ ಹೊಟ್ಟೆಯಿಂದ ಮಕ್ಕಳಿರಲಿಲ್ಲ. ಇವನ ಹೆಂಡಂದಿರಲ್ಲಿ ಚಿಕ್ಕವಳಾದ ಬಾಯಮ್ಮ ಎಂಬುವಳು ಜಗರಾಯನೆಂಬ ಸರದಾರನ ಮಗಳು. ತನ್ನ ಹೊಟ್ಟೆಯಲ್ಲಿ ಮಕ್ಕಳಿಲ್ಲವೆಂಬುವ ಚಿಂತೆಯಲ್ಲಿಯೇ ಈಕೆಯು ಹಗಲಿರುಳು ಕಾಲ ಕಳೆಯುತ್ತಿದ್ದಳು. ಈಕೆಯ ಚಿಂತೆಯನ್ನು ಕಂಡು ಅರಮನೆಗೆ ಬರುವ ಒಬ್ಬ ಹೆಂಗಸು ತಾನು ಬಸಿರು ಇರುವದಾಗಿಯೂ ತನಗೆ ಗಂಡು ಮಗು ಹುಟ್ಟಿದರೆ, ಬಾಯಮ್ಮನಿಗೆ ಕೊಡುವದಾಗಿಯೂ ಮಾತುಕೊಟ್ಟಳು. ತಾನೂ ಬಸಿರು ಇರುವ ಸುದ್ದಿ ಬಾಯಮ್ಮ ಹುಟ್ಟಿಸಿದಳು. ಆಕೆಯು ಹೆತ್ತ ಮೇಲೆ ಮಗುವನ್ನು ತರಿಸಿ ತಾನು ಹಡೆದ ವರ್ತಮಾನ ಹರಡಿದಳು. ಮುಂದೆ, ವೆಂಕಟಪತಿರಾಯನು ತೀರಿಕೊಂಡನು. ಆಗಿನ ದೃಶ್ಯ. ಸಿವೆಲ್‌ರ 'ಮರೆತು ಹೋದ ಸಾಮ್ರಾಜ್ಯ' ವೆಂಬ ಪುಸ್ತಕದ ಆಧಾರದಿಂದ. ]

ವೆಂಕಟಪತಿರಾಯನಿಗೆ ಬಾಯಮ್ಮನಲ್ಲಿ ಮೀರಿದ ಪ್ರೀತಿ; ಆದುದರಿಂದ ಆಕೆ ಮಾಡಿದುದಕ್ಕೆಲ್ಲ ಸುಮ್ಮನಿರುತ್ತಿದ್ದ. ತನಗೆ ಮಗನು ಹುಟ್ಟಿದನೆಂದು ಆಕೆಯು ಮತ್ತೊಬ್ಬಳ ಮಗನನ್ನು ತಂದು ಆನಂದೋತ್ಸಾಹ ಮಾಡ ಹೇಳಿದಳು. ವೆಂಕಟಪತಿರಾಯನು ಅದೆಲ್ಲವನ್ನು ಮಾಡಿದನು. ಹೀಗಿದ್ದರೂ ಅದು ತನ್ನ ಮಗುವೆಂದು ಎಂದೂ ಮುದ್ದಿಸಲಿಲ್ಲ.

ಅರವತ್ತುನಾಲ್ಕನೆಯ ವರ್ಷಕ್ಕೆ ವೆಂಕಟಪತಿರಾಯನಿಗೆ ಬಹಳ ಜಡ್ಡಾಯಿತು. ಹಾಸಿಗೆಯಿಂದ ಏಳಲಿಕ್ಕಾಗಲಿಲ್ಲ. ದಿನದಿನಕ್ಕೆ ಬೇನೆ ಬಲಿಯತೊಡಗಿತು. ಸಾಯುವ ಮುಂಚೆ ಎರಡು-ಮೂರು ದಿನಗಳ ಮೊದಲು, ಒಂದು ದಿನ ರಾಜ್ಯದ ಸರದಾರ, ಸಾಮಂತರೆಲ್ಲರೂ ವೆಂಕಟಪತಿರಾಯರ ಸುತ್ತಲೂ ನೆರೆದಿದ್ದರು. ಆಗ ರಾಯನು ತನ್ನ ತಮ್ಮನ ಮಗನಾದ ಶ್ರೀರಂಗರಾಯನನ್ನು ಕರೆಯಿಸಿದನು. ಈತನಲ್ಲಿ ಮೊದಲಿನಿಂದಲೂ ರಾಯನಿಗೆ ಅಕ್ಕರತೆ ಬಹಳ. ಶ್ರೀರಂಗರಾಯನಿಗೂ ಚಿಕ್ಕರಾಯ ಎನ್ನುವ ವಾಡಿಕೆ. ಅವನು ಕಕ್ಕನ ಹಾಸಿಗೆಯ ಬಳಿ ಬಂದು ನಿಂತನು. ರಾಯನು ರಾಜಮುದ್ರಿಕೆಯ ಉಂಗುರವಿದ್ದ ಬಲಗೈಯನ್ನು ಅವನ ಮುಂದೆ ಚಾಚಿ, ಅದನ್ನು ತೆಗೆದು

ಕೊಳ್ಳಲಿಕ್ಕೆ ಕಣ್ಣಿನಿಂದ ಸನ್ನೆ ಮಾಡಿದನು. ತನ್ನ ತರುವಾಯ ಶ್ರೀರಂಗ ರಾಯನಿಗೇ ಪಟ್ಟವಾಗಬೇಕೆಂದು ಅವನ ಆಸೆ.

ಆದರೆ, ರಾಯನ ಹಂಬಲವನ್ನು ಅರಿತು ಶ್ರೀರಂಗರಾಯನ ಕಣ್ಣು ಗಳಲ್ಲಿ ಅಂಚುಮುಟ ನೀರು ತುಳುಕಿದವು. 'ನನಗದು ಬೇಡ. ನಿಮಗೆ ಇಷ್ಟ ವಿದ್ದವರಿಗೆ ಕೊಡಬೇಕು.' ಎಂದು, ತಲೆ ತಗ್ಗಿಸಿ ರಾಯನ ಅಡಿಗಳ ಹತ್ತಿರ ಕಣ್ಣೀರು ಸುರಿಸುತ್ತ ಕುಳಿತುಬಿಟ್ಟನು. ನಂತರ ರಾಯನು, ತನ್ನ ಸರದಾರ ರಿಗೆ ಕೈಸನ್ನೆಯಿಂದ ಅವನನ್ನು ತನ್ನ ಬದಿಯಲ್ಲಿ ಕರತರ ಹೇಳಿ, ತನ್ನ ಕೈ ಯಲ್ಲಿಯ ರಾಜಮುದ್ರಿಕೆಯ ಉಂಗುರವನ್ನು ಉಚ್ಚಿಕೊಳ್ಳಲು ಆತನಿಗೆ ಸೂಚಿಸಿದನು. ಅವನು ರಾಯನ ಮತ್ತು ಸರದಾರರ ಅಪ್ಪಣೆಯಂತೆ, ಅದನ್ನು ಉಚ್ಚಿಕೊಂಡು ಮೊದಲು ಆದರದಿಂದ ತಲೆಯಮೇಲಿಟ್ಟುಕೊಂಡು, ತನ್ನ ಬೆರಳಿನಲ್ಲಿಟ್ಟನು. ಆಮೇಲೆ, ರಾಯನು ತನ್ನ ಬೆಲೆಯುಳ್ಳ ನಿಲುವಂಗಿ, ಕಿವಿಯಲ್ಲಿದ್ದ ವಜ್ರದ ಕುಂಡಲ, ಮುತ್ತಿನ ಸರ ಮುಂತಾದವುಗಳನ್ನು ಅವ ನಿಗೆ ತರಿಸಿಕೊಟ್ಟನು. ಇದರಿಂದ ಕೆಲವರಿಗೆ ಸಂತೋಷ, ಕೆಲವರಿಗೆ ಅಸಂತೋಷವಾಯಿತು.

ಮುಂದೆ ರಾಯನು ತೀರಿಕೊಂಡನು. ಬಗೆಬಗೆಯ ಸುವಾಸನೆಯ ಕಟ್ಟಿಗೆಗಳ ರಾಸಿಯಮೇಲೆ ರಾಯನ ದೇಹವನ್ನಿಟ್ಟು ಬೆಂಕಿಹಚ್ಚಿದರು. ರಾಯನ ಮೂವರು ರಾಣಿಯರು ತಮ್ಮತಮ್ಮ ಪಾಲಿನ ಆಭರಣಗಳನ್ನು ಮೈಮೇಲೆ ಹಾಕಿಕೊಂಡು ಬೆಲೆಯುಳ್ಳ ವಸ್ತ್ರಗಳನ್ನುಟ್ಟು, ತೊಟ್ಟು, ರಾಯನ ಶವದ ಹಿಂದಿಂದೆ ನಡೆದರು. ಸಾವಿರಾರು ಜನರು ಅವರನ್ನು ಹಿಂಬಾಲಿಸಿದ್ದರು. ಸುಡುತಿರುವ ಕಟ್ಟಿಗೆಯ ರಾಶಿಯ ಸಮೀಪ ಅವರು ಬಂದು ತಲ್ಪಿದರು. ತಮ್ಮ ಮೈಮೇಲಿನ ಆಭರಣಗಳನ್ನು ಉಚ್ಚಿ, ಕೆಲವನ್ನು ತಮ್ಮ ಬಳಗದವ ರಿಗೂ ಮತ್ತು ಕೆಲವನ್ನು ಬ್ರಾಹ್ಮಣರಿಗೂ ಕೊಟ್ಟು, ಇನ್ನು ಕೆಲವನ್ನು ಕೂಡಿದ ಜನರೊಳಗೆ ಬೀಸಾಡಿದರು. ಎಲ್ಲರ ಅಪ್ಪಣೆಪಡೆದು, ಎತ್ತರವಾದ ಸ್ಥಳದ ಮೇಲೆ ಹೋಗಿ ನಿಂತು, ದಣದಣವೆಂದು ಉರಿಯುವ ಬೆಂಕಿಯಲ್ಲಿ ಒಬ್ಬರಹಿಂದೊಬ್ಬರು ದಡದಡನೆ ಧುಮುಕಿ ಪ್ರಾಣ ಬಿಟ್ಟರು.

# ೪೨

# ಎಚ್ಚಮನ ಸ್ವಾಮಿನಿಷ್ಠೆ

## ರಂಗರಾಯನ ಕುಟುಂಬದ ಕೊಲೆ

( ಕ್ರಿ. ಶ. ೧೬೧೪ )

[ ಶ್ರೀರಂಗರಾಯನಿಗೆ ಪಟ್ಟವಾದುದು ಜಗರಾಯ ಮೊದಲಾದ ಸರದಾರರಿಗೆ ಸರಿಬರಲಿಲ್ಲ. ಅವನು ಪಟ್ಟಕ್ಕೆ ಕುಳಿತಾಗ ಜಗರಾಯ, ತಿಮ್ಮನಾಯಕ, ಮಾಚರಾಯ ಇವರು ಮೂವರನ್ನು ಉಳಿದು ಮಿಕ್ಕವರೆಲ್ಲರೂ ಹೊಸ ಅರಸನಿಗೆ ನಮಸ್ಕಾರ ಮಾಡಲಿಲ್ಲ. ಬಾಯಮ್ಮನ ಸುಳ್ಳುಮಗ ಚಿಕ್ಕರಾಯನನ್ನೇ ಪಟ್ಟಕ್ಕೆ ಕುಳ್ಳಿರಿಸುವ ಹಟ ತೊಟ್ಟರು. ಆದರಿಂದ ಶ್ರೀರಂಗರಾಯನ ಮೇಲೆ ಗಂಡಾಂತರ ಒದಗಿತು. ಆಗ ನಡೆದ ಸಂಗತಿ. ಈ ಸಂಗತಿಯು ಸಿವೆಲ್‌ರ 'ಮರೆತು ಹೋದ ಸಾಮ್ರಾಜ್ಯ' ಎಂಬ ಪುಸ್ತಕದಿಂದ ಬರಯಲ್ಪಟ್ಟಿದೆ.]

ಚಂದ್ರಗಿರಿಯ ಸಿಂಹಾಸನಕ್ಕೆ ಶ್ರೀರಂಗರಾಯನು ಕುಳಿತನು. ತನಗೆ ಬೇಕಾದವರನ್ನು ಇರಿಸಿಕೊಂಡು, ಬೇಡಾದವರನ್ನು ಹೊರಗೆ ಹಾಕಿಸಿದನು. ಒಂದೊಂದು ಕಾರಣಗಳ ನಿಮಿತ್ತ ರಾಯನು ತನ್ನ ದಳವಾಯಿ, ಮಂತ್ರಿ ಮುಂತಾದವರ ಮನಸು ಕೆಡಿಸಿಕೊಂಡನು. ಜಗರಾಯ, ತಿಮ್ಮನಾಯಕ ಮಾಚರಾಯನಿಗೆ ಒಳ್ಳೇ ಸಂಧಿ ಸಿಕ್ಕಿತು. ಅವರು ತಮ್ಮ ತಮ್ಮ ಸಂಗಡ ಸಾವಿರಾರು ಜನ ದಂಡಾಳುಗಳನ್ನು ಕಟ್ಟಿಕೊಂಡು ಕೋಟೆಯನ್ನು ಹೊಕ್ಕರು. ದಂಗೆಗಾರರಲ್ಲಿ ಮಾಚರಾಯನು ಮಹಾ ಪುಂಡ. ಅರಸನನ್ನು ಸೆರೆಹಿಡಿಯಲು ನಿಶ್ಚಯಿಸಿ, 'ಶರಣು ಬಂದರೆ, ನಿಮ್ಮ ಜೀವಕ್ಕೆ ಅಪಾಯವಾಗದು.' ಎಂದು ಹೇಳಿ ಕಳುಹಿದನು. ಅವನು ಅಂಜಿ ತನ್ನ ಹೆಂಡತಿ-ಮಕ್ಕಳು ಸಹಿತವಾಗಿ ತಾನಿರುವ ಅರಮನೆಯನ್ನು ಬಿಟ್ಟನು. ಆಮೇಲೆ ಜಗರಾಯನು ಅವನನ್ನು ಸೆರೆಮನೆಯಲ್ಲಿಟ್ಟನು.

ಇತ್ತ, ಜಗರಾಯನು ಬಾಯಮ್ಮನ ಸುಳ್ಳು ಮಗನಾದ ಚಿಕ್ಕರಾಯನಿಗೆ ಪಟ್ಟಗಟ್ಟಿ, ಎಲ್ಲ ಸರದಾರರು ಕಾಣಿಕೆ ಸಲ್ಲಿಸಲು ಬರಬೇಕೆಂದು ಕಟ್ಟಪ್ಪಣೆ ಮಾಡಿದನು. ಎಚ್ಚಮನಾಯಕನು ವೆಂಕಟಪತಿರಾಯನ ಒಬ್ಬ ನಂಬಿಗೆಯ ಸರದಾರ. ಆತನಿಗೂ ಬರಬೇಕೆಂದು ಜಗರಾಯನು ಒತ್ತಾಯ ಪಡಿಸಿದನು. ಬರದಿದ್ದರೆ ಪರಿಣಾಮವು ಒಳಿತಾಗದೆಂದೂ ಎಚ್ಚರಿಕೆ

ಕೊಟ್ಟನು. ‘ ಪಟ್ಟಕ್ಕೆ ಕುಳಿತಮಾತ್ರಕ್ಕೆ, ಜಾತಿ, ಕುಲ, ಗೋತ್ರವರಿಯದವನಿಗೆ ಎಚ್ಚಮನು ಕಾಣಿಕೆ ಒಪ್ಪಿಸುವವನಲ್ಲ. ಇಷ್ಟವಿದ್ದರೆ, ಯುದ್ಧಕ್ಕೆ ಸಿದ್ಧನಿರುವೆನೆಂದು ಮಾತು ಕಳಿಸಿದನು.

ಜಗರಾಯನ ಸಂಗಡ ಈ ಬಗೆಯ ಮಾತುಕತೆ ನಡಿಸಿರುವಾಗ, ಎಚ್ಚಮನಾಯಕನು ಸೆರೆಮನೆಯಲ್ಲಿದ್ದ ವಿಜಯನಗರ ಅರಸರ ವಂಶದ ಶ್ರೀರಂಗರಾಯನ ಮಕ್ಕಳಲ್ಲಿ ಒಬ್ಬನನ್ನಾದರೂ ಹಂಚಿಕೆಯಿಂದ ಹೊರಗೆ ತರಿಸುವ ವಿಚಾರದಲ್ಲಿದ್ದನು. ಶ್ರೀರಂಗರಾಯನ ಬಟ್ಟೆಗಳನ್ನು ದಿನಾಲು ಒಗೆದು ತರುವ ಅಗಸನನ್ನು ಕರೆಕಳಿಸಿ, ಅರಸನ ನಡುವಿನ ಮಗನನ್ನು ತಂದು ಕೊಟ್ಟರೆ, ಬೆಲೆಯುಳ್ಳ ಕಾಣಿಕೆಗಳನ್ನು ಕೊಡುವೆನೆಂದನು. ಅಗಸನು ಅದಕ್ಕೆ ಒಪ್ಪಿಕೊಂಡನು.

ಶ್ರೀರಂಗರಾಯನಿದ್ದಲ್ಲಿಗೆ ಒಗೆದ ಬಟ್ಟೆಗಳನ್ನು ಒಯ್ದುಕೊಡುವ ದಿನ ಎಚ್ಚಮನು ಅಗಸನ ಕೈಯಲ್ಲಿ ತಾಳೆಗರಿಯಮೇಲೆ ಬರೆದು ಒಂದು ಓಲೆ ಕಳಿಸಿದನು. ‘ ನಿಮ್ಮ ಮಕ್ಕಳಲ್ಲಿ ಒಬ್ಬನನ್ನಾದರೂ ಈತನ ಸಂಗಡ ಕಳಿಸಿರಿ. ಈತ ಜೋಕೆಯಿಂದ ನನಗೆ ಮುಟ್ಟಿಸುವನು.’ ಎಂಬುದೇ ಆ ಓಲೆಯ ಅಭಿಪ್ರಾಯವಿತ್ತು.

ಅರಸನು ಓಲೆಯನ್ನು ಓದಿಕೊಂಡನು. ಎಚ್ಚಮನಲ್ಲಿ ಆತನ ನಂಬಿಗೆ ಬಹಳ. ಅಗಸನಿಗೆ ಹನ್ನೆರಡು ವರ್ಷದ ಮಗನನ್ನೇ ಒಪ್ಪಿಸಿದನು. ಅಗಸನು ಅರಸುಮಗನಿಗೆ ‘ಹೆದರ ಬೇಡಿರಿ ಬುದ್ಧಿ; ನಿಮ್ಮನ್ನು ಬೇಗನೇ ದಾಟಿಸುವೆ. ಕಾಲು ಅಲ್ಲಾಡಿಸಬೇಡಿರಿ. ತೆಪ್ಪಗೆ ಈ ಮೊಟ್ಟೆಯಲ್ಲಿ ಮಲಗಿರಿ’ ಎಂದು ಆ ಹುಡುಗನನ್ನು ಬಟ್ಟೆಗಳ ನಡುವೆ ಮಲಗಿಸಿ, ಮೇಲೆ, ಕೆಳಗೆ ಒಗೆಯುವ ಹೊಲಸು ಬಟ್ಟೆಗಳನ್ನಿಟ್ಟು,‘ಮುಟ್ಟಬೇಡಿರಿ, ದೂರಕ್ಕೆ ಸರಿಯಿರಿ, ಮೈಲಿಗೆಯ ಬಟ್ಟೆಗಳು’ ಎಂದು ಕೂಗುತ್ತ ಹೊರಟನು. ಮುಂದೆ, ಎಚ್ಚಮನಾಯಕನಿಗೆ ಒಪ್ಪಿಸಿದನು.

ಈ ಸುದ್ದಿಯು ಹೇಗೋ ನುಸುಳಿ, ಜಗರಾಯನ ಕಿವಿಗೆ ಮುಟ್ಟಿತು. ಅರಮನೆಯನ್ನೆಲ್ಲಾ ಶೋಧಿಸಿದನು. ಶ್ರೀರಂಗರಾಯನಿದ್ದಲ್ಲಿ ಬಿಗುವಾದ ಕಾವಲವಿಟ್ಟು, ಯಾರೂ ಒಳ-ಹೊರಗೆ ಹಾಯ್ದಾಡದಂತೆಯೂ ಅರಸನಿಗೆ ಅನ್ನ-ಪಲ್ಯಗಳ ಹೊರತು ಮತ್ತೇನನ್ನೂ ಊಟಕ್ಕೆ ಕೊಡಲಾಗದೆಂದೂ ಕಟ್ಟು

ಮಾಡಿದನು. ವಿಜಯನಗರದ ಅರಸರ ವಂಶದ ಬೀಜವನ್ನು ಎಚ್ಚಮ ನಾಯಕನು ರಕ್ಷಿಸುತ್ತಿರುವ ಸಂಗತಿಯು ಜಗರಾಯನ ಕೆಲವು ದಳವಾಯಿ ಗಳಿಗೆ ಗೊತ್ತಾಯಿತು; ಆಗ, ಅವರು ಜಗರಾಯನ ಪಕ್ಷವನ್ನು ಬಿಟ್ಟು, ತಮ್ಮ ದಂಡುಸಹಿತವಾಗಿ ಎಚ್ಚಮನಾಯಕನನ್ನು ಕೂಡಿಕೊಂಡರು.

ತನ್ನ ದಂಡಿನವರಲ್ಲಿ ಅತ್ಯಂತ ಸ್ವಾಮಿನಿಷ್ಠರೂ ನಂಬಿಗೆಯವರೂ ಆದ ಇಪ್ಪತ್ತು ಜನರನ್ನು ಆರಿಸಿದನು. ಸೆರೆಮನೆಯಲ್ಲಿದ್ದ ರಂಗರಾಯನನ್ನು ಹೇಗಾದರೂ ಉಪಾಯದಿಂದ ಪಾರುಗಾಣಿಸಬೇಕೆಂದು ನೆಲವನ್ನು ಅಗಿದು, ದಾರಿ ಮಾಡಿ, ರಂಗರಾಯನನ್ನು ಉಳಿಸಬೇಕೆಂದು ಅವರಿಗೆ ಆಜ್ಞಾಪಿಸಿದನು. ಇದೆಲ್ಲ ಸಾಧಿಸಬೇಕಾದರೆ, ಅವರು ಜಗರಾಯನ ಕೈಯಲ್ಲಿದ್ದ ಕೋಟೆಯ ದಳವಾಯಿಯನ್ನು ಕಂಡು, ಅವನಲ್ಲಿ ತಾವೆಲ್ಲರೂ ಕೆಲಸಕ್ಕೆ ಇರುವದಾಗಿ ಬಿನ್ನವಿಸಿಕೊಂಡರು.

ಮುಂದೆ, ಕೆಲ ದಿನಗಳಾದನಂತರ ಅವರು ರಂಗರಾಯನು ಇರುವ ಸೆರೆ ಮನೆಗೆ ದಾರಿ ಮಾಡಲಿಕ್ಕೆಂದು ನೆಲವನ್ನು ಅಗಿಯಹತ್ತಿದರು. ದಾರಿಯನ್ನು ಮಾಡಿ,ರಂಗರಾಯನನ್ನು ಅವನಿರುವ ಕೋಣೆಯಲ್ಲಿಯೇ ಕಂಡು,ಅಡ್ಡಬಿದ್ದು, ಎಚ್ಚಮನಾಯಕನು ಕೊಟ್ಟ ಓಲೆಯನ್ನು ಅವನಿಗೆ ಒಪ್ಪಿಸಿದರು. ಎಚ್ಚಮನ ಸಾಹಸ, ಸ್ವಾಮಿನಿಷ್ಠೆ ಮುಂತಾದವುಗಳನ್ನು ನೆನಿಸಿಕೊಂಡ ಶ್ರೀರಂಗರಾಯ ನಿಗೆ ಅವನ ಬಗ್ಗೆ ಮೀರಿದ ಆದರ ಉಂಟಾಯಿತು. 'ಆಗಲಿ' ಎಂದು ಶ್ರೀರಂಗರಾಯನು ಕತ್ತಲಾದಮೇಲೆ, ಲಗುಬಗೆಯಿಂದ ತನ್ನ ಮೈಯಲ್ಲಿದ್ದ ನಿಲುವಂಗಿಗಳನ್ನು ಬಿಚ್ಚಿಬಿಟ್ಟು, ಒಂದು ಸಾದಾ ಧೋತರವನ್ನು ಹೊತ್ತು, ಹೆಂಡತಿ, ಮಕ್ಕಳನ್ನು ಕರೆದು, 'ನಾನು ಪಾರಾಗಿ ನಿಮ್ಮ ಬಿಡುಗಡೆ ಮಾಡುವೆ ಹೆದರಬೇಡಿರಿ' ಎಂದು ಹೇಳಿ ಹೊರಟನು.

ಜಗರಾಯನ ಕಾವಲುಗಾರರು ಕೈಯಲ್ಲಿ ದೀವಟಿಗೆಗಳನ್ನು ಹಿಡಿದು ಅರಮನೆ ಕಾಯುತ್ತಿದ್ದರು. ಒಬ್ಬ ಕಾವಲಿಗನು ಅತ್ತ ಕಡೆಯಿಂದ ಬರುವಾಗ ದಾರಿಯಲ್ಲಿ ತಗ್ಗಿನಲ್ಲಿ ಬಿದ್ದು, ಒದರಿ ಚೀರಾಟ ನಡಿಸಿದನು. ಅದಕ್ಕೆ ಎಲ್ಲರೂ ಬಂದು ನೋಡಿದರು. ಕೆಳಗೆ ದೊಡ್ಡ ತಗ್ಗು ಇರುವದನ್ನು ಕಂಡು ಸ್ವಲ್ಪ ಆಳಕ್ಕೆ ಅಗಿದರು. ನೆಲದಾರಿ ಇರುವಂತೆ ತೋರಿತು. ಹಾಗೇ ನಡೆಯುತ್ತ ಅದೇ ದಾರಿಯಿಂದ ಮುಂದೆ ನಡೆದು, ಅರಮನೆಯುವರೆಗೆ ಹೋದರು. ಅಲ್ಲಿ

ರಂಗರಾಯನು ದಂಡಾಳುಗಳ ಸಂಗಡ ಮೇಲಿನಿಂದ ಕೆಳಗೆ ಇಳಿಯುವದನ್ನು ಕಣ್ಣುಟ್ಟಿ ಕಂಡರು. ಈ ಸಂಗತಿಯನ್ನೆಲ್ಲ ಜಗರಾಯನಿಗೆ ತಿಳಿಸಿದರು. ಅವನು ಶ್ರೀರಂಗರಾಯನನ್ನು ಪಾರಾಗಲಿಕ್ಕೆ ಆಗದಂತಹ ಮತ್ತೊಂದು ಅರಮನೆಯಲ್ಲಿಟ್ಟು, ಭದ್ರವಾದ ಕಾವಲವಿರಿಸಿದನು.

ತಾನು ಮಾಡಿದ ಹಂಚಿಕೆಯು ತಪ್ಪಿದ್ದು ಎಚ್ಚಮನಾಯಕನಿಗೆ ಗೊತ್ತಾಯಿತು. ಜಗರಾಯನ ದಳವಾಯಿಗಳಲ್ಲಿ ಒಬ್ಬನಿಗೆ ಬಹಳ ದುಡ್ಡು ಕೊಟ್ಟು ತನ್ನ ಕಡೆಗೆ ಒಲಿಸಿಕೊಂಡನು; ಮತ್ತು ಶ್ರೀರಂಗರಾಯನನ್ನು ಸೆರೆಯಲ್ಲಿಟ್ಟಿರುವ ಅರಮನೆಯನ್ನು ಕಾಯುತ್ತಿರುವ ಕಾವಲುಗಾರರನ್ನೇ ಕೊಲ್ಲಿಸಿ ಕೋಟೆಯನ್ನು ಹಿಡಿದುಕೊಳ್ಳಲು ಎಚ್ಚಮನಾಯಕನು ಹವಣಿಸಿದನು. ಆದರೆ ಜಗರಾಯನು ಅದನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಂಡನು.

ಇದರಿಂದ, ಶ್ರೀರಂಗರಾಯನ ವಿಷಯದಲ್ಲಿ ಜಗರಾಯನ ಸಿಟ್ಟು ಮಿತಿ ಮೀರಿತು. ಅವನ ವಂಶದ ಬೇರನ್ನೇ ಕಡಿಯದೆ ಬೇರೆ ದಾರಿ ಇಲ್ಲವೆಂದು ಅಂದುಕೊಂಡನು. ತನ್ನ ತಮ್ಮನನ್ನು ಕರೆಯಿಸಿ, 'ರಂಗರಾಯನ ವಂಶವನ್ನು ನಿರ್ಮೂಲ ಮಾಡುವದೇ ಇದಕ್ಕೆ ದಾರಿ. ಅವನು ಒಳ್ಳೇ ಮಾತಿನಿಂದ ತನ್ನ ಕೈಯಿಂದಲೇ ಹೆಂಡಿರು-ಮಕ್ಕಳನ್ನು ಕೊಂದು ತಾನೂ ಸಾಯದಿದ್ದರೆ, ನಾನೇ ಕೊಲ್ಲಬೇಕಾಗುವದೆಂದು ಎಚ್ಚರಿಕೆ ಕೊಡು' ಎಂದನು. ಜಗರಾಯನ ತಮ್ಮನ ಹೆಸರು ಚಿನ್ನಓಬಲರಾಯ. ಅಣ್ಣನ ಮಾತಿನಂತೆ, ರಂಗರಾಯನಿರುವ ಅರಮನೆಗೆ ಹೋಗಿ, ತನ್ನಣ್ಣನ ಆಜ್ಞೆಯನ್ನು ತಿಳಿಸಿದನು.

ಪಾಪ! ಶ್ರೀರಂಗರಾಯನಿಗೆ ದಿಕ್ಕು ತೋಚಲಿಲ್ಲ. ಹೆಂಡತಿಯನ್ನು ಕರೆದು ನಿಜಸ್ಥಿತಿಯನ್ನು ಆಕೆಗೆ ತಿಳಿಸಿ,ದೇವರನ್ನು ನೆನೆಯುತ್ತ ನಿಲ್ಲಲು ಹೇಳಿ, ತಾನು ಒಳಗಿಂದ ಕತ್ತಿಯನ್ನು ತಂದು, ಅದನ್ನು ಒರೆಯಿಂದ ಹಿರಿದು ಆಕೆಯ ಕುತ್ತಿಗೆಯನ್ನೇ ದಡದಿಂದ ಬೇರೆ ಮಾಡಿದನು. ತರುವಾಯ, ಅದೇ ಭರದೊಳಗೆ ತನ್ನ ತೀರ ಚಿಕ್ಕ ಮಗುವನ್ನು, ಆಮೇಲೆ ಚಿಕ್ಕ ಮಗಳನ್ನು ಕೊಂದು, ಮದುವೆಯಾದ ಹಿರಿಯಮಗನನ್ನು ಕರೆಯಿಸಿದನು. ಆತನಿಗೆ ತನ್ನ ಮುಂದೆಯೇ ಆತನ ಹೆಂಡತಿಯನ್ನು ಕೊಲ್ಲಲು ಆಜ್ಞಾಪಿಸಿದನು. ಅನಂತರ ಶ್ರೀರಂಗರಾಯನು ನಾಲ್ಕುಬೆರಳು ಅಗಲವಾಗಿದ್ದ ಕತ್ತಿಯನ್ನು ತಕ್ಕೊಂಡು ತಾನು ಅದರಮೇಲೆ ಮಲಗಿ ಪ್ರಾಣ ಬಿಟ್ಟನು. ತಂದೆಯ ಸಾವನ್ನು ಕಣ್ಣಾರೆ

ಕಂಡ ಹಿರಿಯಮಗನಿಗೆ ತನ್ನ ಕಣ್ಮುಂದೆ ನಡೆದ ಈ ಭಯಂಕರ ಆತ್ಮ ಹತ್ಯೆಯ ಪ್ರಸಂಗದಿಂದ ತನ್ನ ಜೀವವೇ ಬೇಡಾಗಿ, ತಾನೂ ತಂದೆಯಂತೆ ತನ್ನ ದೇಹವನ್ನು ಕತ್ತಿಗೆ ಬಲಿಕೊಟ್ಟನು. ಬಳಿಕ ಒಂದೇ ಒಂದು ಹೆಣ್ಣು ಕೂಸು ಉಳಿಯಿತು. ಅದನ್ನು ಚಿನ್ನಓಬಲರಾಯನು ತಾನೇ ಕಡಿದು ಹಾಕಿ, ಅಣ್ಣನು ಒಪ್ಪಿಸಿದ ರಾಕ್ಷಸೀ ಕಾರ್ಯವನ್ನು ಸಮಾಪ್ತಿಗೊಳಿಸಿದನು.

ಜಗರಾಯ, ಓಬಲರಾಯ ಇಬ್ಬರೂ ಕಾರಣರಾದ ಅತ್ಯಂತ ಕ್ರೂರ-ಘೋರ ಕೊಲೆಯಿಂದ ಹಲವು ಸರದಾರರ ಮನಸು ಭಯಗೊಂಡಿತು. ಇವರು ಮನುಷ್ಯರಲ್ಲ; ಮನುಷ್ಯರಂತಿರುವ ಹುಲಿ-ಕರಡಿಗಳು. ನಾವು ಇಷ್ಟು ದಿನ ಇವರ ಬೆನ್ನುಕಟ್ಟಿದ್ದೇ ತಪ್ಪಾಯಿತೆಂದು ಅವರೆಲ್ಲರೂ ಸೈನ್ಯದೊಡನೆ ಎಚ್ಚಮನಾಯಕನನ್ನು ಸೇರಿದರು.

ಆಗ, ಎಚ್ಚಮನು ಜಗರಾಯನಿಗೆ ಹೀಗೆ ಹೇಳಿಕಳಿಸಿದನು. ‘ವಿಜಯ ನಗರ ಸಂಸ್ಥಾನ ಪಟ್ಟಕ್ಕೆ ಕುಳಿತ ಅರಸು ರಂಗರಾಯರನ್ನೂ, ಅವರ ಕುಟುಂಬದವರನ್ನೂ ಕೊಲೆ ಮಾಡಿ, ನೀವು ನಿಮ್ಮ ಜೀವಿತದ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಂಡಿರಿ. ಈಗ ಅವರ ವಂಶದ ಒಂದೇ ಒಂದು ಹುಡುಗನನ್ನು ನಾನು ನನ್ನ ಬಳಿಯಲ್ಲಿ ತಂದಿಟ್ಟುಕೊಂಡಿರುವೆ. ಅವನನ್ನು ಮತ್ತು ನನ್ನನ್ನು ಕೊಂದುಹಾಕಿದರೆ, ನಿಮ್ಮ ದಾರಿಯಲ್ಲಿಯ ಮುಳ್ಳುಗಳೇ ಇಲ್ಲದಂತಾಗುವವು; ಅಷ್ಟಾಗಬೇಕಾದರೆ ಯುದ್ಧಕ್ಕೆ ಸಿದ್ಧರಾಗಿರಿ.’

ಅದರಂತೆ, ಎಚ್ಚಮನಿಗೂ ಜಗರಾಯನಿಗೂ ಯುದ್ಧವಾಯಿತು. ಜಗರಾಯನು ಸೋತು ಓಡಿದನು. ಅವನ ಮನೆಯಲ್ಲಿ ಅರಸನ ಮುದ್ರಿಕೆಯ ಉಂಗುರ, ಕತ್ತಿ-ಉಡುಪು-ತೊಡಪುಗಳೆಲ್ಲ ಸಿಕ್ಕವು. ಅವುಗಳನ್ನು ರಂಗರಾಯನ ಮಗನಾದ ಚಿಕ್ಕರಾಯನಿಗೆ ಇಡಿಸಿ, ತೊಡಿಸಿ, ಅವನ ಕೈಯಲ್ಲಿ ಅರಸನು ಧರಿಸುವ ಕಠಾರಿಯನ್ನು ಕೊಟ್ಟು, ಸಿಂಹಾಸನದ ಮೇಲೆ ಕುಳ್ಳಿರಿಸಿ, ಅದನ್ನೆಲ್ಲ ತಾನು ಕಣ್ತುಂಬ ನೋಡಿ, ಅವನ ಹೆಸರಿನಿಂದ ಎಚ್ಚಮನಾಯಕನು ಜಯಜಯಕಾರ ಮಾಡಿದನು.

# ೪೩

## ಕಲಾಪ್ರಿಯನಾದ
# ಮಹಮ್ಮದ ಆದಿಲಶಹ

(ಕ್ರಿ-ಶ. ೧೬೨೭-೫೬)

[ ಕರ್ನಾಟಕದಲ್ಲಿ ಆಳಿದ ಮುಸಲ್ಮಾನ ಅರಸುಮನೆತನಗಳಲ್ಲಿ ವಿಜಾಪುರದ ಆದಿಲಶಾಹಿಯೇ ಮುಖ್ಯವಾದುದು, ಪ್ರಬಲವಾದುದು. ಈ ಮನೆತನದ ಮೂಲ ಪುರುಷನಾದ ಯುಸುಫ ಆದಿಲಶಹನು ಇರಾಣದವನು. ಅಲ್ಲಿಂದ ಹಿಂದುಸ್ಥಾನಕ್ಕೆ ಬಂದು, ಬಹಾಮನಿರಾಜ್ಯದಲ್ಲಿ ಮಂತ್ರಿಯಾಗಿದ್ದ ಮಹಮ್ಮದ ಗವಾನನ ಕೈಯಲ್ಲಿ ಕೆಲಸ ಮಾಡಿ ಪದವಿಗೇರಿದನು. ಮತ್ತು ವಿಜಾಪುರದ ಸುಭೇದಾರನಾದನು. ಬಹಾಮನಿರಾಜ್ಯ ಮುರಿದು, ಅದರಲ್ಲಿ ಐದು ರಾಜ್ಯಗಳಾದವು. ವಿಜಾಪುರದ ಭಾಗಕ್ಕೆ ಯುಸುಫನು ಸ್ವತಂತ್ರ ಅರಸನಾದನು. ಯುಸುಫನಿಂದ ಮಹಮ್ಮದ ಆದಿಲಶಹನು ಏಳನೆಯ ತಲೆಯವನು. ಆದಿಲಶಾಹೀ ಅರಸರಲ್ಲಿ, ಇವನು ಶ್ರೇಷ್ಠನು. ಈ ಚರಿತ್ರೆಯನ್ನು 'ಮುಸಲ್ಮಾನೀ ರಿಯಾಸತ' ಎಂಬ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.]

ರಕ್ಕಸಗಿ-ತಂಗಡಗಿಯ ಕಾಳಗ ನಡೆದಮೇಲೆ ವಿಜಯನಗರದವರ ವಶದಲ್ಲಿದ್ದ ಉತ್ತರಕರ್ನಾಟಕದ ಭಾಗವೆಲ್ಲವೂ ವಿಜಾಪುರದವರ ಆಳಿಕೆಗೆ ಸೇರಿತು; ಆದುದರಿಂದ ಈಗಿನ ಧಾರವಾಡ-ಬೆಳಗಾಂವಿ-ವಿಜಾಪುರ ಜಿಲ್ಲೆಗಳು ಆದಿಲಶಹರ ರಾಜ್ಯಕ್ಕೆ ಸೇರಿದವು. ಆದಿಲಶಾಹಿ ರಾಜ್ಯದಲ್ಲಿ ಯುಸುಫ ಆದಿಲಶಹನು ಧರ್ಮದ ದೃಷ್ಟಿಯಿಂದ ಅಂತ್ಯತ ಸಮದೃಷ್ಟಿಯವನಿದ್ದನು; ಅಂತೆಯೇ, ಕರ್ನಾಟಕದೊಳಗೆ ಅವನ ಆಳಿಕೆಯು ಸ್ಥಿರವಾಯಿತು. ಅವನ ಮಗ ಇಸ್ಮಾಯಿಲ ಆದಿಲಶಹನೂ ತಂದೆಗಿಂತಲು ನ್ಯಾಯಪ್ರಿಯನೂ ದಯೆಯುಳ್ಳವನೂ ಉದಾರನೂ ಇದ್ದುದರಿಂದ ಅವನ ರಾಜ್ಯವೂ ಬೆಳೆದು ಜನಪ್ರಿಯವಾಯಿತು. ತನ್ನ ಸಿಪಾಯಿಗಳ ಸಂಗಡ ಇವನು ಯುದ್ಧಕ್ಕೆ ಹೋದಾಗ ತಾನೂ ಅವರೊಡನೆ ಒಂದಾಗಿ ಕಷ್ಟಪಡುವನು. ಹಸಿವೆ-ನೀರಡಿಕೆ ಕಟ್ಟುವನು. ತರುವಾಯ ಇಬ್ರಾಹಿಮ ಆದಿಲಶಹನ ಆಳಿಕೆಯಲ್ಲಿಯೇ ಅಸದ್‌ಖಾನನು ಮುಂದೆ ಬಂದನು. ಸಿರಸಂಗಿಯ ದೇಸಾಯರ ಮೂಲ ಪುರುಷನಾದ ಅವರಾದಿಯ ವಿಟ್ಟಗೌಡನು ಒಂದು ಯುದ್ಧದಲ್ಲಿ ತೋರಿಸಿದ ಪರಾಕ್ರಮವನ್ನು ಕಂಡು ಶಹನು ವಿಟ್ಟಗೌಡನಿಗೆ ಕೊಕಟನೂರ ದೇಸಗತಿ ಕೊಟ್ಟನು. ಇದೇ ವಿಟ್ಟಗೌಡನೇ ವಿಜಾಪುರದ ಆದಿಲಶಾಹಿಯವ

ರಿಗೆ ಬಾದಾಮಿಯಿಂದ ಸಹ್ಯಾದ್ರಿಯವರೆಗೆ ರಾಜ್ಯವನ್ನು ಗೆದ್ದು ಕೊಟ್ಟನು. ಇವನು ಐವತ್ತೆರಡು ಕೋಟೆಗಳನ್ನು ಗೆದ್ದ ಬಂಟನೆಂದು ಹೆಸರಾಗಿದ್ದನು.

ಇಬ್ರಾಹಿಮ ಆದಿಲಶಹನು ಕೊನೆಗೆ ಹುಚ್ಚುಹಿಡಿದು ತೀರಿಕೊಂಡನು. ಅವನ ಮಗ ಅಲ್ಲೀ ಆದಿಲಶಹನು ಪಟ್ಟವೇರಿದನು. ಇವನಿಗೆ 'ಕನ್ನಡ ಜಾಣ' ಎಂದು ಬಿರುದು ಇತ್ತು. ಇವನ ಹೆಂಡತಿ ಚಾಂದಬೀಬಿ. ಗಂಡನು ಬೇಗ ಸತ್ತುದರಿಂದ ಚಾಂದಬೀಬಿಯು ತನ್ನ ಮೈದುನನ ಮಗನನ್ನು ಪಟ್ಟಕ್ಕೆ ಕುಳ್ಳಿರಿಸಿ, ತಾನೇ ಆಳಲಾರಂಭಿಸಿದಳು. ಈಕೆ ಕನ್ನಡ-ಮರಾಠಿ, ಭಾಷೆಗಳನ್ನು ಚೆನ್ನಾಗಿ ಮಾತನಾಡುವಳು. ಪ್ರಜೆಗಳ ಹಿತವನ್ನು ಲಕ್ಷಿಸುವಳು.

ಅಕಬರ ಬಾದಶಹನ ಮಗನು ದಕ್ಷಿಣಕ್ಕೆ ದಂಡೆತ್ತಿ ಬಂದಾಗ, ಅವನೊಡನೆ ಹೋರಾಡಿ ತನ್ನ ತವರುಮನೆಯ ರಾಜಧಾನಿಯಾದ ಅಹಮ್ಮದನಗರವನ್ನು ಕಾಪಾಡಿದಳು. ಇಬ್ರಾಹಿಮ ಆದಿಲಶಹನ ಮುಂದೆ ಅವನ ಮಗನಾದ ಮುಹಮ್ಮದಶಹನೇ ಪಟ್ಟವೇರಿದನು.

ಮುಹಮ್ಮದಶಹನ ಆಳಿಕೆಯು ಹಲವು ದೃಷ್ಟಿಯಿಂದ ಬಹಳ ಮಹತ್ತ್ವದ್ದಾಯಿತು. ಇವನಾಳಿಕೆಯಲ್ಲಿ ಶಹಾಜಿ ಭೋಸಲೆಯು ಮುಂದೆ ಬಂದು, ಕರ್ನಾಟಕದಲ್ಲಿಯ ಹೊಸಕೋಟೆ-ಬೆಂಗಳೂರ ವರೆಗಿನ ಸೀಮೆಯನ್ನು ಆದಿಲಶಾಹಿಗೆ ಸೇರಿಸಿದನು. ಒಳ್ಳೆಯ ಮಂತ್ರಿ-ಸೇನಾಪತಿಗಳಿಗೆ ತನ್ನ ರಾಜ್ಯ ಬೆಳಿಸುವ ಕೆಲಸದಲ್ಲಿ ತೊಡಗಿಸಿದಮೇಲೆ ಮುಹಮ್ಮದಶಹನು ಜೋಲಗುಮ್ಮಟದಂಥ ಜಗತ್ ಪ್ರಸಿದ್ಧವಾದ ಕಟ್ಟಡವನ್ನು ಕಟ್ಟಿಸಬೇಕೆಂದನು. ಅದಕ್ಕಾಗಿ ಹಬಶೀ ದೇಶದಿಂದ ದೊಡ್ಡ ಶಿಲ್ಪಿಯನ್ನು ಕರೆಯಿಸಿ, ಅವನಿಂದ ಅದನ್ನು ಕಟ್ಟಿಸಿದನು. ಇಬ್ರಾಹಿಮರೋಜಾ ಕಟ್ಟಡವನ್ನೂ ಇವನೇ ಕಟ್ಟಿಸಿದನು. ವಿಜಾಪುರ ಪಟ್ಟಣವನ್ನು ಬೆಳಿಸಿದ್ದಲ್ಲದೆ, ಹಲವು ಸುಂದರವಾದ ಕಟ್ಟಡಗಳಿಂದ ಅದನ್ನು ಬೆಳಗಿಸಿದನು. ಸ್ವಭಾವದಿಂದ ಇವನು ಸ್ವಲ್ಪ ವಿಲಾಸಿ ಇದ್ದರೂ ಪ್ರಜಾರಕ್ಷಣೆಯಲ್ಲಿ ಬಹು ತತ್ಪರನು. ಆಗಾಗ್ಗೆ ಇವನು ಬಂಗಾರ ಬೆಳ್ಳಿಯಿಂದ ತನ್ನ ತೂಕ ಮಾಡಿಸಿ, ಆ ಹಣವನ್ನೆಲ್ಲ ತನ್ನ ರಾಜ್ಯದೊಳಗಿನ ಬಡಬಗ್ಗರಿಗೆ ಹಂಚುತ್ತಿದ್ದನು. ವಿಜಾಪುರದ ಒಂದು ಹುಡೆಯ ಮೇಲಿರುವ ಮುಲುಕ್ ಮೈದಾನ ಎಂಬ ತೋಫು ಇವನಾಳಿಕೆಯಲ್ಲಿಯೇ ಪರಿಂಡೆ ಎಂಬ ಕೋಟೆಯಲ್ಲಿ ಇವನಿಗೆ ಸಿಕ್ಕಿತು. ಅದನ್ನು ತಂದು ವಿಜಾಪುರದಲ್ಲಿಡಿಸಿದನು. ಆದಿಲಶಾಹೀ ಅರಸರಲ್ಲಿಯೇ ಇವನು ಎಲ್ಲ ಗುಣಗಳಿಂದಲೂ ಮಿಗಿಲಾದವನು.

೪೪

## ಬೈಲಂಗಡಿಯ

# ಸೋಮಳಾದೇವಿ

( ಕ್ರಿ. ಶ. ೧೬ನೆಯ ಶತಮಾನ. )

[ ಕರ್ನಾಟಕದ ಭಾಗವಾದ ಮಂಗಳೂರು ಪ್ರಾಂತವನ್ನೂ ಕಾರವಾರ ಜಿಲ್ಲೆಯನ್ನೂ ಪ್ರಾಚೀನ ಕಾಲಕ್ಕೆ ಆಳುಪರು ತರುವಾಯ ಬಂಗರು, ಭೈರರಸರು, ಚೌಟರು ಅಜಿಲರು, ಸಾವಂತರು ಕಾರವಾರವನು ಬೀಳಿಗಿಯ ಅರಸರು, ಸ್ವಾದಿಯ ಅರಸರು ಆಳುತ್ತಿದ್ದರು. ಇವರಲ್ಲಿ ಬಂಗ, ಚೌಟ, ಸಾವಂತರು ಜೈನರು, ಮಿಕ್ಕವರು ವೀರಶೈವರು. ಚಂದ್ರಶೇಖರ ಬಂಗರಾಜನು ಹಿಂದಕ್ಕೆ ಹೊಯ್ಸಳ ವಿಷ್ಣುವರ್ಧನನೊಡನೆ ಕಾದಿ ಮಡಿದನು. ತರುವಾಯ ಅವನ ಮಗ ವೀರ ನರಸಿಂಹ ಬಲ್ಲಾಳನು ಬಂಗಾಡಿಗೆ ಹೋಗಿ ಚಂದ್ರಶೇಖರ ರಾಜನ ಮಕ್ಕಳನ್ನು ಕಂಡು ಮನ ಕರಗಿ, ಅವನ ಮಗನಿಗೆ ತನ್ನ ಹೆಸರನ್ನಿಟ್ಟು, ಬಂಗಾಡಿಯ ಸೀಮೆಗೆ ರಾಜನನ್ನಾಗಿ ಮಾಡಿದನು. ಮುಂದೆ ವಿಜಯನಗರದವರ ಆಳಿಕೆಗೆ ಇವು ಸೇರಿದವು. ಬಂಗರ ವಂಶದವರೇ ಮಂಗಳೂರು ಬೈಲಂಗಡಿಗಳಲ್ಲಾಳಿದರು. ಈ ವಿಷಯವನ್ನು ಮಂಗಳೂರ ಕಡೆಯ ಸಚಿತ್ರ ಚರಿತ್ರೆಯಿಂದ ಎತ್ತಿ ಬರೆಯಲಾಗಿದೆ. ]

ಬಂಗಾಡಿಯ ಅರಸು ವೀರ ನರಶಿಂಹ ಲಕ್ಕಪ್ಪರಸ. ಇವನ ಹೆಂಡತಿ ಸೋಮಳಾದೇವಿ. ಲಕ್ಕಪ್ಪರಸನು ತನ್ನ ಹೆಂಡತಿಯೊಡನೆ ಒಂದು ಬಸದಿಯಲ್ಲಿ ಅನಂತನ ವ್ರತವನ್ನು ಮಾಡತೊಡಗಿದರು. ವ್ರತದ ಪೂಜೆಗಾಗಿ ಕುಳಿತಿರುವಾಗ ಗಂಡನಾದ ಲಕ್ಕಪ್ಪರಸನು ಬಲಗಡೆಯಲ್ಲಿ,ಹೆಂಡತಿಯಾದ ಸೋಮಳಾದೇವಿಯು ಎಡಗಡೆಯಲ್ಲಿ ಕುಳಿತಿದ್ದರು. ಸೋಮಳಾದೇವಿಯು ಬಂಗರಾಜನ ಹೆಂಡತಿಯಾಗಿದ್ದರೂ ತಂದೆಯ ಕಡೆಯಿಂದ ಬೈಲಂಗಡಿಯ ರಾಣಿಯಾಗಿದ್ದಳು. ಬೈಲಂಗಡಿಯು ಮಂಗಳೂರು ಜಿಲ್ಹೆಯಲ್ಲಿ ಪುತ್ತೂರು ತಾಲೂಕಿನಲ್ಲಿದೆ.

ತಾನೂ ರಾಣಿಯಾದ್ದರಿಂದ ಗಂಡನ ಬಲಗಡೆ ಕುಳಿತುಕೊಳ್ಳಲು ಹಕ್ಕು ಇರುವದಾಗಿ ಸಾಧಿಸಿದಳು. ಅರಸನು ಒಪ್ಪಲಿಲ್ಲ. ಇಬ್ಬರಿಗೂ ಜಗಳವಾಯಿತು. ದೇವಿಯು ಸಿಟ್ಟಿನಿಂದ ಎದ್ದು, ಕಟ್ಟಿದ ಜಡೆಯನ್ನು ಬಿಚ್ಚಿ, 'ಇನ್ನು ಒಂದು ತಿಂಗಳಲ್ಲಿ ಬೈಲಂಗಡಿಯಲ್ಲಿ ಬಸದಿಯನ್ನು ಕಟ್ಟಿಸಿ ಅನಂತನ ವ್ರತ ಮಾಡಿಯೇ ಜಡೆಯನ್ನು ಕಟ್ಟುವೆ' ಎಂದು ಆಣೆ ಇಟ್ಟುಕೊಂಡಳು.

ಗಂಡನೊಡನೆ ಇರದೆ ಬೈಲಂಗಡಿಗೆ ಹೊರಟು ಹೋದಳು. ತನ್ನ ಮಾತಿನಂತೆ, ಬೈಲಂಗಡಿಯಲ್ಲಿ ಬಸದಿ ಕಟ್ಟಿಸಿ, ಅನಂತನ ವ್ರತವನ್ನು ನೆರವೇರಿಸಿದಳು.

ಈ ಸುದ್ದಿಯು ಬಂಗರಸನಿಗೆ ತಿಳಿಯಿತು. ಬಹು ಕೋಪಗೊಂಡನು. ತನ್ನ ದಂಡು ಕಟ್ಟಿಕೊಂಡು ಬೈಲಂಗಡಿಯನ್ನು ಮುತ್ತಿದನು. ಸೋಮಳಾದೇವಿಯು ಸುಮ್ಮನಿರದೆ ಗಂಡನಿಗೆ ಎದುರಾದಳು. ರಾಣಿಯ ದಂಡಿನವರು ಬಂಗರ ಲಕ್ಕಪ್ಪರಸನನ್ನು ಕೊಂದರು. ತನ್ನ ಸಿಟ್ಟಿನ ಪರಿಣಾಮವು ಈ ಬಗೆಯಾಗಿ ತನ್ನ ಜೀವವೇ ಆದ ಗಂಡನನ್ನು ಕೊಂದುದಕ್ಕಾಗಿ ಬಹುಪರಿಯಿಂದ ಮಿಡುಕಿದಳು. ತನ್ನ ಪತಿಯ ಸಾವಿಗೆ ತಾನೇ ಕಾರಣಳಾದುದಕ್ಕಾಗಿ ಪಶ್ಚಾತ್ತಾಪ ಪಟ್ಟಳು.

ಗಂಡನನ್ನು ಅಗಲಿರುವದು ಸೋಮಳಾದೇವಿಗೆ ಅಸಹ್ಯವಾಯಿತು. ಆಗ, ತಾನೂ ಪ್ರಾಣವನ್ನು ನೀಗಿದಳು. ಬೈಲಂಗಡಿಯ ಅರಮನೆಯ ಮುಂಗಡೆಯ ದೊಡ್ಡ ಗದ್ದೆಯಲ್ಲಿ ಈಗಲೂ ಸೋಮಳಾದೇವಿಯ ಮತ್ತು ಆಕೆಯ ಗಂಡ ಲಕ್ಕಪ್ಪನ ಗೋರಿಗಳಿವೆ. ಬೈಲಂಗಡಿಯು ಒಂದು ಕಾಲಕ್ಕೆ ದೊಡ್ಡ ಪಟ್ಟಣ. ಈಗೊಂದು ಹಳ್ಳಿ. ಇಕ್ಕೇರಿ (ಕೆಳದಿ)ಯ ಅರಸರು ಈ ಚಿಕ್ಕ ಚಿಕ್ಕ ಅರಸರನ್ನು ತಮ್ಮ ತಮ್ಮ ಆಳಿಕೆಯಲ್ಲಿ ಸೇರಿಸಿಕೊಂಡರು. ಭೈರರಸರು ಕಾರ್ಕಳದಲ್ಲಿ ಆಳಿಕೊಂಡಿದ್ದರು. ಕಾರ್ಕಳವೆಂದರೆ ಕರಿಕಲ್ಲಿನ ಊರು. ನೆರೆಯಲ್ಲಿಯೇ ಕರಿಯ ಕಲ್ಲಿನ ಬೆಟ್ಟವಿದೆ. ಬೆಟ್ಟದ ಮೇಲುಗಡೆ ನಾಲ್ವತ್ತೊಂದೂವರೆ ಅಡಿ ಎತ್ತರವಾದ ಗೋಮಟೇಶ್ವರನ ಮೂರ್ತಿ ಇದೆ. ಇದನ್ನು ಒಂದೇ ಕಲ್ಲಿನಲ್ಲಿ ಕೆತ್ತಿರುವರು. ಭೈರರಸರ ವೀರ ಪಾಂಡ್ಯನೆಂಬ ಅರಸನು ಈ ಪ್ರತಿಮೆಯನ್ನು ಸ್ಥಾಪಿಸಿದನಂತೆ. ಅರವತ್ತು ವರ್ಷಕ್ಕೊಮ್ಮೆ ಮಹಾಭಿಷೇಕ ನಡೆಯುವದು.

ಈ ಗೋಮಟೇಶ್ವರನ ಗುಡ್ಡಕ್ಕೆ ಸಮೀಪದಲ್ಲಿ ಈಗ ಅನಂತೇಶ್ವರ ದೇವಸ್ಥಾನವಿದೆ. ಈ ಕಟ್ಟಡವನ್ನು ಭೈರರಸರಲ್ಲಿ ಒಬ್ಬನು ಬಸದಿಗಾಗಿ ಕಟ್ಟಿಸಿದನು. ಒಂದು ದಿನ ಶೃಂಗೇರಿಯ ಸ್ವಾಮಿಗಳು ಕಾರ್ಕಳಕ್ಕೆ ಹೋದರು. ಅರಸನು ಜೈನನಾದರೂ ಸ್ವಾಮಿಗಳಿಗೆ ತನ್ನ ಭಿಕ್ಷೆ ಸ್ವೀಕರಿಸಬೇಕೆಂದು ಬಿನ್ನ

ವಿಸಿದನು. ದೇವಸ್ಥಾನವಿಲ್ಲದ ಕಡೆಯಲ್ಲಿ ಭಿಕ್ಷೆ ಸ್ವೀಕರಿಸುವದಿಲ್ಲವೆಂದು ಹೇಳಿದರು. ಆಗ ಅರಸನು ಸುಂದರವಾದ ಅನಂತಶಯನ ಮೂರ್ತಿಯನ್ನು ತರಿಸಿ, ಬಸದಿಯ ಕಟ್ಟಡವಲ್ಲಿ ಸ್ಥಾಪಿಸಿ, ಸ್ವಾಮಿಗಳಿಗೆ ಭಿಕ್ಷೆ, ಸತ್ಕಾರಗಳನ್ನು ಮಾಡಿದನು.

ಇದರಿಂದ ಜೈನ ಗುರುಗಳು ಸಿಟ್ಟಾದರು. ಭೈರರಸನು ಜೈನನು. ಗುರುಗಳನ್ನು ಸಮಾಧಾನಗೊಳಿಸಲಿಕ್ಕೆಂದು ಚತುರ್ಮುಖ ಬಸದಿ ಎಂಬುವ ಕಟ್ಟಡ ಕಟ್ಟಿಸಿದನು. ಇದರಲ್ಲಿಯ ಕೆತ್ತನೆಯ ಕೆಲಸವು ಅತ್ಯಂತ ಮನೋಹರವಾಗಿದೆ.

ಭೈರರಸರಲ್ಲಿ ಭೈರಾದೇವಿ ಎಂಬುವ ವೀರ ರಾಣಿ ಇದ್ದಳು. ಈಕೆಯು ಗೇರಸಪ್ಪೆಯಲ್ಲಿ ಆಳುತ್ತಿದ್ದಳು. ಭೈರಾದೇವಿಯು ಮೆಣಸು ಬೆಳೆಯುವ ರಾಜ್ಯಕ್ಕೆ ರಾಣಿಯಾದ್ದರಿಂದ ಈಕೆಗೆ 'ಮೆಣಸಿನ ರಾಣಿ' ಎಂದು ಹೆಸರಿತ್ತು. ಈಕೆಯ ಶೌರ್ಯಕ್ಕೆ ಮೆಚ್ಚಿ ವಿಜಾಪುರದ ಅದಿಲಶಹನು ವೀರರಿಗೆ ಉಚಿತವಾದ ಉಡುಗರೆಯನ್ನು ಕಳಿಸಿದ್ದನಂತೆ.

---

## ೪೫

## ಉಕ್ಕಿನ–ನ್ಯೆ

# ಮತ್ತೀ ತಿಮ್ಮಣ್ಣನಾಯಕ

(ಕ್ರಿ. ಶ. ೧೬ನೆಯ ಶತಮಾನ)

[ ಚಿತ್ರದುರ್ಗದ ಪಾಳ್ಯಗಾರರಲ್ಲಿ ಮತ್ತಿಯ ತಿಮ್ಮಣ್ಣನಾಯಕನು ಶ್ರೇಷ್ಠನು. ಚಿತ್ರದುರ್ಗದ ನಾಯಕರ ಮೂಲಪುರುಷನಿವನು. ಇವನು ದುರ್ಗದ ಕೋಟೆ ಕಟ್ಟಿಸಿದನು. ಇವನ ಜೀವನದಲ್ಲಿಯ ಕೆಲವು ಪ್ರಸಂಗಗಳು ಹೃದಯಂಗಮವಾಗಿವೆ. ಅವುಗಳಲ್ಲಿ ಇದೊಂದು. ಚಿತ್ರದುರ್ಗದ ಪಾಳ್ಯಗಾರರು ಎಂಬ ಪುಸ್ತಕದ ಆಧಾರದಿಂದ ಬರೆಯಲಾಗಿದೆ. ]

ಚಿತ್ರದುರ್ಗದ ಕೋಟೆಯನ್ನು ಕಟ್ಟಿಸಬೇಕೆಂದು ತಿಮ್ಮಣ್ಣನಾಯಕನು ಯೋಚಿಸುತ್ತಿರುವಾಗ ಅವನಿಗೆ ಅಲ್ಲಿರುವ ಕೆಲ ಮಹಾತ್ಮರು ಭೆಟ್ಟಿಯಾದರು. ನಾಯಕನು ಅವರಿಗೆ ನಮಸ್ಕಾರ ಮಾಡಿ, ತನ್ನ ಕಾರ್ಯದಲ್ಲಿ ಜಯವಾಗು

ವಂತೆ ಆಶೀರ್ವದಿಸಬೇಕೆಂದು ಬೇಡಿಕೊಂಡನು. ಆ ಮಹಾತ್ಮರು ತಿಮ್ಮಣ್ಣ ನಾಯಕನ ಮುಖ ಮತ್ತು ಕಣ್ಣುಗಳಲ್ಲಿ ಹೊಳೆಯುತ್ತಿರುವ ತೇಜವನ್ನು ಕಂಡು, 'ಬಾರೈ ಮಗನೆ, ಮುಂದೆ ನಿನಗೆ ಇದೇ ಸ್ಥಳದಲ್ಲಿ ಮಹಾ ಪದವಿ ಬರುವದು. ಅರಿತು ನಡೆದರೆ, ಆರು ಪಟ್ಟ, ಮರೆತು ನಡೆದರೆ ಮೂರು ಪಟ್ಟ' ಎಂದು ಹೇಳಿ, ನಾಯಕನಿಗೆ ಸಿದ್ಧ ಮೂಲಿಕೆ,ಮುಂತಾದವುಗಳನ್ನು ಕೊಟ್ಟು, ಅಲ್ಲಿರುವ ಸಿದ್ಧೇಶ್ವರ ಗುಡಿಗೆ ಕರೆದೊಯ್ದು, ಈ ದೇವರಲ್ಲಿ ಭಕ್ತಿಯಿಡು ಎಂದು ಹೇಳಿ ಹೊರಟು ಹೋದರು. ಅಂದಿನಿಂದ ತಿಮ್ಮಣ್ಣನಾಯಕನು ಬಲಿಯ ಹತ್ತಿದನು.

ಅವನ ಏಳಿಗೆಯನ್ನು ಕೇಳಿ, ವಿಜಯನಗರದವರು ಸಾಳ್ವ ನರಸಿಂಗ ರಾಯನಕೂಡ ನಾಯಕನ ಸೊಕ್ಕು ಮುರಿಯಲು ಸೈನ್ಯ ಕಳಿಸಿದರು. ಸೈನ್ಯವು ಕಾನಾಪುರದ ಬಳಿಯಲ್ಲಿ ಬಂದಿಳಿಯಿತು. ರಾತ್ರಿ ಕಳೆದು, ಮರುದಿನ ದುರ್ಗಕ್ಕೆ ಮುತ್ತಿಗೆ ಹಾಕುವವರಿದ್ದರು. ನಾಯಕನಿಗೆ ಈ ಸಂಗತಿಯು ಗೊತ್ತಾಯಿತು. ಸುಮ್ಮನೆ ಕುಳ್ಳಿರದೆ ಏನಾದರೊಂದು ಹಂಚಿಕೆ ಮಾಡಬೇಕೆಂದು ಯೋಚಿಸಿದನು.

ಶತ್ರು ಸೈನ್ಯದವರೆಲ್ಲರೂ ರಾತ್ರೆಯಲ್ಲಿ ಮಲಗಿಕೊಂಡರು. ಎಲ್ಲೆಡೆ ಯಲ್ಲಿ ನಿಃಶಬ್ದವಾಯಿತು. ನಾಯಕನು ಒಂಟಿಯಾಗಿ ಶತ್ರುಗಳ ಪಾಳಯ ದಲ್ಲಿ ಸೇರಿದನು. ಅತ್ತಿತ್ತ ಮೆಲ್ಲಗೆ ಕಳ್ಳ ಹೆಜ್ಜೆಯಿಂದ ಏನೇನಿರುವದೆಂಬು ದನ್ನು ಹುಡುಕಿ, ಸೇನಾಪತಿಯಾದ ನರಸಿಂಗರಾಯನು ಏರುವ ಕುದುರೆ ಯನ್ನು ಲಾಯದೊಳಗೆ ಕಂಡನು. ಸ್ವಲ್ಪವೂ ಗದ್ದಲವಾಗದಂತೆ ಕುದುರೆಯ ಹಿಂಗಾಲು ಮುಂಗಾಲುಗಳನ್ನು ಕಟ್ಟಿದ್ದ ಗೂಟಗಳನ್ನೇ ಕಿತ್ತಿದನು. ಕುದುರೆಯು ಕುಣಿದು ಕಾಲು ಝಾಡಿಸಿ ಸಪ್ಪಳ ಮಾಡಿತು. ಹತ್ತಿರದಲ್ಲಿಯೇ ಮಲಗಿದ್ದ ಕುದುರೆಯ ಲಾಯದವನು ಎಚ್ಚತ್ತು, ನಿದ್ದೆಯಲ್ಲಿಯೇ ಕಣ್ಣು ಗಳನ್ನು ಹೊಸಗಿಕೊಳ್ಳುತ್ತ ಎದ್ದನು.

ನಾಯಕನು ಎಷ್ಟೂ ಸದ್ದುಮಾಡದೆ, ಅವನಿಗೆ ಕಾಣದೆ ಹಾಗೆ ನೆಲಕ್ಕೆ ಒರಗಿ, ಅಲ್ಲಿದ್ದ ಹುಲ್ಲನ್ನು ಮೈ ಮೇಲೆ ಹಾಕಿಕೊಂಡು, ಅಲುಗಾಡದೆ, ಅಂಗೈ ಯನ್ನು ಅಗಲವಾಗಿ ಚಾಚಿಕೊಂಡು ಲಾಯದೊಳಗಿನವನೊಬ್ಬನು ಮಲಗಿ ರುವಂತೆ ಉರುಳಿದನು. ಲಾಯದವನು ಎದ್ದು, ಕಿತ್ತುಹೋದ ಕುದುರೆಯ

ಹಿಂದು-ಮುಂದಿನ ಕಾಲುಗಳ ಗೂಟಗಳನ್ನು ಮತ್ತೆ ಗಟ್ಟಿಯಾಗಿ ಬಡಿದನು. ಆಗ, ನಾಯಕನು ಚಾಚಿದ್ದ ಅಂಗೈ ಅದರೊಳಗೆ ಸಿಕ್ಕು, ಗೂಟದೊಡನೆ ಅಂಗೈಯೂ ನೆಲಕ್ಕೆ ಇಳಿಯಿತು. ನಾಯಕನು ಮಿಸುಕಲಿಲ್ಲ. ತರುವಾಯ ಲಾಯದವನು ಕುದುರೆಯ ಕಾಲುಗಳನ್ನು ಮೊದಲಿನಂತೆ ಹಗ್ಗದಿಂದ ಗೂಟಕ್ಕೆ ಬಿಗಿದು ಮಲಗಿದನು. ಅರೆನಿದ್ದೆಯಲ್ಲಿದ್ದುದರಿಂದ ಬೇಗನೆ ಗಾಢ ನಿದ್ರೆ ಹತ್ತಿತು.

ಅವನು ಮಲಗಿದ ಸ್ವಲ್ಪ ಹೊತ್ತಿನಲ್ಲಿ ಗುರಿಕೆ ಹೊಡೆಯಹತ್ತಿದ್ದನ್ನು ಕೇಳಿ, ನಾಯಕನು ತನ್ನ ಟೊಂಕದಲ್ಲಿಟ್ಟುಕೊಂಡಿರುವ ಕೈಗತ್ತಿಯನ್ನು ಎಡಗೈಯಿಂದ ಮೆಲ್ಲನೆ ತೆಗೆದುಕೊಂಡು, ಗೂಟದ ಕೆಳಗೆ ನೆಲದಲ್ಲಿ ಸಿಕ್ಕುಹೋದ ಕೈಯನ್ನಷ್ಟೇ ಕೊಯ್ದು, ಮೇಲಕ್ಕೆದ್ದನು. ಕೊಯ್ದುಕೊಂಡ ಕೈಯಿಂದ ನೆತ್ತರ ಸುರಿಯುತ್ತಿದ್ದ ಹಾಗೆಯೇ ಅದಕ್ಕೊಂದು ಬಟ್ಟೆಯನ್ನು ಸುತ್ತಿ, ನರಸಿಂಗರಾಯನ ಕುದುರೆಯನ್ನೇ ಬಿಚ್ಚಿ ಅದನ್ನು ಹತ್ತಿ ದುರ್ಗಕ್ಕೆ ಹೋದನು.

# ೪೬

## ಕೋಟಿ-ಕೋಲಾಹಲ

# ಕೆಳದಿಯ ವೆಂಕಟಪ್ಪ ನಾಯಕ

(ಕ್ರಿ. ಶ. ೧೫೮೬-೧೬೨೯)

[ಕೆಳದಿಯ ಸಿಂಹಾಸನವನ್ನು ಬಸವಪ್ಪನಾಯಕ ಎಂಬುವ ವೀರಶೈವ ವೀರನು ಸ್ಥಾಪಿಸಿದನು. ಮೊದಲು ಇವರ ರಾಜ್ಯ ಮಲೆನಾಡಿನಲ್ಲಿಯೇ ಇತ್ತು. ತರುವಾಯ, ಕೃಷ್ಣದೇವರಾಯರು ಬಸವಪ್ಪನಾಯಕನ ಮಗ ಚೌಡಪ್ಪನಾಯಕನನ್ನು ಕರೆಯಿಸಿ, ಅವನ ಶೌರ್ಯಕ್ಕೆ ಮೆಚ್ಚಿ, ಕೆಳದಿ ಮುಂತಾದ ಕೆಲ ಊರುಗಳನ್ನು ಇನಾಮು ಕೊಟ್ಟರು. ಕೆಳದಿಯ ಅರಸರು ಆಯಾಯ ಕಾಲಕ್ಕೆ ಕೆಳದಿ, ಇಕ್ಕೇರಿ, ಬಿದನೂರುಗಳನ್ನು ತಮ್ಮ ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು. ಇವರಲ್ಲಿ ಒಟ್ಟಿಗೆ ೧೮ ಮಂದಿ ಅರಸರು ಆಳಿದರು. ಅವರಲ್ಲಿ ಸದಾಶಿವನಾಯಕ, ದೊಡ್ಡ ಸಂಕಣ್ಣನಾಯಕ, ವೆಂಕಟಪ್ಪನಾಯಕ, ವೀರಭದ್ರನಾಯಕ, ಶಿವಪ್ಪನಾಯಕ, ಬಸವಪ್ಪನಾಯಕ ಮೊದಲಾದವರು ಬಹು ಕೀರ್ತಿವಂತರು. ಈ ವಿಷಯವು 'ಮಿಥಿಕ್ ಸೊಸಾಯಟಿ ಜರ್ನಲ್' ಎಂಬ ಮಾಸಪತ್ರಿಕೆಯ ೨೨ನೆಯ ಸಂಚಿಕೆಯಲ್ಲಿ ಬಂದಿದೆ.]

ವೆಂಕಟಪ್ಪನಾಯಕನು ರಾಮರಾಜನ ತರುವಾಯ ಆಳಿದನು. ಇವನಿಗೆ ಹಿರಿಯ ವೆಂಕಟಪ್ಪನಾಯಕನೆಂದೂ ಹೆಸರು. ತನ್ನ ಹಿರಿಯರ ಕಾಲಕ್ಕಿದ್ದ ರಾಜ್ಯವನ್ನು ಪೂರ್ವಕ್ಕೆ ಮಾಸೂರು, ಶಿವಮೊಗ್ಗೆ, ಕಡೂರು ಪಶ್ಚಿಮಕ್ಕೆ ಹೊನ್ನಾವರ, ದಕ್ಷಿಣಕ್ಕೆ ಮಲಬಾರಿನವರೆಗೆ ಹಬ್ಬಿಸಿದನು.

ಇವನ ಆಳಿಕೆಯು ಪ್ರಾರಂಭವಾಗುವ ಹೊತ್ತಿಗೆ ವಿಜಯನಗರ ರಾಜ್ಯವು ಮುರುಕಳಿಗೆ ಬಂದಿತ್ತು. ಆದರೂ, ಅವರಿಗೆ ತನ್ನಿಂದ ಸಾಧ್ಯವಾದಷ್ಟು ಸಹಾಯ ಮಾಡಿದನು. ಕಡೆಯವರೆಗೂ ವಿಜಯನಗರದ ಅರಸರ ಕೂಡ ಕೆಳದಿಯ ಅರಸರು ಅತ್ಯಂತ ಭಕ್ತಿ-ವಿಶ್ವಾಸಗಳಿಂದ ನಡೆದುಕೊಂಡರು. ತುಳುನಾಡಿನ ಅರಸಿಯಾದ ಭೈರಾದೇವಿ ಎಂಬುವಳು ತನ್ನ ಜನರಿಗೆ ಹಲವು ಬಗೆಯಿಂದ ಪೀಡಿಸುತ್ತಿದ್ದ ಸಂಗತಿಯನ್ನು ಕೇಳಿ, ವೆಂಕಟಪ್ಪನಾಯಕನು ಆಕೆಯ ಮೇಲೆ ದಂಡೆತ್ತಿ ಹೋಗಿ, ಸೆರೆಹಿಡಿದು ಆಕೆಯ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿದನು. ಬಿದನೂರ ಶಂಕರನಾರಾಯಣಭಟ್ಟ ಎಂಬ ಪುಂಡನು ಅಲ್ಲಲ್ಲಿ ದಂಗೆ-ದೊಂಬೆಗಳನ್ನು ನಡಿಸಿದ್ದನು. ಅವನನ್ನು ಮುರಿ

ದನು. ತುಳುನಾಡಿನಲ್ಲಾಳುತ್ತಿದ್ದ ಬಂಗರಸರನ್ನು ಸೋಲಿಸಿದ್ದರಿಂದ ಅವರಿಗೆ ನೆರವಾಗುತ್ತಿದ್ದ ಪೋರ್ತುಗೀಜರು ಒಪ್ಪಂದ ಮಾಡಿಕೊಂಡರು.

ಒಂದು ಸಲ, ಹೊಳೆಹೊನ್ನೂರಲ್ಲಿ ವೆಂಕಟಪ್ಪನಾಯಕನು ಬೀಡು ಬಿಟ್ಟು, ತನ್ನ ಬಿಡಾರದಲ್ಲಿ ಮಲಗಿದ್ದನು. ಇದನ್ನರಿತು ಮಂಜರಖಾನ ಎಂಬ ಮುಸಲ್ಮಾನ ಸರದಾರನು ಹನುಮನಾಯಕ ಎಂಬ ಬಂಟನ ಸಹಾಯದಿಂದ ವೆಂಕಟಪ್ಪನಾಯಕನು ಇದ್ದ ಹೊಳೆಹೊನ್ನೂರಿಗೆ ಮುತ್ತಿಗೆ ಹಾಕಿದನು. ವೆಂಕಟಪ್ಪನಾಯಕನನ್ನು ಅವನ ಸರದಾರರು ಎಬ್ಬಿಸಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ನಾಯಕನು ಒಂದರೆ ಕ್ಷಣ ಕೂಡ ಅನುಮಾನಗೊಳ್ಳದೆ, ತನ್ನ ಕುದುರೆಯನ್ನು ತರಹೇಳಿ, ತಾನೊಬ್ಬನೇ ಊರಹೊರಗೆ ಕುದುರೆ ಹತ್ತಿಕೊಂಡು ನಡೆದನು. ತನ್ನ ಹಿಂದಿಂದೆ ಮುಖ್ಯ ಮುಖ್ಯ ಸರದಾರರಿಗೆ ಕೆಚ್ಚಿನ ದಂಡಿನವರೊಡನೆ ಬರಹೇಳಿದ್ದನು. ಆಗ, ಗದ್ದಲಮಾಡದೆ ವೆಂಕಟಪ್ಪನು ಹನುಮನಾಯಕನ ಮೇಲೆಯೇ ಹಲ್ಲೆ ಮಾಡಿ, ಅವನನ್ನು ಕೊಂದನು; ಮತ್ತು ಅವನ ಜನರನ್ನು ಬೆನ್ನಟ್ಟಲು ತನ್ನ ದಂಡಾಳುಗಳಿಗೆ ಅಪ್ಪಣೆಮಾಡಿದನು. ಮಂಜರಖಾನನು ಸೋತನು. ಹನುಮನಾಯಕನ ಹಿರಿಯ ಮಗನು ವೆಂಕಟಪ್ಪನಾಯಕನಿಗೆ ಶರಣು ಬಂದನು. ವೆಂಕಟಪ್ಪನಾಯಕನು ಅವನನ್ನು ಕೆಲ ದಿನ ತನ್ನ ಹತ್ತಿರ ಇಟ್ಟುಕೊಂಡನು. ತನ್ನ ಜಯದ ಗುರುತಿಗಾಗಿ ಹಾನಗಲ್ಲಿನಲ್ಲಿ ಒಂದು ಗೆಲು-ಗಂಬನ್ನು ನೆಡಿಸಿದನು.

ವೆಂಕಟಪ್ಪನು ತರುವಾಯ ತನ್ನ ರಾಜಧಾನಿಗೆ ಬಂದು, ಅಲ್ಲಲ್ಲಿ ಕೋಟೆ-ದುರ್ಗಗಳನ್ನು ಕಟ್ಟಿಸಲನುವಾದನು. ಬ್ರಾಹ್ಮಣ-ವೀರಶೈವರಿಗೆ ಭೂಮಿಗಳನ್ನು ದಾನಕೊಟ್ಟನು. ಇವನ ಕಾಲದಲ್ಲಿಯೇ ಇಕ್ಕೇರಿಯು ರಾಜಧಾನಿ ಆಯಿತು. ಅಲ್ಲಿಯೂ ಭವ್ಯವಾದ ಅರಮನೆ ಕಟ್ಟಿಸಿದನು. ವರದಾ ನದಿಯ ದಂಡೆಯ ಮೇಲೆ ಸದಾಶಿವ-ಸಾಗರ, ವಿಶ್ವನಾಥಪುರ ಎಂಬ ಹೊಸ ಊರುಗಳನ್ನು ಕಟ್ಟಿಸಿದನು. ವೀರಶೈವ ಸ್ವಾಮಿಗಳಿಗಾಗಿ ಹಲವು ಮಠಗಳನ್ನು ಕಟ್ಟಿಸಿದನು. ತನ್ನ ತಾಯಿ ವೀರಮ್ಮನ ನೆನಪಿಗಾಗಿ ಅಗ್ರಹಾರ ಕಟ್ಟಿಸಿ ಪಂಡಿತರಾದ ಬ್ರಾಹ್ಮಣರಿಗೆ ದಾನ ಕೊಟ್ಟನು. ಇವರು ವೀರಶೈವರಾದರೂ ವೆಂಕಟ, ರಾಮ ಇಂತಹ ಹೆಸರುಗಳನ್ನು ಇಟ್ಟಿರುವದನ್ನು ನೋಡಿದರೆ ಜಾತಿಯ ಭಾವನೆಯು ಇವರಾಳಿಕೆಯಲ್ಲಿ ಕಡಿಮೆಯಾಗಿತ್ತೆಂದು ತೋರುತ್ತದೆ.

ವೆಂಕಟಪ್ಪನಾಯಕನು ಸರಸ್ವತಿಯ ಭಕ್ತನೂ ವಿದ್ಯಾಪ್ರಿಯನೂ ಇದ್ದುದರಿಂದ ಕವಿಗಳಿಗೂ ನಾಟಕಕಾರರಿಗೂ ಧರ್ಮಶಾಸ್ತ್ರಪಂಡಿತರಿಗೂ ಚೆನ್ನಾಗಿ ಆಶ್ರಯ ಕೊಟ್ಟು ಅವರನ್ನು ತನ್ನಲ್ಲಿಟ್ಟುಕೊಂಡಿದ್ದನು. ಸಂಗೀತ, ನಾಟ್ಯ ಶಾಸ್ತ್ರಗಳ ಬೆಳವಣಿಗೆಗಾಗಿ ತನ್ನ ರಾಜಧಾನಿಯಲ್ಲಿ ಒಂದು ನಾಟಕ ಗೃಹವನ್ನು ಕಟ್ಟಿಸಿದ್ದನು. ಸಾಗರದಿಂದ ಇಕ್ಕೇರಿಯವರೆಗೆ ದಿವ್ಯವಾದ ರಸ್ತೆಯನ್ನು ಮಾಡಿಸಿ, ಎರಡೂ ಮಗ್ಗಲಿಗೆ ಧೂಪದ ಮರಗಳನ್ನು ಹಚ್ಚಿಸಿದ್ದ ಸಂಗತಿಯನ್ನು ಇಟಲಿಯ ಪ್ರವಾಸಿಯಾದ ಪೀಟ್ರೊಡೆಲಾವ್ಯಾಲೆ ಎಂಬುವನು ಬರೆದಿಟ್ಟಿರುವನು.

ಕೊನೆಗಾಲದಲ್ಲಿ ತನ್ನ ಮಗನೂ ತನ್ನ ಕಕ್ಕನ ಮಗನೂ ತನ್ನ ಮುಂದೆ ತೀರಿಕೊಂಡದ್ದರಿಂದ ವೆಂಕಟಪ್ಪನಿಗೆ ರಾಜ್ಯದಲ್ಲಿಯ ಆಸಕ್ತಿ ಕುಂದಿತು. ಅಂದಿನಿಂದ ಅವನ ಮನಸು ತಿರುಗಿ, ದೇವರಕಡೆಗೆ ಒಲಿಯಿತು. ಅವನು ಪುರಾಣ, ಶಾಸ್ತ್ರ ಗ್ರಂಥಗಳನ್ನು ಓದಲಾರಂಭಿಸಿದನು. ಅದರ ದೆಸೆಯಿಂದ ಶಿವಗೀತೆ ಎಂಬುವ ಹದಿನೆಂಟು ಅಧ್ಯಾಯಗಳ ಚಿಕ್ಕ ಸಂಸ್ಕೃತ ಗ್ರಂಥವನ್ನು ತಿರುಮಲಭಟ್ಟ ಎಂಬ ಕವಿಯಿಂದ ಕನ್ನಡದೊಳಗೆ ಪದ್ಯರೂಪವಾಗಿ ಮಾಡಿಸಿದನು ರಂಗನಾಥದೀಕ್ಷಿತ ಎಂಬುವರಿಂದ ತಂತ್ರಸಾರವನ್ನು ಬರೆಯಿಸಿದನು. ತನ್ನ ಮಗ ವೀರಭದ್ರಪ್ಪನಾಯಕನಿಗೆ ಪಟ್ಟಗಟ್ಟಿ ವೆಂಕಟಪ್ಪನಾಯಕನು ದೇಹವಿಟ್ಟನು.

---

## ೪೭

## ವೀರ ಮಹಿಳೆಯಾದ

# ಬೆಳವಡಿಯ ಮಲ್ಲಮ್ಮ ದೇಸಾಯಿತಿ

( ಕ್ರಿ. ಶ. ೧೬೭೭ )

[ ಬೆಳವಡಿಯು ಬೆಳಗಾಂವಿ ಜಿಲ್ಹೆಯ ಬೈಲಹೊಂಗಲ ತಾಲೂಕಿನಲ್ಲಿಯ ಒಂದು ಹಳ್ಳಿ. ಅಲ್ಲಿ ಶಿವಾಜಿಯ ಕಾಲಕ್ಕೆ ಈಶಪ್ರಭು ಎಂಬ ದೇಸಾಯಿ ಇದ್ದನು. ಇವನು ಗೋವಳಕೊಂಡ ರಾಜರ ಕೈಕೆಳಗಿನ ಸರದಾರನು. ಶಿವಾಜಿಯು ತನ್ನ ರಾಜ್ಯಾಭಿಷೇಕವಾದ ಮೇಲೆ ತಂಜಾವರಕ್ಕೆ ಹೋಗಿ, ತಿರುಗಿ ಬರುವಾಗ ಗದಗು, ಧಾರವಾಡಗಳ ಮೇಲಿಂದ ಹಾಯ್ದು ಬೆಳವಡಿಯ ಸಮೀಪ ಹೋದನು. ಆಗ, ಅವನ ದಂಡಿನವರು ಸುತ್ತು ಮುತ್ತಲಿನ ಹಳ್ಳಿಗಳನ್ನು ಸುಲಿಯ ಹತ್ತಿದರು. ಆ ಕಾಲಕ್ಕೆ ಬೆಳವಡಿಯ ದೇಸಾಯಿಗೆ ದಾಳಿಗಾರರೊಡನೆ ಕಾದಾಡುವ ಪ್ರಸಂಗ ಬಂದಿತು. ಈ ಸಂಗತಿಯು ಪ್ರೊ. ಯದುನಾಥ ಸರಕಾರ ಇವರ ಶಿವಾಜಿ ಇಂಗ್ಲಿಷ ಚರಿತ್ರೆಯಲ್ಲಿ ಬಂದಿದೆ. ]

ಶಿವಾಜಿಯ ದಂಡಿನವರು ಹಳ್ಳಿಯ ಜನರನ್ನು ಸುಲಿದುಕೊಂಡು, ಆಹಾರಸಾಮುಗ್ರಿಗಳನ್ನು ಬಂಡಿಯ ಮೇಲೆ ಹೇರಿಕೊಂಡು ಹೋಗುವದನ್ನು ಬೆಳವಡಿಯವರು ನೋಡಿದರು. ಆಗಿಂದಾಗ, ತಮ್ಮ ಜನರನ್ನು ಕೂಡು ಹಾಕಿಕೊಂಡು ಆ ಎತ್ತುಗಳನ್ನು ಹಿಡಿದರು. ಮತ್ತೊಂದು ಕಡೆಯಲ್ಲಿ ಮರಾಟರ ದಂಡಿನವರು ಹಲವು ಬಗೆಯಿಂದ ತೊಂದರೆ ಕೊಡುತ್ತಿರುವ ಸುದ್ದಿಯು ಬೆಳವಡಿಯ ದೇಸಾಯಿಗೆ ತಿಳಿಯಿತು. ಅದಕ್ಕೆ, ಅಲ್ಲಲ್ಲಿ ಬೆಳವಡಿಯ ದಂಡಾಳುಗಳು ಕೈ ಕೊಡಲಿಕ್ಕೆ ಪ್ರಾರಂಭಿಸಿದರು.

ಶಿವಾಜಿಯ ಹತ್ತರ ಸಾಕಷ್ಟು ಸೇನಾ ಸಮೂಹವು ಇದ್ದೇ ಇತ್ತು; ಅಂದಮೇಲೆ ಕೇಳುವದೇನು? ಬೆಳವಡಿಯನ್ನು ಮುತ್ತಲಿಕ್ಕೆ ಅಪ್ಪಣೆ ಇತ್ತನು. ಮಹಾಡದ ದಾದಾಜಿಪ್ರಭು ಎಂಬುವನು ಆಗ ಶಿವಾಜಿಯ ಸೇನಾಪತಿ ಇದ್ದನು. ಅವನು ಬೆಳವಡಿಯ ಈಶಪ್ರಭುವಿಗೆ ಕಾಗದ ಬರೆದು, ಶಿವಾಜಿಗೆ ಶರಣಾಗತರಾಗಬೇಕೆಂದು ತಿಳಿಸಿದನು.

ಈಶಪ್ರಭುವು ಮಹಾ ವೀರ. ಗೋವಳಕೊಂಡ ಬಾದಶಹರ ಸ್ವಾಮಿನಿಷ್ಠ ಸೇವಕ; ಆದುದರಿಂದ ತನ್ನ ಸ್ವಾಮಿಗೆ ದ್ರೋಹ ಬಗೆದು, ಸ್ವಾರ್ಥ ಸಾಧಿಸಿಕೊಳ್ಳಲಾರೆ ಎಂದು ಉತ್ತರ ಬರೆದನು. ಇಬ್ಬರೂ ಈರ್ಷೆಗೆ ಈಡಾ

ದರು. ವೀರರಾದರೂ ಬೆಳವಡಿಯ ಮುತ್ತಿಗೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಸಾಗಿಸಿದರು. ಈ ಪ್ರಕಾರ, ಮುತ್ತಿಗೆಯು ಎಡೆಬಿಡದೆ ಮೂರು ತಿಂಗಳವರೆಗೆ ನಡೆಯಿತು. ಈಶಪ್ರಭುವು ಒಳಗೇ ತನ್ನ ಸಿದ್ಧತೆ ನಡಿಸಿದ್ದನು.

ದಾದಾಜಿಪ್ರಭುವು ರಾತ್ರಿಹೊತ್ತು ತನ್ನೊಬ್ಬ ವಿಶ್ವಾಸದ ಚಪಲವೀರನಿಗೆ ಕೋಟೆಯನ್ನೇರಿ ಒಳಹೊಕ್ಕು ಬೆಂಕೆ ಹಚ್ಚಿಬರಲಿಕ್ಕೆ ಹೇಳಿದನು. ಇಂಥ ಕಾಯಕಗಳಲ್ಲಿ ಶಿವಾಜಿಯ ಸೈನಿಕರು ನುರಿತವರು. ಆದುದರಿಂದ, ಅದೇನೂ ಮಹತ್ತ್ವದ ಕೆಲಸವಿರಲಿಲ್ಲ. ಆದ್ದರಿಂದ ಅವನು ಬೆಂಕೆ ಹೊತ್ತಿಸಿ, ಕೋಟೆಯನ್ನಿಳಿದು ಬಂದು ಸೇನಾಪತಿಗೆ ಮಾತು ಮುಟ್ಟಿಸಿದನು.

ಮರಾಠರ ಸೈನ್ಯದವರೆಲ್ಲರೂ ಬೆಳವಡಿಯ ಕೋಟೆಯೊಳಗೆ ಏನು ಹಾಹಾಕಾರ ನಡೆಯುವದೋ ಎಂಬುದನ್ನು ಕಾಯುತ್ತಲೇ ಇದ್ದರು. ಕೋಟೆಯನ್ನೇರಿ ಹೋದ ಬಂಟನು ಸೈನಿಕರ ಮನೆಗಳಿಗೆ ಬೆಂಕೆ ಹಚ್ಚಿ ಬಂದಿದ್ದನು. ನೋಡು ನೋಡುವಷ್ಟರಲ್ಲಿ ಬೆಂಕೆಯು ಬಲಿತು ಊರಲ್ಲೆಲ್ಲ ಗದ್ದಲವೆದ್ದಿತು. ಅಳುವ ಗೋಳಾಟ, ಕೂಗಾಟಕ್ಕೆ ಮೊದಲಾಯಿತು. ದುರ್ಗದೊಡೆಯನಾದ ಈಶಪ್ರಭುವು ತನ್ನ ಅರಮನೆಯಲ್ಲಿ ಮಲಗಿದ್ದನು. ಊರಲ್ಲೆದ್ದ ಗದ್ದಲ ಕೇಳಿ ಗಾಬರಿಯಾಗಿ ಎದ್ದು ಬಂದನು. ಇದು ಶತ್ರುಗಳ ಕಾಯಕವೆಂದು ತರ್ಕ ಮಾಡಿದನು. ತನ್ನ ಜನರನ್ನೆಲ್ಲ ಕಲೆಹಾಕಿ ಉರಿಯನ್ನಾರಿಸುವ ಪ್ರಯತ್ನಕ್ಕೆ ಹಚ್ಚಿ, ತಾನು ದುರ್ಗದ ಹೆಬ್ಬಾಗಿಲಕಡೆ ನಡೆದನು.

ಅತ್ತ ಜನರನ್ನೆಲ್ಲ ಬೆಂಕೆಯನ್ನಾರಿಸುವ ಕಾರ್ಯದಲ್ಲಿ ತೊಡಗಿಸಿ, ಇತ್ತ ಶತ್ರುಗಳು, ಕೋಟೆಯ ಬಾಗಿಲವನ್ನೇ ಕೊರೆಯುವ ಉದ್ಯೋಗ ನಡಿಸಿದ್ದರು. ಈಶಪ್ರಭುವು ಶತ್ರುಗಳು ನಡಿಸಿದ ಕಾರ್ಯ ನೋಡಿ, ವೀರಾವೇಶದಿಂದ ಉಬ್ಬಿದವನಾಗಿ, ಯುದ್ಧಕ್ಕೆ ಸಿದ್ಧರಾಗಲು ತನ್ನ ಜನರನ್ನು ಕುರಿತು ತುತೂರಿಯನ್ನೂದಿದನು. ಕೂಡಲೆ, ಊರೊಳಗಿನ ಜನರೆಲ್ಲರೂ ಅಡಬಡಿಸಿಕೊಂಡೆದ್ದರು. ತಮ್ಮ ತಮ್ಮ ಶಸ್ತ್ರಗಳನ್ನು ತಕ್ಕೊಂಡು ಯುದ್ಧಕ್ಕೆ ಓಡಿ ಬಂದರು.

ಕೆಲವು ಜನರನ್ನು ಕೋಟೆ-ಕೊತ್ತಳದ ಕಾವಲಿಗೆ, ಕೆಲವರನ್ನು ಹೆಬ್ಬಾಗಿಲದ ಕಾವಲಿಗೆ, ಮತ್ತೆ ಕೆಲವರನ್ನು ಮುಖ್ಯ ಮುಖ್ಯ ಆಯಕಟ್ಟಿನ ಸ್ಥಳಗಳಲ್ಲಿರಿಸಿದನು. ಊರೊಳಗಿನ ಹೆಂಗಸರು-ಮಕ್ಕಳನ್ನೆಲ್ಲ ತನ್ನ ವಾಡೆಯಲ್ಲಿ ಇರಿಸಿ, ತಾನು ತನ್ನ ಸಂಗಡ ಕೆಲ ಬಂಟರನ್ನು ಕಟ್ಟಿಕೊಂಡು ಈಶಪ್ರಭುವು ವೈರಿಗಳನ್ನು ಎದುರಿಸಲು ಹೊರಟನು.

ಕೋಟೆಯಲ್ಲಿ ಒಂದು ಕಡೆ ಬೆಂಕೆಯು ದಣಗುಟ್ಟಿ ಉರಿಯುತ್ತಿದೆ. ಕೋಟೆಯ ಹೊರವುಗ್ಗಲಿಗೆ ಮರಾಠರು ಹಗ್ಗದ ಸಹಾಯದಿಂದ ಕೋಟೆಯ ಮೇಲೆ ಸರಸರ ಏರುತ್ತಿದ್ದಾರೆ; ಕೆಲವರು ಅಲ್ಲಲ್ಲಿ ಕೋಟೆಯ ಗೋಡೆಗಳನ್ನು ಒಡೆಯುವ ಸಾಹಸ ನಡಿಸಿದ್ದಾರೆ, ಇನ್ನು ಕೆಲವರು ಹೆಬ್ಬಾಗಿಲನ್ನೇ ಮುರಿದು ಒಳಗೆ ನುಗ್ಗುವ ಎತ್ತುಗಡೆ ನಡಿಸಿದ್ದಾರೆ.

ಈಶಪ್ರಭುವು ಹೆಬ್ಬಾಗಿಲಕ್ಕೆ ತನ್ನ ಬೆಂಗಾವಲಿಗರನ್ನು ಕರಕೊಂಡು ಯುದ್ಧಕ್ಕೆ ಸಿದ್ಧನಾಗಿ ಬರುವಷ್ಟರಲ್ಲಿ ಶತ್ರುಗಳು ಹೆಬ್ಬಾಗಿಲನ್ನು ಮುರಿದು ಒಬ್ಬೊಬ್ಬರೇ ಒಳಗೆ ನುಗ್ಗಹತ್ತಿದ್ದನ್ನು ಕಂಡು ಅವನು ದಾರಿಯಲ್ಲಿಯೇ ನಿಂತು, ಅವರ ಚಂಡು ಹಾರಿಸುವ ಕೆಲಸದಲ್ಲಿ ತೊಡಗಿದನು. ಯುದ್ಧದ ಲಗ್ಗೆಯು ಬಹು ತೀವ್ರವಾಯಿತು. ಈಶಪ್ರಭುವು ಸ್ವತಃ ನಿಂತು ಶತ್ರುಗಳನ್ನು ತನ್ನ ಕತ್ತಿಯಿಂದ ಕರಕರನೆ ಕತ್ತರಿಸಹತ್ತಿದನು. ಕನ್ನಡ ವೀರರಿಗೂ ಮರಾಠರಿಗೂ ಬಲವಾಗಿ ಕಾಳಗವೆಸಗಿತು. ಈ ಸಂಗರ ಸಂಭ್ರಮದೊಳಗೆ ಈಶಪ್ರಭುವಿಗೆ—ಯಾವನೋ ಒಬ್ಬನು ಹಾರಿಸಿದ ತುಬಾಕಿಯ ಗುಂಡು ತಗಲಿ, ನೆಲಕ್ಕುರುಳಿದನು. ಎಷ್ಟೋ ಜನರು ಹೆದರಿ ಓಡ ಹತ್ತಿದರು. ಸೈನ್ಯದಲ್ಲಿ ತಾಳಮೇಳವಿಲ್ಲದಾಯಿತು. ಶತ್ರುಗಳು ಬೆಳವಡಿಯ ಕೋಟೆಯ ಮೇಲೆ ತಮ್ಮ ಬಾವುಟವನ್ನೇರಿಸಿದರು.

ಆ ಕ್ಷಣಕ್ಕೆ ಒಬ್ಬ ಸೈನಿಕನು ಓಡುತ್ತ ಅರಮನೆಗೆ ಬಂದು ಈಶಪ್ರಭುಗಳು ಮಡಿದ ಸಂಗತಿಯನ್ನು, ಸೈನ್ಯದೊಳಗೆ ನಡೆದ ಅನಾಹುತವನ್ನು, ಮಲ್ಲವ್ವ ದೇಸಾಯತಿಗೆ ಅರುಹಿದನು. ಈ ಸುದ್ದಿಯನ್ನು ಕೇಳಿ, ದೇಸಾಯತಿಗೆ ಕೆಲಹೊತ್ತು ಸಿಡಿಲು ಬಡಿದಂತೆ ಆಯಿತು. ಆದರೂ ಸ್ವಲ್ಪ ಯೋಚಿಸಿ, ಮರು ಕ್ಷಣವೇ ಆಕೆಯು ವೀರಗಚ್ಚೆಯನ್ನು ಹಾಕಿಕೊಂಡಳು. ಆಳುಗಳಿಗೆ ಕುದುರೆಯನ್ನು ಸಿದ್ಧ ಮಾಡಿ ತರಹೇಳಿದಳು. ಶಸ್ತ್ರಾಸ್ತ್ರಗಳೊಡನೆ ತಾನೂ ಸಿದ್ಧಳಾದಳು. ಆ ವೀರಳ ಮೈಯಲ್ಲಿ ವೀರಾವೇಶ ಸಂಚಾರವಾಯಿತು. ಶತ್ರುಗಳ ಸೈನ್ಯದೊಳಗೆ ಹೊಕ್ಕು, ತನ್ನ ಹರಿತವಾದ ಕತ್ತಿಯಿಂದ ಅವರನ್ನು ತರಿಯ ಹತ್ತಿದಳು. ಅವಳನ್ನು ನೋಡಿ, ಬೆಳವಡಿಯ ಸೈನಿಕರೂ ಹುರಿಗೊಂಡು ಕಾದ ತೊಡಗಿದರು. ಆದರೆ ಈ ಸಂಧಿಯಲ್ಲಿ ಬೆಳವಡಿಯ ಕೋಟೆಯಲ್ಲಿಯ ಅನ್ನ ಸಾಮುಗ್ರಿಯು ತೀರಿದ್ದರಿಂದ, ಬೆಳವಡಿಯವರಿಗೆ ಅನ್ನವಿಲ್ಲದೆ ಕಾದಾಡುವ ಹೊತ್ತು ಬಂದಿತು.

ಮಲ್ಲವ್ವ ದೇಸಾಯತಿಯು ಎದೆಗುಂದಲಿಲ್ಲ. ಶತ್ರುಗಳಿಗೆ ಎದೆಗೊಟ್ಟು ಹೋರಾಡುವದರಲ್ಲಿ ಅಸಿಮಿಸಿಗೊಳ್ಳಲಿಲ್ಲ; ಆದರೇನು? ದೇಸಾಯತಿಯ ಕಡೆಯ ಬಹು ಜನರು ಸತ್ತು ಹೋದರು. ಇಷ್ಟರಲ್ಲಿ, ದೇಸಾಯತಿಯು ಹತ್ತಿರುವ ಕುದುರೆಯ ಕಾಲನ್ನೇ ಯಾವನೋ ಒಬ್ಬನು ಕತ್ತರಿಸಿ ಕೆಡವಿದನು ಆಗ ಮಲ್ಲವ್ವನಿಗೆ ಕೆಳಗಿಳಿದು ಕಾಳಗಕ್ಕೆ ಕೈಕೊಡಬೇಕಾಯಿತು; ಹೀಗೆ, ವೈರಿಗಳನ್ನು ಎಡ-ಬಲದಿಂದಲೂ ಕೆಡವಿ, ಹೆಣಗಳ ಬಣವೆಯನ್ನು ಒಟ್ಟುತ್ತಿರುವಾಗಲೇ, ದಾದಾಜಿಯು ಹಿಂದಿನಿಂದ ಬಂದು ಮಲ್ಲವ್ವನ ಬಲಗೈಯನ್ನೇ ಕಡಿದನು. ಕೈ ಸಾಗದೆ, ಮಲ್ಲವ್ವ ದೇಸಾಯತಿ ಸೆರೆಸಿಕ್ಕಳು. ದಾದಾಜಿಯು ಆ ವೀರಸತಿಯಳನ್ನು ಶಿವಾಜಿ ಮಹಾರಾಜರ ಮುಂದೆ ಒಯ್ದು ನಿಲ್ಲಿಸಿದನು. ವೀರಾವೇಶದಿಂದ ಉಕ್ಕುತ್ತಿರುವ ಮಲ್ಲವ್ವನ ಮುಖ-ಕಣ್ಣುಗಳನ್ನು ಕಂಡು ಶಿವಾಜಿ ಮಹಾರಾಜರಿಗೆ ಆಶ್ಚರ್ಯವಾಯಿತು. ಆಕೆಯ ಶೌರ್ಯವನ್ನು ಕೇಳಿ, ಬಾಯಿತುಂಬ ಹೊಗಳಿದರು. 'ನಿಮ್ಮಂಥ ವೀರ ಸತಿಯರು ಇದ್ದುದರಿಂದಲೇ ಭಾರತ ಭೂಮಿಗೆ ಭೂಷಣವು' ಹೀಗೆಂದು ನುಡಿದು, ಆಕೆಯನ್ನು ಸಂತವಿಸಿ, ದೇಸಾಯತಿಗೆ ಒಂದೆರಡು ಊರುಗಳನ್ನು ಬಿಟ್ಟು, ಆಕೆಗೆ ಚೆನ್ನಾಗಿ ಮರ್ಯಾದೆ ಮಾಡಿ, ಬೆಳವಡಿಗೆ ಕಳಿಸಿದನು. ಮಲ್ಲವ್ವ ದೇಸಾಯತಿಗೂ ಶಿವಾಜಿ ಮಹಾರಾಜರ ಔದಾರ್ಯ, ಪರ ಹೆಂಗಸರನ್ನು ಅಕ್ಕ-ತಂಗಿಯರಂತೆ ಕಾಣುವ ಗುಣವನ್ನು ಕಂಡು ಆನಂದವಾಯಿತು. ಮುಂದೆ, ಶಿವಾಜಿ ಮಹಾರಾಜರು ಇರುವವರೆಗೆ ಬೆಳವಡಿಯು ಅವರ ಆಳಿಕೆಯಲ್ಲಿಯೇ ಇತ್ತು.

# ೪೮
## ಕೆಚ್ಚೆದೆಯ
# ಕೆಳದಿಯ ಚೆನ್ನಮ್ಮ ರಾಣಿ
( ಕ್ರಿ.ಶ. ೧೬೯೦ )

[ ಚೆನ್ನಮ್ಮ ರಾಣಿಯು ಸೋಮಶೇಖರ ನಾಯಕನ ಹೆಂಡತಿ. ಗಂಡನನ್ನು ಶತ್ರುಗಳು ಕೊಲ್ಲಿಸಲು, ತಾನೇ ರಾಜ್ಯವಾಳಿದಳು. ಮಿಥಿಕ್ ಸೊಸಾಯಟಿ ಜರ್ನಲ್ಲ ಎಂಬ ಮಾಸ ಪತ್ರಿಕೆಯಲ್ಲಿ ಈ ವಿಷಯ ಬಂದಿದೆ.]

ಚೆನ್ನಮ್ಮ ರಾಣಿಯು ತನ್ನ ರಾಜ್ಯವನ್ನು ಅತ್ಯಂತ ದರ್ಪದಿಂದಲೂ ಅತ್ತಿತ್ತ ಒಂದು ಕಡ್ಡಿ ಕೂಡಾ ಅಲ್ಲಾಡದಂತೆಯೂ ಆಳುತ್ತಿದ್ದಳು. ಆ ಕಾಲಕ್ಕೆ, ಶಿವಾಜಿಯ ಮಗನಾದ ರಾಜಾರಾಮನು ಔರಂಗಜೇಬನಿಗೆ ಹೆದರಿ, ತನ್ನ ಜನರನ್ನು ಕಟ್ಟಿಕೊಂಡು ಜಿಂಜಿಗೆ ಹೋಗುವ ದಾರಿಯಲ್ಲಿ ಚೆನ್ನಮ್ಮ ರಾಣಿಯು ರಾಜಾರಾಮನನ್ನು ಕೆಲದಿನ ತನ್ನ ರಾಜಧಾನಿಯಲ್ಲಿಟ್ಟುಕೊಂಡಳು. ಇದರಿಂದ ಮರಾಠಿಗರಿಗೂ ಕನ್ನಡಿಗರಿಗೂ ವಿಶೇಷ ಪ್ರೀತಿ ಬೆಳೆಯಿತು.

ಆದರೆ, ರಾಜಾರಾಮನಿಗೆ ಚೆನ್ನಮ್ಮ ರಾಣಿಯು ಆಸರ ಕೊಟ್ಟಿರುವಳೆಂಬ ಸಂಗತಿಯು ಔರಂಗಜೇಬನಿಗೆ ತಿಳಿಯಿತು. ಔರಂಗಜೇಬನಾದರೂ ಅದೇ ಶೋಧದಲ್ಲಿದ್ದನು. ಗುಪ್ತಚಾರರಿಂದ ಸಂಪೂರ್ಣ ನಿಜ ಸಂಗತಿಯನ್ನು ತಿಳಕೊಂಡು, ಕೆಳದಿಯ ಚೆನ್ನಮ್ಮ ರಾಣಿಗೆ ಕಾಗದ ಕೊಟ್ಟು, ತನ್ನ ಸರದಾರನನ್ನು ಕಳಿಸಿದನು. ಅದರಲ್ಲಿ, ಒಳ್ಳೇ ಮಾತಿನಿಂದ ರಾಜಾರಾಮ ಮಹಾರಾಜನನ್ನು ತನ್ನ ವಶಕ್ಕೆ ಕೊಡದಿದ್ದರೆ, ನೋಡು ನೋಡುವ ಹಾಗೆಯೇ ನಿನ್ನ ರಾಜ್ಯ ಹಾಳು ಮಾಡುವೆನೆಂದು ಹೆದರಿಕೆ ಹಾಕಿದ್ದನು; ಆದರೆ, ಚೆನ್ನಮ್ಮ ರಾಣಿಯು 'ಮೊರೆ ಹೊಕ್ಕವರನ್ನು ಹೊರದೂಡಿ, ಗೆದ್ದ ಎತ್ತಿನ ಬಾಲ ಹಿಡಿಯುವವಳಲ್ಲ' ಎಂದು ಔರಂಗಜೇಬನಿಗೆ ಉತ್ತರ ಬರೆದಳು.

ಮುಂದೆ ಒಂದು ವಾರದೊಳಗಾಗಿಯೇ ಔರಂಗಜೇಬನ ಸರದಾರರು ದಂಡು ಕಟ್ಟಿಕೊಂಡು ಕೆಳದಿಯ ಮೇಲೆ ಸಾಗಿಬರುತ್ತಿರುವ ಸಂಗತಿಯು ತಿಳಿಯಿತು. ರಾಣಿಯಲ್ಲಿ ಸೈನ್ಯಬಲ, ದ್ರವ್ಯಬಲ ಚೆನ್ನಾಗಿಯೇ ಇದ್ದಿತು. ಯಾವುದಕ್ಕೂ ಕೊರತೆ ಇರಲಿಲ್ಲ. ತನ್ನ ದಂಡನಾಯಕರನ್ನೆಲ್ಲ ಕರೆಕಳಿಸಿ,

ಅವರಿಗೆ ನಿಜಸ್ಥಿತಿಯ ಪರಿಚಯ ಮಾಡಿಕೊಟ್ಟಳು. ಔರಂಗಜೇಬನ ಸರದಾರರು ಕೆಳದಿಯ ಹತ್ತಿರ ಬಂದು, ಅಲ್ಲಲ್ಲಿ ಹಳ್ಳಿಗಳಲ್ಲಿ ಹಾವಳಿ ನಡಿಸಿದರು. ವ್ಯವಸ್ಥೆಮಾಡಲಿಕ್ಕೆಂದು ಹೋದಲ್ಲಿಯೇ ಮುಸಲ್ಮಾನರಿಗೂ ಕನ್ನಡಿಗರಿಗೂ ಲಗ್ಗೆ ಹತ್ತಿತು.

ಕೆಳದಿಯ ಕೆಚ್ಚೆದೆಯ ಬಂಟರ ಮುಂದೆ ಮುಸಲ್ಮಾನ ದಂಡಿನವರ ಆಟ ನಡೆಯಲಿಲ್ಲ. ಅವರ ಮರ ಹೊಡೆತಕ್ಕೆ ಹೆದರಿ ಮುಸಲ್ಮಾನರು ಓಡಿದರು. ಉತ್ತರದಿಂದ ದಕ್ಷಿಣದವರೆಗೆ ಎಲ್ಲರನ್ನು ಗೆಲಿಯುತ್ತ ಬಂದ ಔರಂಗಜೇಬನ ದಂಡಿನವರಿಗೆ ಕೆಳದಿಯಲ್ಲಿ ಸೋಲಾಯಿತು. ಈ ಮೇರೆಗೆ, ಒಳ್ಳೇ ಧೈರ್ಯದಿಂದ ಔರಂಗಜೇಬನ ದಂಡಿನೊಡನೆ ಕಾದಿ ಚೆನ್ನಮ್ಮರಾಣಿಯು ಕನ್ನಡಿಗರ ಕೀರ್ತಿಯನ್ನು ಬೆಳಗಿಸಿದಳು.

ಚೆನ್ನಮ್ಮರಾಣಿಯು ವೀರಳಿದ್ದಂತೆ ಉದಾರಳೂ ಇದ್ದಳು. ಒಂದು ಸಾರೆ, ಆಕೆ-೧ ಲಕ್ಷ ೯೬ ಸಾವಿರ ಜಂಗಮರಿಗೆ ಊಟಕ್ಕೆ ಹಾಕಿದಳಂತೆ. ಮತದಿಂದ ವೀರಶೈವಳಾದರೂ ಅನ್ಯ ಮತದವರನ್ನು ಅತ್ಯಂತ ಮರ್ಯಾದೆಯಿಂದ ಕಾಣುತ್ತಿದ್ದಳು.

# ೪೯

## ಒನಕೆಯಿಂದ

# ವೈರಿಗಳನ್ನು ತರಿದ ಧೀರಳಾದ ಓಬಿ

( ಕ್ರಿ. ಶ. ೧೮ನೆಯ ಶತಮಾನ. )

[ ಹೈದರಲ್ಲಿಯು ಮೈಸೂರಿನ ನವಾಬ. ತನ್ನ ಆಳಿಕೆಯಲ್ಲಿ ಚಿತ್ರದುರ್ಗದ ಕೋಟೆಯನ್ನು ಗೆಲ್ಲಬೇಕೆಂದು ಯತ್ನಿಸಿದ. ಸಾಧ್ಯವಾಗಲಿಲ್ಲ; ಎರಡನೆಯಸಾರೆ ಮುತ್ತಿಗೆ ಹಾಕಿದನು. ಆಗ ಕಡೆಯ ಮದಕರಿ ನಾಯಕನು ಚಿತ್ರದುರ್ಗವನ್ನಾಳುತ್ತಿದ್ದ. ಅವನು ಜಾತಿಯ ಸಿಪಾಯಿ. ಕೆಚ್ಚೆದೆಯ ಪಾಳೆಯಗಾರ. ಯುದ್ಧದಲ್ಲಿ ಮಡಿಯುವವನೇ ಹೊರತು ಶತ್ರುಗಳ ಕೈಗೆ ಜೀವಂತ ಸಿಗುವವನಲ್ಲ. ಅವನ ಹಾಗೂ ಅವನ ದಂಡಾಳುಗಳ ಪರಾಕ್ರಮವನ್ನು ಕಂಡು ಹೈದರನು ಅಬ್ಬಾ! ಎಂದು ಬೆರಳು ಕಚ್ಚಿಕೊಂಡ. ದುರ್ಗದೊಳಗೆ ಸೇರಲು ದಾರಿ ಸಿಗದೆ ಪೇಚಾಡುತ್ತಿದ್ದನು. ಆಗ ನಡೆದ ಕತೆ. ಚಿತ್ರದುರ್ಗದ ಪಾಳ್ಯಗಾರರು ಎಂಬ ಪುಸ್ತಕದ ಆಧಾರದಿಂದ.]

ಕೋಟೆಯಮೇಲೆ ಏರಿ ಕೆಳಗಿಳಿಯಬೇಕೆಂದೂ ಶತ್ರುಗಳಮೇಲೆ ಗುಂಡುಗಳನ್ನು ಹಾಕಬೇಕೆಂದೂ ಯತ್ನಿಸುತ್ತಿರುವ ಹೈದರನ ಸೈನಿಕರನ್ನು ಪಾಳ್ಯಗಾರನು ಗುಂಡಿನ ಏಟುಗಳಿಂದ ಒಂದೇಸವನೆ ಪಟಪಟನೆ ಕೊಂದು ಹಾಕುತ್ತಿದ್ದನು. ಹಗೆಗಳಿಗೆ ಏನೂ ಮಾಡಲಿಕ್ಕೆ ಅವಕಾಶ ಸಿಗದಂತಾಯಿತು. ಕಂದಕವೆಲ್ಲ ಹೆಣಗಳಿಂದ ತುಂಬಿಹೋಯಿತು. ಪಾಳ್ಯಗಾರನ ದಂಡಾಳುಗಳ ಶಕ್ತಿ-ಸಾಹಸಗಳನ್ನು ಕಂಡು ಹೈದರಲ್ಲಿಯೂ ಅಚ್ಚರಿಗೊಂಡನು.

ಚಿತ್ರದುರ್ಗದ ಕೋಟೆಯು ಬಹು ಭದ್ರವಾದುದು. ಬೆಟ್ಟದಮೇಲೆ ಬೆಟ್ಟ. ಕೋಟೆಯಮೇಲೆ ಕೋಟೆ. ಅಲ್ಲಿ ಯುದ್ಧಮಾಡಿ ಗೆಲ್ಲುವದು ಸಾಧ್ಯವಿರಲಿಲ್ಲ. ಎಲ್ಲಿಯಾದರೂ ಕಳ್ಳದಾರಿ ಇರುವದೇನೋ ನೋಡಿಕೊಂಡು ಬನ್ನಿರಿ ಎಂದು ಹೈದರನು ತನ್ನ ಕೆಲವು ವಿಶ್ವಾಸದ ಯುಕ್ತಿವಂತ ದಂಡಿನವರನ್ನು ಕಳಿಸಿದನು. ಅವರು ಶತ್ರುಗಳಿಗೆ ತಮ್ಮ ಗುರುತು ಹತ್ತದಹಾಗೆ, ಬೇರೆ ಬೇರೆವೇಷಗಳಿಂದ ಬೆಟ್ಟದ ಸುತ್ತಲೂ ಅಲ್ಲಲ್ಲಿ ಗುಟ್ಟಿನಿಂದ ಓಡಾಡಿ ಹುಡುಕುತ್ತಿದ್ದರು. ಸಾಧ್ಯವಿಲ್ಲದ ಕೆಲಸ ಸಾಧಿಸಿದರೆ ನವಾಬನಿಂದ ಮೇಲಾದ ಮೆಚ್ಚಿನ ಕಾಣಿಕೆ ಸಿಗುವದೆಂಬುವ ಆಸೆಯು ಅವರನ್ನು ಕಾರ್ಯಕ್ಕೆ ಹುರಿದುಂಬಿಸುತ್ತಿತ್ತು.

ಅಷ್ಟರಲ್ಲಿ, ಒಬ್ಬ ಹೆಂಗಸು ತಲೆಯಮೇಲೆ ಮೊಸರಿನ ಗಡಿಗೆಯನ್ನು ಇಟ್ಟುಕೊಂಡು ಆಚೆಯಕಡೆಯಿಂದ ಬಂದು, ಒಂದು ದೊಡ್ಡ ಬಂಡೆಯ ಸಂದಿಯೊಳಗಿಂದ ಹಾಯ್ದು. ಕೋಟೆಯಲ್ಲಿ ಹೊಕ್ಕು, ನೋಡು ನೋಡುವ ಹಾಗೆಯೇ ಬೆಟ್ಟದಮೇಲೇರಿ ಹೋದುದನ್ನು ಒಬ್ಬನು ದೂರಿನಿಂದಲೇ ನೋಡಿದನು. ಸೇನಾಪತಿಗೆ ಈ ವರ್ತಮಾನ ತಿಳಿಸಿದನು. ಆಗ ಅತ್ತಕಡೆ ನಾಲ್ಕಾರು ಮಂದಿ, ಯಾರ ಕಣ್ಣಿಗೂ ಬೀಳದ ಹಾಗೆ ಓಡುತ್ತಹೋಗಿ ನೋಡಿದರು. ಎರಡು ದೊಡ್ಡ ಬಂಡೆಗಲ್ಲುಗಳ ನಡುವೆ ಒಂದು ಸಂದು. ಒಳಗೆ ಹಣಿಕೆಹಾಕಿ ನೋಡಿದರೆ ತುಂಬ ಕತ್ತಲೆ. ಒಬ್ಬನು ಧೈರ್ಯಮಾಡಿ ಒಳಗೆ ಹೊಕ್ಕನು. ತೀರ ಇಕ್ಕಟ್ಟಿನ ಸ್ಥಳ. ಮಲಗಿಕೊಂಡು, ಹೊಟ್ಟೆ ಹೊಸಿದು ಕೊಂಡು ಹೋಗುವ ಮಟ್ಟಿಗೆ ಸ್ಥಳವಿತ್ತು. ಅವನು ಹೋದಬಳಿಕ ಒಬ್ಬೊಬ್ಬರೇ ಒಬ್ಬರ ಹಿಂದೊಬ್ಬರು ಹೋಗಲಾರಂಭಿಸಿದರು.

ಬೆಟ್ಟದಮೇಲೆ ಅರ್ಧ ದಾರಿಯಲ್ಲಿ ಒಂದು ಹುಡೇದಮೇಲೆ ಕೊಂಬಿನವನೊಬ್ಬನು ಶತ್ರುಗಳ ಚಟುವಟಿಕೆಗಳನ್ನು ನೋಡುತ್ತಲೂ ಪಾಳ್ಯಗಾರನು ಬಂದರೆ, ಹೋದರೆ, ಕೊಂಬನ್ನೂದಿ ಎಲ್ಲರಿಗೂ ತಿಳಿಸಲೂ ಇರುತ್ತಿದ್ದನು. ಅವನದೊಂದು ಎತ್ತರವಾದ ಸ್ಥಳ. ಅಲ್ಲಿ ನಿಂತರೆ ಸುತ್ತಲಿನದೆಲ್ಲವೂ ಕಾಣಿಸುವಂತಿತ್ತು. ಆ ದಿನ ಕೊಂಬಿನವನು ತನ್ನ ಗುಡಿಸಲಿಗೆ ಅದೇ ತಾನೇ ಊಟಕ್ಕೆ ಹೋಗಿದ್ದ. ಅವನ ಹೆಂಡತಿ ಓಬಿಯು ಗಂಡನಿಗೆ ಬಡಿಸಿ, ತಾನು ಗಂಡನ ಸ್ಥಳಕ್ಕೆ ಕಾಯಲಿಕ್ಕೆಂದು ಬಂದಳು. ಕೆಳಗಿರುವ ಸಂದಿನಲ್ಲಿ ಏನೋ ಸಪ್ಪಳವಾಯಿತು. ಮೆಲ್ಲಗೆ ಕಳ್ಳಹೆಜ್ಜೆಯಿಂದ ಹೋಗಿ ನೋಡಿದಳು. ವೈರಿಗಳು ಕೋಟೆಯಲ್ಲಿ ನುಗ್ಗುತ್ತಿರುವದನ್ನು ಕಂಡಳು. ಆಕೆಯಲ್ಲಿ ವೀರಾವೇಶ ತುಂಬಿತು. ಕೆಲಸ ಕೆಟ್ಟಿತು, ಎಂದು ನೇರವಾಗಿ ತನ್ನ ಗುಡಿಸಲಿಗೆ ಓಡಿಬಂದು, ಅತ್ತಿತ್ತ ನೋಡಿ ಅಲ್ಲಿದ್ದ ಒಂದು ಒನಕೆಯನ್ನು ಭರ್ರನೆ ಕೈಯಲ್ಲಿ ತೆಗೆದುಕೊಂಡು, ಕತ್ತಲೆ ಕವಿದಿರುವ ಆ ಬಂಡೆಗಲ್ಲಿನ ಕಿಂಡಿಯ ಹೊರಮಗ್ಗಲು ನಿಂತು, ಅದರೊಳಗಿಂದ ಹಾಯ್ದು ಬರಬೇಕೆಂದು ತಲೆಯನ್ನು ಹೊರಗೆ ಚಾಚಿದವರ ಮೇಲೆ ಡೊಣ್ಣೆಯ ಪೆಟ್ಟನ್ನು ಹೇರಹತ್ತಿದಳು. ಹೀಗೆ ಒಬ್ಬೊಬ್ಬರನ್ನು ಹೊಡೆಯುತ್ತ, ಹೊಡೆಯುತ್ತ ನೂರಾರು ಜನರನ್ನು ಕೊಂದಳು. ರಕ್ತದ ಕಾವಲಿಯು ಹರಿಯಹತ್ತಿತು. ಓಬಿಯ ಮೈಮೇಲೆ ಮಾತ್ರ ಎಚ್ಚರಿಕೆ ಇರಲಿಲ್ಲ.

ಮುಂದೆ, ಸ್ವಲ್ಪ ಹೊತ್ತಿನಲ್ಲಿಯೇ ಓಬಿಯ ಗಂಡ ಬಂದು ನೋಡಿದ. ಆಕೆಯ ರಾವುಗಣ್ಣು, ಆ ಕೈಯಲ್ಲಿಯ ಡೊಣ್ಣೆ, ನೆತ್ತರ ಚಿಮ್ಮಿ ಮೈ, ಕೈ, ಮುಖವೆಲ್ಲ ಕೆಂಪಾದುದು, ಅಲ್ಲಿ ನೆತ್ತರ ಗುಂಡಿಯಾದುದು, ರಾಸಿರಾಸಿಯಾಗಿ ಜನರು ಸತ್ತು ಬಿದ್ದಿರುವದು, ಇದನ್ನೆಲ್ಲ ನೋಡಿ—ಇದೇನೆಂದು ಆಕೆಯ ಕೈಯೊಳಗಿನ ಡೊಣ್ಣೆಯನ್ನು ಕಸಿದುಕೊಳ್ಳಲಿಕ್ಕೆ ಹೋದನು. ಅರಿವಿಲ್ಲದ ಆಕೆ ಗಂಡನನ್ನೇ ಹೊಡೆಯಲಿಕ್ಕೆ ಬಂದಳು. ಅವನು ದೂರಕ್ಕೆ ಬಂದು ತನ್ನ ಕೊಂಬನ್ನೂದಿದನು. ಓಬಿಯು ಶತ್ರುಗಳನ್ನು ಹೊಡೆದೂ ಹೊಡೆದೂ ತೀರ ಹಣ್ಣಾಗಿದ್ದಳು. ಸ್ವಲ್ಪ ವಿರಾಮ ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಒಬ್ಬನು ಒಳನುಗ್ಗಿ, ತನ್ನ ಕೈಯಲ್ಲಿದ್ದ ಕತ್ತಿಯಿಂದ ಆಕೆಯನ್ನು ಕಡಿದು ಹಾಕಿದನು. ಮುಂದೆ, ಪಾಳ್ಯಗಾರನಾದ ಮದಕರೀನಾಯಕನು ತನ್ನ ದಂಡಿನೊಡನೆ ಬಂದು ನೋಡಲು ನೂರಾರು ಜನ ಶತ್ರುಗಳನ್ನು ಓಬಿಯು ತನ್ನ ಒನಕೆಯಿಂದ ಕೊಂದು ತಾನೂ ಬಿದ್ದುಬಿಟ್ಟಿದ್ದಳು. ನಾಯಕನು ಓಬಿಯ ಶೌರ್ಯ ಸಾಹಾಸಕ್ಕೆ ಆಶ್ಚರ್ಯಪಟ್ಟು, ಆಕೆಯನ್ನು ಬಾಯಿತುಂಬ ಹೊಗಳಿ ರಾಜ-ಮರ್ಯಾದೆಯಿಂದ ಆಕೆಗೆ ಮಣ್ಣು ಕೊಡಿಸಿದನು.

# ೫೦

# ನಿಜಗಲ್ಲಿನ ರಾಣಿ

# ಪಾಳೆಯಗಾರ್ತಿ

( ಕ್ರಿ. ಶ. ೧೮ ನೇ ಶತಮಾನ )

[ ರಾಮರಸ ನಾಯಕನು ನಿಜಗಲ್ಲಿನ ಪಾಳ್ಯಗಾರ. ನಿಜಗಲ್ಲು ಮೈಸೂರ ಸೀಮೆಯಲ್ಲಿಯ ಒಂದು ಕೋಟೆ. ಪುಣೆಯ ಪೇಶವೆ ಸದಾಶಿವರಾಯನು ಮೈಸೂರು ಸೀಮೆಗೆ ದಂಡೆತ್ತಿ ಹೋದಾಗ ನಿಜಗಲ್ಲಿನ ಕೋಟೆಯನ್ನು ಮುತ್ತಿದನು. ಪಾಳ್ಯಗಾರನ ಎರಡನೇ ಹೆಂಡತಿಯ ತಮ್ಮ ಕಸ್ತೂರಿ ಎಂಬವನು ಮಹಾ ತುಂಟ. ತಾನು ಮಾಡಿದ ತಪ್ಪಿಗಾಗಿ ತನ್ನನ್ನು ದೂಷಿಸಿಕೊಳ್ಳದೆ, ಸಿಟ್ಟು ಮಾಡಿ ಬುದ್ಧೀ ಹೇಳಿದ ಪಾಳ್ಯಗಾರನ ಮೇಲೆ ತಿರುಗಿ ಬಿದ್ದನು. ನಂಬಿದ ಪಾಳ್ಯಗಾರನ ವಿಶ್ವಾಸಘಾತ ಮಾಡಿ, ಪೇಶವೆಯರಿಗೆ ಕೋಟೆ ವಶ ಮಾಡಿಕೊಟ್ಟನು. ಆದರಿಂದ ತನಗೂ ತನ್ನ ಅಕ್ಕನಿಗೂ ಕೇಡು ತಂದುಕೊಂಡನು. ಈ ವಿಷಯವನ್ನು ಶ್ರೀ. ಮಾಸ್ತಿ ವೆಂಕಟೇಶಅಯ್ಯಂಗಾರರ ಕತೆಗಳಿಂದ ಆರಿಸಿಕೊಳ್ಳಲಾಗಿದೆ. ]

ರಾಮರಸನಾಯಕನ ಹಿರಿಯ ಹೆಂಡತಿ ಲಕುಮವ್ವ. ಚಿಕ್ಕ ಹೆಂಡತಿ ಗಿರಿಜೆವ್ವ. ಈಕೆಯ ಹೊಟ್ಟೆಯಿಂದ ಒಂದು ಗಂಡು ಕೂಸು ಹುಟ್ಟಿತು. ಇದರಿಂದ ಎಲ್ಲರಿಗೂ ಸಂತೋಷವಾಯಿತು. ಇಬ್ಬರು ಸವತಿಯರು ಅಕ್ಕತಂಗಿಯರಾಗಿ ನಡೆಯುತ್ತಿದ್ದರು. ಇದು ಗಿರಿಜೆವ್ವ ತಾಯಿಯ ತಮ್ಮನಿಗೆ ಸರಿ ಬರಲಿಲ್ಲ. ಸ್ವಭಾವದಿಂದ ತಮ್ಮನು ತುಂಟ, ತನ್ನ ತುಂಟತನಕ್ಕೆ ಪಾಳ್ಯಗಾರನು ನಾಲ್ಕು ಜನರ ಮುಂದೆ ಕರೆಯಿಸಿ, ತನಗೆ ಸಿಟ್ಟು ಮಾಡಿದ್ದಕ್ಕಾಗಿ ಕೋಪಗೊಂಡನು. ಮನಸಿನಲ್ಲಿಯೇ ಹೇಗಾದರೂ ಮಾಡಿ, ತನಗೆ ರಾಮರಸನಿಂದಾದ ಅವಮಾನದ ಸೇಡನ್ನು ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದನು.

ಆದರೆ, ಸೇಡನ್ನು ಹೊರಗೆ ತೋರಗೊಡದೆ, ರಾಮರಸನ ಪ್ರೀತಿ ಸಂಪಾದಿಸಿದನು. ನಾಲ್ಕು ಜನ ಪುಂಡರನ್ನು ಕಟ್ಟಿಕೊಂಡು, ಕೆಲಸಕ್ಕೆ ಬಾರದ ಜಂಭದ ಮಾತುಗಳನ್ನಾಡುತ್ತ ಕಾಲ ಕಳೆಯುತ್ತಿದ್ದನು. ಪೇಶವೆಯರು ಮೂರನೆಯಸಲ ನಿಜಗಲ್ಲಿಗೆ ಮುತ್ತಿಗೆಹಾಕಿದಾಗ ನಾಯಕನು ತನ್ನ ನೆರೆಯಲ್ಲಿಯ ಪಾಳ್ಯಗಾರರಿಗೆ ಸಹಾಯಕ್ಕಾಗಿ ಹೇಳಿ ಕಳಿಸಿದ್ದನು. ಅವರು ವೇಳೆಗೆ ಸರಿಯಾಗಿ ಬರಲಿಲ್ಲ. ತನ್ನಲ್ಲಿದ್ದ ಸೈನಿಕರಿಂದಲೇ ಶತ್ರುಗಳೊಡನೆ ಹೋರಾಡ

ಬೇಕೆಂದು ಯೋಚಿಸಿದನು. ಆಗ, ತನ್ನ ಹೆಂಡತಿಯ ತಮ್ಮನಾದ ಕಸ್ತೂರಿಗೆ ಸ್ವಲ್ಪ ದೊಡ್ಡಸ್ತನ ಕೊಟ್ಟನು. ಅಷ್ಟಕ್ಕೆ ಕಸ್ತೂರಿಗೆ ತಾನು ದೊಡ್ಡವ, ಶೂರ —ತಾನೇ ಏಕೆ ಪಾಳ್ಯಗಾರನಾಗಬಾರದೆಂಬ ಹುಚ್ಚು ಆಸೆ ಮುಸುಕಿತು.

ಪೇಶವೆಯರ ಸೇನೆಯ ದಳವಾಯಿಯನ್ನು ಏಕಾಂತದಲ್ಲಿ ಕಂಡು, 'ನನ್ನನ್ನು ಪಾಳಯಗಾರನನ್ನಾಗಿ ಮಾಡಲು ಒಪ್ಪಿದರೆ ಕೋಟೆಯನ್ನು ನಿಮ್ಮ ವಶ ಮಾಡುವೆ' ಎಂದು ಮಾತನಾಡಿಕೊಂಡನು; ಮತ್ತು ರಾಮರಸನಿಗೆ 'ಕೋಟೆಯ ಬಗ್ಗೆ ನೀವೇನೂ ಯೋಚಿಸ ಬೇಕಿಲ್ಲ. ಅದರ ಹೊಣೆಯನ್ನು ನಾನು ಹೊರುವೆ' ಎಂದು ಧೈರ್ಯ ಹೇಳಿದನು. ಇದರಿಂದ ರಾಮರಸನು ಕಸ್ತೂರಿಗೆ ಕೋಟೆಯ ಕಾವಲಿನ ಭಾರವನ್ನೆಲ್ಲ ಒಪ್ಪಿಸಿದನು.

ಮುತ್ತಿಗೆಯು ಬಹಳ ದಿನ ಸಾಗಿತು. ಹೀಗೇ ನಡೆದರೆ, ಮುಂದೇನು? ಈ ಪೇಚಾಟದೊಳಗೆ ಎಷ್ಟು ದಿನ ಕಾಲ ಕಳೆಯಬೇಕು? ಪೇಶವೆಯರಿಗೆ ಶರಣು ಹೋಗ ಬೇಕೇ ಎಂದು ಮನಸಿನ ಹೊಯ್ದಾಟದಲ್ಲಿ ರಾಮರಸ ನಿದ್ದನು. ರಾತ್ರಿಯಾಯಿತು. ಎಲ್ಲರೂ ಮಲಗಿದರು. ಕಸ್ತೂರಿಯು ತನ್ನ ಮುಂದಿನ ಕಾರ್ಯ ಸಾಧಿಸಲಿಕ್ಕೆ ತನ್ನ ನಂಬಿಗೆಯ ಜನರಿಗೆನೇ ಕೋಟೆಯ ಹೆಬ್ಬಾಗಿಲ ಕಾವಲಕ್ಕೆ ಇಟ್ಟಿದ್ದನು. ಮೊದಲೇ ಮಾತಾಡಿದಂತೆ, ಸರವತ್ತಿನ ಸಮಯಕ್ಕೆ ಬಾಗಿಲ ತೆರೆದು, ಪೇಶವೆಯರ ಸೈನಿಕರನ್ನು ಕೋಟೆಯೊಳಗೆ ಬಿಟ್ಟನು. ಅವರು ಕೋಟೆಯಲ್ಲಿಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ತಮ್ಮ ಕಾವಲಿಟ್ಟು, ಒಳಗೆ ಸೇರಿ, ಸುಲಿಗೆ ನಡಿಸಲು ಯತ್ನಿಸಿದರು.

ನಡೆದ ಗದ್ದಲ ಕೇಳಿ, ರಾಮರಸನಿಗೆ ಎಚ್ಚರವಾಯಿತು. ಹತ್ತಿರವೇ ಇದ್ದ ಕತ್ತಿಯನ್ನು ಕೈಯಲ್ಲಿ ತೆಗೆದುಕೊಂಡು 'ಏನದು ಗದ್ದಲ?' ಎಂದು ಅನ್ನುತ್ತ ಆವೇಶದಿಂದ ಹೊರಗೆ ಬಂದನು. ಕಸ್ತೂರಿಯು ಅಲ್ಲಿಯೇ ನಿಂತು ಕೊಂಡು 'ಇವನೇ ರಾಮರಸ ನಾಯಕ. ಸೆರೆ ಹಿಡಿಯಿರಿ' ಎಂದು ಹೇಳಿ ಕೊಟ್ಟನು. ನಾಯಕನಿಗೂ ಪೇಶವೆಯರ ಸೈನ್ಯದವರಿಗೂ ಲಗ್ಗೆ ಹತ್ತಿತು. ಅವರೊಡನೆ ಒಂಟಿಗನಾಗಿ ಕೆಲ ಹೊತ್ತು ಹೋರಾಡಿ, ಕೊನೆಗೆ ಕೈ ಸಾಗದೆ ನೆಲಕ್ಕೆ ಬಿದ್ದು ಪ್ರಾಣ ಬಿಟ್ಟನು.

ಕೋಟೆಯು ಪೇಶವೆಯರ ವಶವಾಯಿತು. ಅರಮನೆಯಲ್ಲಿ ಹೊಕ್ಕು, ಬೊಕ್ಕಸ ಮುಂತಾದವುಗಳನ್ನು ಅವರು ತಮ್ಮ ಸ್ವಾಧೀನಕ್ಕೆ ತೆಗೆದು

ಕೊಂಡರು. ಎಲ್ಲರಿಗೂ ಹೆದರ ಬೇಡಿರೆಂದು ಅಭಯ ಕೊಟ್ಟರು. ಮುಂದೆ, ಪಟ್ಟಕ್ಕೆ ಯಾರನ್ನು ಕುಳ್ಳಿರಿಸಬೇಕೆಂಬುವ ವಿಷಯದಲ್ಲಿ ವಾದ ನಡೆಯಿತು. ರಾಮರಸನಾಯಕನಿಗೆ ಮಗನಿರುವ ಸಂಗತಿಯು ಪೇಶವೆಯರ ಸರದಾರನಿಗೆ ತಿಳಿಯಿತು. ಇಬ್ಬರೂ ರಾಣಿಯರನ್ನು ಕರೆ ಕಳಿಸಿ, ಅವರ ಅಭಿಪ್ರಾಯ ಕೇಳಬೇಕೆಂದನು.

ಮೊದಲು ಹಿರಿಯ ರಾಣಿಯ ಭೆಟ್ಟಿಯು ಆಯಿತು. ತರುವಾಯ ಕಿರಿಯವಳು ಬಂದಳು. ಈಕೆಯ ಹೆಸರು ಗಿರಿಜವ್ವ. ಬಲು ಚೆಲುವೆ. ಸರದಾರನು ಈಕೆಯ ರೂಪಕ್ಕೆ ಮನಸೋತನು ಮುಂದಿನ ವಿಚಾರವೇನೆಂದು ಕೇಳಿದಾಗ 'ಹಿರಿಯಳಾದ ನನ್ನ ಅಕ್ಕನು ಹೇಳಿದಂತೆ ನಡೆಯಿಸಬೇಕು' ಎಂದು ತಲೆಬಾಗಿ ಹೇಳಿದಳು. ಸರದಾರನು ಮುಂದೆ, ಏನೇನೋ ಮಾತನ್ನು ಬೆಳೆಯಿಸಿ, ತನ್ನ ವಶವಾಗಲು ಗಿರಿಜವ್ವಗೆ ಕೇಳಿದನು. ಇಷ್ಟೊತ್ತಿನವರೆಗೆ, ತಲೆ ತಗ್ಗಿಸಿಕೊಂಡು ಅತ್ತಿತ್ತ ನೋಡದೆ ಇದ್ದ ಗಿರಿಜವ್ವೆಯು ದಿಟ್ಟತನದಿಂದ ಸರದಾರನನ್ನೂ ಕಸ್ತೂರಿಯನ್ನೂ ಕಿಡಿಗಣ್ಣಿನಿಂದ ನೋಡಿ, "ಇದಕ್ಕಿವನು ಒಪ್ಪಿರುವನೋ" ಎಂದು ಕೇಳಿದಳು. ಸರದಾರನು 'ಅಹುದು' ಎಂದನು. ಗಿರಿಜವ್ವೆಗೆ ದಿಕ್ಕು ತೋಚದಾಯಿತು.

ಅರಮನೆಗೆ ಬಂದಳು. ನೋವಿನ ಮೇಲೆ ಬರೆ ಕೊಟ್ಟಂತೆ ಆಕೆಯ ಸ್ಥಿತಿಯಾಗಿತ್ತು. ತನ್ನ ಅಕ್ಕನ ಬಳಿಗೆ ಹೋಗಿ, ನಾನು ಸರದಾರನನ್ನು ಮದುವೆಯಾಗುವೆ. ಆ ದಿನವೇ ನನ್ನ ತಮ್ಮನಾದ ಕಸ್ತೂರಿಗೆ ಸದ್ಯದ ಮಟ್ಟಿಗೆ ಪಟ್ಟವಾಗಬೇಕು, ಅದರಂತೆ ಒಂದೆರಡು ದಿನಗಳಲ್ಲಿ ಎಲ್ಲ ಬಗೆಯ ವ್ಯವಸ್ಥೆ ಆಗಬೇಕು ಎಂದಳು. ಗಿರಿಜವ್ವೆಗೆ ಈ ವಿಪರೀತ ಬುದ್ಧಿ ಹುಟ್ಟಿದ್ದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು.

ಮದುವೆಯ ಮತ್ತು ಪಟ್ಟದ ಸಿದ್ಧತೆ ನಡೆಯಿತು. ಮದುವೆಯ ದಿನ ತನ್ನ ಹಾಗೂ ತನ್ನ ತಮ್ಮನ ಮೆರವಣಿಗೆ ನಡೆದನಂತರ, ಕೋಟೆಯ ಗೋಡೆಯ ಮೇಲೆ ಇರುವ ಗದ್ದುಗೆಯ ಮೇಲೆ ತಾನೂ ತನ್ನ ತಮ್ಮನೂ ಕುಳ್ಳಿರುವಂತೆ ಏರ್ಪಡಿಸಿದಳು. ಅಂದು ಬೆಳಿಗ್ಗೆ ಎದ್ದು, ಗಿರಿಜವ್ವ ಸ್ನಾನ ಮಾಡಿ, ದೇವರ ಪೂಜೆ ಮುಗಿಸಿಕೊಂಡಳು. ತನ್ನ ಕೂಸನ್ನು ಎತ್ತಿಕೊಂಡು ಲಕುಮವ್ವೆಯ ಹತ್ತಿರ ಹೋಗಿ, ಅಕೆಯ ಉಡಿಯಲ್ಲಿ ಮಗುವನ್ನು ಹಾಕಿ,

'ಇನ್ನು ಇದು ನನ್ನ ಮಗುವಲ್ಲ, ನಿಮ್ಮದು. ಇದನ್ನು ನಿಮಗೇ ಒಪ್ಪಿಸಿರುವೆ' ಎಂದು ಕಣ್ಣೀರು ಸುರಿಸುತ್ತ ಬಿಗಿದು ನಡುಗುವ ದನಿಯಲ್ಲಿ ಹೇಳಿದಳು.

ಲಕುಮವ್ವೆಗೆ ಸುಮ್ಮನಿರಲಿಕ್ಕಾಗಲಿಲ್ಲ. 'ಇದೇನು? ಹೀಗೇಕೆ? ಬುದ್ಧಿ ಎಲ್ಲಾ ಹಾಳಾಯಿತೆ? ಮನೆತನದ ಮರ್ಯಾದೆಯನ್ನು ಕಳೆದು ಬಿಟ್ಟೆ; ಒಲ್ಲೆನೆಂದರ ಸರದಾರನು ಏನು ಮಾಡುತ್ತಿದ್ದನು?' ಎಂದು ಮುಂತಾಗಿ ಬುದ್ಧಿ ಹೇಳಲಾರಂಭಿಸಿದಳು. ಗಿರಿಜವ್ವೆ 'ಇನ್ನು, ಆ ಮಾತು ಬೇಡ. ನನ್ನ ದಾರಿ ನನಗೆ' ಎಂದು ಅರಮನೆಯಿಂದ ಉತ್ಸವದೊಡನೆ ಹೊರಟಳು..

ಮೆರವಣಿಗೆಯು ಕೋಟೆಯ ಕಡೆಗೆ ಊದುತ್ತ ಬಾರಿಸುತ್ತ ಸಾಗಿತು. ಗದ್ದುಗೆಯ ಬಂಡೆಯುವರೆಗೆ ಹೋದ ಮೇಲೆ, ಗಿರಿಜವ್ವೆಯು, ಎಲ್ಲರೂ ನಿಂತು ನೋಡುತ್ತಿರುವ ಹಾಗೆಯೆ, ತಮ್ಮನಿಗೆ ಆರತಿ ಮಾಡಲಿಕ್ಕೆ ಆರತಿಯ ತಟ್ಟೆ ತರ ಹೇಳಿದಳು. ನೆರೆದು ನೊಡುತ್ತಿದ್ದ ಜನರಿಗೆ ಇದೆಲ್ಲಾ ಏನೆಂದು ತಿಳಿಯದೆ, ಎಲ್ಲಿರುವೆವು ? ಏನನ್ನು ನೋಡುತ್ತಿರುವೆವು ? ಎಂಬುದರ ಅರಿವು ಗೆಟ್ಟಂತಾಯಿತು.

ಗಿರಿಜವ್ವೆಯ ದೇಹವು ಅಲ್ಲಿದ್ದರೂ ಮನಸ್ಸು ಎಲ್ಲಿಯೋ ಹೋಗಿರುವಂತೆ, ಗಂಭೀರ ಮುದ್ರೆಯನ್ನು ತಾಳಿದ್ದಿತು. ಕೈಯಲ್ಲಿ ಆರತಿ ತೆಗೆದುಕೊಂಡು, ಆರತಿ ಮಾಡಿ ಅದನ್ನು ಸೇವಕಳ ಕೈಯಲ್ಲಿ ಕೊಟ್ಟು, 'ತಮ್ಮಾ! ಕಸ್ತೂರಿ, ನಮ್ಮಿಬ್ಬರಿಂದ ರಾಮರಸನ ಮನೆ ಹೆಸರು ಕೆಟ್ಟಿತು. ನಮ್ಮನ್ನು ಹೆತ್ತವರಿಗೆ ಅಪಕೀರ್ತಿ ಬಂತು. ಇನ್ನು ನಾವು ಬದುಕಿಂಬಾರದು' ಎಂದು ತಮ್ಮನನ್ನು ತಾನು ಬಿಗಿಯಾಗಿ ಅಪ್ಪಿಕೊಂಡು, ಅವನನ್ನು ಕಟ್ಟಿಕೊಂಡೇ ಕೋಟೆಯ ಹಿಂದಿನ ಆಳವಾದ ಕಂದಕಕ್ಕೆ ಧುಮುಕಿದಳು; ಕೂಡಿದ ಜನರೆಲ್ಲರು ಹಾ ಇದೇನು! ಇದೇನು! ಎನ್ನುವಷ್ಟರಲ್ಲಿಯೇ ಅವರಿಬ್ಬರೂ ಆ ಎತ್ತರವಾದ ಕೋಟೆಯಿಂದ ಉರುಳುತ್ತುರುಳುತ್ತ ಪಾತಾಳದಲ್ಲಿರುವ ದೆವ್ವಿನಂಥ ಬಂಡೆಗಲ್ಲಿನ ಮೇಲೆ ಅಪ್ಪಳಿಸಿ, ಪ್ರಾಣ ಹೋಗಿ, ಗಿಡಗಂಟೆಗಳಿಂದ ತುಂಬಿದ ಕೊನ್ನಾರದೊಳಗೆ ಬಿದ್ದರು. ಮುಂದೆ ಗಿರಿಜವ್ವೆಯ ಮಗನಿಗೆ ಪಟ್ಟವಾಯಿತು. ಅವನೇ ನಿಜಗಲ್ಲಿನ ನಾಯಕನಾದನು.

# ೫೧
# ಹೈದರಅಲ್ಲಿಯು ಚರಿತ್ರೆ
( ಕ್ರಿ. ಶ. ೧೭೬೦–೧೭೮೨ )

[ ಮೈಸೂರಿನ ಒಡೆಯರಾದ ದೊಡ್ಡ ಕೃಷ್ಣರಾಜರು ತೀರಿಕೊಂಡರು. ಅವರಿಗೆ ಮಕ್ಕಳಿರಲಿಲ್ಲ. ಆಗ ದಳವಾಯಿಗಳಾಗಿದ್ದ ಕರಾಚೂರಿ ನಂಜರಾಜಯ್ಯ–ದೇವರಾಜಯ್ಯ ಅವರಿಬ್ಬರೂ ಚಾಮರಾಜ ಎಂಬುವ ಹುಡುಗನನ್ನು ದತ್ತಕ ಮಾಡಿಸಿ, ತಾವೇ ಅವನ ಹೆಸರಿನಿಂದ ಆಳಲಾರಂಭಿಸಿದರು. ಚಾಮರಾಜರು ಬಹುದಿನ ಬಾಳದೆ, ಬೇಗ ತೀರಿಕೊಂಡರು. ಮುಂದೆ, ಇಮ್ಮಡಿ ಕೃಷ್ಣರಾಜರ ಆಳಿಕೆಯಲ್ಲಿಯೂ ದೇವರಾಜಯ್ಯನ ತಮ್ಮ ನಂಜರಾಜಯ್ಯನೇ ಸರ್ವಾಧಿಕಾರಿಯಾಗಿದ್ದನು. ಇವನ ಆಳಿಕೆಯಲ್ಲಿಯೇ ಹೈದರನು ಮುಂದೆಬಂದನು. ಅವನ ಚರಿತ್ರೆ ಕೆಳಗಿನಂತಿದೆ. ಇದನ್ನು ಮೈಸೂರು ಸಂಸ್ಥಾನದ ಚರಿತ್ರಸಾರ, ಮಿಥಿಕ್ ಸೊಸಾಯಟಿಯ ಪತ್ರಿಕೆಗಳಿಂದ ಸಂಗ್ರಹಿಸಿ ಬರೆದಿದೆ. ]

ಹೈದರನು ಕುರೇಶೀಕುಲಕ್ಕೆ ಸಂಬಂಧಿಸಿದವನೆಂದು ಇರಾಣದ ಚರಿತ್ರಕಾರನು ಬರೆದಿರುವನು. ಅವನ ಅಜ್ಜ–ಮುತ್ತಜ್ಜನೊಬ್ಬನು ವಿಜಾಪುರ ಸುಲ್ತಾನರಲ್ಲಿ ಧರ್ಮಗುರುವಿನ ಕೆಲಸದಲ್ಲಿದ್ದನಂತೆ; ಆದರೆ, ತಂದೆಯಾದ ಫತ್ತೇಮುಹಮ್ಮದನು ಕೋಲಾರದ ಫೌಜುದಾರನಾಗಿದ್ದನು. ಆ ಕೆಲಸದ ದೆಸೆಯಿಂದ ಫತ್ತೇಮುಹಮ್ಮದನಿಗೆ ಬೂದೀಕೋಟೆ ಎಂಬ ಊರು ಜಹಗೀರು ದೊರೆತಿತ್ತು. ಅಲ್ಲಿಯೇ ಹೈದರನು ೧೭೨೦ರಲ್ಲಿ ಹುಟ್ಟಿದನು. ಅವನು ಏಳೆಂಟು ವರ್ಷದವನಿರುವಾಗ ಫತ್ತೇಮುಹಮ್ಮದನು ತೀರಿಕೊಂಡನು.

ಹೈದರನ ತಾಯಿಗೆ ಮಕ್ಕಳ ಸಂರಕ್ಷಣೆಯ ಬೇರೆ ದಾರಿ ಕಾಣದ್ದರಿಂದ ಬೆಂಗಳೂರಿಗೆ ಹೋದಳು. ಅಲ್ಲಿರುವಾಗಲೇ ಹೈದರನು ಸೈನ್ಯದಲ್ಲಿ ಸೇರಿಕೊಂಡನು. ನಂಜರಾಜಯ್ಯನು ದೇವನಹಳ್ಳಿಗೆ ಮುತ್ತಿಗೆ ಹಾಕಿದಾಗ ಚಿಕ್ಕವನಾದ ಹೈದರನು ತನ್ನ ಚಾತುರ್ಯ, ಸಾಹಸಗಳನ್ನು ಚೆನ್ನಾಗಿಯೇ ತೋರಿಸಿ, ಮುತ್ತಿಗೆಯಲ್ಲಿ ಮಿತಿಮೀರಿ ಸಹಾಯ ಮಾಡಿದನು. ಅದಕ್ಕಾಗಿ, ನಂಜರಾಜಯ್ಯನು ಹೈದರನಿಗೆ ೫೦ ಕುದುರೆ ೨೦೦ ಕಾಲಾಳುಗಳ ಮೇಲೆ ನಾಯಕನನ್ನಾಗಿ ಮಾಡಿದನು. ಮುಂದೆ, ತಿರುಚನಾಪಳ್ಳಿಯ ಬಳಿಯಲ್ಲಿ ನಡೆದ ಹೋರಾಟದಲ್ಲಿಯೂ ಒಡೆಯನ ಮನಸು ತೃಪ್ತಿಯಾಗುವಂತೆ ನೆರ

ವಾದ್ದರಿಂದ ಹೈದರನಿಗೆ ನಂಜರಾಜಯ್ಯನು ದಿಂಡಿಗಲ್ಲಿನ ಫೌಜದಾರನನ್ನಾಗಿ ನಿಯಿಮಿಸಿದನು.

ನಂಜರಾಜಯ್ಯನು ಸರ್ವಾಧಿಕಾರಿಯಾಗಿರುವಾಗ, ದಂಡಿನವರಿಗೆ ಸಂಬಳ ಸರಿಯಾದ ವೇಳೆಗೆ ಮುಟ್ಟದ್ದರಿಂದ ದಂಡಿನವರು ನಂಜರಾಜಯ್ಯನ ಮನೆಯ ಬಾಗಿಲಲ್ಲಿಯೂ ಅರಮನೆಯ ಬಾಗಿಲಲ್ಲಿಯೂ ಕುಳಿತು ದಂಗೆ ಎಬ್ಬಿಸಿದರು. ಒಳಗೆ ನೀರನ್ನು, ಪದಾರ್ಥಗಳನ್ನು ಬಿಡಲಿಲ್ಲ. ದಂಡಿನವರ ದಂಗೆಯನ್ನು ಅಡಗಿಸಲಿಕ್ಕೆ ಹೈದರನು ದಿಂಡಿಗಲ್ಲಿನಿಂದ ಬಂದು ನೆರವಾದನು. ಆಗ, ನಂಜರಾಜಯ್ಯನು ಹೈದರನಿಗೆ ಬೆಂಗಳೂರು ಕೋಟೆ ಮತ್ತು ಅದಕ್ಕೆ ಸೇರಿದ ಸೀಮೆಯನ್ನು ಜಹಗೀರು ಕೊಟ್ಟನು.

ಇಷ್ಟರಲ್ಲಿ ನಂಜರಾಜಯ್ಯನ ಸರ್ವಾಧಿಕಾರವು ತಲೆಬೇಸರಾಗಿತ್ತು. ದೊಡ್ಡ ಕೃಷ್ಣರಾಜಒಡೆಯರ ಹೆಂಡತಿ ದೇವರಾಜಮ್ಮಣ್ಣಿಯವರು ಖಂಡೇ ರಾಯನನ್ನೂ ಹೈದರನನ್ನೂ ತಮ್ಮ ಕಡೆಗೆ ಒಲಿಸಿಕೊಂಡರು. ಅವನ ಮನೆ ಬಾಗಿಲಲ್ಲಿ ಸಂಬಳಕ್ಕಾಗಿ ಕುಳ್ಳಿರಬೇಕೆಂದು ದಂಡಿನವರಿಗೆ ಕಲಿಸಿದರು. ಅವ ರನ್ನು ಸಂತುಷ್ಟಪಡಿಸಲಿಕ್ಕೆ ಆಗದೆ, ನಂಜರಾಜಯ್ಯನು ಕೋಣನೂರಿಗೆ ಹೋದನು. ಖಂಡೇರಾಯನು ಮಂತ್ರಿಯಾದನು. ಹೈದರನು ಸೇನಾಪತಿ ಯಾದನು. ತನ್ನ ಆಳಿಕೆಯಲ್ಲಿ ಹೈದರನು—ಸೈನ್ಯ ಹೆಚ್ಚಿಸುತ್ತ, ದಿನದಿನಕ್ಕೆ ಬಲಿಷ್ಠನಾದನು. ಇದರಿಂದ ಖಂಡೇರಾಯನಿಗೆ ದ್ವೇಷಬುದ್ಧಿ ಹುಟ್ಟಿತು.

ಆಮೇಲೆ, ಖಂಡೇರಾಯನು ಹೈದರನನ್ನು ಸೆರೆ ಹಿಡಿಯಬೇಕೆಂದು ಯೋಚಿಸಿ, ಶ್ರೀರಂಗಪಟ್ಟಣದ ಮೇಲೆ ಗುಂಡುಗಳನ್ನು ಹಾರಿಸಲಿಕ್ಕೆ ಹೇಳಿ ದನು. ಆಗ ಹೈದರನು ಓಡಿ ಹೊದನು. ಹೈದರನನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಕೊಡಲಾದೀತೆಂದೂ ಡಂಗುರ ಹೊಯ್ಸಿದನು.

ಇತ್ತ, ಹೈದರನು ಬೆಂಗಳೂರು ಸೇರಿದನು. ಅಲ್ಲಿಯ ಕಿಲ್ಲೇದಾರ ಕಬೀರ ಬೇಗನು ಹೈದರನ ಪಕ್ಷದವನಿದ್ದುದರಿಂದ, ಅವನ ನೆರವಿನಿಂದ ವರ್ತಕರಲ್ಲಿ ನಾಲ್ಕು ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಸೈನ್ಯ ಸಿದ್ಧತೆ ಮಾಡಿ ಕೊಂಡನು. ತನ್ನ ಮೇಲೆ ಸಾಗಿ ಬರುವ ಮರಾಠರಿಗೆ ಲಂಚ ಕೊಟ್ಟು ಕಳಿಸಿದನು. ಅನಂತರ, ತನ್ನ ಸೈನ್ಯ ಸಹಿತವಾಗಿ ನಂಜನಗೂಡಿಗೆ ಹೋದನು. ಅಲ್ಲಿ ಖಂಡೇರಾಯನು ಹೈದರನನ್ನು ಸೋಲಿಸಿದನು. ಆಗ ಹೈದರನು ತನ್ನ

ಮೊದಲಿನ ಒಡೆಯನಾದ ನಂಜರಾಜಯ್ಯನಿದ್ದ ಕೋಣನೂರಿಗೆ ಹೋಗಿ ತಾನು ಹಿಂದಕ್ಕೆ ದ್ರೋಹ ಮಾಡಿದ್ದನ್ನು ಮರೆತು ಕ್ಷಮಿಸಬೇಕೆಂದೂ, ತನ್ನನ್ನು ರಕ್ಷಿಸಬೇಕೆಂದೂ ಬೇಡಿಕೊಂಡನು. ತನ್ನಲ್ಲಿದ್ದ ಸೈನ್ಯವನ್ನು ಕೊಟ್ಟು ನಂಜರಾಜಯ್ಯನು ಸಹಾಯ ಮಾಡಿದನು. ಮುಂದೆ ಯುದ್ಧದಲ್ಲಿ ಖಂಡೇ ರಾಯನು ಸೋತು ಓಡಿದನು.

ಹೈದರನ ಬಲವು ಆಗ ಚೆನ್ನಾಗಿಯೇ ಬಲಿತಿತ್ತು, ರಾಜ್ಯದ ಎಲ್ಲ ಆಡ ಳಿತವು ಹೈದರನ ಕೈಸೇರಿತು. ಅರಮನೆಯ ವೆಚ್ಚಕ್ಕೆ, ನಂಜರಾಜಯ್ಯನ ವೆಚ್ಚಕ್ಕೆ ಸಾಲುವಷ್ಟು ಸೀಮೆಯನ್ನು ಗೊತ್ತು ಮಾಡಿಕೊಟ್ಟು ತಾನೇ ರಾಜ್ಯ ಭಾರ ವಹಿಸಿದನು.

ನಂತರ ಅವನು 'ನವಾಬ ಹೈದರಲ್ಲೀಖಾನ ಬಹಾದ್ದೂರ' ಎಂಬ ಬಿರುದು ಧರಿಸಿದನು. ಹರಪನಹಳ್ಳಿ, ರಾಯದುರ್ಗ, ಚಿತ್ರದುರ್ಗಗಳ ಮೇಲೆ ನಾಗಿ ಹೋಗಿ, ಅಲ್ಲಲ್ಲಿಯ ಪಾಳೆಯಗಾರರಿಂದ ಕಪ್ಪ-ಕಾಣಿಕೆಗಳನ್ನು ಎತ್ತಿದನು. ಬಿದನೂರು ಆಗ ಕೆಳದಿಯ ಅರಸರ ರಾಜಧಾನಿಯಾಗಿತ್ತು. ಅದಕ್ಕೆ ಮುತ್ತಿಗೆ ಹಾಕಿದನು. ತಿರುಗಿ ಹೋದರೆ, ೭೦ ಲಕ್ಷ ರೂಪಾಯಿ ಕೊಡುವದಾಗಿ ಬಸವಪ್ಪನಾಯಕನ ಹೆಂಡತಿ ವೀರಮ್ಮಾಜಿಯು ಹೇಳಿಕಳು ಹಿದಳು. ಅವನು ಒಪ್ಪದ್ದರಿಂದ ಬಿದನೂರಿನಿಂದ ಓಡಿಹೋದಳು. ಬಿದ ನೂರು ಸಂಸ್ಥಾನ (ಕೆಳದಿ) ದ ಸರ್ವಾಧಿಕಾರಿಯಾದ ಲಿಂಗಣ್ಣನೆಂಬವನು ಹೈದರನ ಕಡೆ ಆಗಿ, ಬಿದನೂರಿಗೆ ಹೋಗುವ ಕಳ್ಳದಾರಿಯನ್ನು ಹೈದರನಿಗೆ ಹೇಳಿಕೊಟ್ಟನು. ವೀರಮ್ಮಾಜಿಯು ಇದನ್ನೆಲ್ಲ ತಿಳಿದುಕೊಂಡು, ತನ್ನ ಅರಮನೆಗೆ ಬೆಂಕೆ ಹೊತ್ತಿಸಿ, ಜನರಿಗೆಲ್ಲಾ ಊರು ಬಿಟ್ಟುಹೋಗಲಿಕ್ಕೆ ತಿಳಿಸಿದಳು; ಅಂಥ ಸಂದರ್ಭದೊಳಗೇ ಹೈದರನು ಬಿದನೂರು ಪಟ್ಟಣದ ಉರಿಯನ್ನಾರಿಸಿ, ಅದನ್ನು ಸುಲಿಗೆ ಮಾಡಿದನು. ಆ ಸುಲಿಗೆಯಲ್ಲಿ ಅವನಿಗೆ ೧೨ ಕೋಟಿ ರೂಪಾಯಿಗಳವರೆಗೆ ಸುಲಿಗೆ ದೊರೆಯಿತು.

ಹೈದರನು ಮೈಸೂರು ಒಡೆಯರನ್ನು ಲೆಕ್ಕಿಸದೆ, ತಾನೇ ಅರಸನೆಂದು ರಾಜ್ಯವಾಳುತ್ತಿದ್ದನು. ಅವರ ಸಂತತಿಗೆ ಯಾವ ಬಗೆಯ ಅಪಾಯ ಮಾಡ ಲಿಲ್ಲ. ಇಮ್ಮಡಿ ಕೃಷ್ಣರಾಜ ಒಡೆಯರು ತೀರಿಹೋದನಂತರ, ಹೈದರನು ಅವರ ಮಕ್ಕಳಾದ ನಂಜರಾಜರಿಗೆ ಪಟ್ಟಾಭಿಷೇಕ ಮಾಡಿಸಿದನು.

ಹೈದರನು ಆ ಕಾಲದ ಅರಸರಾದ ಪುಣೆಯ ಪೇಶವೆ, ಹೈದರಾಬಾದ ನಿಜಾಮ, ಮತ್ತು ಇಂಗ್ಲಿಷರೊಡನೆ, ಯುದ್ಧ ನಡಿಸುತ್ತಿದ್ದನು. ಇಂಗ್ಲಿಷರೊಡನೆ ಕೊನೆಯವರೆಗೆ ಯುದ್ಧ ನಡಿಸಿದವರಲ್ಲಿ ಹೈದರನೇ ಶ್ರೇಷ್ಠನು. ಹೈದರನಿಗೆ ಫ್ರೆಂಚರಿಂದ ಸ್ವಲ್ಪ ಸಹಾಯವಿತ್ತು.

ದಕ್ಷಿಣದಲ್ಲಿ ದಾಳಿನಡಿಸಿರುವಾಗ ಇಂಗ್ಲಿಷರಿಂದ ಹೈದರನಿಗೆ ಎರಡು ಕಡೆ ಸೋಲು ಆಯಿತು. ಕೆಲವೊಂದು ಕಾರಣದಿಂದ ಮರಾಠರಿಗೂ ನಿಜಾಮನಿಗೂ ಇದ್ದ ಗೆಳೆತನವು ತಪ್ಪಿಹೋಯಿತು. ಆರ್ಕಾಟಿನ ಬಳಿಯಲ್ಲಿ ಇಂಗ್ಲಿಷರಿಗೂ ಹೈದರನಿಗೂ ಕಾಳಗ ನಡೆದಿರಲು ಅಲ್ಲಿಯೇ ಹೈದರನಿಗೆ ಬೆನ್ನುಫಣಿ ಎಂಬ ಹುಣ್ಣು ಹುಟ್ಟಿತು. ಅದು ಬಲಿಯುತ್ತ ನಡೆದು ಯುದ್ಧ ನಡೆದಿರುವಾಗ ಆದರಿಂದಲೇ ಹೈದರನಿಗೆ ಸಾವು ಒದಗಿತು. ಸಾಯುವಾಗ ಅವನ ವಯಸ್ಸು ೬೦ ವರ್ಷ. ಇಂಗ್ಲಿಷರಿಗೆ ಹೈದರನು ಒಮ್ಮೆ ಕೂಡ ಈಲಾಗಲಿಲ್ಲ.

ಹೈದರನಿಗೆ ಓದು-ಬರೆಹ ಬರುತ್ತಿರಲಿಲ್ಲ. ದೈವಬಲ ಮತ್ತು ಸಾಮರ್ಥ್ಯವಿದ್ದರೆ ಓದು- ಬರೆಹದಿಂದೇನು ಎಂದು ಅವನು ಅನ್ನುತ್ತಿದ್ದ. ರಾಜಕಾರ್ಯದಲ್ಲಿ ತಂತ್ರಗಾರನೂ ಮಹತ್ವಾಕಾಂಕ್ಷಿಯೂ ಹೊತ್ತು ಬಂದಂತೆ ನಡೆಯುವವನೂ ಇದ್ದನು. ಮುಸಲ್ಮಾನ ಮತದವನಾದರೂ ಹಿಂದುಗಳ ವಿಷಯದಲ್ಲಿ ತುಂಬಾ ಸಹಾನುಭೂತಿಯಿಂದ ನಡೆಯುತ್ತಿದ್ದ. ಹಿಂದೂ ಮಠದ ಸ್ವಾಮಿಗಳಿಗೆ ಅವರವರ ಮರ್ಯಾದೆಯಂತೆ ನಡೆದು, ಅವರ ಇನಾಮುಗಳನ್ನು ಕೊಡಿಸಿದನು. ೧೭೭೪ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದ ರಂಗನಾಥ ದೇವಾಲಯಕ್ಕೆ ಬೆಂಕೆತಗಲಿ, ಕೆಲಭಾಗ ಬಿದ್ದುಹೋಯಿತು. ಆಗ ಹೈದರನು ಅದನ್ನು ತಿರುಗಿ ಕಟ್ಟಿಸಿದನು. ಅದೇವರ್ಷ ಕಲುಬುರ್ಗಿಯ ಸಾಲರಜಂಗನಿಂದ ಹಾಳುಮಾಡಲ್ಪಟ್ಟ ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯವನ್ನು ಪುನಃ ಕಟ್ಟಿಸಿದನು. ತನ್ನ ಆಳಿಕೆಯಲ್ಲಿ ರಾಜ್ಯದೊಳಗೆ ಆಕಳುಗಳ ಕೊಲೆ ನಡೆಯದಂತೆ ಕಟ್ಟುಮಾಡಿದನು. ಟೀಪುವಿಗೆ ದೇವರಿಗೆ ಬಿಟ್ಟ ಗೂಳಿಗಳನ್ನು ಬೇಟೆಯಾಡುವ ಹುಚ್ಚು ಬಹಳವಾಗಿತ್ತು; ಆದುದರಿಂದ ಅವುಗಳನ್ನು ಕಂಡಲ್ಲೆಲ್ಲ ಬರ್ಚಿಯಿಂದ ತಿವಿದು, ಗುಂಡಿನಿಂದ ಹೊಡೆದು ಕೊಲ್ಲುತ್ತಿದ್ದ. ಅದಕ್ಕಾಗಿ ಹೈದರನಿಗೆ ಹಲವು ಜನ ಪ್ರಜೆಗಳು ದೂರು ಒಯ್ದರು. ಆಗ ತನ್ನ ಮಗನಿಗೆ ಸಿಟ್ಟುಮಾಡಿದನು.

ಮುಸಲ್ಮಾನರಂತೆ, ಹಿಂದೂ ಜನರಿಗೂ ದೊಡ್ಡ ದೊಡ್ಡ ಕೆಲಸ ಕೊಟ್ಟಿದ್ದನು. ಪ್ರಧಾನಿ ವೆಂಕಪ್ಪಯ್ಯ, ತೋಫಖಾನೆ ಶ್ರೀನಿವಾಸರಾಯ, ಅಂಚೆ ಗುರಿಕಾರ ಶಾಮಯ್ಯ, ಪೂರ್ಣಯ್ಯ ಇವರೆಲ್ಲರೂ ಹೈದರನ ಆಳಿಕೆಯಲ್ಲಿಯೇ ಮುಂದೆ ಬಂದರು.

ಈತನ ತರುವಾಯ ಇವನ ಮಗನಾದ ಟೀಪುಸುಲ್ತಾನ ಮೈಸೂರು ರಾಜ್ಯಕ್ಕೆ ಅರಸನಾಗಿ ಸುಲ್ತಾನ ಎಂಬ ಬಿರುದು ಧರಿಸಿ ರಾಜ್ಯವಾಳಿದನು.

---

## ೫೨

# ಕೊಡಗಿನ ವೀರರಾಜೇಂದ್ರನ

## ಸ್ವಾತಂತ್ರ್ಯಪ್ರೇಮ

( ಕ್ರಿ. ಶ. ೧೭೮೨–೧೮೦೯ )

[ ಕೊಡಗು ಸೀಮೆಯು ಪ್ರಾಚೀನಕಾಲಕ್ಕೆ ಗಂಗ, ಚೋಳ, ಹೊಯ್ಸಳ, ಚಂಗಾಳ್ವರ ಆಳಿಕೆಯಲ್ಲಿತ್ತು. ಚಂಗಾಳ್ವರು ವಿಜಯನಗರದ ಕೈಕೆಳಗಿನ ಅರಸರು. ಚಂಗಾಳ್ವರನ್ನು ಕೆಳದಿ ರಾಜರಿಗೆ ಸಂಬಂಧಿಸಿದ ಹಾಲೇರಿ ಮುದ್ದುರಾಜ ಎಂಬುವನು ಸೋಲಿಸಿ ತಾನು ಆಳತೊಡಗಿದನು. ಇವನ ಮನೆತನದಲ್ಲಿ ದೊಡ್ಡವೀರಪ್ಪ, ಚಿಕ್ಕವೀರಪ್ಪ, ದೇವಪ್ಪರಾಜ ಮೊದಲಾದವರು ಆಳಿದರು. ಇವರಲ್ಲಿ ಕೊನೆಯವನೇ ವೀರರಾಜೇಂದ್ರ. ಇವನ ತಂದೆಯ ಹೆಸರು ಲಿಂಗರಾಜ. ಅಜ್ಜನಾದ ದೇವಪ್ಪರಾಜನನ್ನು ಹೈದರಲ್ಲಿಯು ಹಿರಿಕೆರೆ ಎಂಬಲ್ಲಿ ಸೆರೆಹಿಡಿದು ಶ್ರೀರಂಗಪಟ್ಟಣದಲ್ಲಿ ಕೊಲ್ಲಿಸಿದನು. ತರುವಾಯ, ಲಿಂಗರಾಜರ ಹೆಂಡತಿ ಮಕ್ಕಳನ್ನು ಕಡೂರಲ್ಲಿ ಸೆರೆಯಲ್ಲಿಟ್ಟನು. ಆಗ, ವೀರರಾಜೇಂದ್ರನು ಚಿಕ್ಕವನು. ಲಿಂಗರಾಜನು ೧೭೮೦ರಲ್ಲಿ ತೀರಿಕೊಂಡನು. ಆಮೇಲೆ, ಟೀಪುಸುಲ್ತಾನನು ವೀರರಾಜೇಂದ್ರ ಮೊದಲಾದವರನ್ನು ಪಿರಿಯಾಪಟ್ಟಣದಲ್ಲಿ ಸೆರೆಯಲ್ಲಿಟ್ಟನು. ಆ ಕಾಲದಲ್ಲಿ ವೀರರಾಜೇಂದ್ರನು ಸೆರೆಮನೆಯಿಂದ ಪಾರಾಗಿ ತನ್ನ ಜನರನ್ನು ಕೂಡಿಸಿ, ದೇಶವನ್ನು ಪಾರತಂತ್ರ್ಯದಿಂದ ಬಿಡಿಸಿದನು. ಈ ವಿಷಯವನ್ನು ರಾ. ಸಾ. ಹಳಕಟ್ಟಿಯವರ ಶಿವಾನುಭವ ಎಂಬ ತ್ರೈಮಾಸಿಕ ಪತ್ರಿಕೆಯ ೧೯೨೭ನೆಯ ಇಸವಿಯ ಮಾರ್ಚ ತಿಂಗಳ ಸಂಚಿಕೆಯಿಂದ ತೆಗೆದುಕೊಂಡಿರುತ್ತದೆ.]

ಕೊಡಗಿನ ಅರಸನಾದ ದೇವಪ್ಪರಾಜನನ್ನು ಹೈದರನು ಕೊಲ್ಲಿಸಿದನು. ಅವನ ಮಗ ಲಿಂಗರಾಜನನ್ನು ಪಟ್ಟಕ್ಕೆ ಕುಳ್ಳಿರಿಸಿದನು. ರಾಜ್ಯದ ಆಡಳಿತ

ವೆಲ್ಲವೂ ಹೈದರಲ್ಲಿಯ ಕೈಯಲ್ಲಿತ್ತು; ಹೈದರನು ಕೊಡಗರನ್ನು ಕ್ರೂರತನದಿಂದ ಕಾಡಹತ್ತಿದನು. ಕೊಡಗರು ಮಹಾವೀರ ಕುಲದವರು. ಅವನ ಕಾಟ ತಾಳದೆ ದಂಗೆ ಎಬ್ಬಿಸಿದರು. ಹೈದರನು ದೊಡ್ಡ ದಂಡಿನೊಡನೆ ಮಡಿಕೇರಿಯನ್ನು ಮುತ್ತಿ ಕೊಡಗ ಮುಂದಾಳುಗಳನ್ನು ಕೊಂದು ಲಿಂಗರಾಜನನ್ನು ಹೆಂಡಿರು-ಮಕ್ಕಳ ಸಹಿತ ಕಡೂರಿನ ಸೆರೆಮನೆಯಲ್ಲಿಟ್ಟನು. ಅಲ್ಲಿಯೇ ಲಿಂಗರಾಜನು ತೀರಿಕೊಂಡನು.

ಹೈದರನ ತರುವಾಯ ಟೀಪುಸುಲ್ತಾನನು ನೆರೆಯಲ್ಲಿದ್ದ ಬಿದನೂರ ಜನರಿಂದ ವೀರರಾಜೇಂದ್ರನಿಗೆ ಸಹಾಯ ದೊರೆತು, ಇಲ್ಲದ ಗೊಂದಲವೇಳಲಿಕ್ಕೆ ಕಾರಣವಾಗಬಹುದೆಂದು ಅವನನ್ನು ಮನೆಯವರ ಸಹ ಪಿರಿಯಾಪಟ್ಟಣಕ್ಕೊಯ್ದು ಅಲ್ಲಿ ಸೆರೆಮನೆಯಲ್ಲಿಟ್ಟನು; ಮಡಿಕೇರಿಯಲ್ಲಿ ತನ್ನ ಜೈನೂಲ ಅಬಾದೀನ ಎಂಬ ಫೌಜದಾರನನ್ನಿಟ್ಟನು. ಅವನು ಕೊಡಗರನ್ನೂ ಅವರ ಹೆಂಗಸರನ್ನೂ ಹಲವು ಬಗೆಯಿಂದ ಪೀಡಿಸಲಾರಂಭಿಸಿದನು. ಬಿಸಿಬಿಸಿ ನೆತ್ತರದ ಕೊಡಗರಿಗೆ ಅವನ ಪೀಡೆಯನ್ನು ತಾಳಲಿಕ್ಕಾಗಲಿಲ್ಲ. ಕೊಡಗರು ಮುಮ್ಮಟಿ-ರಂಗ ಎಂಬಿಬ್ಬರು ಪಾಳೆಯಗಾರರನ್ನು ಮುಂದುಮಾಡಿಕೊಂಡು ಮತ್ತೆ ಬಂಡಾಯ ಹೂಡಿದರು.

ಈ ಸುದ್ದಿಯನ್ನು ಕೇಳಿ, ಟೀಪುಸುಲ್ತಾನನು ಪ್ರಚಂಡ ದಂಡಿನೊಡನೆ ಮಡಿಕೇರಿಯನ್ನು ಮುತ್ತಿದನು. ಅವನಿಗೆ ಹೆದರಿ, ಕೊಡಗರು ಕಾಡು ಸೇರಿದರು; ಮತ್ತು ಅಲ್ಲಿದ್ದುಕೊಂಡು ಟೀಪೂನ ದಂಡಾಳುಗಳನ್ನು ಕೆಣಕಿ ಕಾಡಹತ್ತಿದರು. ಮುಂದೆ, ಮತ್ತೊಮ್ಮೆ ದೊಡ್ಡ ದಂಡಿನೊಡನೆ ಟೀಪುವು ತನ್ನ ಜನರನ್ನು ಪೀಡಿಸುತ್ತಿದ್ದ ೮೫ ಸಾವಿರ ಕೊಡಗರನ್ನು ಹಿಡಿದು, ಮುಸಲ್ಮಾನರನ್ನಾಗಿ ಮಾಡಿದನು. ಕೆಲವರನ್ನು ಕೊಲ್ಲಿಸಿದನು.

ವೀರರಾಜೇಂದ್ರನು ಪಿರಿಯಾ ಪಟ್ಟಣದ ಸೆರೆಮನೆಯಲ್ಲಿರುವಾಗ ಟೀಪುಸುಲ್ತಾನನು ಸೆರೆಮನೆಯ ಹತ್ತಿರಿರುವ ದಾರಿಯ ಮೇಲಿಂದ ಸಾವಿರಾರು ಜನ ಕೊಡಗರನ್ನು ಎಳೆದೊಯ್ಯುವದನ್ನು ಕಣ್ಣಾರೆ ಕಂಡಾಗ, ಅವನಿಗೆ ಸಾವಿರ ಚೇಳು ಕಡಿದಷ್ಟು ವ್ಯಸನವಾಯಿತು. ತಾನು ಬದುಕಿದ್ದು, ತನ್ನ ಪ್ರಜೆಗಳನ್ನು ಅನ್ಯರ ಕೈಗೆ ಕೊಟ್ಟು, ಹೇಡಿಯಂತೆ ಸೆರೆಮನೆಯಲ್ಲಿ ಕೊಳೆಯುತ್ತಿರುವದು ಅವನಿಗೆ ಮೀರಿದ ದುಃಖವನ್ನುಂಟುಮಾಡಿತು. ಸೆರೆಮನೆ

ಯಿಂದ ಪಾರಾಗಿ ತನ್ನ ಮಿತ್ರರ ಸಹಾಯದಿಂದ ಓಡಿಯೇ ಹೋದನು. ಆಗ ಅವನ ಮನೆಯವರನ್ನು ಟೀಪುಸುಲ್ತಾನನು ಶ್ರೀರಂಗಪಟ್ಟಣಕ್ಕೆ ಒಯ್ದು ತನ್ನ ಅಂತಃಪುರಕ್ಕೆ ಸೇರಿಸಿದನು. ಅವರಲ್ಲಿ ರಾಜೇಂದ್ರನ ತಂಗಿ ಇದ್ದಳು. ಆಕೆಯ ಅಳಲನ್ನು ಕಂಡು ಕಾದೀರಖಾನ ಎಂಬ ಸರದಾರನು ಆಕೆಯನ್ನು ವೀರರಾಜೇಂದ್ರನ ಕಡೆಗೆ ಕಳಿಸಿದನು.

ಅಷ್ಟೊತ್ತಿಗೆ ಕೊಡಗರ ನಾಡು ಹಾಳಾಗಲಿಕ್ಕೆ ಬಂದಿತ್ತು. ಇದ್ದು ಬಿದ್ದ ಕೊಡಗರು ಅಡವಿಯಲ್ಲಿ ಸೇರಿದ್ದರು. ಮಿಕ್ಕವರು ದೇಶಬಿಟ್ಟು ಪರನಾಡಿಗೆ ಹೋಗಿದ್ದರು. ಮುಸಲ್ಮಾನರು ಕೊಡಗರನ್ನು ಕಂಡರೆ ಕಡಿದುಹಾಕುತ್ತಿದ್ದರು. ಇಂಥ ಸ್ಥಿತಿಯಲ್ಲಿ ವೀರರಾಜೇಂದ್ರನು ಅಲ್ಲಲ್ಲಿಯ ಕೊಡಗರನ್ನು ಕೂಡಿಹಾಕಿ, ಸ್ವಾತಂತ್ರ್ಯದ ವಿಚಾರಗಳಿಂದ ಹುರಿದುಂಬಿಸಿದನು. ತನ್ನ ಗುಪ್ತ ಆಳುಗಳನ್ನು ಬೇರೆ ಬೇರೆ ಸ್ಥಳಗಳಿಗೆ ಕಳಿಸಿ, ಅಲ್ಲಲ್ಲಿ ಇದ್ದ ಕೊಡಗರನ್ನು ಕರೆಯಿಸಿದನು. ಅವರಿಗೆಲ್ಲ ತಾನು ಮುಂದಾಳಾಗಿ ನಿಂತು, ಆಗಾಗ ಮುಸಲ್ಮಾನರ ಠಾಣ್ಯಗಳಮೇಲೆ ಹಲ್ಲೆ ನಡಿಸುತ್ತಿದ್ದನು. ಶೂರ ಕೊಡಗರ ನೆರವಿನಿಂದ ಅಲ್ಲಲ್ಲಿ ಸುಲಿಗೆಗಳನ್ನೂ ನಡಿಸಿದನು.

ಒಮ್ಮೆ, ಮುಸಲ್ಮಾನರ ದಂಡಾಳುಗಳು ಇವನನ್ನೂ ಇವನ ಸೈನಿಕರನ್ನೂ ಬೆನ್ನಟ್ಟಿದಾಗ, ನಿರ್ವಾಹವಿಲ್ಲದೆ ರಾಜೇಂದ್ರನು ಕೋಟೆಂಗಡಿಯ ಅರಸನ ಆಶ್ರಯಕ್ಕೆ ಹೋದನು. ಅವನು ಇವನ ಶತ್ರುವಿದ್ದುದರಿಂದ ಬಲೆಯಲ್ಲಿ ಸಿಕ್ಕ ರಾಜೇಂದ್ರನನ್ನೇ ಕೊಲ್ಲಲು ಹೊಂಚು ಹಾಕಿದ. ಆದರೆ ಅದರೊಳಗಿಂದ ಅವನು ಹೇಗೋ ಪಾರಾದನು.

ವೀರರಾಜೇಂದ್ರನ ಕೀರ್ತಿ ಕೇಳಿ, ಕೊಡಗು ವೀರರು ದಿಕ್ಕುದಿಕ್ಕುಗಳಿಂದ ಓಡಿಬಂದು, ತಮ್ಮ ನಾಡಿನ ರಕ್ಷಣೆಗಾಗಿ ಶ್ರಮಪಡಲಾರಂಭಿಸಿದರು. ತಮ್ಮ ಪರಾಕ್ರಮದಿಂದ ಒಂದೊಂದೇ ಕೊಡಗಿನ ಭಾಗವನ್ನು ಗೆಲ್ಲಲಾರಂಭಿಸಿದರು. ಕೊಡಗಿಗೆ ಸೇರಿದ ಭಾಗಮಂಡಲವನ್ನು ಮುತ್ತಿ, ಶತ್ರುಗಳಿಂದ ಬಿಡಿಸುವ ಕಾಲದಲ್ಲಿ ಒಮ್ಮೆ ಹಲ್ಲೆಯ ಗದ್ದಲದಲ್ಲಿ ಅಲ್ಲಿಯ ಒಂದು ದೇವಸ್ಥಾನದ ಮೇಲಿರುವ ಮೂರು ತಾಮ್ರದ ಹಂಚುಗಳಿಗೆ ಗುಂಡು ತಾಕಿ ಕೆಟ್ಟವು. ಇದನ್ನು ಕೇಳಿ, ರಾಜೇಂದ್ರನು ಅವುಗಳ ಬದಲಾಗಿ ಬೆಳ್ಳಿಯ ಹಂಚುಗಳನ್ನು ದೇವಸ್ಥಾನದ ಮೇಲೆ ಇಡಿಸಿನು. ಇಂತಹ ಹಲವು ಉದಾರ ಕೃತ್ಯಗಳಿಂದ

ರಾಜೇಂದ್ರನು ಕೊಡಗರ ಹೃದಯವನ್ನೇ ಗೆದ್ದನು. ಹೀಗೆ ಸಾಹಸ-ಶೌರ್ಯ ಗಳ ಸಹಕಾರದಿಂದ ಒಂದು ವರ್ಷದೊಳಗಾಗಿ ಕೊಡಗು ಬಹುಮಟ್ಟಿಗೆ ಸ್ವತಂತ್ರವಾಯಿತು. ಆದರೂ ಮಡಿಕೇರಿ ವಶವಾಗಿರಲಿಲ್ಲ. ಕೊಡಗರಿಗೆ ಒಕ್ಕಲತನ ಸಾಗಿಸಿ ಜೀವನ ನಡಿಸಲಿಕ್ಕೆ ಅನುಕೂಲವಾಗಬೇಕೆಂದು, ಟೀಪುಸುಲ್ತಾನನು ಕೊಡಗಿನಲ್ಲಿ ತಂದಿರಿಸಿದವರನ್ನೆಲ್ಲ ಓಡಿಸಿದನು. ಆದವಾನಿ ಯಿಂದ ಟೀಪುಸುಲ್ತಾನನು ಎಷ್ಟೋ ಜನ ಮುಸಲ್ಮಾನರನ್ನು ತಂದು ಕೊಡಗಿನಲ್ಲಿ ಆಶ್ರಯ ಕೊಟ್ಟಿದ್ದನು. ಅವರನ್ನು ಕಾಡಿಸದೆ, ಪೀಡಿಸದೆ, ಆದವಾನಿಗೆ ಕಳಿಸಿದನು.

ಆಮೇಲೆ, ಟೀಪುಸುಲ್ತಾನನೊಡನೆಯೇ ಹೋರಾಡುವಷ್ಟು ವೀರ ರಾಜೇಂದ್ರನಲ್ಲಿ ಕಸುವು ಬಂದಿತು. ಆಗ, ಅವನನ್ನು ಎದುರಿಸಹತ್ತಿದನು. ಮುಂದೆ, ಇಂಗ್ಲಿಷರ ಕಡೆಗೆ ಆಗಿ, ಟೀಪುವಿನ ವಿರುದ್ಧವಾಗಿ ಇಂಗ್ಲಿಷರಿಗೆ ಸಹಾಯ ಮಾಡತೊಡಗಿದನು. ಟೀಪೂವಿನ ರಾಜ್ಯದಮೇಲೆ ಇಂಗ್ಲಿಷರು ದಂಡೆತ್ತಿ ಹೋಗುವಾಗ ವೀರರಾಜೇಂದ್ರನು ಅವರ ಭಾರವಾದ ತೋಪು ಗಳನ್ನು ಎಳೆದೊಯ್ಯಲಿಕ್ಕೆ ಬೇಕಾಗುವ ಹೋರಿ-ದನಗಳನ್ನು ಟೀಪುವಿನ ರಾಜ್ಯದಿಂದಲೇ ಒಯ್ದು ಪೂರೈಸಿದನು.

ಕೊಡಗಿನ ರಾಜಧಾನಿಯಾದ ಮಡಿಕೇರಿಯು ಇನ್ನೂ ಶತ್ರುಗಳ ಕೈಯಲ್ಲಿಯೇ ಇತ್ತು. ಅದನ್ನು ರಾಜೇಂದ್ರನು ಮುತ್ತಿದನು. ಟೀಪುಸುಲ್ತಾ ನನು ಕಾದಿರಖಾನ ಎಂಬ ಸರದಾರನಿಗೆ ದಂಡು ಕೊಟ್ಟು ಕಳುಹಿದನು. ವೀರ ರಾಜೇಂದ್ರನಿಗೂ ಕಾದೀರಖಾನನಿಗೂ ಕುಶಾಲನಗರದ ಹತ್ತರ ಮುಳ್ಳು ಸೋಗೆ ಗ್ರಾಮದ ಹತ್ತಿರ ಯುದ್ಧವಾಯಿತು. ಅದರಲ್ಲಿ ಕಾದೀರಖಾನನು ಸೋತನು. ಅವನ ದಂಡಾಳುಗಳು ಸತ್ತರು; ತನ್ನಮೇಲೆ ಹಿಂದಕ್ಕೆ ಉಪಕಾರ ಮಾಡಿದ ಕಾದೀರಖಾನನಿಗೆ ಯಾರೂ ಕೈ ಹಚ್ಚಕೂಡದೆಂದು ರಾಜೇಂದ್ರನು ದಂಡಿನಲ್ಲಿ ಸಾರಿದನು. ಮುಂದೆ, ಮಡಿಕೇರಿಯು ಅವನಿಗೆ ವಶವಾಯಿತು.

ವೀರ ರಾಜೇಂದ್ರನು ತನ್ನ ದೇಶವನ್ನು ಸಮಾಧಾನದಿಂದ ಆಳತೊಡ ಗಿದನು. ಇವನಿಗೆ ಗಂಡುಮಕ್ಕಳಿರಲಿಲ್ಲ. ನಾಲ್ಕು ಮಂದಿ ಹೆಣ್ಣುಮಕ್ಕಳು ಮಾತ್ರ. ಮುಂದೆ, ಇವನ ಪ್ರೀತಿಯ ರಾಣಿಯೂ ಸತ್ತುಹೋದಳು.

ಮುಪ್ಪಿನಕಾಲಕ್ಕೆ ಹಲವು ತೊಂದರೆಗಳಿಂದ ರಾಜೇಂದ್ರನಿಗೆ ತಾಪವಾಯಿತು. ಅವನು ೧೮೦೯ರಲ್ಲಿ ಮಡಿದನು. ಅವನ ತರುವಾಯ ಕೊಡಗು ರಾಜ್ಯವನ್ನು ಇಂಗ್ಲಿಷರು ತಮ್ಮ ವಶಕ್ಕೆ ತೆಗೆದುಕೊಂಡರು.

---

## ೫೩

## ರಾಜನಿಷ್ಠರಾದ

# ದಿವಾಣ ಪೂರ್ಣಯ್ಯನವರು

(ಕ್ರಿ. ಶ. ೧೭೪೦-೧೮೧೨)

[ ಕರ್ನಾಟಕದಲ್ಲಿ ಬಾಳಿದ ರಾಜತಂತ್ರ ನಿಪುಣರಲ್ಲಿ ಪೂರ್ಣಯ್ಯನವರೊಬ್ಬರು. ಅವರು ರಾಜನಿಷ್ಠೆಯಿಂದ ಕೆಲಸ ಮಾಡಿದ್ದರಿಂದ ಹೈದರಲ್ಲಿ, ಟೀಪುಸುಲ್ತಾನ ಅವರಿಂದ ಮೊದಲ್ಗೊಂಡು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೂ ಪ್ರೀತಿಗೆ ಪಾತ್ರರಾದರು. ಅವರ ಜೀವನ ಚರಿತ್ರವನ್ನು ಮೈಸೂರಿನ ಚರಿತ್ರೆಯಿಂದ ಎತ್ತಿ ಬರೆಯಲಾಗಿದೆ. ]

ಮೈಸೂರಲ್ಲಿ ಹೈದರಲ್ಲಿಯು ಆಳುತ್ತಿರುವಾಗ ಕೊಯಿಮುತ್ತೂರ ಕಡೆಯಿಂದ ಒಬ್ಬ ಬ್ರಾಹ್ಮಣ ಯುವಕನು ಶ್ರೀರಂಗಪಟ್ಟಣಕ್ಕೆ ಬಂದು, ಅನ್ನದಾನಸೆಟ್ಟಿ ಎಂಬ ವರ್ತಕನಲ್ಲಿ ಕಾರಕೂನ ಕೆಲಸಕ್ಕೆ ನಿಂತನು. ಈ ಯುವಕನೇ ಪೂರ್ಣಯ್ಯ. ಪೂರ್ಣಯ್ಯನು ಬುದ್ಧಿಯಲ್ಲಿ ಜಾಣನು. ಭಾವನೆಯಲ್ಲಿ ಅಂತಃಕರಣದವನು. ಕೆಲಸದಲ್ಲಿ ಏಕನಿಷ್ಠನು; ತನ್ನ ಒಡೆಯನಿಗೆ ಎರಡು ಬಗೆಯುವವನಲ್ಲ. ಹೀಗಿರುವುದರಿಂದ, ಚಿಕ್ಕಂದಿನಲ್ಲಿಯೇ ಸರಕಾರಿ ಕೆಲಸಕ್ಕೆ ಸೇರಿದನು. ತನಗಿಂತ ಮೇಲಿನ ಅಧಿಕಾರಿಗಳಿಗೂ ಅವರ ಮುಖಾಂತರವಾಗಿ ಹೈದರಅಲ್ಲಿಗೂ ಬೇಕಾದವನಾದನು. ಕಾರಕೂನ ಕೆಲಸದಲ್ಲಿರುವಾಗಲೇ ಅವನು ಒಂದೊಂದು ಗುಣಗಳಿಂದ ಮೀರುವಂತಿದ್ದನು. ಇವನ ಸದ್ಗುಣಗಳಿಗೆ ಆ ಕಾಲದಲ್ಲಿ ಹೈದರಅಲ್ಲಿಯ ಕೈಕೆಳಗಿನ ಅಧಿಕಾರಿಗಳಾದ ಅಂಚೆ ಶ್ಯಾಮಯ್ಯನವರಂತಹ ಜನರು ಕೂಡ ಹೊಟ್ಟೆಕಿಚ್ಚು ಪಟ್ಟು, ಪೂರ್ಣಯ್ಯನ ವಿರುದ್ಧ ಹೈದರಅಲ್ಲಿಗೆ ಚಾಡಿ ಹೇಳಿದ್ದರು. ಮುಂದೆ, ತನ್ನ ನಿಜವಾದ ಗುಣಗಳ ಹೆಚ್ಚಳದಿಂದ ಪೂರ್ಣಯ್ಯನು ಹೈದರಅಲ್ಲಿಗೆ ಪ್ರೀತಿಯವನಾಗಿ, ಕೊನೆಗೆ ಸೈನ್ಯ ಮತ್ತು ಕೋಶಿಯ ದಿವಾಣನಾದನು. ಹೈದರನಿಗೆ

ಪೂರ್ಣಯ್ಯನವರಲ್ಲಿ ಬಲುವಿಶ್ವಾಸವಿದ್ದುದರಿಂದ ಅವರೊಡನೆ ಅಣ್ಣ-ತಮ್ಮಂದಿರಂತೆ ನಡೆಯುತ್ತಿದ್ದನು. ಅದರಿಂದ ಚಿಕ್ಕವನಾದ ಟೀಪುಸುಲ್ತಾನನು ಕೂಡ ಪೂರ್ಣಯ್ಯನವರಿಗೆ ಚಿಚ್ಚಾ್ಯ (ಚಿಕ್ಕಪ್ಪ) ಎಂದು ಕರೆಯುತ್ತಿದ್ದ ನೆಂದು ಹೇಳುತ್ತಾರೆ.

ಮೈಸೂರಿನ ಅರಸನಾದ ಹೈದರಅಲ್ಲಿಯೊಡನೆ ಇಂಗ್ಲಿಷರು ಎರಡ ನೆಯ ಸಲ ಯುದ್ಧ ಹೂಡಿದ ಸಮಯ. ಆಗ, ಹೈದರಲ್ಲಿಯು ಆರ್ಕಾಟಿನ ಸಮೀಪದಲ್ಲಿ ತನ್ನ ಸೈನ್ಯವನ್ನು ಬೀಡುಬಿಟ್ಟಿದ್ದನು. ಸಂಗಡ ಪೂರ್ಣಯ್ಯ ನವರು, ತೋಫಖಾನೆ ಕೃಷ್ಣರಾಯರು, ಅಂಚೆ ಶಾಮಯ್ಯನವರು, ಅಲ್ಲದೆ ಮೀರ ಸಾದಕ್, ಅಬೂ ಮಹಮ್ಮದ ಮಿರ್ಜ ಮೊದಲಾದ ಅಧಿಕಾರಿಗಳೂ ದೊಡ್ಡ ಸೇನಾಸಮೂಹವೂ ಇದ್ದಿತು. ಆಗಾಗ, ಇಂಗ್ಲಿಷರಿಗೂ ಹೈದರಲ್ಲಿಯ ಸೈನಿಕರಿಗೂ ಚಕಮಕಿಗಳಾಗುತ್ತಿದ್ದವು. ಯಾರು ಸೋತರು, ಯಾರು ಗೆದ್ದರೆಂಬುದರ ನಿರ್ಣಯವಾಗಿರಲಿಲ್ಲ. ಹೈದರಲ್ಲಿಗೆ ಬೆನ್ನಿಗೊಂದು ಹುಣ್ಣು ಆಯಿತು. ಆ ಹುಣ್ಣು ದಿನಗಳೆದಂತೆ ಬಲಿಯುತ್ತ ನಡೆಯಿತು. ಜೊತೆ ಯಲ್ಲಿದ್ದ ವೈದ್ಯ ಮತ್ತು ಹಕೀಮರು ಅದಕ್ಕೆ ಬೇರೆ ಬೇರೆ ಔಷಧೋಪಚಾರ ನಡಿಸಿದರು. ಅದೇ ಬೆಳೆಯುತ್ತ ನಡೆದು, ಕಡೆಗೆ ಹೈದರಲ್ಲಿಯು ಅದಕ್ಕೆ ತುತ್ತಾದನು. ಈ ಹುಣ್ಣಿಗೆ ಬೆನ್ನುಫಣಿ ಎನ್ನುವರು.

ಯುದ್ಧ ನಡೆದ ಕಾಲಕ್ಕೆ, ಒಡೆಯನು ತೀರಿಕೊಂಡ ಸುದ್ದಿ ಹರಡಿದರೆ, ಸೈನಿಕರು ಗಾಬರಿಯಾಗುವರು, ಶತ್ರುಗಳಿಗೆ ಭಯವು ಕಡಿಮೆಯಾಗಿ ಇಲ್ಲದ ಚಾಲವನ್ನು ಹೂಡುವರು. ಇವೆಲ್ಲ ಯೋಚನೆಗಳಿಂದ ಹೈದರಲ್ಲಿಯ ಮರಣ ವಾರ್ತೆಯನ್ನು ಪೂರ್ಣಯ್ಯನವರು ಗುಟ್ಟಾಗಿಟ್ಟರು. ಮತ್ತು ಅವನ ದೇಹ ವನ್ನು ಅವರ ಮತಕ್ಕನುಸಾರವಾಗಿ ತೊಳೆಯಿಸಿ, ಗಂಧದ ಪುಡಿ, ಪಚ್ಚ ಕರ್ಪುರ, ಪುನುಗು ಮುಂತಾದ ಸುಗಂಧವಾಸನೆಯ ಸಾಮಾನುಗಳಿಂದ ತುಂಬಿ ಪೆಟ್ಟಿಗೆಯಲ್ಲಿರಿಸಿ, ಅದೊಂದು ವಸ್ತ್ರ-ಒಡವೆಗಳ ಪೆಟ್ಟಿಗೆ ಎಂಬುವ ಹಾಗೆ ಕೋಲಾರಕ್ಕೆ ಕಳಿಸಿದರು; ಮತ್ತು ಮಂಗಳೂರ ಕಡೆಗೆ ಇದ್ದ ಟೀಪುಸುಲ್ತಾನನಿಗೆ ಕಾಗದ ಬರೆದು ತಿಳಿಸಿದನು.

ಆದರೆ, ಹೇಗೋ ಹೈದರಲ್ಲಿಯು ಸತ್ತ ಸುದ್ದಿ ಹೊರಬಿದ್ದಿತು. ಪುಂಡ ರಾದ ಕೆಲವರು ತಾವು ರಾಜ್ಯಗಳಿಸುವ ಕಾಲವಿದೇ ಎಂದು ಬೇರೊಬ್ಬ ಪುಂಡ

ನನ್ನು ನವಾಬನನ್ನಾಗಿ ಮಾಡಲಿಕ್ಕೆ ಎತ್ತುಗಡೆ ಮಾಡಿದರು. ಈ ಸುದ್ದಿ ಪೂರ್ಣಯ್ಯನವರಿಗೆ ತಿಳಿಯಿತು. ಕೂಡಲೇ ಸಂಚುಗಾರರನ್ನೆಲ್ಲ ಹಿಡಿದು ಸೆರೆಯಲ್ಲಿಟ್ಟರು. ಅಷ್ಟರಲ್ಲಿ ಟೀಪುಸುಲ್ತಾನನು ಮಂಗಳೂರಿನಿಂದ ಬಂದು ಸೈನ್ಯದ ಮತ್ತು ರಾಜ್ಯದ ವ್ಯವಸ್ಥೆಯನ್ನೆಲ್ಲ ತಾನೇ ಹೊತ್ತುದರಿಂದ, ಮುಂದೆ ಹೆಚ್ಚು ಅನವಸ್ಥೆಯಾಗಲಿಲ್ಲ. ಪೂರ್ಣಯ್ಯನವರು ಮಾಡಿದ ಉಪಕಾರವನ್ನು ಟೀಪುಸುಲ್ತಾನನು ನೆನೆದು ಅವರಿಗೆ ಬಹುಪರಿಯಿಂದ ಮರ್ಯಾದೆ ಮಾಡಿದನು.

ಟೀಪು ಸುಲ್ತಾನನ ಆಳಿಕೆಯಲ್ಲಿ ಪೂರ್ಣಯ್ಯನವರದೇ ಎಲ್ಲ ಅಧಿಕಾರ. ತೋಫಖಾನೆ ಕೃಷ್ಣರಾಯನು ಕೂಡ ಇಂಗ್ಲಿಷರಿಗೂ ಟೀಪುವಿಗೂ ಯುದ್ಧ ನಡೆದಾಗ ಇಂಗ್ಲಿಷರಿಗೆ ಗುಟ್ಟಾಗಿ ಸಹಾಯ ಮಾಡಿದನು. ಅದರಿಂದ ಟೀಪು ಸುಲ್ತಾನನು ಅವನನ್ನು ಕೊಲ್ಲಿಸಿದನು. ಆದರೆ, ಪೂರ್ಣಯ್ಯನವರು ಯಾವ ಕಾಲದಲ್ಲಿಯೂ ಸ್ವಾಮಿದ್ರೋಹ ಬಗೆಯಲಿಲ್ಲ.

ಇಂಗ್ಲಿಷರೊಡನೆ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಶ್ರೀರಂಗಪಟ್ಟಣವು ಇಂಗ್ಲಿಷರ ಕೈಸೇರಿತು. ಟೀಪು ಮಡಿದನು. ಆಗ, ಟೀಪುಸುಲ್ತಾನನ ಮಕ್ಕಳಿಗೆ ಬ್ರಿಟಿಷರು ರಾಜ್ಯ ಕೊಡದೆ, ಪೂರ್ವದ ಒಡೆಯರ ಮನೆತನದವರಿಗೆ ರಾಜ್ಯಕೊಟ್ಟು, ಮುಮ್ಮಡಿ ಕೃಷ್ಣರಾಜ ಎಂಬುವ ಐದು ವರ್ಷದ ಹುಡುಗನಿಗೆ ಪಟ್ಟಗಟ್ಟಿದರು; ಮತ್ತು ಪೂರ್ಣಯ್ಯನವರು ಮೊದಲಿನಿಂದಲೂ ಅಲ್ಲಿಯವರೆಗೆ ಅತ್ಯಂತ ಸ್ವಾಮಿನಿಷ್ಠೆಯಿಂದ ಕೆಲಸ ಮಾಡುತ್ತ ಬಂದುದನ್ನು ಸ್ಮರಿಸಿ, ಅವರಿಗೇನೇ ದಿವಾಣ ಕೆಲಸವನ್ನೊಪ್ಪಿಸಿದರು.

ಮುಮ್ಮಡಿ ಕೃಷ್ಣರಾಜರ ಆಳಿಕೆಯಲ್ಲಿ ಪೂರ್ಣಯ್ಯನವರು ಹನ್ನೊಂದು ವರ್ಷ ದಿವಾಣರಿದ್ದರು. ಆಗ, ಅವರು ದುಷ್ಟ ಪುಂಡುಗಾರರ ಹಾವಳಿಯನ್ನು ಮುರಿದರು. ರೈತರ ಕಂದಾಯ ಪದ್ಧತಿಯನ್ನು ಸರಿಪಡಿಸಿ, ಸರಿಯಾಗಿ ಕೊಡುವಂತೆ ವ್ಯವಸ್ಥೆ ಮಾಡಿದರು. ಹಲವರಿಗೆ ಕೆಲಸಗಳನ್ನು ಕೊಟ್ಟರು. ಅಲ್ಲಲ್ಲಿ ರಾಜ್ಯದೊಳಗೆ ಕೆರೆ-ಭಾವಿಗಳನ್ನು ಕಟ್ಟಿಸಿದರು. ಪ್ರವಾಸಿಕರಿಗಾಗಿ ಅಲ್ಲಲ್ಲಿ ಧರ್ಮಶಾಲೆಗಳನ್ನು ಕಟ್ಟಿಸಿ, ಅನ್ನಸತ್ರಗಳನ್ನಿಟ್ಟರು. ಬೊಕ್ಕಸದೊಳಗಿನ ಹಣವು ಹಾಳಾಗದಂತೆ ನೋಡಿಕೊಂಡರು.

ಪೂರ್ಣಯ್ಯನವರು ದೇವರು ತಮಗೆ ಒಪ್ಪಿಸಿದ ಕರ್ತವ್ಯವನ್ನು ಅತ್ಯಂತ ನಿಷ್ಠೆಯಿಂದಲೂ ದಕ್ಷತೆಯಿಂದಲೂ ನಡಿಸಿದರು. ಅದಕ್ಕಾಗಿ ಮುಮ್ಮಡಿಕೃಷ್ಣರಾಜ ಒಡೆಯರವರು ಅವರಿಗೆ ಎಳಂದೂರ ಎಂಬ ಊರನ್ನೇ ಜಹಗೀರಾಗಿ ಕೊಟ್ಟರು. ಅದು ಇಂದಿಗೂ ಅವರ ಮನೆತನಕ್ಕೆ ನಡೆಯುತ್ತಿದೆ.

---

## ೫೪

## ವೀರ ರಮಣಿಯಾದ

# ಕಿತ್ತೂರಿನ ಚೆನ್ನಮ್ಮ ದೇಸಾಯಿತಿ

(ಕ್ರಿ. ಶ. ೧೮೨೪)

[ಕಿತ್ತೂರು ಬೆಳಗಾಂವಿ ಜಿಲ್ಹೆಗೆ ಸೇರಿದ ಒಂದು ಊರು. ಈಗ್ಯೂ ತಕ್ಕ ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿದೆ. ಮೊದಲು ಅಂದರೆ ಒಂದು ನೂರು ವರ್ಷಗಳಾಚೆ ಅಲ್ಲಿ ದೇಸಾಯರಿದ್ದರು. ಈಗಲೂ ಕಿತ್ತೂರಿನ ಪೂರ್ವ ಭಾಗಕ್ಕೆ ಹಳೆಯ ಕೋಟೆ, ಕೋಟೆಯೊಳಗೆ ದೇಸಾಯರ ಅರಮನೆಯ ಹಾಳು ಭಾಗ, ಹಾಳುಗೋಡೆ ಮುಂತಾದವುಗಳನ್ನು ನೋಡಬಹುದು. ಈ ವಿಷಯವನ್ನು ಕರ್ನಾಟಕ ಗ್ಯಾಝಿಟಿಯರ ಮುಂತಾದ ಪುಸ್ತಕಗಳ ಸಹಾಯದಿಂದ ಬರೆಯಲಾಗಿದೆ]

ಕಿತ್ತೂರು, ವಿಜಾಪುರದ ಆದಿಲಶಾಹಿಯಿಯಿಂದಲೂ ನಡೆದು ಬಂದ ದೇಸಗತಿ. ನಡುವೆ ಹೈದರ-ಟೀಪು ಮುಂತಾದವರ ದಾಳಿ ಬಂದಿದ್ದರೂ ಆಗಿನ ದೇಸಾಯಿಯು ಹೇಗೋ ಕಾಪಾಡಿದನು. ಮುಂದೆ ಕಿತ್ತೂರು ಪೇಶವೆಯವರ ಕೈಗೆ ಹೋಯಿತು.

ಹನ್ನೊಂದನೆಯ ದೇಸಾಯಿಯಾದ ಮಲ್ಲಸರ್ಜನನವರೆಗೂ ಎಲ್ಲವೂ ಸುಸೂತ್ರವಾಗಿ ನಡೆಯಿತು. ಅವನು ಕ್ರಿ. ಶ. ೧೭೮೨ರಲ್ಲಿ ಪಟ್ಟಕ್ಕೆ ಕುಳಿತು ೩೪ ವರ್ಷ ಆಳಿ ೧೮೧೬ರಲ್ಲಿ ಮಡಿದನು. ಅವನಿಗೆ ರುದ್ರವ್ವ-ಚೆನ್ನವ್ವ ಎಂಬಿಬ್ಬರು ಹೆಂಡತಿಯರು. ರುದ್ರವ್ವನ ಹೊಟ್ಟೆಯಿಂದ ಶಿವಲಿಂಗ ರುದ್ರಸರ್ಜ ಎಂಬ ಮಗನಿದ್ದುದರಿಂದ ತಂದೆಯ ತರುವಾಯ ಅವನೇ ಪಟ್ಟಕ್ಕೆ ಕುಳಿತು ದೇಸಗತಿ ನಡಿಸಿದನು. ಆದರೆ ಏಳೆಂಟು ವರ್ಷ ಸಂಸ್ಥಾನವಾಳಿ ಅವನೂ ೧೮೨೪ರಲ್ಲಿ ತೀರಿಕೊಂಡನು. ಅವನ ಹೊಟ್ಟೆಯಿಂದ ಮಕ್ಕಳಿರಲಿಲ್ಲ. ಶಿವಲಿಂಗ

ರುದ್ರಸರ್ಜನನು ಸಾಯುವ ಸಮಯದಲ್ಲಿ ಮಾಸ್ತಮರಡಿಯ ಗೌಡನ ಮಗನನ್ನು ಕರಕೊಂಡು ಬಂದು ಪದ್ಧತಿಯಂತೆ ದತ್ತಕ ಮಾಡಿದನು.

ಆಗತಾನೇ ಕರ್ನಾಟಕದೊಳಗೆ ಇಂಗ್ಲಿಷರ ಆಳಿಕೆಯು ಮೆಲ್ಲಗೆ ಬೇರೂರುತ್ತಿತ್ತು. ಅದಕ್ಕಾಗಿ, ಆ ಕಾಲಕ್ಕೆ ಇದ್ದ ವೈಸರಾಯರು ಔರಸ-ಸಂತತಿ ಇಲ್ಲದ ಸಂಸ್ಥಾನಗಳನ್ನು ತಮ್ಮ ಆಳಿಕೆಗೆ ಕೂಡಿಸಿಕೊಳ್ಳುವದರಲ್ಲಿದ್ದರು. ಕಿತ್ತೂರಿನ ದೇಸಗತಿಗೆ ಮಾಸ್ತಮರಡಿಯ ಗೌಡನ ಮಗನನ್ನು ದತ್ತಕ ತೆಗೆದುಕೊಂಡದ್ದು ಸುಳ್ಳು ಎಂಬ ಸುದ್ದಿ ಇಂಗ್ಲಿಷ ಸರಕಾರಕ್ಕೆ ಮುಟ್ಟಿತು. ಆಗ, ಧಾರವಾಡದಲ್ಲಿ ಇದ್ದ ಪೊಲಿಟಿಕಲ್ ಏಜೆಂಟನು ದತ್ತಕ ನಿರ್ಣಯವಾಗುವವರೆಗೆ ಬ್ರಿಟಿಷರೇ ದೇಸಗತಿಯ ಆಳಿಕೆಯನ್ನು ಕೈಯಲ್ಲಿ ತೆಗೆದುಕೊಳ್ಳುವರು ಎಂದು ಹುಕುಮು ಕಳಿಸಿದ್ದಲ್ಲದೆ, ತಮ್ಮ ಪರವಾಗಿ ಒಬ್ಬ ಅಧಿಕಾರಿಯನ್ನು ದೇಸಗತಿ ನಡಿಸಲಿಕ್ಕೆ ವ್ಯವಸ್ಥೆ ಮಾಡಿದನು. ನೂರಾರು ವರ್ಷಗಳಿಂದ ನಡೆಯುತ್ತ ಬಂದ ದೇಸಗತಿಯು ಇಂದು ಪರರಾಜರ ವಶವಾಗುವ ಹೊತ್ತು ಬಂತಲ್ಲಾ ಎಂದು ದೇಸಾಯ ಮನೆಯವರಿಗೂ ಸಂಸ್ಥಾನದ ಸೇವಕರಿಗೂ ಅನ್ನ ಉಂಡವರಿಗೂ ಸಂತಾಪವಾಯಿತು.

ಮಲ್ಲಸರ್ಜನನ ಎರಡನೆಯ ಹೆಂಡತಿಯಾದ ಚೆನ್ನವ್ವ ಚಿಕ್ಕವಳು; ಸಮರ್ಥಳು. ತನ್ನ ಗಂಡನು ಸತ್ತಮೇಲೆ ಸಾಮಾನ್ಯವಾಗಿ ಆಕೆಯೇ ಸಂಸ್ಥಾನದ ಕಾರ್ಯಭಾರ ನೋಡುತ್ತಿದ್ದಳು. ಬೆಳಗಾಂವಿ ಜಿಲ್ಹೆಯಲ್ಲಿ ಸಾಂಗಲಿ ಸಂಸ್ಥಾನಕ್ಕೆ ಸೇರಿದ ಕಾಕತಿ ದೇಸಾಯರ ಮನೆತನದವಳಾದ್ದರಿಂದ ಚೆನ್ನವ್ವನಲ್ಲಿ ಕ್ಷತ್ರಿಯ ರಕ್ತ ಹರಿಯುತ್ತಿತ್ತು. ಇಡಿಯ ಹಿಂದುಸ್ಥಾನವನ್ನೇ ಗೆದ್ದ ಇಂಗ್ಲಿಷರೊಡನೆ ಯುದ್ಧ ಹೂಡುವ ವಿಚಾರವು ಎಷ್ಟು ಅಪಾಯಕರ ಎಂಬುದು ಚೆನ್ನವ್ವನಿಗೆ ಆಗ ಅಭಿಮಾನದ ಆವೇಶದೊಳಗೆ ತಿಳಿಯದೇ ಹೋಯಿತು. ಆ ವೀರಳು ತನ್ನ ಸಂಸ್ಥಾನದಲ್ಲಿಯ ಮುಖ್ಯ ಜನರು-ವೀರಾಳುಗಳೊಡನೆ ಆಲೋಚನೆ ಮಾಡಿ, ಯುದ್ಧ ನಡಿಸಿಯೇ ತೀರಬೇಕೆಂದು ನಿಶ್ಚಯಿಸಿದಳು.

ಈ ಸುದ್ದಿಯು ಬ್ರಿಟಿಷರಿಗೆ ತಿಳಿಯಿತು. 'ಇದು ಸರಿಯಾದ ದಾರಿಯಲ್ಲ; ನಾವು ಸಂಸ್ಥಾನದ ಯೋಗ್ಯ ವ್ಯವಸ್ಥೆಯನ್ನಿಡುವೆ'ವೆಂದು ಸಮಾಧಾನದಿಂದ ತಿಳಿಸಿದರು. ಸ್ವಾತಂತ್ರ್ಯವಿಲ್ಲದಿದ್ದರೆ ಸಾವು ಮೇಲು ಎಂಬುವ ಸೊಲ್ಲು

ಯಾವಾಗಲೂ ಕಿವಿಯಲ್ಲಿ ಝೇಂಕರಿಸುತ್ತಿರುವ ಆ ಕಾಲದಲ್ಲಿ ಚೆನ್ನವ್ವನಿಗೆ ಮುಂದಿನ ಯೋಚನೆ ಬರದೇ ಹೋಯಿತು.

ಪೊಲಿಟಿಕಲ್ ಏಜಂಟ್ ಥ್ಯಾಕರೆಸಾಹೇಬನು ಕಿತ್ತೂರು ದೇಸಗತಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲಿಕ್ಕೆಂದು ಇಬ್ಬರು ತನ್ನ ಸಹಾಯಕರನ್ನು ಮತ್ತು ಒಂದು ಚಿಕ್ಕ ದಂಡನ್ನು ಕಟ್ಟಿಕೊಂಡು ಕಿತ್ತೂರಿಗೆ ಹೋಗಿ ಮುತ್ತಿಗೆ ಹಾಕಿದನು.

ಕಿತ್ತೂರಿನವರು ಕೋಟೆಗೆ ಮುತ್ತಿಗೆಯನ್ನು ಹಾಕಿದ್ದ ಬ್ರಿಟಿಷ ಸೈನ್ಯದ ಮೇಲೆ ಗುಂಡು ಹಾರಿಸಹತ್ತಿದರು. ಥ್ಯಾಕರೇಸಾಹೇಬನೊಡನೆ ಇಲಿಯಟ್, ಸ್ಟೀವನ್‌ಸನ್ನ ಎಂಬ ದಳವಾಯಿಗಳಿದ್ದರು. ಅವರು ಗುಂಡುಗಳಿಗೆ ತುತ್ತಾದರು. ಬ್ರಿಟಿಷರ ಕೆಲವು ಬಾಲಕರನ್ನು, ಹೆಂಗಸರನ್ನು ಕಿತ್ತೂರಿನ ದಳವಾಯಿಗಳು ಸೆರೆ ಹಿಡಿದರು. ಕನ್ನಡ ಬಂಟರ ಹೊಡೆತಕ್ಕೆ ಬ್ರಿಟಿಷರ ಸೈನ್ಯ ಓಡತೊಡಗಿತು. ಥ್ಯಾಕರೆಸಾಹೇಬನಲ್ಲಿ ಹೆಚ್ಚಿನ ದಂಡು ಇಲ್ಲದ್ದರಿಂದ ಸ್ನೇಹದಿಂದ ಹನ್ನೊಂದು ಊರುಗಳನ್ನು ಇಟ್ಟುಕೊಂಡು ದೇಸಗತಿಯನ್ನೆಲ್ಲ ಬ್ರಿಟಿಷರ ಸ್ವಾಧೀನಕ್ಕೆ ಕೊಡಲೊಪ್ಪಿದರೆ, ಯುದ್ಧ ನಿಲ್ಲಿಸುವಾ ಎಂದು ಹೇಳಿ ಕಳಿಸಿದನು. ಚೆನ್ನವ್ವನ ನಿಶ್ಚಯವಂತೂ ಅಲ್ಲಾಡುವಂತಿರಲಿಲ್ಲ.

ಚೆನ್ನವ್ವನನ್ನೇ ಕಂಡು ಅವಳ ಅಂಬೋಣ ಏನಿರುವದೆಂಬುದನ್ನು ತಿಳಿಸಬೇಕೆಂದು ಥ್ಯಾಕರೆ ಸಾಹೇಬನು ತನ್ನ ಪಕ್ಷದ ಕೆಲ ಜನರೊಡನೆ ತಾನು ಕುದುರೆಯಮೇಲೆ ಕುಳಿತುಕೊಂಡು ಹೊರಟನು. ಈ ಮೊದಲೇ ಚೆನ್ನವ್ವ ತನಗೆ ಕೈಸೆರೆ ಸಿಕ್ಕ ಬ್ರಿಟಿಷರ ಹುಡುಗರನ್ನು, ಹೆಂಗಸರನ್ನು ಅವರಿರುವವರೆಗೆ ಅತ್ಯಂತ ಆದರದಿಂದಲೂ ಪ್ರೀತಿಯಿಂದಲೂ ಕಂಡದ್ದಲ್ಲದೆ, ಅವರನ್ನೆಲ್ಲ ಕರಕೊಂಡು ಹೋಗಲಿಕ್ಕೆ ಥ್ಯಾಕರೆ ಸಾಹೇಬನಿಗೆ ಹೇಳಿ ಕಳಿಸಿದ್ದರಿಂದ, ಆ ಉದಾರ ಹೃದಯದ ಚೆನ್ನವ್ವನ ಬಗ್ಗೆ ಅವನಲ್ಲಿ ಆದರವು ಇಮ್ಮಡಿಸಿತ್ತು.

ಸಾಹೇಬನೇ ದೇಸಾಯಿತಿಯನ್ನು ಕಾಣಲಿಕ್ಕೆ ಬರುವನೆಂದು ಗುಜುಗುಜು ಎಲ್ಲರೂ ಮಾತಾಡಹತ್ತಿದ್ದರು. ಅಮಟೂರ ಬಾಳಪ್ಪ ಎಂಬುವನು ಹುಡೆಯಮೇಲಿರುವ ಕಾವಲುಗಾರನು. 'ಅವ್ವನವರಿಗೆ ಭೆಟ್ಟಿಯಾಗಲಿಕ್ಕೆ ಬರುವ ಸಾಹೇಬನನ್ನು ಕೊಂದು ಹೌದೆನಿಸಿಕೊಳ್ಳಬೇಕು' ಎಂದು ಲಗು

ಬಗೆಯಿಂದ ತನ್ನ ಬಂದೂಕಿನಲ್ಲಿ ಮದ್ದು ತುಂಬಿ, ಅವನು ತನ್ನ ಸಮೀಪಕ್ಕೆ ಬರುವಷ್ಟರಲ್ಲಿ ಸಿದ್ಧನಾಗಿಯೇ ಕುಳಿತಿದ್ದನು. ಕೆಳಗಡೆ ಸಾಹೇಬನು ತನ್ನ ಅಳವಿನಲ್ಲಿ ಬರುವದೇ ತಡ, ಬಾಳಪ್ಪನು ಗುರಿಯಿಟ್ಟು ಗುಂಡು ಹಾಕಿದನು. ಮತ್ತು ಅದು ನೆಟ್ಟಗೆ ಸಾಹೇಬನಿಗೇ ತಾಕಿ, ಕುದುರೆಯ ಮೇಲಿಂದ ಸತ್ತುಬಿದ್ದನು.

ಸಾಹೇಬನು ಸತ್ತನು, ಸತ್ತನು, ಯಾರೋ ಗುಂಡು ಹಾಕಿದರು ಎಂಬುವ ಗದ್ದಲ ಎದ್ದಿತು. ಅಷ್ಟರಲ್ಲಿ ಚೆನ್ನಪ್ಪನಿಗೂ ಸುದ್ದಿಹತ್ತಿತು. ಕನಸುಮನಸಿನಲ್ಲಿ ಇಲ್ಲದ್ದು ನಡೆದುಹೋಯಿತೆಂದು ಚೆನ್ನಮ್ಮ ಮರಮರ ಮರುಗಿದಳು. ಇದೆಲ್ಲ ನಡೆಯುವ ಹೊತ್ತಿಗೆ ಬ್ರಿಟಿಶರ ಪಾಳ್ಯದಲ್ಲಿ ಕೋಲಾಹಲವೆದ್ದು, ಧಾರವಾಡಕ್ಕೂ ಬೆಳಗಾವಿಗೂ ಈ ಸುದ್ದಿ ತಿಳಿಸಲಿಕ್ಕೆಂದು ಕುದುರೆ ಸವಾರರು ಓಡಿದರು. ಚೆನ್ನವ್ವನ ಹೃದಯ ಹೇಗೆ ಇರುವದೆಂಬುದನ್ನು ಅಳೆಯಲು ಬ್ರಿಟಿಶರಿಗೆ ಅವಕಾಶ ದೊರೆಯಲಿಲ್ಲ. ಬೆಳಗಾವಿಯಲ್ಲಿ ಕಮಿಶನರಾಗಿದ್ದ ಚ್ಯಾಪ್ಲಿನ ಸಾಹೇಬನು ದೊಡ್ಡ ದಂಡಿನೊಡನೆ ಬಂದು ಕಿತ್ತೂರನ್ನು ಮುತ್ತಿದನು. ಮತ್ತು ಕಿತ್ತೂರಿನ ದಂಡಾಳುಗಳನ್ನು ಹಣ್ಣುಗೊಳಿಸಬೇಕೆಂದು ಏರಿ-ದಿನ್ನೆಗಳನ್ನು ನೋಡಿ, ಅವುಗಳಮೇಲೆ ತಮ್ಮ ತೋಫುಗಳನ್ನಿಟ್ಟು ಕೋಟೆಯಮೇಲೆ ಹಾರಿಸಹತ್ತಿದರು.

ಮೂರುನಾಲ್ಕು ದಿನಗಳವರೆಗೆ ಚೆನ್ನವ್ವ ಕೋಟೆಯನ್ನು ಕಾಪಾಡಲು ಯತ್ನಿಸಿದಳು. ಆಕೆಯಲ್ಲಿದ್ದ ಜನಬಲವೆಂದರೆ ತೀರ ಸ್ವಲ್ಪ; ಬ್ರಿಟಿಶರ ಜನಬಲ ದೊಡ್ಡದು. ಆದುದರಿಂದ ತಾನೇ ಕುದುರೆ ಹತ್ತಿ, ರಣಾಂಗಣದಲ್ಲಿ ಹೊಕ್ಕು ಪುಂಡ ರಕ್ಕಸರ ಹಿಂಡು ಮುರಿವ ಚಾಮುಂಡಿಯಂತೆ ಚೆನ್ನವ್ವ ಬ್ರಿಟಿಷ್ ಗಂಡುಗಲಿಗಳ ರುಂಡವನ್ನು ತನ್ನ ಕತ್ತಿಯಿಂದ ತರಿದು, ಹೆಣಗಳ ರಾಸಿಯನ್ನೊಟ್ಟಿದಳು. ಆದರೆ ಬ್ರಿಟಿಶರ ಬಲವಾದ ದಂಡಿನವರ ಮುಂದೆ ತನ್ನವರ ಆಟ ನಡೆಯದೆಂದು ಆಕೆ ಕಂಡುಹಿಡಿದಳು. ಮೆಲ್ಲಗೆ ರಣಾಂಗಣದಿಂದ ದೂರಾಗಿ, ರುದ್ರವ್ವನೊಡನೆ ಹೊಂಗಲಕ್ಕೆ ಹೋದಳು. ಅಲ್ಲಿ ಕೆಲದಿನ ಇದ್ದಳು.

ಚೆನ್ನವ್ವ ಹೋದೊಡನೆ ಕಿತ್ತೂರು ಕೋಟೆ, ಅರಮನೆಗಳು ಬ್ರಿಟಿಷರ ವಶವಾದವು. ಮುಂದೆ ಬ್ರಿಟಿಷರ ತೊಂದರೆಯಾದೀತೆಂಬ ಭಯದಿಂದ

ಚೆನ್ನವ್ವ ಮಲಾಪಹಾರೀ ನದಿಯಲ್ಲಿ ಹಾರಿಕೊಂಡು ಪ್ರಾಣನೀಗಿದಳು. ಯುದ್ಧದ ಕೋಲಾಹಲ, ತೋಫುಗಳ ಬಡಿತದಿಂದ ಅದುರಿ, ಚದುರಿ ಅರಮನೆಯು ಚಲ್ಲಾಪಿಲ್ಲಿಯಾಗಿ ಹೋಯಿತು. ಇಂದಿಗೂ ದೇಸಾಯರ ಅರಮನೆಯ ಕೆಲಭಾಗದ ಕಲ್ಲಿನ ಗೋಡೆಗಳು ಅಲ್ಲಲ್ಲಿ ಎದ್ದು ಕಾಣುತ್ತವೆ.

---

## ೫೫

### ಕರ್ನಾಟಕ ಸಿಂಹಾಸನಾಧೀಶ್ವರ

# ಮೈಸೂರಿನ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರವರು

[ಆಧುನಿಕ ಕಾಲದ ಅರಸರಲ್ಲಿ ಮೈಸೂರಿನ ಶ್ರೀ ಕೃಷ್ಣರಾಜ ಒಡೆಯರು ರಾಜರ್ಷಿಗಳೆಂದೂ ಪ್ರಜಾವತ್ಸಲರೆಂದೂ ಪ್ರಖ್ಯಾತಿ ಇರುವದು. ಇವರು ಕನ್ನಡನುಡಿ-ಸಂಸ್ಕೃತಿಗಳಿಗೆ ಆಧಾರಸ್ತಂಭದಂತಿರುವರು. ತಮ್ಮ ಆಳಿಕೆಯಲ್ಲಿ ಶ್ರೀಮನ್ ಮಹಾರಾಜರು ಕನ್ನಡ ನಾಡಾದ ಮೈಸೂರು ಸೀಮೆಯಲ್ಲಿ, ಇಂದಿನ ಯುಗಕ್ಕನುಸರಿಸಿ, ಸುಧಾರಣೆಗಳನ್ನು ಮಾಡಿ, ಪ್ರಜೆಗಳಿಗೆ ಅವಶ್ಯವಿರುವ ಹಕ್ಕು-ಬಾಧ್ಯತೆಗಳನ್ನೊದಗಿಸಿಕೊಟ್ಟು, ಅವರ ಏಳಿಗೆಗೆ ಬೇಕಾದ ಶೈಕ್ಷಣಿಕ, ಔದ್ಯೋಗಿಕ, ಸಾಮಾಜಿಕ ಕಾರ್ಯ-ಕಲಾಪಗಳನ್ನು ಬಳಕೆಯಲ್ಲಿ ತಂದು, ಮೈಸೂರು ಸಂಸ್ಥಾನವನ್ನು ಒಂದು ಮಾದರಿಯ ರಾಜ್ಯವನ್ನಾಗಿ ಮಾಡಿದ್ದಾರೆ. ಮೈಸೂರಿನ ಭಾಷೆಯಾದ ಕನ್ನಡವನ್ನು ಎತ್ತಿ ಹಿಡಿದು, ಕನ್ನಡ ಸೀಮೆಯ ಇತಿಹಾಸವನ್ನು ಬಹುಮಟ್ಟಿಗೆ ಹೊರಪಡಿಸಿದ್ದಾರೆ. ಮೈಸೂರು ಸಂಸ್ಥಾನದ ಮೈಸಿರಿಗೆ ಎಲ್ಲ ಬಗೆಯಿಂದಲೂ ಅವರೇ ಕಾರಣಕರ್ತರಾದ್ದರಿಂದ ಅವರ ಚರಿತ್ರೆಯನ್ನು ಮೈಸೂರಿನ ಚರಿತ್ರೆಯಿಂದ ಆಯ್ದು ಸಂಗ್ರಹಿಸಲಾಗಿದೆ.]

ಇಂದಿನ ಮೈಸೂರು ರಾಜವಂಶವು ಪ್ರಾಚೀನ ವೈಭವಸಂಪನ್ನ ಕರ್ನಾಟಕದ ಅಳಿದುಳಿದ ಒಂದೇ ಒಂದು ಅರಸುವಂಶ. ಮೈಸೂರಿನ ಅರಸರಿಗೆ ಇಂದಿಗೂ ಕರ್ನಾಟಕ ಸಿಂಹಾಸನಾಧೀಶ್ವರ ಎಂಬ ಬಿರುದು ಇದೆ. ಇದನ್ನು ನೆನೆದುಕೊಂಡೇ ಕನ್ನಡಿಗರು ಹಿಂದಿನ ದುಃಖವನ್ನು ಸೈರಿಸಿಕೊಳ್ಳಬೇಕಾಗಿದೆ.

ಇಂದು ಮೈಸೂರು ರಾಜ್ಯವನ್ನು ಆಳುವವರು ನಾಲ್ವಡಿ ಶ್ರೀಕೃಷ್ಣರಾಜ ಒಡೆಯರು. ಇವರು ಚಾಮರಾಜ ಒಡೆಯರ ಹಿರಿಯ ಮಕ್ಕಳು. ಚಿಕ್ಕವರು ಯುವರಾಜರಾದ ಶ್ರೀ ನರಸಿಂಹರಾಜ ಒಡೆಯರವರು. ಚಾಮರಾಜ

ಒಡೆಯರು ೧೮೯೪ನೆಯ ಇಸ್ವಿಯಲ್ಲಿ ಒಮ್ಮಿಂದೊಮ್ಮೆ ಕಲಕತ್ತೆಯಲ್ಲಿ ತೀರಿಕೊಂಡರು. ಆಗ ಕೃಷ್ಣರಾಜರಿಗೆ ೧೦ ವರ್ಷ; ಆದುದರಿಂದ ಮಹಾರಾಜರ ತಾಯಿಯಾದ ಶ್ರೀ ವಾಣೀವಿಲಾಸ ಮಹಾರಾಣಿಯವರು ಕೆಲವು ಜನ ಮಂತ್ರಿಗಳ ಸಹಾಯದಿಂದ ತಾವೇ ರಾಜ್ಯಭಾರ ನಡಿಸಿದರು. ಮಹಾರಾಜರಿಗೆ ಸಂಸ್ಕೃತ ಪಂಡಿತರಿಂದಲೂ ಯುರೋಪ್ಯ ವಿದ್ವಾಂಸರಿಂದಲೂ ಕನ್ನಡ, ಸಂಸ್ಕೃತ, ಇಂಗ್ಲಿಷ ಭಾಷೆಗಳ ಅಭ್ಯಾಸ ಮಾಡಿಸಲಾಯಿತು. ಸಂಗೀತ ಮತ್ತು ವಾದ್ಯಗಳನ್ನು ಬಾರಿಸುವ ಕಲೆಯನ್ನು ಕಲಿಸಲಾಯಿತು; ಇವುಗಳ ಜೊತೆಯಲ್ಲಿಯೇ ರಾಜ್ಯವನ್ನಾಳುವ ಶಾಸ್ತ್ರವನ್ನೂ ಅವರು ಕಲಿತುಕೊಂಡರು. ಮುಂದೆ ಅವರಿಗೆ ಉತ್ತರ ಹಿಂದುಸ್ತಾನದಲ್ಲಿಯ ರಜಪೂತ ಮನೆತನದ ಅರಸು ಕುಮಾರಿಯೊಡನೆ ಮದುವೆ ಆಯಿತು. ನಂತರ ೧೯೦೨ರಲ್ಲಿ ಮಹಾರಾಜರವರಿಗೆ ಪಟ್ಟವಾಗಿ, ಅವರೇ ರಾಜ್ಯಭಾರವನ್ನು ವಹಿಸಿದರು. ಆಗ ಅವರು ೧೮ ವರ್ಷದವರಿದ್ದರು.

ಮಹಾರಾಜರು ರಾಜ್ಯಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡ ಕಾಲಕ್ಕೆ ಶೇಷಾದ್ರಿ ಅಯ್ಯರವರು ದಿವಾಣರಿದ್ದರು. ಅವರು ಮೈಸೂರಿನಲ್ಲಿ ಯಾವ ಯಾವ ಸುಧಾರಣೆಗಳನ್ನು ಮಾಡಲಿಕ್ಕೆ ಸಾಧ್ಯವಿರುವದೆಂಬುದನ್ನು ಗಮನಕ್ಕೆ ತಂದುಕೊಂಡು ಸಂಸ್ಥಾನದ ಮಟ್ಟಿಗೆ ಮುಖ್ಯ ನ್ಯಾಯಸ್ಥಾನವನ್ನು ಮೈಸೂರು ಸಂಸ್ಥಾನದಲ್ಲಿಯ ಹಳ್ಳಿ-ಪಳ್ಳಿಗಳ ದೇವಾಲಯಗಳಲ್ಲಿರುವ ಶಿಲಾಶಾಸನಗಳನ್ನು ಓದಿ, ಅದರಿಂದ ಇತಿಹಾಸವನ್ನು ಹೊರಪಡಿಸುವ ಖಾತೆಯನ್ನು, ಕೋಲಾರದ ಚಿನ್ನದ ಖಣಿ ಅಗಿಯುವದನ್ನು, ಶಿವನಸಮುದ್ರದಲ್ಲಿಯ ಕಾವೇರಿ ನದಿಯ ಜಲಪಾತದಿಂದ ವಿದ್ಯುತ್-ಶಕ್ತಿಯನ್ನು ಹುಟ್ಟಿಸಿ ಅದರಿಂದ ಮೈಸೂರು ಬೆಂಗಳೂರುಗಳಿಗೆ ದೀಪ ಪೂರೈಸುವ ಯೋಜನೆ ಇವುಗಳನ್ನು ಮಾಡಿದರು. ಅವರಿಂದಲೇ ಇಂಗ್ಲಿಷ ಅಭ್ಯಾಸ ನಡೆಯಲು ಕಾಲೇಜ ಮುಂತಾದವುಗಳು ಸ್ಥಾಪಿಸಲ್ಪಟ್ಟವು.

ಬ್ರಿಟಿಷ್ ರಾಜ್ಯದಂತೆ, ಮೈಸೂರನ್ನು ಎಲ್ಲ ದೃಷ್ಟಿಯಿಂದ ಪೂರ್ಣ ಪ್ರಜಾಹಿತಾರ್ಥವಾಗಿಯೇ ನಡಿಸಬೇಕೆಂಬುದೊಂದು ಮಹಾರಾಜರ ಹೆಗ್ಗುರಿ. ಅದರಿಂದ ಅವರು ಸಂಸ್ಥಾನದಲ್ಲಿಯ ಕಲಿತ ಜನರು ಮಹತ್ತ್ವಾಕಾಂಕ್ಷೆಯನ್ನು ತಿಳಿದು, ೧೯೦೭ನೆಯ ಇಸವಿಯಲ್ಲಿ ತಮ್ಮ ರಾಜ್ಯದ ಪ್ರಜಾಪ್ರತಿನಿಧಿ ಸಭೆಗೆ

ಹೆಚ್ಚು ಹಕ್ಕು-ಬಾಧ್ಯತೆಗಳನ್ನು ಕಲ್ಪಿಸಿಕೊಟ್ಟು, ಅದರಲ್ಲಿ ಹೆಚ್ಚು ಕಳೆ ತುಂಬಿದರು. ಸಂಸ್ಥಾನದ ಆಳಿಕೆಯ ಜಮೆ-ಖರ್ಚಿನ ವಿಷಯಗಳಲ್ಲಿ ಪ್ರಜೆಗಳ ಸಲಹೆ ಕೇಳುವದಲ್ಲದೆ, ಅವರಿಗೆ ರಾಜ್ಯದ ಹಿತಾಹಿತಗಳನ್ನು ಕುರಿತು ಚರ್ಚಿಸುವ ಅಧಿಕಾರ ಕೊಟ್ಟರು.

ಮಹಾರಾಜರಿಗೆ ಸಂಸ್ಥಾನದ ಏಳಿಗೆಯ ಮತ್ತು ಪ್ರಜೆಗಳ ಹಿತದ ಚಿಂತೆಯು ಹಗಲಿರುಳು ಬಾಧಿಸುತ್ತದೆ. ತಮಗೆ ತಕ್ಕ ದಿವಾಣರು ದೊರೆತಾಗ, ಅವರು ಸಂಸ್ಥಾನದ ಬೆಳವಣಿಗೆಯ ವಿಷಯದಲ್ಲಿ ಯಾವಾಗಲೂ ಹಿಂಜರಿದಿಲ್ಲ. ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ದಿವಾಣಗಿರಿಯ ಆಳಿಕೆಯು ಮೈಸೂರು ಸಂಸ್ಥಾನಕ್ಕೆ ಸುಧಾರಣೆಯ ಸುಗ್ಗಿಯ ಕಾಲವಾಗಿ ಪರಿಣಮಿಸಿತೆನ್ನಬಹುದು. ಸರ ಶೇಷಾದ್ರಿಅಯ್ಯರವರ ತರುವಾಯ ಕೆಲ ದಿನ ಮೆಲ್ಲಡಿ ಇಡುತ್ತ ಹೊರಟ ಸಂಸ್ಥಾನವನ್ನು ವಿಶ್ವೇಶ್ವರಯ್ಯನವರು ಸುಧಾರಣೆಯಲ್ಲಿ ಬಲು ವೇಗದಿಂದ ಮುನ್ನಡೆಯ ಹಚ್ಚಿದರು. ಮಹಾರಾಜರ ಅಭಿಪ್ರಾಯದಿಂದ ವಿಶ್ವೇಶ್ವರಯ್ಯನವರು ಕೆಳಗಿನ ಸುಧಾರಣೆಗಳನ್ನು ಮಾಡಿದರು.

ಒಕ್ಕಲಿಗರ ಹೊಲ-ಗದ್ದೆಗಳು ಸಮೃದ್ಧಿಯಾಗಿ ಬೆಳೆದು ಅವರು ಸಿರಿವಂತರಾಗಬೇಕೆಂದು ಕನ್ನಂಬಾಡಿಯ ಹತ್ತರ ಕಾವೇರಿ ನದಿಗೆ ದೊಡ್ಡ ಆಣೆಕಟ್ಟು(ಒಡ್ಡು) ಕಟ್ಟಿಸಿ, ಅದರಿಂದ ನೀರು ಪೂರೈಸುವ ಯೋಜನೆ ಮಾಡಿದರು. ಶಿಕ್ಷಣದೊಳಗೆ ಸಂಸ್ಥಾನದ ಜನರ ಹೆಜ್ಜೆ ಮುಂದೆ ಬೀಳಬೇಕೆಂದು ಮೈಸೂರಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಎಲ್ಲ ವಿಷಯಗಳ ಕಲಾಶಾಲೆಗಳ ಶಾಖೆಗಳನ್ನು ಹೊರಡಿಸಿದರು. ಪ್ರಾಥಮಿಕ ಶಿಕ್ಷಣವನ್ನು ಫುಕ್ಕಟೆಯಾಗಿ ಕೊಡುವಂತೆ ಏರ್ಪಡಿಸಿದರು. ಪ್ರಜೆಗಳ ಆರೋಗ್ಯ ಬೆಳೆದು, ರೋಗ ಪೀಡೆಗಳಿಂದ ಅವರಿಗೆ ಪರಿಹಾರ ದೊರೆಯಲಿಕ್ಕೆಂದು ತಾಲೂಕಗಳಲ್ಲಿ ಆಸ್ಪತ್ರಿಗಳನ್ನಿಟ್ಟರು. ಘನವಾದ ರೋಗಗಳ ಚಿಕಿತ್ಸೆಗಾಗಿ ಬೆಂಗಳೂರು-ಮೈಸೂರುಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರಿಗಳನ್ನು ತೆರೆದರು. ಮೈಸೂರಿನ ನಾಡು ನುಡಿಯಾದ ಕನ್ನಡವು ಸರ್ವತೋಮುಖವಾಗಿ ಬೆಳೆದು ಪುಷ್ಟವಾಗಬೇಕೆಂಬುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲು ಪ್ರೋತ್ಸಾಹಿಸಿದರು. ಅದೀಗ ದಿನದಿನಕ್ಕೆ ಬೆಳೆಯುತ್ತಿದೆ. ಸಂಸ್ಥಾನದಲ್ಲಿಯ ಪ್ರಜೆಗಳ

ಸಾಂಪತ್ತಿಕ ಸ್ಥಿತಿ ಸುಧಾರಿಸಿ, ಅವರ ಜೀವನವು ಹೆಚ್ಚು ಸುಖಮಯವಾಗ ಬೇಕೆಂದೂ ಜನರಿಗೆ ಹೆಚ್ಚು ಕೆಲಸ ದೊರೆಯಬೇಕೆಂದೂ ಪ್ರತಿಯೊಂದು ಸಾಮಾನಕ್ಕಾಗಿ ಪರದೇಶದವರ ಕಡೆಗೆ ನೋಡುವ ರೂಢಿ ತಪ್ಪಬೇಕೆಂದೂ ಭದ್ರಾವತಿಯಲ್ಲಿ ಕಬ್ಬಿಣದ ಕಾರಖಾನೆಯನ್ನೂ ಮಂಡ್ಯದಲ್ಲಿ ಸಕ್ಕರೆಯ ಕಾರಖಾನೆಯನ್ನೂ ಬೆಂಗಳೂರಲ್ಲಿ ಗಂಧದ ಕಾರಖಾನೆಯನ್ನೂ ಸಂಸ್ಥಾನದ ಆಶ್ರಯದಿಂದ ನಡಿಸಿರುವರು. ಅವೆಲ್ಲವೂ ಈಗ ಏರಿಕೆಯಲ್ಲಿವೆ.

ಮಹಾರಾಜರವರ ರಾಜವಂಶವು ಐದುನೂರು ವರ್ಷಗಳಿಂದಲೂ ನಡೆದು ಬಂದುದು. ಅದು ಕರ್ನಾಟಕದ ಧರ್ಮ-ಸಂಸ್ಕೃತಿಗಳಿಗೆ ನೆಲೆವೀಡು. ಇದೆಲ್ಲವನ್ನು ಚೆನ್ನಾಗಿ ಅರಿತ ಮಹಾರಾಜರವರು ಸಂಪೂರ್ಣ ಕನ್ನಡತನವನ್ನು ಕಟ್ಟು ನಿಟ್ಟಾಗಿ ನಡೆಸಿಕೊಂಡು ಬಂದಿರುವರು. ಅವರ ಆಳಿಕೆಯ ಆಸರದಲ್ಲಿ ಕರ್ನಾಟಕ ಸಂಸ್ಕೃತಿಯು ಸುರಕ್ಷಿತವಾಗಿದೆ. ಇತಿಹಾಸ ಸಂಶೋಧನೆಗೆ ಕಳೆ ಬರುತ್ತಲಿದೆ. ಎಲ್ಲ ಜಾತಿ-ಮತಗಳ ಪ್ರಜೆಗಳಿಗೆ ಸಮಾನವಾಗಿ ನ್ಯಾಯ ದೊರೆಯುತ್ತಿದೆ. ಶಿಕ್ಷಣ ಸೌಕರ್ಯಗಳು ಲಭಿಸುತ್ತಿವೆ.

ಮೈಸೂರಿನ ಏಳಿಗೆ-ಬೆಳಗೆಗಳು ಕನ್ನಡ ನಾಡಿನ ಬೆಳವಣಿಗೆಗೂ ಸಹಕಾರಿಯಾಗುವದರಿಂದ ಉತ್ತರ ಕರ್ನಾಟಕದ ಕನ್ನಡಿಗರಿಗೆ ಅವರ ಆಶೋತ್ತರಗಳಲ್ಲಿ ಕಣ್ಣಿರುವದು ಸ್ವಾಭಾವಿಕವಾಗಿದೆ. ಕನ್ನಡ ಜನಾಂಗಕ್ಕೆಲ್ಲ ತನ್ನ ವಿವಿಧ ಕಾರ್ಯ-ಕಲಾಪಗಳಿಂದ ಬೆಳಕು ಕೊಟ್ಟು, ಕನ್ನಡಿಗರ ಕಣ್ಣಿಗೆ ಆಶೆ-ಆಕಾಂಕ್ಷೆಗಳ ಮೇರುವಾಗಿ, ಮೈಸೂರಿನ ಯದುವಂಶದ ಬಾವುಟವು ಹಾರಾಡುತ್ತಿರಲಿ ! ಶಾಶ್ವತವಾಗಿ ಬಾಳಲಿ ! ಬೆಳೆಯಲಿ !! ಬೆಳಗಲಿ !!!

**ಸಂಪೂರ್ಣ**

# ಪರಿಶಿಷ್ಟ ೧

## ಕರ್ನಾಟಕ ಇತಿಹಾಸದೊಳಗಿನ ನೆನಪಿಡತಕ್ಕಂಥ ಕೆಲವು ಮಹತ್ತ್ವದ ಕಾಲಗಳು

ಕ್ರಿ. ಶ. ೩೫೨ ಮಯೂರಶರ್ಮನು ರಾಜ್ಯಕಟ್ಟಿದ್ದು.

,, ೬೦೯ ಚಾಲುಕ್ಯರ ೨ನೆಯ ಪುಲಿಕೇಶಿಯ ಪಟ್ಟ.

,, ೬೩೪ ಹರ್ಷನನ್ನು ೨ನೆಯ ಪುಲಿಕೇಶಿ ಹೊಡೆದಟ್ಟಿದ್ದು.

,, ೭೫೭ ದಂತಿದುರ್ಗನೆಂಬ ಸಾಮಂತನು ಚಾಲುಕ್ಯರ ರಾಜ್ಯವನ್ನು ಕಿತ್ತು ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಿಸಿದ್ದು.

,, ೯೭೩ ತೈಲಪನು ಚಾಲುಕ್ಯ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದ್ದು.

,, ೧೦೬೮ ಸೋಮೇಶ್ವರನು ತುಂಗಭದ್ರೆಯಲ್ಲಿ ಪ್ರಾಣ ಕೊಟ್ಟಿದ್ದು.

,, ೧೦೭೬ ವಿಕ್ರಮಾದಿತ್ಯನು ಪಟ್ಟಕ್ಕೆ ಕುಳಿತು ತನ್ನ ಶಕವನ್ನು ಪ್ರಾರಂಭಿಸಿದ್ದು.

,, ೧೧೫೬ ಬಿಜ್ಜಳನು ಮುಮ್ಮಡಿ ತೈಲಪನನ್ನು ಪಟ್ಟದಿಂದ ತಳ್ಳಿ, ತಾನು ರಾಜನಾದದ್ದು.

,, ೧೧೩೨ ಶ್ರೀ ಬಸವೇಶ್ವರ ಜನ್ಮ.

,, ೧೧೬೬ ಶ್ರೀ ಬಸವೇಶ್ವರರವರು ಲಿಂಗೈಕ್ಯರಾದದ್ದು.

,, ೧೧೧೬ ಶ್ರೀ ರಾಮಾನುಜಾಚಾರ್ಯರು ಬಿಟ್ಟಿದೇವನ ಆಶ್ರಯಕ್ಕೆ ಬಂದುದು.

,, ೧೧೯೧ ಹೊಯ್ಸಳರ ಇಮ್ಮಡಿ ಬಲ್ಲಾಳನಿಗೂ ದೇವಗಿರಿ ಯಾದವರ ೫ನೆಯ ಭಿಲ್ಲಮನಿಗೂ ಸೊರಟೂರಿನಲ್ಲಿ ಯುದ್ಧ.

,, ೧೩೧೦ ಹೊಯ್ಸಳ ರಾಜ್ಯವು ಮುಸಲ್ಮಾನರ ದಾಳಿಗೆ ತುತ್ತಾದದ್ದು.

,, ೧೩೧೨ ದೇವಗಿರಿ ಯಾದವರ ರಾಜ್ಯವನ್ನು ಮಲಿಕ-ಕಾಫೂರನು ಹಾಳುಮಾಡಿದ್ದು.

,, ೧೩೩೧ ಶ್ರೀ ವಿದ್ಯಾರಣ್ಯರು ಹಂಪಿಗೆ ಬಂದುದು.

,, ೧೩೩೬ ಹುಕ್ಕ-ಬುಕ್ಕರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆ. ಹರಿಹರರಾಯನಿಗೆ ಪಟ್ಟ.

ಕ್ರಿ. ಶ. ೧೩೮೬ ಶ್ರೀ ವಿದ್ಯಾರಣ್ಯರ ಸಮಾಧಿ ಹಂಪೆಯಲ್ಲಾದುದು.
,, ೧೪೦೦ ಮೈಸೂರು ರಾಜ್ಯಸ್ಥಾಪನೆ.
,, ೧೪೪೩ ಅಬ್ದುಲ ರಝಾಕನು ವಿಜಯನಗರಕ್ಕೆ ಬಂದುದು.
,, ೧೪೮೯ ಆದಿಲಶಾಹಿ ಸ್ಥಾಪನೆ.
,, ೧೫೦೯ ಕೃಷ್ಣದೇವರಾಯನಿಗೆ ಪಟ್ಟ.
,, ೧೫೨೦ ರಾಯಚೂರು ವಿಜಯ.
,, ೧೫೨೯ ಕೃಷ್ಣದೇವರಾಯನ ಮರಣ.
,, ೧೫೬೫ ರಕ್ಕಸಿಗಿ-ತಂಗಡಗಿಯ ಕಾಳಗ.
,, ೧೭೨೨ ಹೈದರನ ಜನ್ಮ.
,, ೧೭೬೧ ಹೈದರನು ಅರಸನಾದುದು.
,, ೧೭೮೨ ಹೈದರಲ್ಲಿಯ ಮರಣ.
,, ೧೭೯೯ ಟೀಪುಸುಲ್ತಾನನ ಮರಣ.
,, ೧೮೮೦ ಮೈಸೂರಿನ ಒಡೆಯರ ಮನೆತನ. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪುನಃ ರಾಜ್ಯಲಾಭ.
,, ೧೮೧೮ ಕರ್ನಾಟಕದಲ್ಲಿ ಬ್ರಿಟಿಷ ರಾಜ್ಯ ಸ್ಥಾಪನೆ.
,, ೧೮೨೪ ಕಿತ್ತೂರಿನ ಬಂಡಾಯ.
,, ೧೯೦೨ ಮೈಸೂರಿನ ನಾಲ್ವಡಿ ಶ್ರೀಕೃಷ್ಣರಾಜರಿಗೆ ಪಟ್ಟ.
,, ೧೯೨೭ ಮೈಸೂರು ಮಹಾರಾಜರ ರಜತ ಮಹೋತ್ಸವ.
,, ೧೯೩೬ ಹಂಪಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಮಾರಕೋತ್ಸವ.